ಮಾನವಿಕ ಕರ್ಣಾಟಕ

ಸಂಪುಟ ೭ ಸಂಚಿಕೆ ೩

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೭

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಆವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು-೫೭೦೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೭ ಸಂಚಿಕೆ ೩

೨೭

ನೇ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೭

MANAVIKA KARNATAKA, Kannada quarterly of the University of Mysore. Volume 7, Number 3, May 1977. Edited by Dr. B. R. Gopal and Dr. B. S. Srikantaradhya.

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಡಾ. ಬಾ. ರಾ. ಗೋಪಾಲ್

ಡಾ. ಬಿ. ಎಸ್. ಶ್ರೀಕಂಠಾರಾಧ್ಯ

ಪ್ರಕಾಶಕರು

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಎಚ್. ನರಸಣ್ಣ

ಡೈರೆಕ್ಟರ್, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

ವಿಷಯಸೂಚಿ

ಈ ಸಂಚಿಕೆಯ ಲೇಖಕರು

೧	ಜಿ. ಶ್ರೀನಿವಾಸನ್	ರೀಡರ್, ತತ್ತ್ವಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೫೭೦೦೦೬
೨	ಡಿ. ಎನ್. ರಾಯ್ಕರ	ರೀಡರ್, ಅರ್ಥಶಾಸ್ತ್ರ ವಿಭಾಗ, ವಿಜಯ ಕಾಲೇಜು, ಮುಲ್ಕಿ ದ. ಕ. ಜಿಲ್ಲೆ
೩	ಎ. ಮಾಧವ ಉಡುಪ	ಕೃಷ್ಣಕುಟೀರ, ಸಾಲಿಗ್ರಾಮ, ದಕ್ಷಿಣ ಕನ್ನಡ ಜಿಲ್ಲೆ–೫೭೬೨೨೫.
೪	ಎನ್. ಚಿದಂಬರರಾವ್	ಅಧ್ಯಾಪಕರು, ಮಲ್ಲಾಡಿಹಳ್ಳಿ ವಿದ್ಯಾಸಂಸ್ಥೆ, ಮಲ್ಲಾಡಿಹಳ್ಳಿ.
೫	ವಿ. ಎನ್. ಭಟ್	ಸಂಶೋಧನ ವಿದ್ಯಾರ್ಥಿ, ಕನ್ನಡ ವಿಭಾಗ, ಮಧುರೈ ವಿಶ್ವವಿದ್ಯಾನಿಲಯ, ಹಳೆಯ ವಿಶ್ವವಿದ್ಯಾನಿಲಯದ ಕಟ್ಟಡ ಅಳಗರ್‌ಕೋಯಿಲ್ ರಸ್ತೆ, ಮಧುರೈ, ತಮಿಳುನಾಡು.
೬	ಕೆ. ಮಹಮ್ಮದ್ ಶರೀಫ್	ಶಾಸನ ಸಹಾಯಕ, ಎಪಿಗ್ರಾಫಿಯಾ ಕರ್ನಾಟಿಕ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೫೭೦೦೦೬.
೭	ಎಚ್ಚೆಸ್ಕೆ (ಎಚ್, ಎಸ್. ಕೃಷ್ಣಸ್ವಾಮಯ್ಯಂಗಾರ್)	ಸಂಪಾದಕರು, ಮಾನವಿಕ, ಕನ್ನಡ ವಿಶ್ವಕೋಶ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು
೮	ಅಗರಂ ನರಸಿಂಹನ್	ಸಹಾಯಕ ಸಂಪಾದಕರು, 'ಪ್ರಜಾಮತ' ವಾರಪತ್ರಿಕೆ, ಬೆಂಗಳೂರು.
೯	ಟಿ. ಕೆ. ಲಕ್ಷ್ಮಣ್	ಪ್ರಾಧ್ಯಾಪಕ, ಅರ್ಥಶಾಸ್ತ್ರವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಜ್ಞಾನಭಾರತಿ, ಬೆಂಗಳೂರು.

ಜಿ. ಶ್ರೀನಿವಾಸನ್

ವೇದಾಂತ ದರ್ಶನ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ರಾಮಾನುಜರ ವಿಶಿಷ್ಟಾದ್ವೈತ ವೇದಾಂತ

೧. ಆಳ್ವಾರುಗಳು

ದಕ್ಷಿಣ ಭಾರತದಲ್ಲಿ ಸುಮಾರು ಕ್ರಿ.ಶ. ೨ನೇ ಶತಮಾನದಿಂದ ೮ನೇ ಶತಮಾನದವರೆಗೂ ವಿಷ್ಣು ಭಕ್ತಿಯನ್ನು ಪ್ರಚಾರ ಮಾಡಿದ ಅನೇಕ ಅನುಭಾವಿಗಳು ಪ್ರಸಿದ್ಧರಾಗಿದ್ದರು. ಭಗವಂತನ ಭಕ್ತಿಯಲ್ಲಿ ಅವರು ಯಾವಾಗಲೂ ಮುಳುಗಿದ್ದುದರಿಂದ ಅವರಿಗೆ ಆಳ್ವಾರುಗಳೆಂದು ಹೆಸರು. ಆಳ್ವಾರರ ಬೋಧನೆಯು ಕಾಲಕ್ರಮದಲ್ಲಿ ರಾಮಾನುಜರ ವಿಶಿಷ್ಟಾದ್ವೈತ ವೇದಾಂತಕ್ಕೆ ಹಿನ್ನೆಲೆಯಾಗಿ ಪರಿಣಮಿಸಿತು. ಆದರೆ ಆಳ್ವಾರುಗಳು ಕ್ರಮಬದ್ಧವಾದ ಯಾವ ತತ್ತ್ವಶಾಸ್ತ್ರವನ್ನೂ ರಚಿಸಲಿಲ್ಲ; ಅನನ್ಯವಾದ ತಮ್ಮ ಭಕ್ತಿಭಾವದಲ್ಲಿ ತಾವು ಕಂಡುಕೊಂಡ ಅನುಭಾವಿಕ ದರ್ಶನವನ್ನು ಹಲವು ಗೀತೆಗಳ ಮೂಲಕ ಸಾಮಾನ್ಯ ಜನರಿಗಾಗಿ ತಿಳಿಯಪಡಿಸಿದರು. ಅವರ ಬೋಧನೆಯು ಅವರ ಸಮಕಾಲೀನರಾದ ಶೈವಭಕ್ತರ ಬೋಧನೆಯಿಂದ ಪ್ರಭಾವಿತವಾಗಿದ್ದುದೇ ಅಲ್ಲದೆ, ಅದರ ಮೇಲೆ ತನ್ನ ಪ್ರಭಾವ ಬೀರಿತೆಂದು ಹೇಳಬಹುದು.

ಸಾಧಾರಣವಾಗಿ ಅನುಭಾವಿಗಳಲ್ಲಿ ಕಂಡುಬರುವ ಲಕ್ಷಣಗಳೆಲ್ಲವನ್ನೂ ಆಳ್ವಾರುಗಳಲ್ಲಿಯೂ ಕಾಣಬಹುದು. ಮುಖ್ಯವಾಗಿ ಪ್ರಾಪಂಚಿಕ ಜೀವನದ ನಿಸ್ಸಾರತೆಯನ್ನು ಕಂಡು ಬೇಸತ್ತು, ದೈವವನ್ನು ಕುರಿತು ಚಿಂತಿಸುತ್ತಾ ಮೋಕ್ಷಕ್ಕಾಗಿ ಹಂಬಲಿಸಿದ ಜೀವ ಆಳ್ವಾರುಗಳದು. ಅವರ ಬೋಧನೆಗೆ ಅಡಿಪಾಯ ವಾಗಿದ್ದ ಅವರ ಆಧ್ಯಾತ್ಮಿಕ ಅನುಭವದಲ್ಲಿ ಶಾಂತಿ, ಜ್ಞಾನ ಮತ್ತು ವೈರಾಗ್ಯಗಳು ಹಾಸುಹೊಕ್ಕಾಗಿದ್ದುವು. ಆಳ್ವಾರುಗಳ ಆಧ್ಯಾತ್ಮಿಕ ಅನುಭವದ ವಿಶಿಷ್ಟವೆಂದರೆ, ಅವರು ಪರಮತತ್ತ್ವವನ್ನು ಇತರ ಕೆಲವು ಅನುಭಾವಿಗಳಂತೆ 'ನಿರ್ಗುಣ' ಬ್ರಹ್ಮವನ್ನಾಗಿ ಕಾಣದೆ, ಸಕಲಕಲ್ಯಾಣಗುಣಪರಿಪೂರ್ಣವಾದ, ಅತ್ಯುನ್ನತವಾದ ವ್ಯಕ್ತಿತ್ವವನ್ನು ಹೊಂದಿದ ಭಗವಂತನನ್ನಾಗಿ ಕಂಡರು. ಈ ಕಾರಣದಿಂದಲೇ, ಇವರ ಬೋಧನೆಯು ರಾಮಾನುಜರ ವಿಶಿಷ್ಟಾದ್ವೈತ ವೇದಾಂತಕ್ಕೆ ನಾಂದಿಯಾಗಿ ಪರಿಣಮಿಸಿತು.

ಆಳ್ವಾರುಗಳು ಭಗವಂತನು ಐದು ಹಂತಗಳ ಅಸ್ತಿತ್ವವನ್ನು ಪಡೆದಿರುವುದಾಗಿ ವರ್ಣಿಸುತ್ತಾರೆ: (೧) ನಿತ್ಯನಾಗಿ, ನಿರ್ವಿಕಾರನಾಗಿ, ಪ್ರಪಂಚದಿಂದ ಅತೀತನಾಗಿರುವುದು; ಈ ಹಂತಕ್ಕೆ 'ಪರಾ' ಎನ್ನುತ್ತಾರೆ. (೨) ಪ್ರಪಂಚದಲ್ಲಿನ ಅಸ್ತಿತ್ವ ಮತ್ತು ಕ್ರಿಯೆಗಳೆಲ್ಲಕ್ಕೂ ಆಧಾರಭೂತವಾಗಿ ಪ್ರಪಂಚವೆಲ್ಲವನ್ನೂ ಆವರಿಸಿರುವುದು; ಈ ಹಂತವನ್ನು ವ್ಯೂಹವೆಂದು ಕರೆಯುತ್ತಾರೆ. (೩) ಪ್ರತಿಯೊಂದು ಜೀವಾತ್ಮ ನಲ್ಲಿಯೂ ವಿಶಿಷ್ಟ ರೀತಿಯಲ್ಲಿ ಇದ್ದುಕೊಂಡು, ಅದರ ಅನುಭವಗಳಲ್ಲಿ ಆನಂದವನ್ನು ಅನುಭವಿ ಸುತ್ತಿರುವುದು; ಈ ಹಂತವನ್ನು 'ಅಂತರ್ಯಾಮಿ' ಎಂದು ಕರೆಯುತ್ತಾರೆ. (೪) ಭಕ್ತನ ಕಲ್ಪನೆಗೆ ಒಳಪಟ್ಟು,

ಅವನ ಅನುಕೂಲಕ್ಕಾಗಿ ಪೂಜಿಸಲ್ಪಡುವ ಭೌತಿಕವಾದ ವಿಗ್ರಹದಲ್ಲಿ ಅಡಗಿರುವುದು; ಇದನ್ನು 'ಅರ್ಚಾ' ಎನ್ನುತ್ತಾರೆ.[1] (೫) ಪ್ರಪಂಚದಲ್ಲಿ ಆಗಾಗ ಸಂಭವಿಸಬಹುದಾದ ಅಧರ್ಮವನ್ನು ನಾಶ ಮಾಡಿ ಧರ್ಮವನ್ನು ಉದ್ಧರಿಸುವುದಕ್ಕಾಗಿ, ಒಬ್ಬ ವ್ಯಕ್ತಿ ಅಥವಾ ಮಹಾಪುರುಷನಂತೆ ಜನ್ಮವೆತ್ತಿ ಬರುವುದು; ಇದನ್ನು 'ಅವತಾರ'ವೆನ್ನುತ್ತಾರೆ.

ಆಳ್ವಾರುಗಳು ಭಗವಂತನನ್ನು ತಂದೆ, ತಾಯಿ, ಸ್ನೇಹಿತ ಮತ್ತು ಗುರು ಎಂಬುದಾಗಿ ಅನೇಕ ರೀತಿಯಲ್ಲಿ ಪರಿಗಣಿಸಿ ಪೂಜಿಸಬಹುದೆಂದು ಸಾರಿದರು. ಶ್ರೀವೈಷ್ಣವ ಗುರುಗಳು ಕೈಯಲ್ಲಿ ಹಿಡಿಯುವ ದಂಡವು ಭಗವಂತನು ಜೀವಾತ್ಮನ ಆಧ್ಯಾತ್ಮಿಕ ಆರೋಹಣಕ್ಕೆ ಮುಖ್ಯ ಆಧಾರವೆನ್ನುವುದರ ಸಂಕೇತವೇ ಆಗಿದೆ. ಮಾನವನು ಭಗವಂತನಿಗೆ ಪೂರ್ಣವಾಗಿ ಆತ್ಮಾರ್ಪಣೆ ಮಾಡಿಕೊಳ್ಳಬೇಕು. ಈ ಆತ್ಮಾರ್ಪಣೆಯಲ್ಲಿನ ಮೂರು ಅಂಶಗಳು ಅಥವಾ ಹಂತಗಳು–ಪರಾಭಕ್ತಿ, ಪರಾಜ್ಞಾನ ಮತ್ತು ಪರಮಭಕ್ತಿ. ಈ ಮೂರು ಅಂಶಗಳೂ ಮೊದಲನೆಯ ಮೂರು ಆಳ್ವಾರುಗಳಾದ ಪೊಯ್ಗೈ, ಪೂಟ್ಟತ್ತಾರ್ ಮತ್ತು ಪೇಯ್‌ಗಳಲ್ಲಿ ಕ್ರಮವಾಗಿ ಪ್ರತಿನಿಧಿತವಾಗಿವೆ ಎಂದು ಸಾಂಪ್ರದಾಯಿಕವಾಗಿ ಹೇಳುತ್ತಾರೆ.

ಭಕ್ತಿಸಾರ, ಕುಲಶೇಖರ, ವಿಪ್ರನಾರಾಯಣ, ತಿರುಪ್ಪಾನ್, ತಿರುಮಂಗೈ, ವಿಷ್ಣುಚಿತ್ತ, ಗೋದಾದೇವಿ ಶಠಗೋಪ ಮೊದಲಾದವರು ಪ್ರಸಿದ್ಧರಾದ ಆಳ್ವಾರುಗಳು. ಇವರ ಪೈಕಿ ಗೋದಾದೇವಿಯು ಸ್ತ್ರೀಭಕ್ತೆ. ಆಕೆಯು ಭಗವಂತನನ್ನು ತನ್ನ 'ಪ್ರಿಯ'ನೆಂದು ಭಾವಿಸಿ, ಪೂಜಿಸಿ ಸದ್ಗತಿಯನ್ನು ಪಡೆದ ಪರಮ ಸಾಧ್ವೀಮಣಿ; ಆಂಡಾಳ್ ಎಂಬ ಹೆಸರಿನಿಂದ ಆಕೆ ಈಗಲೂ ಶ್ರೀವೈಷ್ಣವರಿಂದ ಪೂಜಿಸಲ್ಪಡುತ್ತಿದ್ದಾಳೆ. ವಿಷ್ಣುಚಿತ್ತರು ಪೆರಿಯಾಳ್ವಾರ್ ಎಂದೂ, ಶಠಗೋಪರು ನಮ್ಮಾಳ್ವಾರ್ ಎಂದೂ ಪ್ರಸಿದರಾಗಿದ್ದಾರೆ. ಕುಲಶೇಖರರು ಶರಣಾಗತಿಯಲ್ಲಿ ಆರು ಅಂಶಗಳನ್ನು ಒತ್ತಿ ಹೇಳಿದ್ದಾರೆ. (೧) ಭಗವದ್ಭಕ್ತಿಗೆ ಅನುಕೂಲವಾಗತಕ್ಕ ಸಲಕರಣೆಗಳನ್ನು ಸಂಕಲ್ಪಿಸುವುದು (೨) ಭಗವದ್ಭಕ್ತಿಗೆ ವಿಘ್ನಗಳನ್ನು ಉಂಟು ಮಾಡತಕ್ಕವುಗಳನ್ನು ಬಿಟ್ಟುಬಿಡುವುದು. (೩) ದೇವರು ರಕ್ಷಿಸುತ್ತಾನೆಂಬುದರಲ್ಲಿ ಪೂರ್ಣವಾಗಿ ವಿಶ್ವಾಸವಿಡುವುದು, (೪) ಭಗವಂತನೇ ರಕ್ಷಕನೆಂದು ದೃಢವಾಗಿ ತಿಳಿಯುವುದು (೫) ದೇವರು ಮಾಡಿದ ಹಾಗೆ ಆಗಲಿ ಎಂದು ತನ್ನ ಯೋಗಕ್ಷೇಮವನ್ನು ದೇವರಿಗೆ ಅರ್ಪಿಸುವುದು (೬) ತನ್ನ ಅಸಹಾಯಕತೆಯನ್ನು ಅರಿತುಕೊಳ್ಳುವುದು ಅಥವಾ ಅಹಂಕಾರವನ್ನು ಪೂರ್ತಿಯಾಗಿ ತೊರೆದು ತಾನು "ಏನೂ ಅಲ್ಲ" ಎಂಬ ಮನೋಭಾವವನ್ನು ತಾಳುವುದು. ಈ ಎಲ್ಲ ಅಂಶಗಳೂ ಒಂದರ ಮೇಲೊಂದು ಅವಲಂಬಿತವಾಗಿ ಶರಣಾಗತಿಯ ಭಾವದಲ್ಲಿ ಸಂಕೀರ್ಣವಾಗಿ ಅಡಗಿರುತ್ತವೆ.

ನಾಥಮುನಿಗಳು ಆಳ್ವಾರುಗಳ ಮುಖ್ಯವಾಗಿ ಶಠಗೋಪರ ಹಾಡುಗಳನ್ನು ಕ್ರಮಬದ್ಧವಾಗಿ ಸಂಪಾದಿಸಿದರು. ಅವರ ಮೊಮ್ಮಗನಾದ ಯಾಮಾನುಚಾರ್ಯರು ಆಳ್ವಾರರ ಹಾಡುಗಳು ಇನ್ನಷ್ಟು ಪ್ರಚಲಿತವಾಗಲು ಕಾರಣರಾದರು. ಈ ಹಾಡುಗಳಲ್ಲಿ ನಿರೂಪಿತವಾಗಿರುವ ಭಕ್ತಿಮಾರ್ಗಕ್ಕೆ ಅನುಗುಣವಾಗಿರುವಂತೆ ಒಂದು ವೇದಾಂತ ದರ್ಶನವನ್ನು ರಚಿಸಿದುದು ರಾಮಾನುಜರ ವೈಶಿಷ್ಟ್ಯ. ರಾಮಾನುಜರ ವೇದಾಂತ ದರ್ಶನವು ವೇದಗಳ ಮೇಲೆ ಅಲ್ಲದೆ ಆಳ್ವಾರುಗಳ ಬೋಧನೆಯ ಮೇಲೂ ಅವಲಂಬಿತವಾಗಿದೆ. ಆದ್ದರಿಂದಲೇ ಅವರ ವಿಶಿಷ್ಟಾದ್ವೈತ ವೇದಾಂತವನ್ನು ಉಭಯ ವೇದಾಂತವೆಂದು ಕರೆಯುತ್ತಾರೆ. ರಾಮಾನುಜರು ಕ್ರಿ.ಶ. ಹನ್ನೊಂದನೆಯ ಶತಮಾನದಲ್ಲಿ ತಮಿಳುನಾಡಿನ ಪೆರಂಬುದೂರ್ ಎಂಬಲ್ಲಿ ಜನಿಸಿದರು. ಅವರು ಸುಮಾರು ೧೨೦ ವರ್ಷಗಳು ಬದುಕಿದರೆಂದು ಪ್ರತೀತಿ. ಬ್ರಹ್ಮಸೂತ್ರಗಳು ಮತ್ತು ಭಗವದ್ಗೀತೆಯ ಮೇಲೆ ಭಾಷ್ಯಗಳನ್ನು ಬರೆದದ್ದೇ ಅಲ್ಲದೆ, ಇನ್ನೂ ಕೆಲವು ಮುಖ್ಯವಾದ ಗ್ರಂಥಗಳನ್ನು ರಚಿಸಿ ರಾಮಾನುಜರು ತಮ್ಮ ವಿಶಿಷ್ಟಾದ್ವೈತ ವೇದಾಂತವನ್ನು ಸ್ಥಾಪಿಸಿದರು.

---

1. ಆಳ್ವಾರುಗಳು ಮತ್ತು ವಿಶಿಷ್ಟಾದ್ವೈತದ ಪ್ರಕಾರ ವಿಗ್ರಹವು ಭಕ್ತನಿಗೂ ಭಗವಂತನಿಗೂ ಮಧ್ಯೆ ಇರತಕ್ಕ ದೇವರ 'ಸಂಕೇತವು' ಮಾತ್ರವಲ್ಲ; ದೇವರ ಅಸ್ತಿತ್ವವೇ ಭಕ್ತನಿಗಾಗಿ ಸೀಮಿತಗೊಂಡು ಅದರಲ್ಲಿರುವುದೆಂದು ಅವರು ನಂಬುತ್ತಾರೆ.

ರಾಮಾನುಜರಿಗೆ ಮುಂಚೆಯೇ ಭಾಸ್ಕರ ಮತ್ತು ಯಾದವ ಪ್ರಕಾಶರು ಶಂಕರರ ಅದ್ವೈತ ವೇದಾಂತವನ್ನು ಟೀಕಿಸಿದ್ದರು; ಆದರೆ ಶಂಕರರ ವೇದಾಂತವನ್ನು ಕುರಿತು ರಾಮಾನುಜರು ಮಾಡಿದ ಟೀಕೆಯು ಹೆಚ್ಚು ಪ್ರಸಿದ್ಧವಾಗಿ, ಅವರು ಪ್ರತಿಪಾದಿಸಿದ ವಿಶಿಷ್ಟಾದ್ವೈತ ವೇದಾಂತವು ಅನೇಕರ ಮನ್ನಣೆಯನ್ನು ಗಳಿಸಿತು.

ಅದ್ವೈತ ವೇದಾಂತವನ್ನು ಕುರಿತು ಖಂಡನೆ

ಶಂಕರರ ಅದ್ವೈತ ವೇದಾಂತವು 'ಅರಿವು' ಅಥವಾ ಜ್ಞಾನವನ್ನು ಅಖಂಡವೆಂದು ಪ್ರತಿಪಾದಿಸಿದೆ. ಆದರೆ ರಾಮಾನುಜರು ಇದನ್ನು ಒಪ್ಪುವುದಿಲ್ಲ. ಅರಿವು ಅಖಂಡಲ್ಲವೆಂದು ತೋರಿಸಲು ಅವರು ಅನೇಕ ಕಾರಣಗಳನ್ನು ಕೊಡುತ್ತಾರೆ.

೧. ಅರಿವಿಗೆ ಒಂದು ವಿಷಯವಿದ್ದೇ ಇರಬೇಕು; ವಿಷಯವಿಲ್ಲದೆ ಅರಿವು ಸಾಧ್ಯವಿಲ್ಲ.[2] ಆದರೆ ಅರಿವಿಗೂ ಅರಿವಿನ ವಿಷಯಕ್ಕೂ ಭೇದವಿರಲೇಬೇಕು. ಆದ್ದರಿಂದ ಅರಿವು ಅಖಂಡವಲ್ಲ.

೨. ಅರಿವಿನ ವಿಷಯವು ಯಾವಾಗಲೂ ಒಂದೇ ಆಗಿರಲು ಸಾಧ್ಯವಿಲ್ಲ; ಅದು ಬದಲಾಯಿಸುತ್ತಿರುತ್ತದೆ. ಆದರೆ ಅರಿವಿನ ವಿಷಯವು ಬದಲಾಯಿಸಿದಂತೆ ಅದರ ಅರಿವೂ ಬದಲಾಯಿಸುತ್ತಿರುತ್ತದೆ. ಎಂದರೆ, ಅರಿವಿನ ವಿಷಯವು ಬೇರೆಯಾದಂತೆಲ್ಲಾ, ಅರಿವೂ ಬೇರೆಯಾಗುತ್ತದೆ. ಆದ್ದರಿಂದ ಅರಿವು ಅಖಂಡವಲ್ಲ.

೩. ವರ್ತಮಾನದಲ್ಲಿನ ವಿಷಯದ ಅರಿವು ಸ್ವಯಂಪ್ರಕಾಶವಾದುದು; ಆದರೆ ಭೂತಕಾಲದ ವಿಷಯಗಳ ಅರಿವು ನೆನಪಿನಿಂದ ಮಾತ್ರ ಸಾಧ್ಯ. ಎಂದರೆ, ಈ ಎರಡು ರೀತಿಯಾದ ಅರಿವುಗಳಿಗೂ ವ್ಯತ್ಯಾಸವಿದೆಯೆಂದಾಯಿತು. ಆದ್ದರಿಂದ ಅರಿವು ಅಖಂಡವಲ್ಲ.

೪. ತನ್ನಲ್ಲಿನ ಅರಿವು ಮಾತ್ರ ಸ್ವಯಂವೇದ್ಯ; ಆದರೆ ಬೇರೆಯವರಲ್ಲಿನ ಅರಿವು ಅನುಮಾನ ಅಥವಾ ತರ್ಕದ ಮೂಲಕ ಮಾತ್ರ ವೇದ್ಯವಾಗುತ್ತದೆ. ಎಂದರೆ ಈ ಎರಡು ರೀತಿಯಾದ ಅರಿವುಗಳಿಗೂ ವ್ಯತ್ಯಾಸವಿದೆಯೆಂದಾಯಿತು. ಆದ್ದರಿಂದ ಅರಿವು ಅಖಂಡವಲ್ಲ.

೫. ಒಂದು ಆಧಾರ ಅಥವಾ ಆಶ್ರಯವಿಲ್ಲದೆ ಅರಿವು ಸಾಧ್ಯವಿಲ್ಲ; ಈ ಆಶ್ರಯವೇ 'ನಾನು' ಎಂಬ ಅಹಂಪದಾರ್ಥ. ಆದರೆ ಅರಿವಿಗೂ ಅದರ ಆಶ್ರಯವಾದ ಅಹಂಪದಾರ್ಥಕ್ಕೂ ವ್ಯತ್ಯಾಸವಿದೆ; ಎರಡು ಒಂದೇ ಅಲ್ಲ. ಆದ್ದರಿಂದ ಅರಿವು ಅಖಂಡವಲ್ಲ.

ಅರಿವು ಅಹಂಪದಾರ್ಥದ ಗುಣವೆಂದೂ, ಅಹಂಪದಾರ್ಥವು ಅದರ ಆಶ್ರಯವೆಂದೂ ರಾಮಾನುಜರು ನಿರೂಪಿಸುತ್ತಾರೆ. ಅರಿವು ಬದಲಾಯಿಸುತ್ತಿರುತ್ತದೆ. ಆದರೆ ಅದರ ಆಶ್ರಯವಾದ ಅಹಂಪದಾರ್ಥವು ಬದಲಾವಣೆಯಿಲ್ಲದೆ ಇರುತ್ತದೆ. ಅವುಗಳಿಗಿರುವ ಈ ವ್ಯತ್ಯಾಸವು ನಮಗೆ ಆಂತರಿಕ ಪ್ರತ್ಯಕ್ಷದಲ್ಲಿ ವೇದ್ಯವಾಗುತ್ತದೆ.

ಅದ್ವೈತವೇದಾಂತವು ಅರಿವು ಯಾವಾಗಲೂ, ಎಲ್ಲ ಸಂದರ್ಭಗಳಲ್ಲಿಯೂ ಸ್ವಯಂಪ್ರಕಾಶವೆಂದು ಸಾರುತ್ತದೆ. ಆದರೆ ರಾಮಾನುಜರು ಇದನ್ನು ಒಪ್ಪುವುದಿಲ್ಲ. ತನ್ನಲ್ಲಿನ ಅರಿವು, ಮತ್ತು ವರ್ತಮಾನ ದಲ್ಲಿನ ಅರಿವು ಮಾತ್ರ ಸ್ವಯಂಪ್ರಕಾಶವಾದುದು; ಬೇರೆಯವರಲ್ಲಿನ ಅರಿವು ಮತ್ತು ಭೂತಕಾಲದ ಅರಿವು ಸ್ವಯಂಪ್ರಕಾಶವಲ್ಲ. ಅಲ್ಲದೆ, ಅದ್ವೈತ ವೇದಾಂತವು ಅರಿವು ಸ್ವಯಂಪ್ರಕಾಶವೆಂದು ಒಂದು ನಿರ್ದಿಷ್ಟವಾದ ಅರ್ಥದಲ್ಲಿ ಹೇಳಿದೆ; ಅದರ ಪ್ರಕಾರ ಅರಿವು ತನಗೆ ತಾನೇ ವೇದ್ಯವಾಗುತ್ತಿರುತ್ತದೆ. ಆದರೆ ರಾಮಾನುಜರ ಅರಿವು ಈ ಅರ್ಥದಲ್ಲಿ ಸ್ವಯಂಪ್ರಕಾಶವೆನ್ನುವುದನ್ನು ಒಪ್ಪುವುದಿಲ್ಲ. ಅವರ ಪ್ರಕಾರ ಅರಿವು ಅದನ್ನು ಹೊಂದಿದ ಅಹಂಪದಾರ್ಥಕ್ಕೆ ಸ್ವಯಂಪ್ರಕಾಶವೇ ಹೊರತು ತನಗೆ ತಾನೇ ಸ್ವಯಂಪ್ರಕಾಶವಲ್ಲ.

ಅದ್ವೈತ ವೇದಾಂತವು ನಿತ್ಯವಾಗಿರುವ ನಿರ್ವಿಕಾರವಾಗಿರುವ ಅರಿವು ಅಥವ ಜ್ಞಾನವೇ ನಿಜವಾದ ಜ್ಞಾನವೆಂದೂ, ಪ್ರಾರಂಭ ಮತ್ತು ಕೊನೆಗಳನ್ನು ಹೊಂದಿದ ಹಾಗೂ ಬದಲಾಯಿಸುತ್ತಿರುವ

---

2. ಶ್ರೀ ಭಾಷ್ಯ, ಅನು: ಜಾರ್ಜ್ ಥೀಬೊ, I. ೧. ೧.

ವ್ಯಾವಹಾರಿಕ ಜ್ಞಾನವು ನಿಜವಾಗಿಯೂ ಜ್ಞಾನವೇ ಅಲ್ಲವೆಂದೂ ಪ್ರತಿಪಾದಿಸುತ್ತದೆ. ಆದರೆ ರಾಮಾನುಜರು ಇದನ್ನು ಒಪ್ಪುವುದಿಲ್ಲ. ಅವರ ಪ್ರಕಾರ ಜ್ಞಾನ ಅಥವ ಅರಿವಿನ ಕೆಲಸ ಯಾವುದಾದರೂ ವಿಷಯ ಅಥವ ವಸ್ತುವನ್ನು ಗೋಚರಿಸುವಂತೆ ಮಾಡುವುದೇ ಆಗಿದೆ; ಆದ್ದರಿಂದ ಅನೇಕ ವಸ್ತು ಅಥವ ವಿಷಯಗಳನ್ನು ಗೋಚರಿಸುವಂತೆ ಮಾಡುತ್ತಿರುವ ಪ್ರಾಪಂಚಿಕ ಜ್ಞಾನವೂ ಜ್ಞಾನವೇ ಸರಿ. ಅದು ಬದಲಾಯಿಸುತ್ತಿದ್ದರೂ, ಅದು ಜ್ಞಾನವಲ್ಲವೆಂದು ತಿಳಿಯಬೇಕಾಗಿಲ್ಲ. ಇನ್ನೂ ಒಂದು ಹೆಜ್ಜೆ ಮುಂದೆಹೋಗಿ, ರಾಮಾನುಜರು ಅದ್ವೈತ ವೇದಾಂತವು ಅಖಂಡವಾಗಿರುವುದೆಂದು ಪ್ರತಿಪಾದಿಸುತ್ತಿರುವ ಜ್ಞಾನವು ಜ್ಞಾನವೇ ಅಲ್ಲವೆಂದೂ, ಏಕೆಂದರೆ ಅದರಲ್ಲಿ ವಿಷಯ–ವಿಷಯೀ ಸಂಬಂಧವೇ ಇಲ್ಲವೆಂದೂ ವಾದಿಸುತ್ತಾರೆ.

ಸುಷುಪ್ತಿಯಲ್ಲಿ ಅರಿವು ಮಾತ್ರ ಇರುವುದೆಂದೂ, ಆದರೆ ಅದು ಶುದ್ಧ ಅರಿವು ಅಥವ ಚಿತ್ ಮಾತ್ರವೆಂದೂ, ಅದಕ್ಕೆ ಸಂಬಂಧಿಸಿದ ವಿಷಯ ಅಥವ ವಸ್ತುವೇನೂ ಇಲ್ಲವೆಂದೂ ಅದ್ವೈತ ವೇದಾಂತವು ಪ್ರತಿಪಾದಿಸುತ್ತದೆ. ಆದರೆ ರಾಮಾನುಜರು ಇದನ್ನು ಒಪ್ಪುವುದಿಲ್ಲ. ಸುಷುಪ್ತಿಯಲ್ಲಿ ಅರಿವಿಗೂ ವಿಷಯವಿದ್ದೇ ಇದೆ. ಆ ವಿಷಯವೇ 'ನಾನು' ಎಂಬ ಅಹಂಪದಾರ್ಥ. ಆದ್ದರಿಂದಲೇ ಸುಷುಪ್ತಿಯಿಂದ ಎಚ್ಚೆತ್ತ ಮನುಷ್ಯನು "ನಾನು ಚೆನ್ನಾಗಿ ನಿದ್ದೆಮಾಡಿದೆ" ಎಂದು ಹೇಳುತ್ತಾನೆ. ಎಂದರೆ, ನಿದ್ದೆಯಲ್ಲಿನ ಅರಿವಿನ ವಿಷಯ 'ನಾನು' ಎಂಬುದೆಂದು ವೇದ್ಯವಾಗುತ್ತದೆ. ಸುಷುಪ್ತಿಯಲ್ಲಿ 'ನಾನು' ಎಂಬ ಅಹಂ ಪದಾರ್ಥವಿರುವುದಿಲ್ಲವೆಂದೂ ಸುಷುಪ್ತಿಯು ಕಳೆದಮೇಲೆ ಚಿತ್ ಮತ್ತು ಅಚಿತ್‌ಗಳ ಸಮ್ಮಿಲನದಿಂದ ಅದು ಉಂಟಾಗುವುದೆಂದೂ ಅದ್ವೈತವೇದಾಂತವು ಅಭಿಪ್ರಾಯಪಡುತ್ತದೆ. ಇದನ್ನು ರಾಮಾನುಜರು ಒಪ್ಪುವುದಿಲ್ಲ. ಅವರ ಪ್ರಕಾರ ಸುಷುಪ್ತಿಯ ನಂತರ ಮಾಡುವ "ನಾನು ಚೆನ್ನಾಗಿ ನಿದ್ದೆ ಮಾಡಿದೆ" ಎಂಬ ಹೇಳಿಕೆಯೇ ತೋರಿಸುವಂತೆ 'ನಾನು' ಎಂಬ ಅಹಂ ಪದಾರ್ಥವು ಸುಷುಪ್ತಿಯಲ್ಲಿ ಇದ್ದೇ ಇದ್ದಿತು. ಮತ್ತು ಸ್ವಯಂವೇದ್ಯವಾದ ಅಹಂಪದಾರ್ಥಕ್ಕೆ ತನ್ನ ಇರುವಿಕೆಯ ಅರಿವೂ ಇದ್ದಿತು. ಆದ್ದರಿಂದಲೇ, ಸುಷುಪ್ತಿಯಿಂದ ಎಚ್ಚೆತ್ತ ಮನುಷ್ಯನು 'ನಾನು ಚೆನ್ನಾಗಿ ನಿದ್ದೆ ಮಾಡಿದೆ"ನೆಂದು ಹೇಳುತ್ತಾನೆಯೇ ಹೊರತು "ನಾನು ಇರಲಿಲ್ಲ"ವೆಂದಲ್ಲ. ಅಲ್ಲದೆ, ಸುಷುಪ್ತಿಯ ನಂತರ ಎಚ್ಚೆತ್ತ ಮನುಷ್ಯನು ಹೇಳುವ "ನನಗೇನೂ ತಿಳಿಯಲಿಲ್ಲ" ಎಂಬ ಹೇಳಿಕೆಯಿಂದ ಸುಷುಪ್ತಿಯಲ್ಲಿ ಅಜ್ಞಾನವು ಕೇವಲ ನಿಷೇಧಾತ್ಮಕವಾದ ಅರ್ಥದಲ್ಲಿಲ್ಲದೆ ಭಾವರೂಪಾತ್ಮಕವಾಗಿದ್ದಿತೆಂದು ಅದ್ವೈತವೇದಾಂತಿಗಳು ತರ್ಕಿಸುತ್ತಾರೆ. ಇದನ್ನು ರಾಮಾನುಜರು ಒಪ್ಪುವುದಿಲ್ಲ: ಅವರ ಪ್ರಕಾರ 'ನಾನು' ಎಂಬ ಅಹಂಪದಾರ್ಥವು ಸ್ವಯಂ ಪ್ರಕಾಶವೆಂದೂ, ಅದು ಸುಷುಪ್ತಿಯಲ್ಲಿರುವುದೆಂದೂ ನಿರೂಪಿಸಿದ ಮೇಲೆ ಅದಕ್ಕೆ ಅಜ್ಞಾನವನ್ನು ಯಾವ ರೀತಿಯಲ್ಲೂ ಅನ್ವಯಿಸುವುದು ಸರಿಯಲ್ಲ.

ಚಿತ್ ಮತ್ತು ಆತ್ಮಗಳು ಒಂದೇ ಎಂದು ಹೇಳಿ 'ನಾನು' ಎಂಬ ಅಹಂಪದಾರ್ಥವು ಅದರಿಂದ ಬೇರೆಯೆಂದೂ, ಅದು ಚಿದಚಿತ್ ಸಂಮಿಲನಾತ್ಮಕವೆಂದೂ ಅದ್ವೈತ ವೇದಾಂತವು ಹೇಳುತ್ತದೆ. ಆದರೆ ರಾಮಾನುಜರ ಪ್ರಕಾರ ಸ್ವಯಂಪ್ರಕಾಶದ ಅಹಂಪದಾರ್ಥವೇ ನಿತ್ಯವಾದ ಆತ್ಮ; ಏಕೆಂದರೆ, ಅನೇಕ ವಿಷಯಗಳನ್ನು ಕುರಿತ ನಮ್ಮ ಜ್ಞಾನವೆಲ್ಲವೂ ಅದನ್ನೇ ಆಶ್ರಯವನ್ನಾಗಿ ಪಡೆದಿರುತ್ತದೆ; ಆ ರೀತಿಯಾದ ಜ್ಞಾನವು ಆಶ್ರಯವನ್ನು ನಿರೂಪಿಸುವುದು 'ನಾನಲ್ಲದಿರುವ' ಒಂದು ತತ್ತ್ವವೆಂದು ಹೇಳುವುದು,[3] ಯಾವನಾದರೊಬ್ಬನು ತನ್ನ ತಾಯಿಯು ಬಂಜೆಯೆಂದು ಹೇಳಿದಷ್ಟೇ ವಿರೋಧಾಭಾಸವಾಗಿರುತ್ತದೆ. ಆದ್ದರಿಂದ ರಾಮಾನುಜರ ಪ್ರಕಾರ ನಾನು ಎಂಬ ಅಹಂಪದಾರ್ಥವೇ ಜ್ಞಾನ ಅಥವ ಅರಿವಿನ ಆಶ್ರಯ ಮತ್ತು ಅದೇ ಯಾವಾಗಲೂ ಇರುವ ಆತ್ಮ; ಅರಿವು ಅಥವಾ ಜ್ಞಾನ ಅದರ ಗುಣ. ಆದರೆ ಜ್ಞಾನವು ಅಹಂಪದಾರ್ಥದ ಗುಣವು ಮಾತ್ರವಲ್ಲ, ಅದರ ಸ್ವರೂಪವೂ ಹೌದು; ಕಾಂತಿಯು ಜ್ಯೋತಿಯ ಗುಣವು ಮಾತ್ರವಲ್ಲದೆ, ಜ್ಯೋತಿಯೆಲ್ಲವನ್ನೂ ಪಸರಿಸಿರುವಂತೆ, ಜ್ಞಾನವು ಅಹಂಪದಾರ್ಥದ ಗುಣವೇ ಅಲ್ಲದೆ ಸ್ವರೂಪವೂ ಆಗಿರುತ್ತದೆ.[4] ಈ ರೀತಿಯಾಗಿ ಅಹಂಪದಾರ್ಥಕ್ಕೂ

3. ಅದೇ, ಪುಟ ೫೮

4 ಅದೇ, ಪುಟ ೫೯

ಜ್ಞಾನಕ್ಕೂ ಬೇರ್ಪಡಿಸಲಾಗದ ಸಂಬಂಧವಿರುವುದರಿಂದ ವಿಶಿಷ್ಟಾದ್ವೈತ ವೇದಾಂತದಲ್ಲಿ ಈ ಸಂಬಂಧವನ್ನು ಅಪೃಥಕ್‌ಸಿದ್ಧಿ ಸಂಬಂಧವೆಂದು ಕರೆದಿದ್ದಾರೆ. ಅಲ್ಲದೆ, ಅಹಂಪದಾರ್ಥದ 'ಗುಣ' ವಾಗಿರುವ ಜ್ಞಾನವನ್ನು ಧರ್ಮಭೂತಜ್ಞಾನವೆಂದೂ. ಸ್ವರೂಪವಾದ ಜ್ಞಾನವನ್ನು ಸ್ವರೂಪಭೂತ ಜ್ಞಾನವೆಂದೂ ಕರೆದಿದ್ದಾರೆ

ಅಜ್ಞಾನವು ಚಿತ್‌ತತ್ತ್ವದ ಮೇಲೆ ಅಧ್ಯಾಸವಾಗುವುದರಿಂದ 'ನಾನು' ಎಂಬ ಅಹಂಪದಾರ್ಥವು ಉಂಟಾಗುವುದೆಂದು ಅದ್ವೈತ ವೇದಾಂತವು ಅಭಿಪ್ರಾಯಪಡುತ್ತದೆ. ಈ ಅಭಿಪ್ರಾಯವನ್ನು ರಾಮಾನುಜರು ನಿರಾಕರಿಸುತ್ತಾರೆ. ಅವರು ತಮ್ಮ ನಿರಾಕರಣೆಗೆ ಕೊಡುವ ಕಾರಣ ಈ ರೀತಿ ಇದೆ: ಅದ್ವೈತ ವೇದಾಂತದ ಪ್ರಕಾರ ಹಗ್ಗದ ಮೇಲೆ ಹಾವು ಅಧ್ಯಾಸವಾಗಿರುವ ಭ್ರಾಂತಿಯಲ್ಲಿ ನಾವು "ಇದು ಹಾವು" ಎಂದು ಹೇಳುತ್ತೇವೆ; ಅದೇ ರೀತಿ ಚಿತ್‌ಮೇಲೆ 'ನಾನು' ಎನ್ನುವುದು ಅಧ್ಯಾಸ ವಾಗಿದ್ದರೆ "ಇದು ನಾನು" ಎಂದು ಹೇಳಬೇಕಿತ್ತು; ಆದರೆ ನಾವು ಹಾಗೆ ಹೇಳುವುದಿಲ್ಲ; ಅದಕ್ಕೆ ಬದಲಾಗಿ "ನಾನು ಅರಿಯುತ್ತೇನೆ" "ನನ್ನ ಅರಿವು" ಮೊದಲಾಗಿ ಹೇಳುತ್ತೇವೆ. ಈ ಹೇಳಿಕೆಗಳು 'ನಾನು' ಎನ್ನುವ ಅಹಂಪದಾರ್ಥವು ಅಧ್ಯಾಸದ ಪರಿಣಾಮವಲ್ಲವೆಂದೂ, ಅರಿವು ಅಥವ ಚಿತ್‌ತತ್ತ್ವಕ್ಕೆ ಯಾವಾಗಲೂ ಇರತಕ್ಕ ಸ್ವಯಂವೇದ್ಯವಾದ ಆಶ್ರಯವೇ ಅದೆಂದೂ, ಅರಿವು ಅದರ ಗುಣವೆಂದೂ ನಿರೂಪಿಸುತ್ತದೆ.

ಆತ್ಮವು ಅಖಂಡವಾಗಿರುವುದರಿಂದ ವೃತ್ತಿಜ್ಞಾನವು ಅಂತಃಕರಣಕ್ಕೆ ಸೇರಿದುದೆಂದು ಅದ್ವೈತ ವೇದಾಂತವು ಪ್ರತಿಪಾದಿಸುತ್ತದೆ. ರಾಮಾನುಜರು ಇದನ್ನು ಒಪ್ಪುವುದಿಲ್ಲ. ಅವರ ಪ್ರಕಾರ ಅಂತಃಕರಣವು ಜಡವಾದುದರಿಂದ ಅದು ಯಾವ ರೀತಿಯಾದ ಜ್ಞಾನವನ್ನೂ ಹೊಂದುವಂತಿಲ್ಲ. ಆದ್ದರಿಂದ ಜ್ಞಾನ ವೆಲ್ಲವೂ ಆತ್ಮಕ್ಕೇ ಸೇರಿದುದಾಗಿದೆ.

ಅಖಂಡವಾದ ಬ್ರಹ್ಮತತ್ತ್ವದ ಆಧಾರದಮೇಲೆ ವಿವಿಧ ನಾಮರೂಪಗಳ ವಿಭಿನ್ನ ವಸ್ತುಗಳು ಮತ್ತು ಜೀವರಾಶಿಗಳಿಂದ ಕೂಡಿದ ಪ್ರಪಂಚದ ಅಸ್ತಿತ್ವವನ್ನು ತಾತ್ತ್ವಿಕವಾಗಿ ವಿವರಿಸುವ ಸಲುವಾಗಿ ಅದ್ವೈತ ವೇದಾಂತವು ಮುಂದೊಡ್ಡುವ ಮಾಯಾ ವಾದವನ್ನು ರಾಮಾನುಜರು ನಿರಾಕರಿಸುತ್ತಾರೆ. ಅವರ ನಿರಾಕರಣೆ ಈ ರೀತಿ ಇದೆ: ಅದ್ವೈತ ವೇದಾಂತದಲ್ಲಿನ ಮಾಯಾತತ್ತ್ವವು ನಿಜವಿದ್ದಪಕ್ಷಕ್ಕೆ, ಅದಕ್ಕೆ ಒಂದು ಆಶ್ರಯವಿದ್ದೇ ಇರಬೇಕು. ಅದರ ಆಶ್ರಯವು ಜೀವವಾಗಿರಬೇಕು. ಅಥವ ಬ್ರಹ್ಮ ವಾಗಿರಬೇಕು. ಆದರೆ ಇವೆರಡರಲ್ಲಿ ಯಾವುದೂ ಮಾಯೆಯ ಆಶ್ರಯವಾಗಿರುವುದು ಸಾಧ್ಯವಿಲ್ಲ; ಜೀವವು (ಅದ್ವೈತ ವೇದಾಂತದ ಪ್ರಕಾರ) ಮಾಯೆಯಿಂದಲೇ ಉಂಟಾಗುವುದರಿಂದ ಅದು ಮಾಯೆಯ ಆಶ್ರಯವಾಗಿರಲು ಸಾಧ್ಯವಿಲ್ಲ; ಬ್ರಹ್ಮವು ಸ್ವಯಂಪ್ರಕಾಶವಾದುದರಿಂದ. ಅದೂ ಮಾಯೆಯ ಆಶ್ರಯವಾಗಿರಲು ಸಾಧ್ಯವಿಲ್ಲ. ಆದ್ದರಿಂದ ಮಾಯೆಗೆ ಆಶ್ರಯವೇ ಇಲ್ಲ; ಆಶ್ರಯವಿಲ್ಲದೆ ಮಾಯೆಯು ಇರುವುದೆಂದು ಹೇಳಿದರೆ ಅರ್ಥವಿಲ್ಲ. ಅಲ್ಲದೆ. ಅದ್ವೈತವೇದಾಂತವು ಮಾಯೆಯನ್ನು ಸದಸತ್‌ವಿಲಕ್ಷಣ ವೆಂದು ವರ್ಣಿಸಿದೆ. ರಾಮಾನುಜರು ಇದನ್ನು ಒಪ್ಪುವುದಿಲ್ಲ. ಏಕೆಂದರೆ ಯಾವುದಾದರೂ ವಿಷಯವು 'ಸತ್' ಆಗಿರಬೇಕು. ಇಲ್ಲವೆ 'ಅಸತ್' ಆಗಿರಬೇಕು; ಎರಡೂ ಆಗಿಲ್ಲದಿರಲು ಸಾಧ್ಯವಿಲ್ಲ. ಎರಡೂ ಆಗಿಲ್ಲದೆ ವಿಲಕ್ಷಣವಾಗಿದೆಯೆಂದು ಹೇಳುವುದರಲ್ಲಿ ಅರ್ಥವಿಲ್ಲ.

ಪ್ರತ್ಯಕ್ಷದಲ್ಲಿನ ಭ್ರಾಂತಿಯನ್ನು ಅದ್ವೈತವೇದಾಂತವು ತನ್ನ ಅನಿರ್ವಚನೀಯ ಖ್ಯಾತಿವಾದದಿಂದ ವಿವರಿಸುತ್ತದೆ. ಇದನ್ನು ರಾಮಾನುಜರು ಒಪ್ಪದೆ, ಅದಕ್ಕೆ ಬದಲಾಗಿ ತಮ್ಮ ಸತ್‌ಖ್ಯಾತಿವಾದವನ್ನು ಮಂಡಿಸುತ್ತಾರೆ. ಅವರ ವಾದದ ಸಾರಾಂಶ ಹೀಗಿದೆ: ಒಂದು ಕಪ್ಪೆಯ ಚಿಪ್ಪನ್ನು ಬೆಳ್ಳಿಯೆಂದು ಪ್ರತ್ಯಕ್ಷದಲ್ಲಿ ತಿಳಿಯುವುದು ಭ್ರಾಂತಿ. ಆದರೆ ಬೆಳ್ಳಿಯ ಅಂಶವು ಕಪ್ಪೆಯ ಚಿಪ್ಪಿನಲ್ಲಿಲ್ಲದ ಪಕ್ಷಕ್ಕೆ ಈ ಭ್ರಾಂತಿಯೇ ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಬೆಳ್ಳಿಯು ಕಪ್ಪೆಯ ಚಿಪ್ಪಿನಲ್ಲಿದೆಯೆಂಬುದನ್ನು ಒಪ್ಪಲೇ ಬೇಕು. ಆದರೆ ಅದು ಕಪ್ಪೆಚಿಪ್ಪಿನಲ್ಲಿರುವುದು ಅತ್ಯಲ್ಪವಾದ ಪ್ರಮಾಣದಲ್ಲಿ; ನಾವು ಕಪ್ಪೆಚಿಪ್ಪನ್ನು ಕಾಣದೆ ಅದರಲ್ಲಿ ಅತ್ಯಲ್ಪಪ್ರಮಾಣದಲ್ಲಿರುವ ಬೆಳ್ಳಿಯನ್ನು ಮಾತ್ರ ಕಂಡು, ಆ ವಸ್ತುವು ಬೆಳ್ಳಿಯೆಂದು ತಿಳಿಯುತ್ತೇವೆ. ಇದೇ ನಮ್ಮ ಭ್ರಾಂತಿ. ಆದರೆ ಭ್ರಾಂತಿಯ ವಿಷಯವಾದ ಬೆಳ್ಳಿಯು ವಾಸ್ತವಿಕವಾಗಿಯೂ

ಅಸ್ತಿತ್ವದಲ್ಲಿದೆ; ಆದ್ದರಿಂದಲೇ ಅದು 'ಸತ್' ಎನಿಸುತ್ತದೆ. ಈ ರೀತಿ ಭ್ರಾಂತಿಯ ವಿಷಯವನ್ನು 'ಸತ್' ಎಂದು ಪರಿಗಣಿಸುವುದರಿಂದ ಈ ವಾದಕ್ಕೆ ಸತ್‌ಖ್ಯಾತಿವಾದವೆಂದು ಹೆಸರು. ಭ್ರಾಂತಿಯ ವಿಷಯವು 'ಸತ್' ಆಗಿರುವುದರಿಂದ ಅದು ಬೇರೆ ಪ್ರಮಾಣಗಳಿಂದ ವಿರೋಧಿಸಲ್ಪಡಲಾರದು. ಆದರೆ ಅದು ಅತ್ಯಲ್ಪಪ್ರಮಾಣದಲ್ಲಿ ನಾವು ನೋಡುತ್ತಿರುವ ವಸ್ತುವಿನಲ್ಲಿರುವುದರಿಂದ ಅದರಿಂದ ನಮಗೆ ವ್ಯವಹಾರದಲ್ಲಿ ಯಾವ ಪ್ರಯೋಜನವೂ ಆಗಲಾರದು. ಈ ರೀತಿ. ಭ್ರಾಂತಿಯ ವಿಷಯವು ನಾವು ನೋಡುತ್ತಿರುವ ವಸ್ತುವಿನಲ್ಲಿ ನಿಜವಾಗಿಯೂ ಅಸ್ತಿತ್ವದಲ್ಲಿದ್ದರೂ. ಅದರಲ್ಲಿ ಅದು ಅತ್ಯಲ್ಪ ಪ್ರಮಾಣದಲ್ಲಿರುವುದರಿಂದ ಅದು ನಿಷ್ಪ್ರಯೋಜನ. ಭ್ರಾಂತಿಯನ್ನು ಈ ವಿಧವಾಗಿ ವಿವರಿಸುವ ವಾದಕ್ಕೆ ಸತ್‌ಖ್ಯಾತಿವಾದವೆಂದು ಹೆಸರು.

೩. ಮೂರು ಪ್ರಮಾಣಗಳು

ವಿಶಿಷ್ಟಾದ್ವೈತ ವೇದಾಂತವು ಮೂರು ಪ್ರಮಾಣಗಳನ್ನು ಮಾತ್ರ ಒಪ್ಪುತ್ತದೆ: ಪ್ರತ್ಯಕ್ಷ, ಅನುಮಾನ ಮತ್ತು ಆಗಮ.

ಪ್ರತ್ಯಕ್ಷದ ವಿವರಣೆಯಲ್ಲಿ ಅದ್ವೈತಕ್ಕೂ. ವಿಶಿಷ್ಟಾದ್ವೈತಕ್ಕೂ ವ್ಯತ್ಯಾಸವಿದೆ. ಚಿತ್‌ತತ್ತ್ವವನ್ನು ಅಖಂಡವೆಂದು ಒಪ್ಪಿಕೊಂಡು. ಪ್ರಮಾತೃ, ಪ್ರಮಾಣ ಮತ್ತು ವಿಷಯಗಳ ಮೂಲದಲ್ಲಿನ ಐಕ್ಯತೆಯನ್ನು ಸಮರ್ಥಿಸಿ, ಅವುಗಳ ಭೇದವನ್ನು ಅಜ್ಞಾನದ ದೆಸೆಯಿಂದ ಚಿತ್‌ತತ್ತ್ವದ ಮೇಲೆ ಉಂಟಾಗಿರುವ ಆರೋಪವಾಗಿ ಅದ್ವೈತ ವೇದಾಂತವು ಪರಿಗಣಿಸುತ್ತದೆ. ಇದನ್ನು ವಿಶಿಷ್ಟಾದ್ವೈತವು ಒಪ್ಪುವುದಿಲ್ಲ. ಕಾರಣ. ಚಿತ್‌ತತ್ತ್ವವು ಅಖಂಡವಾಗಿದ್ದು. ಎಲ್ಲ ಜ್ಞಾನವೂ ಅದೇ ಆಗಿದ್ದ ಪಕ್ಷಕ್ಕೆ ಒಂದು ವಿಷಯದ ಜ್ಞಾನಕ್ಕೂ. ಮತ್ತೊಂದು ವಿಷಯದ ಜ್ಞಾನಕ್ಕೂ ವ್ಯತ್ಯಾಸವೇ ಇರುವುದಿಲ್ಲ. ಆದ್ದರಿಂದ ಜ್ಞಾನದಲ್ಲಿ ಜ್ಞಾತೃ. ಜ್ಞೇಯಗಳಿಗಿರುವ ವ್ಯತ್ಯಾಸವನ್ನು ಸತ್ಯವೆಂದು ಒಪ್ಪಬೇಕು. ಜ್ಞಾತೃ. ಜ್ಞೇಯಗಳಿಗಿರುವ ಸಂಬಂಧವನ್ನು ವಿವರಿಸುವಾಗ ರಾಮಾನುಜರು ವ್ಯವಹಾರಕ್ಕೆ ಅವಿರೋಧವಾಗಿರುವ ನಿಲುವನ್ನೇ ಅವಲಂಬಿಸುತ್ತಾರೆ. ಅವುಗಳು ಒಂದೇ ಅಲ್ಲ: ಅವುಗಳ ಭೇದವು ಸತ್ಯ. ಅಂತೆಯೇ. ಅವುಗಳ ಸಂಬಂಧವನ್ನು ಸನ್ನಿಕರ್ಷ ಅಥವ ಸಂಯೋಗವೆಂದು ಪರಿಗಣಿಸಬೇಕು. ಅಲ್ಲದೆ. ಅವುಗಳ ಸಂಬಂಧ ನೇರವಾದುದು: ಬೇರಾವ ಮಾಧ್ಯಮವಿಲ್ಲದೆ ಇಂದ್ರಿಯಗಳ ಮೂಲಕ ಜ್ಞಾತೃವು ವಿಷಯವನ್ನು ಅರಿಯಬಲ್ಲದು: ಆದ್ದರಿಂದಲೇ ಈ ಸಂಬಂಧಕ್ಕೆ ಪ್ರತ್ಯಕ್ಷವೆಂದು ಹೆಸರು.

ಪ್ರತ್ಯಕ್ಷದಲ್ಲಿ ಎರಡು ವಿಧವೆಂದು ವಿಶಿಷ್ಟಾದ್ವೈತ ವೇದಾಂತವು ನಿರ್ಣಯಿಸುತ್ತದೆ. ನಿರ್ವಿಕಲ್ಪಕ ಮತ್ತು ಸವಿಕಲ್ಪಕ. ಒಂದು ವಸ್ತುವನ್ನು ಅದರ 'ಜಾತಿ'ಗೆ ಸಂಬಂಧಿಸಿದಂತೆ ನೋಡುವುದು ನಿರ್ವಿಕಲ್ಪಕ ಪ್ರತ್ಯಕ್ಷ: ಇದು ಪ್ರತ್ಯಕ್ಷದಲ್ಲಿನ ಮೊದಲನೆಯ ಹಂತ. ವಸ್ತುವನ್ನು ಅದರ 'ಜಾತಿ'ಗೆ ಸಂಬಂಧಿಸಿದಂತೆ ನೋಡುವುದು ಸವಿಕಲ್ಪಕ ಪ್ರತ್ಯಕ್ಷ: ಇದು ಪ್ರತ್ಯಕ್ಷದಲ್ಲಿನ ಎರಡನೆಯ ಹಂತ. ಈ ಎರಡನೆಯ ಹಂತವಾದ ಸವಿಕಲ್ಪಕ ಪ್ರತ್ಯಕ್ಷದಲ್ಲಿಯೇ ಪ್ರತ್ಯಕ್ಷವು ಪೂರ್ಣವಾಗುವುದು. ತನ್ನೊಳಗಿನ ಸುಖ, ದುಃಖಗಳನ್ನು ಕಾಣುವುದು. ಪ್ರತಿಭೆ. ನೆನಪು–ಇವುಗಳೆಲ್ಲವನ್ನೂ ಪ್ರತ್ಯಕ್ಷದ ವಿಧಗಳೆಂದೇ ವಿಶಿಷ್ಟಾದ್ವೈತವು ಪರಿಗಣಿಸುತ್ತದೆ. ಅಂತೆಯೇ ವಸ್ತು–ಗುಣಗಳ ಸಂಬಂಧ. ಕಾರಣ–ಕಾರ್ಯಸಂಬಂಧ ಇವೆಲ್ಲವೂ ಪ್ರತ್ಯಕ್ಷದಲ್ಲಿಯೇ ವೇದ್ಯವಾಗುತ್ತವೆ. ಈ ಸಂಬಂಧಗಳು ಬೇರ್ಪಡಿಸಲಾಗದ ಅಥವ ಅಪೃಥಕ್‌ಸಿದ್ಧ ಸಂಬಂಧಗಳು: ಪ್ರತ್ಯಕ್ಷದಲ್ಲಿ ಕಾಣಲ್ಪಡುವುದರಿಂದ ಇವು ಮಿಥ್ಯೆಯಲ್ಲ. ಸತ್ಯವೇ ಸರಿ.

ಅನುಪಲಬ್ಧಿಯು ಸ್ವತಂತ್ರವಾದ ಪ್ರಮಾಣವೆಂದು ಅದ್ವೈತವೇದಾಂತವು ಅಭಿಪ್ರಾಯಪಡುತ್ತದೆ. ರಾಮಾನುಜರು ಇದನ್ನು ಒಪ್ಪುವುದಿಲ್ಲ. ಅನುಪಲಬ್ಧಿಯನ್ನು ವಿಶ್ಲೇಷಿಸಿ ನೋಡಿದರೆ ಅದು ಪ್ರತ್ಯಕ್ಷವೇ ಸರಿ ಎಂದು ವೇದ್ಯವಾಗುತ್ತದೆಂದು ಅವರು ನಿರೂಪಿಸುತ್ತಾರೆ. ಅನುಪಲಬ್ಧಿಯಲ್ಲಿ ಮಡಿಕೆಯ ಅಭಾವವನ್ನು ನೆಲದ ಮೇಲೆ ನೋಡುತ್ತಿದ್ದೇವೆಂದರೆ. ನಾವು ಬರಿಯ ನೆಲವನ್ನು ಮಾತ್ರ ನೋಡುತ್ತಿದ್ದೇವೆಂದೇ ಅರ್ಥ. ಎಂದರೆ. ಬರಿಯ ನೆಲವನ್ನು ಮಡಿಕೆಯ ದೃಷ್ಟಿಯಿಂದ ನೋಡಿ ಅಲ್ಲಿ ಮಡಿಕೆಯು

ಇಲ್ಲವೆಂದು ಹೇಳುತ್ತಿದ್ದೇವೆ. ನಾವು ನೋಡುತ್ತಿರುವುದು ಮಡಿಕೆಯ ದೃಷ್ಟಿಯಿಂದ ಬರಿಯ ನೆಲವನ್ನೇ. ಆದ್ದರಿಂದ ಇದು ಪ್ರತ್ಯಕ್ಷವೇ ಸರಿ.

ಅನುಮಾನವನ್ನು ಕುರಿತು ವಿಶಿಷ್ಟಾದ್ವೈತ ವೇದಾಂತವು ಕೊಡುವ ವಿವರಣೆಯು ಅದ್ವೈತ ವೇದಾಂತದ ವಿವರಣೆಯನ್ನೇ ಹೋಲುತ್ತದೆ. ಆದರೆ ಉಪಮಾನ ಮತ್ತು ಅರ್ಥಾಪತ್ತಿಗಳು ಅನುಮಾನ ದಿಂದ ಸ್ವತಂತ್ರವಾದ ಪ್ರಮಾಣಗಳಲ್ಲವೆಂದೂ, ಏಕೆಂದರೆ ಅವನ್ನು ವಿಶ್ಲೇಷಿಸಿ ನೋಡಿದರೆ ಅನುಮಾನ ದಂತೆಯೇ ವ್ಯಾಪ್ತಿಜ್ಞಾನದ ಮೇಲೆ ಅವಲಂಬಿತವಾಗಿರುವುದು ಗೋಚರಿಸುವುದೆಂದೂ ವಿಶಿಷ್ಟಾದ್ವೈತ ವೇದಾಂತವು ಅಭಿಪ್ರಾಯಪಡುತ್ತದೆ.

ಆಗಮವು ಎರಡು ವಿಧವಾದುದೆಂದು ವಿಶಿಷ್ಟಾದ್ವೈತ ವೇದಾಂತವು ಪರಿಗಣಿಸುತ್ತದೆ. ಆಳ್ವಾರು ಗಳಂಥ ಮಹಾನುಭಾವರ ಹೇಳಿಕೆಗಳು ಪೌರುಷೇಯ ಆಗಮ ; ಅದಕ್ಕೆ ನಿರ್ದಿಷ್ಟವಾದ ಕರ್ತೃಗಳಿರು ತ್ತಾರೆ. ವೇದಗಳಲ್ಲಿನ ಜ್ಞಾನವು ಅಪೌರುಷೇಯ ಆಗಮ; ಅದಕ್ಕೆ ನಿರ್ದಿಷ್ಟವಾದ ಕರ್ತೃಗಳಿಲ್ಲ.

ಒಂದು ಪದಕ್ಕೂ, ಅದರ ಅರ್ಥಕ್ಕೂ ಇರತಕ್ಕ ಸಂಬಂಧಕ್ಕೆ 'ವೃತ್ತಿ' ಎಂದು ಹೆಸರು. ಈ ಸಂಬಂಧದಲ್ಲಿ ಎರಡು ವಿಧ: ವಾಚ್ಯಾರ್ಥ ಮತ್ತು ಲಕ್ಷ್ಯಾರ್ಥ. ಮೊದಲನೆಯದರಲ್ಲಿ ಮೂರು ಪ್ರಭೇದಗಳು. ಕೇವಲ ಪದತಃ ಅರ್ಥವು 'ಯೋಗ'ವೆನಿಸುವುದು ; ವ್ಯವಹಾರದಲ್ಲಿ ಪ್ರಚಲಿತವಾಗಿರುವ ಅರ್ಥವು ರೂಢಿ ಎನಿಸುವುದು. ದ್ವಿತೀಯವಾದ ಲಕ್ಷಣಾರ್ಥದಲ್ಲಿಯೂ ಎರಡು ವಿಧಗಳು ಸಾಧ್ಯ. ವಾಚ್ಯಾರ್ಥಕ್ಕೂ ಲಕ್ಷಣಾರ್ಥಕ್ಕೂ ಅತಿ ನೇರವಾದ ಸಂಬಂಧವಿದ್ದು, ಲಕ್ಷ್ಯಾರ್ಥವಿಲ್ಲದೆ ವಾಚ್ಯಾರ್ಥವು ಸಾಧ್ಯವೇ ಇಲ್ಲದಿದ್ದರೆ ಅದನ್ನು 'ಲಕ್ಷಣ'ವೆನ್ನುವರು. ಉದಾಹರಣೆಗೆ: 'ಗಂಗಾನದಿಯ ಮೇಲೆ ಒಂದು ಹಳ್ಳಿಯಿದೆ' ಎಂದರೆ "ಗಂಗಾನದಿಯ ದಡದಮೇಲೆ ಒಂದು ಹಳ್ಳಿಯಿದೆ" ಎಂದೇ ಅರ್ಥವಾಗುತ್ತದೆ. ಇಲ್ಲಿ ಲಕ್ಷ್ಯಾರ್ಥವಿಲ್ಲದೆ. ಕೇವಲ ವಾಚ್ಯಾರ್ಥವನ್ನೇ ತೆಗೆದುಕೊಂಡರೆ, ವಾಕ್ಯಕ್ಕೆ ಒಪ್ಪಬಹುದಾದ ಅಥವ ತರ್ಕಬದ್ಧವಾದ ಅರ್ಥವೇ ಇರುವುದಿಲ್ಲ. (೨) ಯಾವುದಾದರೊಂದು ಗುಣದ ಸಾಮ್ಯದ ಮೇಲೆ ಅವಲಂಬಿತವಾಗಿರುವ ಲಕ್ಷ್ಯಾರ್ಥವನ್ನು 'ಗೌಣಿ' ಎಂದು ಕರೆಯುತ್ತಾರೆ. ಉದಾಹರಣೆಗೆ, 'ದೇವದತ್ತನು ಒಂದು ಸಿಂಹ' ಎಂದರೆ "ಅವನು ಸಿಂಹದಷ್ಟೇ ಧೈರ್ಯಶಾಲಿ" ಎಂದು ಅರ್ಥ. ಇಲ್ಲಿ ಧೈರ್ಯವೆಂಬ ಗುಣದಲ್ಲಿ ದೇವದತ್ತನಿಗೂ ಸಿಂಹಕ್ಕೂ ಸಾಮ್ಯವಿರುವುದರಿಂದ ಲಕ್ಷ್ಯಾರ್ಥವು ಸಾಧ್ಯ ವಾಗುತ್ತದೆ.

೪. ಬ್ರಹ್ಮ ಮತ್ತು ಪ್ರಪಂಚ

ಪ್ರಪಂಚದಲ್ಲಿ ಎರಡು ರೀತಿಯಾದ ತತ್ತ್ವಗಳು (ಅಥವಾ ಪದಾರ್ಥಗಳು) ಗೋಚರಿಸುತ್ತವೆ– ಚಿತ್ ಮತ್ತು ಅಚಿತ್. ತಮ್ಮನ್ನು ತಾವು ಅರಿಯುವ, ತಮಗಾಗಿಯೇ ತಾವು ಇರಬಲ್ಲ ಪದಾರ್ಥಗಳು 'ಚಿತ್' ಎನಿಸುತ್ತವೆ; ಹಾಗಲ್ಲದೆ, 'ಚಿತ್'ನಿಂದ ಅರಿಯಲ್ಪಡುವ ಮತ್ತು 'ಚಿತ್'ನಿಂದ ಕೂಡಿದ ಪದಾರ್ಥಗಳ ಅನುಭವಕ್ಕಾಗಿಯೇ ಅಸ್ತಿತ್ವದಲ್ಲಿರುವ ಪದಾರ್ಥಗಳು 'ಅಚಿತ್' ಎನಿಸುತ್ತವೆ. ಎಂದರೆ, ಭೋಕ್ತೃಗಳಾಗಿರುವ ಅಥವಾ ಸ್ವತಃ ಅನುಭವಿಸಲು ಶಕ್ತಿಯಿರುವ ಪದಾರ್ಥಗಳೆಲ್ಲವನ್ನೂ 'ಚಿತ್' ಎಂದು, ಸ್ವತಃ ಭೋಕ್ತೃಗಳಲ್ಲದ ಮತ್ತು ಕೇವಲ ಅನುಭವಿಸಲ್ಪಡುವ ಪದಾರ್ಥಗಳೆಲ್ಲವನ್ನೂ 'ಅಚಿತ್' ಎಂದೂ ಕರೆಯಬಹುದು. ಚಿತ್ ಮತ್ತು ಅಚಿತ್‌ಗಳ ವ್ಯತ್ಯಾಸವು ವಿಶಿಷ್ಟಾದ್ವೈತ ವೇದಾಂತದಲ್ಲಿ ಅತಿ ಮುಖ್ಯವಾದುದು. ಇವೆರಡರಲ್ಲಿ ಯಾವುದನ್ನೂ ಮತ್ತೊಂದರಂತೆ ಯಾವ ಹಂತದಲ್ಲಿಯೂ ಪರಿಗಣಿಸಲಾಗದು.

ಚಿತ್ ಮತ್ತು ಅಚಿತ್‌ಗಳೆರಡೂ ಪ್ರಪಂಚದಲ್ಲಿವೆ. ಅವು ಪ್ರಪಂಚದಲ್ಲಿರುವುದು ಸ್ಥೂಲವಾದ ರೂಪದಲ್ಲಿ. ಆದ್ದರಿಂದ ಅವನ್ನು 'ಸ್ಥೂಲ ಚಿದಚಿತ್' ಎಂದು ಕರೆಯುತ್ತಾರೆ. ಆದರೆ ಸ್ಥೂಲರೂಪ ದಲ್ಲಿರುವ ಯಾವ ಪದಾರ್ಥವಾದರೂ, ಮುಂಚಿತವಾಗಿ ಸೂಕ್ಷ್ಮವಾಗಿರಲೇಬೇಕು ; ಮುಂಚಿತವಾಗಿ ಸೂಕ್ಷ್ಮವಾಗಿರುವುದೇ ಅನಂತರ ಸ್ಥೂಲವಾಗಿ ಮಾರ್ಪಡುವುದು ಸಾಧ್ಯ. ಆದ್ದರಿಂದ ಚಿತ್ ಮತ್ತು ಅಚಿತ್‌ಗಳು ಮುಂಚಿತವಾಗಿ ಸೂಕ್ಷ್ಮರೂಪದಲ್ಲಿದ್ದಿರಬೇಕು. ಈ ರೀತಿಯಾದ ಸೂಕ್ಷ್ಮ ಚಿದಚಿತ್‌ಗಳು

ಮಾರ್ಪಾಟು ಪ್ರಪಂಚದಲ್ಲಿನ ಸ್ಥೂಲ ಚಿದಚಿತ್ ಆಗಿ ಪರಿಣಮಿಸಿರಬೇಕು. ಎಂದರೆ, ಸೂಕ್ಷ್ಮ ಚಿದಚಿತ್‌ಗಳು ಪ್ರಪಂಚದಲ್ಲಿನ ಸ್ಥೂಲ ಚಿದಚಿತ್‌ಗಳಿಗೆ ಕಾರಣವೆಂದಾಯಿತು.

ಆದರೆ ಸೂಕ್ಷ್ಮ ಚಿದಚಿತ್‌ಗಳು ತಮ್ಮಷ್ಟಕ್ಕೆ ತಾವೇ ಸ್ಥೂಲ ಚಿದಚಿತ್‌ಗಳಾಗಿ ಮಾರ್ಪಾಟಾಗಲು ಸಾಧ್ಯವಾಗುವುದಿಲ್ಲ. ಆ ರೀತಿ ಮಾರ್ಪಾಟಾಗುವುದಕ್ಕೆ ಅವು ಪರಮ ತತ್ತ್ವದ ಬ್ರಹ್ಮದ ಮೇಲೆ ಅವಲಂಬಿತವಾಗಿರುತ್ತವೆ. ಬ್ರಹ್ಮವು ಸೂಕ್ಷ್ಮ ಚಿದಚಿತ್‌ಗಳಲ್ಲಿ ಅಡಗಿದ್ದುಕೊಂಡು, ಅವು ಪ್ರಪಂಚದಲ್ಲಿನ ಸ್ಥೂಲ ಚಿದಚಿತ್‌ಗಳಾಗಿ ಮಾರ್ಪಡುವಂತೆ ಮಾಡುತ್ತದೆ; ಅಲ್ಲದೆ, ಸೂಕ್ಷ್ಮ ಚಿದಚಿತ್ ಮತ್ತು ಸ್ಥೂಲ ಚಿದಚಿತ್‌ಗಳಲ್ಲಿ ಏಕರೀತಿಯಲ್ಲಿ ಅಸ್ತಿತ್ವದಲ್ಲಿರುತ್ತದೆ. ಈ ರೀತಿ ಸೂಕ್ಷ್ಮಚಿದಚಿತ್‌ಗಳಲ್ಲಿರುವ ಬ್ರಹ್ಮತತ್ತ್ವವು ಅವು ಪ್ರಪಂಚದಲ್ಲಿನ ಸ್ಥೂಲ ಚಿದಚಿತ್‌ಗಳಾಗಿ ಮಾರ್ಪಡಲು ಕಾರಣವಾಗುವುದರಿಂದ, ಅದು ಪ್ರಪಂಚದ ಉಪಾದಾನಕಾರಣವಾಗಿ ಪರಿಗಣಿಸಲ್ಪಟ್ಟಿದೆ. ಅಲ್ಲದೆ, ಬ್ರಹ್ಮವು ಈ ರೀತಿ ಸೂಕ್ಷ್ಮ ಚಿದಚಿತ್‌ಗಳಿಂದ ಕೂಡಿರುವುದರಿಂದ, ಅದನ್ನು ಸೂಕ್ಷ್ಮಚಿದಚಿತ್ ವಿಶಿಷ್ಟ ಬ್ರಹ್ಮವೆಂದು ವರ್ಣಿಸುತ್ತಾರೆ.

ಇಲ್ಲಿ ಒಂದು ಪ್ರಶ್ನೆಯು ಉದ್ಭವಿಸುತ್ತದೆ. ಉಪನಿಷತ್‌ಗಳಲ್ಲಿ ಬ್ರಹ್ಮವು ನಿರ್ವಿಕಾರವೆಂದು ವರ್ಣಿಸಲ್ಪಟ್ಟಿದೆ. ಹಾಗಿದ್ದ ಪಕ್ಷಕ್ಕೆ ಸೂಕ್ಷ್ಮಸ್ಥಿತಿಯಿಂದ ಸ್ಥೂಲಾವಸ್ಥೆಗೆ ಉಂಟಾಗುವ ಮಾರ್ಪಾಟನ್ನು ಬ್ರಹ್ಮಕ್ಕೆ ಅನ್ವಯಿಸುವುದು ಸರಿಯೇ ಎನ್ನುವುದೇ ಆ ಪ್ರಶ್ನೆ. ಆ ಪ್ರಶ್ನೆಗೆ ರಾಮಾನುಜರ ಉತ್ತರ ಈ ರೀತಿ ಇದೆ. ಚಿತ್ ಮತ್ತು ಅಚಿತ್‌ಗಳು ಬ್ರಹ್ಮದ ಪ್ರಕಾರಗಳು. ವಿಕಾರ ಅಥವಾ ಬದಲಾವಣೆಯು ಈ ಪ್ರಕಾರಗಳಿಗೆ ಅನ್ವಯಿಸುವುದೇ ಹೊರತು ಬ್ರಹ್ಮಕ್ಕಲ್ಲ.[5] ತನ್ನ ಸುತ್ತಲೂ ಬಲೆಯನ್ನು ಕಟ್ಟುವ ಜೇಡರಹುಳು ಬಲೆಯಲ್ಲಿನ ಬದಲಾವಣೆಯಿಂದ ಯಾವ ವಿಕಾರವನ್ನೂ ಹೊಂದುವುದಿಲ್ಲ; ಅಂತೆಯೇ ಪ್ರಪಂಚದ ಬದಲಾವಣೆಯಿಂದ ಅದರ ಕಾರಣವಾದ ಬ್ರಹ್ಮವು ಯಾವ ವಿಕಾರವನ್ನೂ ಹೊಂದುವುದಿಲ್ಲ.

ಬ್ರಹ್ಮವು ಪ್ರಪಂಚದ ಉಪಾದಾನಕಾರಣ ಮಾತ್ರವಲ್ಲದೆ ನಿಮಿತ್ತಕಾರಣವೂ ಹೌದು : ಏಕೆಂದರೆ, ವಿಶ್ವವು ತನ್ನ ಅಸ್ತಿತ್ವ ಮತ್ತು ರಕ್ಷಣೆಗೆ ಬ್ರಹ್ಮದ ಮೇಲೆಯೇ ಅವಲಂಬಿತವಾಗಿದೆ. ಜಗತ್ತಿನ ನಿಮಿತ್ತ ಕಾರಣವಾದ ಬ್ರಹ್ಮವು ನಿರ್ಗುಣವಲ್ಲ. ಸಗುಣ: ಬ್ರಹ್ಮವು ಸಕಲಕಲ್ಯಾಣಗುಣಪರಿಪೂರ್ಣವಾಗಿರುವುದು; ಬ್ರಹ್ಮವೇ ವಿಶ್ವದ ಈಶ್ವರ (ಒಡೆಯ); ಬ್ರಹ್ಮವೇ ನಾರಾಯಣ. ವಿಷ್ಣು ಮೊದಲಾಗಿ ಸಂಬೋಧಿಸಲ್ಪಡುವ ಪರಮತತ್ತ್ವ; ಈ ಪರಮತತ್ತ್ವವು ಆನಂದಮಯವೆಂದೂ, ಅನಂತವೆಂದೂ, ಅಂತರ್ಯಾಮಿಯೆಂದೂ, ಸರ್ವಜ್ಞನೆಂದೂ, ಸರ್ವಶಕ್ತನೆಂದೂ ಪರಿಗಣಿತವಾಗಿದೆ.

ಮೇಲಿನ ವಿವರಣೆಯಿಂದ ಬ್ರಹ್ಮವು ಸಗುಣವೆಂದೂ, ಪ್ರಪಂಚವು ಸತ್ಯವೆಂದೂ ವೇದ್ಯವಾಗುತ್ತದೆ. ಬ್ರಹ್ಮಕ್ಕೂ ಪ್ರಪಂಚಕ್ಕೂ ಇರುವ ಸಂಬಂಧವು ಸತ್ಯ ಮತ್ತು ನಿತ್ಯ. ಈ ರೀತಿ ಬ್ರಹ್ಮವು ಪ್ರಪಂಚದಿಂದ ಕೂಡಿದೆ. ಮತ್ತು ಅವುಗಳ ಸಂಬಂಧವು ನಿತ್ಯವಾದ ಸಂಬಂಧವೆನ್ನುವುದನ್ನು ಸೂಚಿಸುವುದಕ್ಕಾಗಿಯೇ ರಾಮಾನುಜರ ವೇದಾಂತವನ್ನು ವಿಶಿಷ್ಟಾದ್ವೈತವೆಂದು ಕರೆದಿದ್ದಾರೆ. ಪ್ರಪಂಚಕ್ಕೂ ಬ್ರಹ್ಮಕ್ಕೂ ಇರುವ ಸಂಬಂಧವನ್ನು ರಾಮಾನುಜರು ಶರೀರ ಶರೀರಿ ಸಂಬಂಧವೆಂದು ಕರೆದಿದ್ದಾರೆ. ಸಾಧಾರಣ ಮನುಷ್ಯರ ಜೀವನದಲ್ಲಿ ಪಂಚಮಹಾಭೂತಗಳಿಂದ ಮಾಡಲ್ಪಟ್ಟ ಶರೀರವು ಶರೀರಿಯ (ಆತ್ಮದ) ಮೇಲೆ ಅನೇಕ ಮಿತಿಗಳನ್ನು ಹೇರುತ್ತವೆ. ಆದರೆ ಪ್ರಪಂಚವು ಬ್ರಹ್ಮದ ಶರೀರವೆಂದು ಪರಿಗಣಿಸಲ್ಪಟ್ಟಿದ್ದರೂ, ಬ್ರಹ್ಮದ ಮೇಲೆ ಯಾವ ಮಿತಿಯನ್ನೂ ಹೇರುವುದಿಲ್ಲ. ಈ ವಿಷಯದ ವಿವರಣೆಗಾಗಿ ರಾಮಾನುಜರು 'ಶರೀರ'ವೆಂಬ ಶಬ್ದಕ್ಕೆ ವಿಶಿಷ್ಟವಾದ ಅರ್ಥವನ್ನೇ ಕೊಡುತ್ತಾರೆ.[6] ಯಾವುದನ್ನು ಆತ್ಮವು ಪೂರ್ತಿಯಾಗಿ ತನ್ನ ಅಧೀನದಲ್ಲಿಟ್ಟುಕೊಂಡು, ತನ್ನ ಇಷ್ಟಾನುಸಾರ ನಿರ್ದೇಶಿಸಲು ಶಕ್ತವಾಗಿರುವುದೋ, ಮತ್ತು ಯಾವುದು ಪೂರ್ತಿಯಾಗಿ ಆತ್ಮದ ಅಧೀನದಲ್ಲಿರುವುದೋ ಅದೇ ಶರೀರ. ಶರೀರವೆಂಬ ಪದಕ್ಕೆ ಈ ರೀತಿ ವಿಶಿಷ್ಟವಾದ ಮತ್ತು ಪೂರ್ಣವಾದ ಅರ್ಥವನ್ನು ಕೊಟ್ಟು, ಈ ತಾತ್ತ್ವಿಕ ಅರ್ಥದಲ್ಲಿ ಚಿತ್ ಮತ್ತು ಅಚಿತ್‌ಗಳಿಂದ ಕೂಡಿದ ಪ್ರಪಂಚವನ್ನು ಬ್ರಹ್ಮದ ಶರೀರವಾಗಿ

5. ಅದೇ, I, ೪.೨೯, ಪುಟ ೪೦೫, ೪೦೬.
6. ಅದೇ, II, ೧, ೧೧, ಪುಟ ೪೨೪

ರಾಮಾನುಜರು ಪರಿಗಣಿಸುತ್ತಾರೆ. ಈ ವಿಶಿಷ್ಟವಾದ ತಾತ್ವಿಕ ಅರ್ಥದಲ್ಲಿ ಪ್ರಪಂಚವು ಬ್ರಹ್ಮದ ಶರೀರವೆಂದು ಪರಿಗಣಿಸುವುದರಿಂದ, ಅದು ಬ್ರಹ್ಮದ ಮೇಲೆ ಯಾವ ರೀತಿಯನ್ನೂ, ಅವಲಂಬನ ವನ್ನೂ ಹೇರಲಾರದು. ಈ ಕಾರಣಕ್ಕಾಗಿಯೇ ಪ್ರಪಂಚವು ಬ್ರಹ್ಮದ ಮೇಲೆ ತನ್ನ ಅಸ್ತಿತ್ವ ಮತ್ತು ರಕ್ಷಣೆಗೆ ಅವಲಂಬಿತವಾದರೂ, ಬ್ರಹ್ಮವು ಪ್ರಪಂಚದ ಮೇಲೆ ಯಾವ ರೀತಿಯಲ್ಲೂ ಅವಲಂಬಿತ ವಲ್ಲವೆಂದು ವಿಶಿಷ್ಟಾದ್ವೈತವೇದಾಂತದಲ್ಲಿ ಹೇಳಲಾಗಿದೆ.

ಚಿತ್ ಮತ್ತು ಅಚಿತ್ ಎಂಬ ಎರಡು ಬಗೆಯ ಪದಾರ್ಥಗಳು ಪ್ರಪಂಚದಲ್ಲಿರುವುವೆಂದು ಮೇಲೆಯೇ ಹೇಳಿದೆ. ಇವೆರಡರ ವಿಷಯದಲ್ಲಿಯೂ ಕೆಲವು ವಿವರಗಳನ್ನು ಇನ್ನು ಮುಂದೆ ನಿರೂಪಿಸ ಬಹುದು. ಜೀವಾತ್ಮಗಳೆಲ್ಲವೂ ಚಿತ್ ಪದಾರ್ಥಗಳು. ಚಿತ್ ಅಥವಾ ಅರಿವು ಆತ್ಮದ ಗುಣವು ಮಾತ್ರ ವಲ್ಲದೆ ಅದರ ಸ್ವರೂಪವೆಂದು ಮೇಲೆಯೇ ಹೇಳಿದೆ. ಆತ್ಮವು ನಿರ್ವಿಕಾರವಾದುದು; ಅದು ಯಾವ ಬದಲಾವಣೆಯನ್ನೂ ಹೊಂದುವುದಿಲ್ಲ. ಆದರೆ ಅದರ ಗುಣವಾದ ಚಿತ್ ಅಥವ ಅರಿವು ಬದಲಾವಣೆ ಯನ್ನು ಹೊಂದುತ್ತದೆ. ಮನಸ್ಸು, ಇಂದ್ರಿಯಗಳು, ಭೌತಶರೀರ ಇವುಗಳೊಡನಿರುವ ಸಂಬಂಧದ ದೆಸೆಯಿಂದ ಆತ್ಮದ ಗುಣವಾದ ಚಿತ್ ಅಥವಾ ಅರಿವು ಸಂಕುಚಿತವಾಗಿರುತ್ತದೆ; ಈ ಸ್ಥಿತಿಯನ್ನು ಬಂಧನವೆನ್ನುತ್ತಾರೆ; ಬಂಧನದ ಕಾರಣ ಅನಾದಿಕರ್ಮ. ಬ್ರಹ್ಮದ ಮೇಲೆ ಆತ್ಮವು ತನ್ನ ಪೂರ್ಣ ಅವಲಂಬನವನ್ನು ಅರಿಯುವುದರಿಂದ ಅದರ ಗುಣವಾದ ಅರಿವು ಪೂರ್ಣವಾಗಿ ವಿಕಾಸಗೊಳ್ಳುತ್ತದೆ; ಈ ಸ್ಥಿತಿಯನ್ನು ಮೋಕ್ಷವೆನ್ನುತ್ತಾರೆ. ಮೋಕ್ಷದಲ್ಲಿ ಆತ್ಮವು ಬ್ರಹ್ಮದಷ್ಟೇ ಆನಂದವನ್ನೂ, ಜ್ಞಾನವನ್ನೂ ಪಡೆಯುತ್ತದೆ. ಆದರೆ ಅದು ತನ್ನದೇ ಆದ ನಿರ್ದಿಷ್ಟವಾದ ಅಸ್ತಿತ್ವವನ್ನು ಪಡೆದಿರುತ್ತದೆಯೇ ಹೊರತು ಬ್ರಹ್ಮದೊಡನೆ 'ಅಭೇದ'ವನ್ನು ಪಡೆಯುವುದಿಲ್ಲ. ಈ ಅಂಶದಲ್ಲಿ ವಿಶಿಷ್ಟಾದ್ವೈತಕ್ಕೂ ಮತ್ತು ಅದ್ವೈತಕ್ಕೂ ವ್ಯತ್ಯಾಸವಿದೆ. ಶಂಕರರ ಅದ್ವೈತದ ಪ್ರಕಾರ ಅಂತಿಮವಾಗಿ ಆತ್ಮಕ್ಕೂ ಬ್ರಹ್ಮಕ್ಕೂ ಇರುವ ಅಭೇದವನ್ನು ಅರಿಯುವುದೇ ಮೋಕ್ಷ ; ಆದರೆ ರಾಮಾನುಜರ ಪ್ರಕಾರ ಆತ್ಮದ ನಿರ್ದಿಷ್ಟವಾದ ಅಸ್ತಿತ್ವ ಮೋಕ್ಷದಲ್ಲಿಯೂ ಉಳಿಯುತ್ತದೆ; ಶರೀರವು ಶರೀರಿಯ ಮೇಲೆ ಅವಲಂಬಿತವಾದಂತೆ, ಬ್ರಹ್ಮದ ಮೇಲೆ ಅವಲಂಬಿತವಾಗಿರುವ ಆತ್ಮವು ಮೋಕ್ಷದಲ್ಲಿ ಬ್ರಹ್ಮದ ಶರೀರವನ್ನಾಗಿಯೇ ತನ್ನನ್ನು ಪರಿಗಣಿಸಿ, ಬ್ರಹ್ಮದ ಮೇಲೆ ತನ್ನ ಪೂರ್ಣ ಅವಲಂಬನವನ್ನು ಅರಿಯುತ್ತದೆಯೇ ಹೊರತು ಬ್ರಹ್ಮವೇ ತಾನೆಂದು ಅರಿಯುವುದಿಲ್ಲ.[7] ರಾಮಾನುಜರ ಮೋಕ್ಷ ಸಿದ್ಧಾಂತವು ಮಧ್ವರ ಮೋಕ್ಷ ಸಿದ್ಧಾಂತದಿಂದಲೂ ಭಿನ್ನವಾಗಿದೆ. ಮಧ್ವರ ಪ್ರಕಾರ ಮೋಕ್ಷದಲ್ಲಿಯೂ ಆತ್ಮವು ಆನಂದ ಮತ್ತು ಜ್ಞಾನಗಳಲ್ಲಿ ಬ್ರಹ್ಮಕ್ಕೆ ಸಮನಾಗುವುದಿಲ್ಲ: ಅವುಗಳಲ್ಲಿಯೂ ಆತ್ಮ ಮತ್ತು ಬ್ರಹ್ಮಕ್ಕೆ ವ್ಯತ್ಯಾಸವಿದ್ದೇ ಇರುತ್ತದೆ. ಆದರೆ ರಾಮಾನುಜರ ಪ್ರಕಾರ ಮೋಕ್ಷದಲ್ಲಿ ಆತ್ಮವು ತನ್ನ ಜ್ಞಾನ ಮತ್ತು ಆನಂದಗಳಲ್ಲಿ ಬ್ರಹ್ಮಕ್ಕೆ ಸಮ ನಾಗುತ್ತದೆ. ಆದರೂ ಜಗತ್ತಿನ ಸೃಷ್ಟಿ, ಸಂರಕ್ಷಣೆಗಳು ಬ್ರಹ್ಮಕ್ಕೆ ಮಾತ್ರ ಸೇರಿರುತ್ತವೆ: ಆತ್ಮಕ್ಕೆ ಆ ಅಧಿಕಾರವು ಇರುವುದಿಲ್ಲ.

ಆತ್ಮ ಮತ್ತು ಬ್ರಹ್ಮಗಳಿಗಿರುವ ಸಂಬಂಧವನ್ನು ಗುಣ–ಗುಣಿಗಳ ಸಂಬಂಧವೆಂದೂ ರಾಮಾನುಜರು ವರ್ಣಿಸುತ್ತಾರೆ. ಈ ಸಂಬಂಧವು ಆತ್ಮ, ಬ್ರಹ್ಮಗಳಿಗಿರುವ ಒಂದು ವಿಧವಾದ ಸಂಕೀರ್ಣ ಐಕ್ಯತೆಯನ್ನು ಸೂಚಿಸುತ್ತದೆ. ಈ ಐಕ್ಯತೆಯು ಅದ್ವೈತ ವೇದಾಂತವು ಹೇಳುವಂತೆ ಕೇವಲ ಅಭೇದವಲ್ಲ ; ಅಥವಾ ದ್ವೈತ ವೇದಾಂತವು ಹೇಳುವಂತೆ ಕೇವಲ ಭೇದ ಮತ್ತು ಸಾದೃಶ್ಯ ಸಂಬಂಧವೂ ಅಲ್ಲ. ಏಕೆಂದರೆ, ಗುಣವು ಗುಣಿಯೊಳಗೆ ಸೇರಿರುವುದೇ ಅಲ್ಲದೆ, ಅದರಿಂದಾಚೆಗೂ ಚಾಚಲ್ಪಟ್ಟು ಗುಣಿಯಿಂದ ವ್ಯತ್ಯಾಸ ವನ್ನು ಪಡೆದಿರುತ್ತದೆ: ಎಂದರೆ, ಅವುಗಳದು ಸಂಕೀರ್ಣವಾದ, ಮಧ್ಯೆ ಬಿರುಕಿಲ್ಲದ ಅಸ್ತಿತ್ವ; ಆತ್ಮ ಮತ್ತು ಬ್ರಹ್ಮಗಳ ಮಧ್ಯೆಯೂ ಇದೇ ರೀತಿಯಾದ ಸಂಕೀರ್ಣವಾದ ಅಸ್ತಿತ್ವ ಅಥವಾ ಐಕ್ಯತೆ ಇರುತ್ತದೆ. ಈ ಐಕ್ಯತೆಯಲ್ಲಿ ಆತ್ಮ ಬ್ರಹ್ಮಗಳ ನಿರ್ದಿಷ್ಟತೆ ಅಥವಾ ವ್ಯತ್ಯಾಸಕ್ಕೆ ಅವಕಾಶವಿರುತ್ತದೆ. ಎರಡರ ನಿರ್ದಿಷ್ಟತೆಯನ್ನೂ ಅವಕಾಶವಾಗಿ ಒಳಗೊಂಡು ಒಂದಾಗಿರುವ ಐಕ್ಯತೆಯೇ ಆತ್ಮ ಮತ್ತು ಬ್ರಹ್ಮಗಳ

7. ಅದೇ, II, ೧.೧೫

ಐಕ್ಯತೆ. ಈ ರೀತಿಯಾದ ಐಕ್ಯತೆಯನ್ನು ಸೂಚಿಸುವುದಕ್ಕಾಗಿಯೇ ರಾಮಾನುಜರ ವೇದಾಂತಕ್ಕೆ ವಿಶಿಷ್ಟಾದ್ವೈತವೆಂಬ ಹೆಸರು ಬಂದಿದೆ.

ಬ್ರಹ್ಮದ ಗುಣವಾಗಿರುವ ಆತ್ಮವು ಬ್ರಹ್ಮದ ಅರಿವಿಗೆ ವಿಷಯವೂ ಆಗಬಹುದು. ಅದೇ ರೀತಿ ಆತ್ಮನ ಆತ್ಮವಾಗಿರುವ ಬ್ರಹ್ಮವು ಆತನ ಶರೀರವಾಗಿ ಅಂತರ್ಯಾಮಿಯಾಗಿರುವುದೇ ಅಲ್ಲದೆ, ಅದರ ಉಪಾಸನೆಗೆ ವಿಷಯವಾಗಬಹುದು. ಆತ್ಮವು ಬ್ರಹ್ಮದ ಗುಣವೆಂದು ಪರಿಗಣಿಸಲ್ಪಟ್ಟರೂ ಅದು ತನ್ನದೇ ಆದ ಭೋಕ್ತೃತ್ವ, ಜ್ಞಾತೃತ್ವಗಳಿಂದ ಕೂಡಿ ಅಹಂಪದಾರ್ಥವಾಗಿಯೇ ಉಳಿಯುತ್ತದೆ. ಏಕೆಂದರೆ, ರಾಮಾನುಜರ ಪ್ರಕಾರ ಆತ್ಮವು ಅಹಂಪದಾರ್ಥವಾಗಿ ಉಳಿಯಬೇಕಾದರೆ ಅದು ವಿಶಿಷ್ಟವಾದ ಭೋಕ್ತೃತ್ವ ಮತ್ತು ಜ್ಞಾತೃತ್ವಗಳ ನೆಲೆಯಾಗಿರಬೇಕೇ ಹೊರತು, ಅದು ಬ್ರಹ್ಮದ 'ಗುಣ'ವಾಗಲೀ ಶರೀರವಾಗಲೀ ಆಗಿರಕೂಡದೆಂದಿಲ್ಲ.8

ಮೋಕ್ಷದಲ್ಲಿ ಆತ್ಮವು ಬ್ರಹ್ಮದೊಡನೆ ಹೊಂದಿರುವ ಸಂಕೀರ್ಣ ಐಕ್ಯತೆಯು ಅಂದವನ್ನು ಪಡೆಯುತ್ತದೆ. ಇದರ ನೆರವಿನಿಂದ ಅದರ ಜ್ಞಾತೃತ್ವ, ಆನಂದಗಳು ಅನಂತವಾಗಿ ಪರಿಣಮಿಸಿ, ಅದು ಬ್ರಹ್ಮದ ಜ್ಞಾತೃತ್ವ, ಆನಂದಗಳಿಗೆ ಸಮಾನವಾಗುತ್ತದೆ. ಆದರೆ ಈ ಅಪರಿಮಿತ ಜ್ಞಾತೃತ್ವ, ಆನಂದಗಳು ತನಗೆ ಸೇರಿದುವೆಂದೂ ತಾನು ಅದರ ನೆರವಿನಿಂದ ಬ್ರಹ್ಮದೊಡನೆ ಹೊಂದಿರುವ ಸಂಕೀರ್ಣ ಐಕ್ಯತೆಯ ದೆಸೆಯಿಂದ ತನಗೆ ಅದು ಲಭಿಸುತ್ತಿರುವುದೆಂಬ ಅರಿವೂ ಆತ್ಮದಲ್ಲಿರುತ್ತದೆ. ಅದು ನಿರ್ದಿಷ್ಟವಾದ ಅಹಂಪದಾರ್ಥವಾಗಿ ಮೋಕ್ಷದಲ್ಲಿಯೂ ಉಳಿಯುತ್ತದೆಯೆಂಬುದು ಅರ್ಥವಾಗುತ್ತದೆ.

ಈ ರೀತಿ ಆತ್ಮಕ್ಕೂ ಬ್ರಹ್ಮಕ್ಕೂ ಇರುವ ಸಂಬಂಧವು ವಿಶಿಷ್ಟವಾದ ಸಂಕೀರ್ಣ ಐಕ್ಯತೆ. ಇದನ್ನು 'ಸಮಾನಾಧಿಕರಣ'ವೆಂದೂ ಕರೆಯುತ್ತಾರೆ. ಇದರ ಪ್ರಕಾರ, 'ಅಹಂಬ್ರಹ್ಮಾಸ್ಮಿ' 'ತತ್ತ್ವಮಸಿ' ಮೊದಲಾದ ಉಪನಿಷತ್ ವಾಕ್ಯಗಳನ್ನು ಆತ್ಮ ಮತ್ತು ಬ್ರಹ್ಮಗಳ ನಡುವಣ ಸಂಬಂಧವನ್ನು ಕೇವಲ ಅಭೇದವೆಂದಾಗಲೀ, ಕೇವಲ ಭೇದವೆಂದಾಗಲೀ ತಿಳಿಯದೆ, ಗುಣ-ಗುಣಿಗಳಲ್ಲಿರುವಂತೆ ಶರೀರ-ಶರೀರಿಗಳಲ್ಲಿರುವಂತೆ ಸಂಕೀರ್ಣ ಐಕ್ಯತೆ (ವಿಶಿಷ್ಟಾದ್ವೈತ) ಎಂದು ಅರ್ಥಮಾಡಿಕೊಳ್ಳಬೇಕಾಗುತ್ತದೆ.

ಅಹಂಕಾರ ಮತ್ತು ಅಹಂಪದಾರ್ಥಗಳ ನಡುವಣ ವ್ಯತ್ಯಾಸವು ವಿಶಿಷ್ಟಾದ್ವೈತ ವೇದಾಂತದಲ್ಲಿ ಅತಿಮುಖ್ಯವಾದುದು. ಅಹಂಕಾರವನ್ನು ತ್ಯಜಿಸದ ಹೊರತು ಮೋಕ್ಷವು ಲಭಿಸಲಾರದೆಂದು ರಾಮಾನುಜರೂ ಶಂಕರರಷ್ಟೇ ಒತ್ತಾಯದಿಂದ ಹೇಳಿದ್ದಾರೆ. ರಾಮಾನುಜರ ಪ್ರಕಾರ ಅಹಂಪದಾರ್ಥವೆಂದರೆ ಆತ್ಮ; ಜ್ಞಾತೃ. ಆನಂದಗಳ ಅರಿವಿನ ನೆಲೆ ಅದು; ಅದರಲ್ಲಿ ಅಹಂಕಾರವಿಲ್ಲ; ಅದು ನಿತ್ಯವಾದುದು. ಆದರೆ ಅಹಂಕಾರವು ಗರ್ವ, ಪ್ರತಿಷ್ಠೆಗಳ ನೆಲೆ; ಅದು ಮೋಕ್ಷದಲ್ಲಿ ಕೊನೆಗಾಣುತ್ತದೆ; ಅದ್ದರಿಂದ ಅನಿತ್ಯವಾದುದು9. ಅಲ್ಲದೆ, ಅಹಂಕಾರವು ಅವಿದ್ಯೆಯಿಂದ ಉಂಟಾಗುತ್ತದೆ ಮತ್ತು ಭೌತಶರೀರದ ಮೂಲಕ ಮಾಡಲ್ಪಟ್ಟ ಕರ್ಮಗಳ ಫಲದಿಂದ ಬಂಧಿತವಾಗಿರುತ್ತದೆ; ಆದರೆ, ಆತ್ಮಕ್ಕೆ ಮೂಲತಃ ಯಾವ ಬಂಧನವೂ ಇಲ್ಲ.10 ಅಹಂಕಾರವು ವ್ಯಕ್ತಿಯ ಅಂಶ ಮತ್ತು ಅಚೇತನವಾದುದು; ಅದು ವಿಷಯವಾಗಿ ಆತ್ಮದಿಂದ ತಿಳಿಯಲ್ಪಡುವುದೇ ಹೊರತು, ಅದೇ ಆತ್ಮವನ್ನು ತಿಳಿಯಲಾರದು. ಆತ್ಮವು ಸ್ವಯಂಪ್ರಕಾಶವಾದುದು ಮತ್ತು ಅಹಂಕಾರವನ್ನು ತಿಳಿಯಬಲ್ಲದು; ಆತ್ಮವನ್ನು ತಿಳಿಯಲಾರದ ಮತ್ತು ತಿಳಿಯಲ್ಪಡುವ ಅಹಂಕಾರವೇ ಜ್ಞಾನದ ಆಶ್ರಯವೆಂದು ಹೇಳಿದರೆ, ಅದು ವಿರೋಧಾಭಾಸವಾಗುತ್ತದೆ. ಮೇಲಿನ ವಿವರಣೆಯಿಂದ ಆತ್ಮ (ಅಥವಾ ಅಹಂಪದಾರ್ಥ) ಮತ್ತು ಅಹಂಕಾರಗಳಿಗೆ ಇರುವ ವ್ಯತ್ಯಾಸವು ಸ್ಪಷ್ಟವಾಗುತ್ತದೆ.

---

8. ಅದೇ. I. ೧.೧

9. ಅದೇ. I. ೧.೧. ಪುಟ ೭೭

10. ಅದೇ. I, ೧.೪. ಪುಟ ೧೮೨

ಚಿತ್ ಪದಾರ್ಥವನ್ನು ಕುರಿತು ಮೇಲೆ ವಿವರಿಸಲಾಗಿದೆ; ಅಂತೆಯೇ ಅಚಿತ್ ಪದಾರ್ಥವನ್ನು ಕುರಿತು ಕೆಲವು ವಿವರಗಳನ್ನು ಇಲ್ಲಿ ಕೊಡಬಹುದು. ಅಚಿತ್‌ನಲ್ಲಿ ನಾಲ್ಕು ಮುಖ್ಯ ಅಂಶಗಳಿವೆ: ಧರ್ಮಭೂತಜ್ಞಾನ, ನಿತ್ಯವಿಭೂತಿ, ಪ್ರಕೃತಿ ಮತ್ತು ಕಾಲ.

ಧರ್ಮಭೂತಜ್ಞಾನ: ಅರಿವು ಆತ್ಮದ ಸ್ವರೂಪಮಾತ್ರವಲ್ಲದೆ, ಗುಣವೂ ಆಗಿದೆಯೆಂದು ಮೇಲೆಯೇ ಹೇಳಿದೆ. ಆತ್ಮನ ಗುಣವಾಗಿರುವ ಅರಿವಿಗೆ ಧರ್ಮಭೂತಜ್ಞಾನವೆಂದು ಹೆಸರು. ಧರ್ಮಭೂತಜ್ಞಾನವು ಜೀವಾತ್ಮನಿಗೇ ಅಲ್ಲದೆ ಬ್ರಹ್ಮಕ್ಕೂ ಅನ್ವಯಿಸುತ್ತದೆ; ಎಂದರೆ, ಆತ್ಮ ಮತ್ತು ಬ್ರಹ್ಮ ಗಳೆರಡೂ ಧರ್ಮಭೂತಜ್ಞಾನವನ್ನು ಹೊಂದಿವೆ. ಆದರೆ, ಬ್ರಹ್ಮದ ಧರ್ಮಭೂತಜ್ಞಾನವು ಎಂದಿಗೂ ಸಂಕುಚಿತವಾಗುವುದಿಲ್ಲ: ಯಾವಾಗಲೂ ಪೂರ್ಣವಾಗಿ ವಿಕಾಸವಾಗಿಯೇ ಇರುತ್ತದೆ; ಅದ್ದರಿಂದಲೇ ಅಜ್ಞಾನ ಬಂಧನಗಳು ಬ್ರಹ್ಮಕ್ಕೆ ಅನ್ವಯಿಸುವುದಿಲ್ಲ. ಆದರೆ ಆತ್ಮದ ಧರ್ಮಭೂತಜ್ಞಾನವು ಬಂಧನದಲ್ಲಿ ಸಂಕುಚಿತವಾಗಿದ್ದು, ಮೋಕ್ಷದಲ್ಲಿ ಪೂರ್ಣವಾಗಿ ವಿಕಾಸವನ್ನು ಹೊಂದಿ, ಬ್ರಹ್ಮದ ಧರ್ಮಭೂತ ಜ್ಞಾನಕ್ಕೆ ಸಮನಾಗುತ್ತದೆ. ಧರ್ಮಭೂತಜ್ಞಾನವು ತನ್ನನ್ನು ತಾನೇ ಅರಿಯಲಾರದು; ಆದರೆ ಆತ್ಮನಿಂದ ನೇರವಾಗಿ ಅರಿಯಲ್ಪಡುವುದಾಗಿರುತ್ತದೆ. ಈ ಅರ್ಥದಲ್ಲಿ ಅದು ಸ್ವಯಂಪ್ರಕಾಶ. ಆದರೆ ಆತ್ಮವು ತನ್ನನ್ನು ತಾನೇ ಅರಿಯಬಲ್ಲದ್ದಾಗಿದ್ದು, ಸ್ವಯಂಪ್ರಕಾಶವಾಗಿರುತ್ತದೆ.

ನಿತ್ಯವಿಭೂತಿ: ಪ್ರಾತಿನಿಧಿಕವಾಗಿ 'ಸತ್ವ'ದಿಂದ ಕೂಡಿದ ಪದಾರ್ಥವು ನಿತ್ಯವಿಭೂತಿ. ಅದರಲ್ಲಿ ರಜಸ್ಸು, ತಮಸ್ಸುಗಳಿಲ್ಲ. ಮುಕ್ತಜೀವನ ಅನುಕೂಲ ಅಥವಾ ಆನಂದಕ್ಕಾಗಿ ಅದರಿಂದ ವಿವಿಧ ಉಪಕರಣ ಅಥವಾ ವಸ್ತುಗಳನ್ನು ಹೊಂದಲು ಸಾಧ್ಯವಾಗುತ್ತದೆ.

ಪ್ರಕೃತಿ: ಪ್ರಪಂಚದ ವಸ್ತುಗಳೆಲ್ಲವೂ ಪ್ರಕೃತಿಯಿಂದಲೇ ಉಂಟಾಗುತ್ತವೆ. ಪ್ರಕೃತಿಯ ಮೂರು ಗುಣಗಳು ಸತ್ವ, ರಜಸ್ಸು ಮತ್ತು ತಮಸ್ಸು. ಪ್ರಕೃತಿಯು ಪ್ರಪಂಚದ ನಾನಾ ವಸ್ತುಗಳಾಗಿ ಮಾರ್ಪಡುವ ಮುಂಚೆ ಅದರ ಗುಣಗಳೆಲ್ಲವೂ ಸಾಮ್ಯಾವಸ್ಥೆಯಲ್ಲಿದ್ದು, ಪ್ರಕೃತಿಯು ಅವ್ಯಕ್ತವಾಗಿರುತ್ತದೆ. ಈಶ್ವರನ ಸಂಕಲ್ಪದಿಂದ, ಜೀವಾತ್ಮರ ಭೋಗಕ್ಕಾಗಿ, ಅವ್ಯಕ್ತವಾದ ಸಾಮ್ಯಾವಸ್ಥೆಯು ಕಲಕಲ್ಪಟ್ಟು ಅವ್ಯಕ್ತವು ನಾನಾ ವಸ್ತುಗಳಿಂದ ಕೂಡಿದ ಪ್ರಪಂಚವಾಗಿ ಮಾರ್ಪಡುತ್ತದೆ. ಅಹಂಕಾರ, ಮನಸ್ಸು, ಐದು ಪಂಚೇಂದ್ರಿಯಗಳು, ಐದು ಕರ್ಮೇಂದ್ರಿಯಗಳು ಮತ್ತು ಇತರ ವಸ್ತುಗಳೆಲ್ಲವೂ ಪ್ರಕೃತಿಯಿಂದ ಈ ರೀತಿ ಉಂಟಾದ ಪರಿಣಾಮಗಳೇ ಆಗಿರುತ್ತವೆ. ಅವುಗಳಲ್ಲಿನ ಪರಸ್ಪರ ವ್ಯತ್ಯಾಸಕ್ಕೆ ಕಾರಣ ಅವುಗಳಲ್ಲಿ ಸತ್ವ, ರಜಸ್ ಮತ್ತು ತಮಸ್ಸುಗಳು ವಿಭಿನ್ನರೀತಿಯ ಪ್ರಮಾಣಗಳಲ್ಲಿ ಸಮ್ಮಿಲನವಾಗಿರುವುದೇ ಆಗಿರುತ್ತದೆ.

ಕಾಲ: ಕಾಲವು ನಿತ್ಯವಾದುದು ಮತ್ತು ಎಲ್ಲವನ್ನೂ ಆವರಿಸಿರುವುದೂ ಆಗಿರುತ್ತದೆ. ಭೂತ, ವರ್ತಮಾನ ಮತ್ತು ಭವಿಷ್ಯತ್ತುಗಳು ಕಾಲದ ಮೂರು ಮುಖಗಳು.

ವಿಶಿಷ್ಟಾದ್ವೈತ ವೇದಾಂತದಲ್ಲಿ ಪ್ರಪಂಚಕ್ಕೂ ಬ್ರಹ್ಮಕ್ಕೂ ಇರುವ ಸಂಬಂಧವನ್ನು ಈ ರೀತಿ ಸಂಗ್ರಹಿಸಬಹುದು: ಇವೆರಡರ ಸಂಬಂಧ ಶರೀರ–ಶರೀರಿ ಸಂಬಂಧ. ಶರೀರವು ಶರೀರವೆಲ್ಲವನ್ನೂ ವ್ಯಾಪಿಸಿ, ಅದರ ಆಧಾರವಾಗಿರುವಂತೆ, ಬ್ರಹ್ಮವು ಎಲ್ಲೆಡೆಯಲ್ಲೂ ವ್ಯಾಪ್ತವಾಗಿದ್ದು ಪ್ರಪಂಚವನ್ನು ಧರಿಸಿ, ಅದರ ಆಧಾರವಾಗಿರುವಂತೆ, ಬ್ರಹ್ಮವು ಎಲ್ಲೆಡೆಯಲ್ಲೂ ವ್ಯಾಪ್ತವಾಗಿದ್ದು ಕ್ರಮಬದ್ಧವಾಗಿ ನಡೆಸುತ್ತಿರುವ ತತ್ತ್ವವಾಗಿದೆ. ಆದರೆ ಪ್ರಪಂಚದಲ್ಲಿನ ವಿಕಾರಗಳಿಂದ ವಿಕಾರ ಹೊಂದದೆ. ಪ್ರಪಂಚದ ಮಿತಿಗಳಿಂದ ಹೊರತಾಗಿ ಅನಂತವಾದ ನಿರ್ವಿಕಾರವಾದ 'ಪರಾ' ಅಸ್ತಿತ್ವವನ್ನು ಪಡೆದಿದೆ. ಅಲ್ಲದೆ, ಪ್ರತಿ ಜೀವಾತ್ಮದಲ್ಲಿಯೂ ನಿರ್ದಿಷ್ಟವಾದ ರೀತಿಯಲ್ಲಿ ಅಂತರ್ಯಾಮಿಯಾಗಿದ್ದು ಅದರ ಅನುಭವದಲ್ಲಿ, ಆನಂದದಲ್ಲಿ ಪಾಲ್ಗೊಳ್ಳುತ್ತಲೂ ಇದೆ. ಮುಖ್ಯವಾಗಿ ವಿಶಿಷ್ಟಾದ್ವೈತ ವೇದಾಂತದ ಪ್ರಕಾರ ಪ್ರಪಂಚವು ಮಿಥ್ಯೆಯಲ್ಲ, ಸತ್ಯ; ನಿರ್ಗುಣವಲ್ಲ, ಸಗುಣ.

೪. ಸಾಧನಮಾರ್ಗ

ಜೀವಾತ್ಮವು ಅಜ್ಞಾನದಿಂದಲೂ, ಅದರಿಂದಾದ ಅನಾದಿಕರ್ಮದಿಂದಲೂ ಬಂಧನಕ್ಕೊಳಗಾಗುತ್ತದೆ. ಅಜ್ಞಾನವು ಹೋಗಿ, ಬ್ರಹ್ಮದೊಡನೆ ತನಗಿರುವ ಸಂಕೀರ್ಣ ಐಕ್ಯತೆಯ ಅರಿವು ಉಂಟಾದಾಗ ಮೋಕ್ಷ

ವನ್ನು ಪಡೆಯುತ್ತದೆ. ಮೋಕ್ಷವನ್ನು ಪಡೆಯಬೇಕಾದರೆ ಸಾಧನಮಾರ್ಗವನ್ನು ಅನುಸರಿಸಬೇಕು. ಸಾಧನಮಾರ್ಗದಲ್ಲಿ ಮುಖ್ಯವಾಗಿ ಮೂರು ಹಂತಗಳುಂಟು: (೧) ವೇದಾಧ್ಯಯನ, ದುಷ್ಕರ್ಮಗಳನ್ನು ತ್ಯಜಿಸಿ ಭಗವಂತನ ಉಪಾಸನೆ, ದಾನ ಇತ್ಯಾದಿ ಸತ್ಕರ್ಮಗಳನ್ನು ಮಾಡುವುದು ಕರ್ಮಯೋಗವೆನಿಸುತ್ತದೆ. (೨) ತಾನು ಪ್ರಕೃತಿಯಿಂದ ಬೇರೆಯೆಂದೂ, ಬ್ರಹ್ಮದ ಮೇಲೆ ಪೂರ್ಣವಾಗಿ ಅವಲಂಬಿತನಾಗಿರುವನೆಂದೂ ಪ್ರಮಾಣಪೂರ್ವಕವಾಗಿ ತಿಳಿಯುವುದು ಜ್ಞಾನಯೋಗವೆನಿಸುವುದು. (೩) ಬ್ರಹ್ಮ ಅಥವ ದೇವರ ಮೇಲೆ ತನ್ನ ಮನಸ್ಸೆಲ್ಲವನ್ನೂ ಕೇಂದ್ರೀಕರಿಸಿ, ಬ್ರಹ್ಮವನ್ನೇ ಕುರಿತು ಧ್ಯಾನಮಾಡುವುದು ಭಕ್ತಿಯೋಗವೆನಿಸುವುದು. ದೇವರ ಮೇಲೆ ಮನಸ್ಸನ್ನು ಕೇಂದ್ರೀಕರಿಸುವುದು ಅಷ್ಟಾಂಗಗಳ ಮೂಲಕ ಮಾತ್ರ ಸಾಧ್ಯ. ಅಷ್ಟಾಂಗಗಳ ವಿವರ ಈ ರೀತಿ ಇದೆ. (೧) ಯಮ (ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ) (೨) ನಿಯಮ (ಶರೀರ ಮತ್ತು ಮನಸ್ಸುಗಳನ್ನು ಪರಿಶುದ್ಧವಾಗಿಡುವಿಕೆ, ತೃಪ್ತಿ, ದೇವಪೂಜೆ ಇತ್ಯಾದಿ) (೩) ಆಸನ (ಧ್ಯಾನಕ್ಕೆ ಅನುಕೂಲವಾಗುವ ಅನೇಕ ಶಾರೀರಿಕ ಭಂಗಿಗಳು) (೪) ಪ್ರಾಣಾಯಾಮ (ಉಸಿರನ್ನು ನಿಯಂತ್ರಿಸಿ ಧ್ಯಾನ ಮಾಡುವಿಕೆ) (೫) ಪ್ರತ್ಯಾಹಾರ (ಇಂದ್ರಿಯಗಳನ್ನು ನಿಗ್ರಹಿಸಿ ಅವು ಮನಸ್ಸಿನೊಡನೆ ಧ್ಯಾನಕ್ಕೆ ಸಹಕರಿಸುವಂತೆ ಮಾಡುವುದು (೬) ಧಾರಣ (ದೇವರ ಮೇಲೆ ಮನಸ್ಸನ್ನು ಕೇಂದ್ರೀಕರಿಸುವುದು) (೭) ಧ್ಯಾನ ಮತ್ತು (೮) ಸಮಾಧಿ (ದೇವರ ಮೇಲೆ ಪೂರ್ತಿಯಾಗಿ ಮನಸ್ಸಿನ ಕೇಂದ್ರೀಕರಣವನ್ನೂ, ಸಾಮಾನ್ಯಾವಸ್ಥೆಯನ್ನು ಪಡೆಯುವುದು)

ಭಕ್ತಿಯು ತೀಕ್ಷ್ಣವಾಗಿ, ಪೂರ್ಣವಾದಾಗ ಪ್ರಪತ್ತಿಯಾಗಿ (ಶರಣಾಗತಿ) ಪರಿಣಮಿಸುತ್ತದೆ. ಪ್ರಪತ್ತಿಯು ವ್ಯಕ್ತಿಯ ಪ್ರಾರಬ್ಧಕರ್ಮವನ್ನು ಕೊನೆಗಾಣಿಸಿ ಮುಕ್ತಿಯನ್ನುಂಟುಮಾಡುವುದೆಂದು ಅನೇಕ ಶ್ರೀವೈಷ್ಣವರ ನಂಬಿಕೆ. ಕೆಲವರು ಭಕ್ತಿ ಮತ್ತು ಪ್ರಪತ್ತಿಗಳು ಭಿನ್ನವಾದ ಮಾರ್ಗಗಳೆಂದು ಅಭಿಪ್ರಾಯ ಪಡುತ್ತಾರೆ. ಅವರ ಪ್ರಕಾರ ಭಕ್ತಿಯಲ್ಲಿ ಭಕ್ತನಿಗೆ ತಾನು ಧ್ಯಾನ, ಕೈಂಕರ್ಯಗಳನ್ನು ಮಾಡುತ್ತಿರುವನೆಂಬ ಸ್ವಪ್ರಯತ್ನದ ಅರಿವು ಇರುತ್ತದೆ. ಮರಿಕಪಿಯು ತನ್ನ ತಾಯಿಯ ಮಡಲಿಗೆ ಸ್ವಪ್ರಯತ್ನದಿಂದ ಅಪ್ಪಿಕೊಂಡಿರುವಂತೆ, ಅವನು ಸ್ವಪ್ರಯತ್ನದಿಂದ ದೇವರ ಮೇಲೆ ತನ್ನ ಅವಲಂಬನದ ಅರಿವನ್ನು ಪಡೆಯುತ್ತಿರುತ್ತಾನೆ. ಇದಕ್ಕೆ ಮರ್ಕಟ ಕಿಶೋರನ್ಯಾಯವೆಂದು ಹೆಸರು. ಆದರೆ ಪ್ರಪತ್ತಿಯಲ್ಲಿ ಭಕ್ತನಿಗೆ ಸ್ವಪ್ರಯತ್ನದ ಅರಿವು ಇರುವುದಿಲ್ಲ: ವೇದಾಧ್ಯಯನ ಮುಂತಾದ ಕಷ್ಟಸಾಧ್ಯವಾದ ಮಾರ್ಗವನ್ನು ಅನುಸರಿಸಲು ಸಾಧ್ಯವಾಗದಿರುವವರು ಅನುಸರಿಸಬಹುದಾದ ಶರಣಾಗತಿ ಮಾರ್ಗವಿದು. ಇದರಲ್ಲಿ ಭಕ್ತನು ಸ್ವಪ್ರಯತ್ನದ ಅರಿವನ್ನು ತೊರೆದು, ಪೂರ್ತಿ ತನ್ನ ಅಸಹಾಯಕತೆಯ ಅರಿವಿನಿಂದಾಗಿ ದೇವರನ್ನು ಧ್ಯಾನ ಮಾಡುವ ಶಕ್ತಿಯೂ ತನ್ನಲ್ಲಿಲ್ಲವೆಂಬುದಾಗಿ ದೇವರನ್ನೇ ತನ್ನ ರಕ್ಷಣೆಗೆ ಶ್ರೇಯಸ್ಸಿಗೆ ಪೂರ್ಣವಾಗಿ ಮೊರೆಹೋಗುತ್ತಾನೆ: ಬೆಕ್ಕಿನಮರಿಯು ಸ್ವಪ್ರಯತ್ನದಿಂದ ತಾಯಿಯ ಮಡಲಿಗೆ ಅಪ್ಪಿಕೊಂಡಿರುವುದಿಲ್ಲ: ಆದರೆ ತಾಯಿಯೇ ಅದನ್ನು ಸ್ಥಳದಿಂದ ಸ್ಥಳಕ್ಕೆ ಎತ್ತಿ ಸಾಗಿಸುತ್ತಿರುತ್ತದೆ: ಇದೇ ರೀತಿಯೇ ಭಕ್ತನು ಪ್ರಪತ್ತಿಯಲ್ಲಿ ತನ್ನ ಸ್ವಪ್ರಯತ್ನದ ಅರಿವನ್ನು ತೊರೆದು ಪೂರ್ತಿಯಾಗಿ ತನ್ನ ರಕ್ಷಣಾಭಾರವನ್ನು ಭಗವಂತನಿಗೆ ಒಪ್ಪಿಸಿ, ಶರಣಾಗತಿ ಭಾವವನ್ನು ತಾಳುತ್ತಾನೆ: ಇದಕ್ಕೆ ಮಾರ್ಜಾಲ ಕಿಶೋರ ನ್ಯಾಯವೆಂದು ಹೆಸರು.

ಆದರೆ ಭಕ್ತಿ, ಪ್ರಪತ್ತಿಗಳಿಗೆ ಮೇಲೆ ಹೇಳಿರುವ ವ್ಯತ್ಯಾಸವು ಕೇವಲ ಭಕ್ತನು ತಾಳಬಹುದಾದ ಮನೋದೃಷ್ಟಿಯಲ್ಲಿನ ವ್ಯತ್ಯಾಸವೆಂದು ಹೇಳಬಹುದು. ಎರಡರಲ್ಲಿಯೂ ಅಹಂಕಾರವು ನಶಿಸಿದ ಹೊರತು ಮೋಕ್ಷವು ದುರ್ಲಭವೆಂದು ಒಪ್ಪಲೇಬೇಕು. ಅಲ್ಲದೆ, ವಿಶಿಷ್ಟಾದ್ವೈತ ವೇದಾಂತದ ಪ್ರಕಾರ ಅಂತಿಮವಾಗಿ ದೇವರದಯೆಯಿಲ್ಲದೆ ಮುಕ್ತಿಯನ್ನು ಪಡೆಯಲಾಗುವುದಿಲ್ಲ. ಆದರೆ ಸ್ವಪ್ರಯತ್ನವು ಪೂರ್ಣವಾಗಿ ಪಕ್ವವಾದಾಗಲೇ, ದೇವರ ದಯೆಯೂ ಲಭಿಸಿ, ಮೋಕ್ಷವು ಲಭಿಸುತ್ತದೆ. ಆದ್ದರಿಂದ ವ್ಯಕ್ತಿಯ ಸ್ವಪ್ರಯತ್ನ ಮತ್ತು ದೇವರ ದಯೆಗಳಿಗೆ ಯಾವ ತಾರ್ಕಿಕ ವಿರೋಧವೂ ಇರುವುದಿಲ್ಲ.

ಡಿ. ಎನ್. ರಾಯ್ಕರ

ಸಮುದಾಯ ಅಭಿವೃದ್ಧಿ

(ದಕ್ಷಿಣ ಕನ್ನಡ ಜಿಲ್ಲೆಯಲ್ಲಿ)

1

ಹಳ್ಳಿಗಳ ನಾಡು ಭಾರತ. ಐದು ಲಕ್ಷಕ್ಕಿಂತ ಹೆಚ್ಚು ಹಳ್ಳಿಗಳಿವೆ ಭಾರತದಲ್ಲಿ. ಈ ಹಳ್ಳಿಗಳಲ್ಲಿ ಅಜ್ಞಾನ, ರೋಗ ಮತ್ತು ದಾರಿದ್ರ್ಯ ದಟ್ಟವಾಗಿವೆ. ಸ್ಪಷ್ಟವಾಗಿವೆ. ಇವು ನಮ್ಮ ಹಳ್ಳಿಗಳ ಶತ್ರುಗಳು. ಈ ಶತ್ರುಗಳ ನಿರ್ಮೂಲನವೇ ಹಳ್ಳಿಗಳ ಅಭಿವೃದ್ಧಿ. ಆಗಲೇ ಭಾರತದ ವರ್ಧಮಾನ ಸಾಧ್ಯ. ಇದಕ್ಕಾಗಿ ಪ್ರತಿ ಹಳ್ಳಿಗೂ ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಸ್ವಾಸ್ಥ್ಯ ಸ್ಥಿತಿ ಪ್ರಾಪ್ತವಾಗಬೇಕು. ಈ ಕ್ಷೇತ್ರಗಳಲ್ಲಿ ಹಳ್ಳಿಗಳಿಗೆ ನ್ಯಾಯ ದೊರಕಬೇಕು. ಇವಕ್ಕೆ ಒಂದು ಕಾರ್ಯಕ್ರಮದ ಅಗತ್ಯ. ಈ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲು ಒಂದು ಹಳ್ಳಿ ಇಲ್ಲವೇ ಹಲವು ಹಳ್ಳಿಗಳ ಸಮುದಾಯ ಇಲ್ಲವೆ ಹಲವು ಹಳ್ಳಿಗಳಿಂದ ಕೂಡಿದ ಒಂದು ತಾಲೂಕು ಮುಂದೆ ಬರಬೇಕು. ಈ ಕಾರ್ಯಕ್ರಮದಲ್ಲಿ ತಾಲೂಕಿನ ಜನರು ಪಾಲ್ಗೊಳ್ಳಬೇಕು. ಅವರೇ ಈ ಕಾರ್ಯಕ್ರಮಗಳಿಗೆ ನಾಯಕತ್ವವನ್ನು ಒದಗಿಸಬೇಕು. ಇದಕ್ಕೆ ಬೇಕಾದ ಸಹಾಯ, ಸಲಹೆ ಮತ್ತು ಮಾರ್ಗದರ್ಶನಗಳನ್ನು ಸರಕಾರ ಒಂದು ಪ್ರತ್ಯೇಕ ಇಲಾಖೆಯ ಮೂಲಕ ಒದಗಿಸಬೇಕು. ಈ ಕಾರ್ಯಕ್ರಮಗಳನ್ನು ಕಾರ್ಯಾಚರಣೆಗೆ ತರಲು ಬೇಕಾದ ಹಣ ಮತ್ತು ಪರಿಶ್ರಮಗಳನ್ನು ಜನತೆ ಮತ್ತು ಸರಕಾರ ನೀಡಬೇಕು. ಇಂಥ ಕಾರ್ಯಕ್ರಮಗಳನ್ನು ಭಾರತ ರಾಷ್ಟ್ರದಾದ್ಯಂತ 'ಸಮುದಾಯ' ಇಲ್ಲವೆ 'ತಾಲೂಕು' ಮಟ್ಟದಲ್ಲಿ ಅನುಷ್ಠಾನಕ್ಕೆ ತಂದು ಭಾರತದ ಕ್ಷೇಮಾಭ್ಯುದಯ ಹೆಚ್ಚಿಸಲು ಸಾಧ್ಯ. ಭಾರತದ ಸರ್ವಾಂಗೀಣ ಸಮಗ್ರ ಸಂವರ್ಧನೆ ಸಾಧ್ಯ.

ಸಮುದಾಯ ಅಭಿವೃದ್ಧಿ ಒಂದು ಕಾರ್ಯಕ್ರಮ. ಈ ಕಾರ್ಯಕ್ರಮದಲ್ಲಿ ಹಳ್ಳಿಗೆ ಇಲ್ಲವೆ ಹಳ್ಳಿಗಳ ಸಮುದಾಯಕ್ಕೆ ರಾಷ್ಟ್ರದಲ್ಲಿ ಸಿಗುವ ಸೇವೆಗಳ ಸೌಲಭ್ಯ ಮತ್ತು ಲಾಭ ಪಡೆಯುವುದು ಸಾಧ್ಯವಾಗುತ್ತದೆ ಎಂದು ಜಾನ್ ಬಡೆಯ ಬರೆಯುತ್ತಾರೆ. ಅರ್ಥ ವಿಜ್ಞಾನಿ ವಿಲ್‌ಫ್ರೆಡ್ ಮಲೆನ್‌ಬಾಮ್‌ರವರು ಸಮುದಾಯ ಅಭಿವೃದ್ಧಿ ರಾಷ್ಟ್ರೀಯ ಅಭಿವೃದ್ಧಿ ನೀತಿಯ ಒಂದು ಅಂಗ. ಕ್ರಮ ವಿಧಾನ. ರಾಷ್ಟ್ರದ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಸಮುದಾಯ ಅಭಿವೃದ್ಧಿ ಕಾರ್ಯಕ್ರಮ ಮಹತ್ವದ ಪಾತ್ರವನ್ನು ವಹಿಸುತ್ತದೆ ಎನ್ನುತ್ತಾರೆ. ರಾಷ್ಟ್ರೀಯ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಬಂಡವಾಳ, ಶ್ರಮ ಮತ್ತು ಸಂಘಟನಾ ಶಕ್ತಿ ಇಲ್ಲವೇ ನಾಯಕತ್ವವನ್ನು ಸಂಯೋಜಿಸುವ ಕ್ರಮವಿಧಾನಗಳಲ್ಲಿ ಸಮುದಾಯ ಅಭಿವೃದ್ಧಿ ಕಾರ್ಯಕ್ರಮ ಒಂದು. ಯೋಜನಾ ಆದರ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಸಮುದಾಯ ಅಭಿವೃದ್ಧಿ ಕುರಿತು ಹೀಗೆನ್ನುತ್ತದೆ: ಸಮುದಾಯ ಅಭಿವೃದ್ಧಿ ಒಂದು ಕ್ರಮ ವಿಧಾನ. ಇದರ ಮೂಲಕ ಹಳ್ಳಿಯ ಸಾಮಾಜಿಕ ಮತ್ತು ಆರ್ಥಿಕ ಬದುಕನ್ನು ಬದಲಿಸಲು ಪಂಚವಾರ್ಷಿಕ ಯೋಜನೆ ಬಯಸುತ್ತದೆ. ಯು.ಎನ್.ಓ. ವರದಿ ಪ್ರಕಾರ ಸಮುದಾಯ ಅಭಿವೃದ್ಧಿ ಇಡೀ ಸಮುದಾಯದಲ್ಲಿ ಉತ್ತಮ ಮಟ್ಟದ ಬದುಕನ್ನು ಅನುಭವಿಸಲು ಉತ್ತೇಜನ ನೀಡುತ್ತದೆ.

ದಿವಂಗತ ನೆಹರೂ ಅಂದರು: ಹಳ್ಳಿ ಮತ್ತು ತನ್ಮೂಲಕ ಭಾರತದ ನಿರ್ಮಾಣದಲ್ಲಿ ಸಮುದಾಯ ಅಭಿವೃದ್ಧಿ ಪಾತ್ರ ಹಿರಿದು.

ಭಾರತದ ಹಳ್ಳಿಗಳ ದಾರಿದ್ರ್ಯ ನಿರ್ಮೂಲನ ಎಂದರೆ ಹಳ್ಳಿಗಳಲ್ಲಿ ಕೃಷಿ ಮತ್ತು ಸಣ್ಣ ಕೈಗಾರಿಕೆಗಳಲ್ಲಿರುವ ಲೋಪದೋಷಗಳನ್ನು ನಿವಾರಿಸಿ, ಇವುಗಳ ಅಭಿವೃದ್ಧಿಯನ್ನುಂಟುಮಾಡುವುದು. ಕೃಷಿ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಬೇಕಾದ ಹಣ, ಕಚ್ಚಾ ಸಾಮಾನು, ತಾಂತ್ರಿಕ ನೆರವು, ಮಾರುಕಟ್ಟೆ ಸಾರಿಗೆ ಸಂಪರ್ಕಗಳ ಸೌಕರ್ಯಗಳನ್ನು ಒದಗಿಸಬೇಕು. ಹಳ್ಳಿಗಳಿಗೆ ಸಾಮಾಜಿಕ ನ್ಯಾಯ ಸಿಗುವಂತಾಗಬೇಕು ಎಂದರೆ ಹಳ್ಳಿಗರಲ್ಲಿಪ್ಪ ಮೇಲು ಕೀಳು ಎಂಬ ಸಾಮಾಜಿಕ ಅಂತರ ಹೋಗಬೇಕು. ಇಷ್ಟು ವರ್ಷಗಳವರೆಗೆ ಶೋಷಣೆಗೆ ಸಿಕ್ಕು ಎಲ್ಲ ದೃಷ್ಟಿಯಿಂದಲೂ ಹಿಂದುಳಿದ ಹರಿಜನ–ಗಿರಿಜನರ ಕಲ್ಯಾಣಕ್ಕಾಗಿ ಪ್ರತ್ಯೇಕ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಬೇಕು. ಹಳ್ಳಿಗರು ಜನತಂತ್ರದಲ್ಲಿ ಸಕ್ರಿಯವಾಗಿ ಮತ್ತು ಸ್ವಚ್ಛವಾಗಿ ಪಾಲ್ಗೊಳ್ಳಲು ಬೇಕಾದ ಶಿಕ್ಷಣ ಹಳ್ಳಿಗರಿಗೆ ಲಭ್ಯವಾದಾಗ ಮಾತ್ರವೇ ಹಳ್ಳಿಗರಿಗೆ ರಾಜಕೀಯ ನ್ಯಾಯ ಸಿಗುತ್ತದೆ. ಜನತಂತ್ರ ಅರ್ಥಪೂರ್ಣವಾಗುತ್ತದೆ. ಹಳ್ಳಿಗಳಲ್ಲಿ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳನ್ನು ಜರುಗಿಸಿ, ತನ್ಮೂಲಕ ಹಳ್ಳಿಗರನ್ನು ಸುಸಂಸ್ಕೃತ ಮತ್ತು ಸುಶಿಕ್ಷಿತರನ್ನಾಗಿ ಮಾಡಿದರೆ ಅವರ ಅಜ್ಞಾನ ದೂರವಾಗುತ್ತದೆ. ಹಳ್ಳಿಗಳು ರೋಗರುಜಿನಗಳ ತವರು ಮನೆಯಾಗದಂತೆ ನೋಡಿಕೊಳ್ಳಲು ಹಳ್ಳಿಗಳಲ್ಲಿ ಅಗತ್ಯ ಇದ್ದಲ್ಲೆಲ್ಲ ಆಸ್ಪತ್ರೆ ಮತ್ತು ಔಷಧಾಲಯಗಳನ್ನು ತೆರೆದು, ರೋಗಿಗಳಿಗೆ ಸಕಾಲಿಕ ಮತ್ತು ಸೂಕ್ತ ಚಿಕಿತ್ಸೆ ನೀಡಿ ಅವರು ಆರೋಗ್ಯವಂತರಾಗಿ ಬಾಳುವಂತಾಗಬೇಕು. ಹಳ್ಳಿಗರಿಗೆಲ್ಲ ಕುಟುಂಬ ಯೋಜನೆಯ ಮಹತ್ವವನ್ನು ಅರಿವು ಮಾಡಿಕೊಡಲು ಕುಟುಂಬ ಯೋಜನೆಯ ಶಿಬಿರಗಳನ್ನು ಸಹ ನಡೆಸುವುದು ಅಗತ್ಯ. ಅಂದರೆ ಸಮುದಾಯ ಅಭಿವೃದ್ಧಿ ಆಂದೋಲನ ಹಳ್ಳಿಗರಲ್ಲಿ ನೂತನ ಬದಲಾವಣೆಯನ್ನುಂಟುಮಾಡಬೇಕು. ಹಳ್ಳಿಗರಲ್ಲಿ ಹೊಸ ಹೊಸ ಆಶೋತ್ತರಗಳನ್ನು, ಹೊಸ ಉತ್ಸಾಹ ಮತ್ತು ಪ್ರೋತ್ಸಾಹಗಳನ್ನು, ಹೊಸ ತಂತ್ರ ವಿಧಾನಗಳನ್ನು ಮತ್ತು ಹೊಸ ವಿಶ್ವಾಸವನ್ನು ಹುಟ್ಟಿಸಿ, ಬೆಳೆಸಿ ತನ್ಮೂಲಕ ಮಾನವೀಯ ಸಂಪನ್ಮೂಲಗಳನ್ನು ಆರ್ಥಿಕ ಅಭಿವೃದ್ಧಿಗೆ ಉಪಯೋಗಿಸಬೇಕು. ಆಗಲೇ ಕಲ್ಯಾಣ ಭಾರತದ ಭವ್ಯ ಕನಸು ನನಸಾಗುತ್ತದೆ. ಭಾರತ ಸುಖೀ ರಾಷ್ಟ್ರವಾಗುತ್ತದೆ. ಇದಕ್ಕಾಗಿ ಒಂದು ಕಾರ್ಯಕ್ರಮದ ಅಗತ್ಯ. ಒಂದು ಕ್ರಮ ವಿಧಾನ ತಂತ್ರ ಅಗತ್ಯ. ಇದೇ ಸಮುದಾಯ ಅಭಿವೃದ್ಧಿ ಕಾರ್ಯಕ್ರಮ. ಇದು ಹಳ್ಳಿಗಳ ಸಮುದಾಯ ಅಭಿವೃದ್ಧಿಯ ಮೂಲಕ ರಾಷ್ಟ್ರೀಯ ಸಮುದಾಯದ ಪ್ರಗತಿಗಾಗಿ ಇಡೀ ಭಾರತದ ಪುನರ್‌ನಿರ್ಮಾಣಕ್ಕಾಗಿ.

ಭಾರತದಲ್ಲಿ ಸಮುದಾಯ ಅಭಿವೃದ್ಧಿ ಯೋಜನೆಯನ್ನು ಮೂರು ಹಂತಗಳನ್ನಾಗಿ ವಿಂಗಡಿಸಬಹುದು: (೧) ಸ್ವೀಕರಿಸಿದ ಆಡಳಿತದ ಹಂತ (೧೯೫೨–೧೯೫೭). (೨) ತಾಂತ್ರಿಕ ಕೇಂದ್ರೀಕರಣದ ಹಂತ (೧೯೫೭–೧೯೫೯) (೩) ಜನತಂತ್ರೀಯ ವಿಕೇಂದ್ರೀಕರಣ ಹಂತ (೧೯೫೯ರ ನಂತರ). ೧೯೫೨ರ ಮೊದಲಿನ ಸಮುದಾಯ ಅಭಿವೃದ್ಧಿ ಇತಿಹಾಸ ಭಾರತದಲ್ಲಿ ತುಂಬ ಗಮನಾರ್ಹ. ಇದನ್ನು ಎರಡು ಭಾಗಗಳನ್ನಾಗಿ ವರ್ಗೀಕರಿಸಬಹುದು: (೧) ಸಮುದಾಯ ಅಭಿವೃದ್ಧಿ ದಿಶೆಯಲ್ಲಿ ೧೯೨೧ರಿಂದ ೧೯೩೦ರ ವರೆಗೆ ಕೈಕೊಂಡ ಪ್ರಾರಂಭಿಕ ಪ್ರಯತ್ನ. (೨) ೧೯೪೫ರಿಂದ ೧೯೫೨ರ ವರೆಗಿನ ಅವಧಿಯಲ್ಲಿ ಮಾಡಿದ ಪರಿಶ್ರಮ. ಈ ಎರಡು ಅವಧಿಗಳಲ್ಲಿ ಗ್ರಾಮೀಣ ಪುನರ್ ನಿರ್ಮಾಣಕ್ಕೆ ಬೇಕಾದ ಅನೇಕ ಯೋಜನೆಗಳನ್ನು ಹಳ್ಳಿಗಳಲ್ಲಿ ಕಾರ್ಯಾಚರಣೆಗೆ ತರಲಾಯಿತು.

೧೯೨೧ರಿಂದ ೧೯೩೦ರ ವರೆಗಿನ ಒಂದು ದಶಕದಲ್ಲಿ ಗ್ರಾಮೀಣ ಪುನರ್ ನಿರ್ಮಾಣಕ್ಕಾಗಿ ಮಹತ್ವದ ಮೊದಲ ಪ್ರಯತ್ನಗಳು ನಡೆದವು. ಈ ದಶಕದಲ್ಲಿ ಶ್ರೀನಿಕೇತನ ಮತ್ತು ಮಾರ್ತಾಂಡಂ ಇವು ಗ್ರಾಮೀಣ ಪುನರ್ ನಿರ್ಮಾಣದ ಕೇಂದ್ರಗಳಾಗಿದ್ದುವು. ಬ್ರೈನ್ ಅವರ ಗೂರಗಾಂವ ಪ್ರಯೋಗ ಮತ್ತು ಮಹಾತ್ಮಾ ಗಾಂಧಿಯವರ ರಚನಾತ್ಮಕ ಕಾರ್ಯಕ್ರಮ ಸಹ ಗಮನಾರ್ಹ. ಗ್ರಾಮೀಣ ಪುನರ್ ನಿರ್ಮಾಣಕ್ಕಾಗಿ ಶ್ರೀನಿಕೇತನ ಸಂಸ್ಥೆಯನ್ನು ೧೯೨೧ರಲ್ಲಿ ಕವಿವರ್ಯ ಗುರುದೇವ ರವೀಂದ್ರನಾಥ ಟಾಗೋರ ಸ್ಥಾಪಿಸಿದರು. ಈ ಸಂಸ್ಥೆಯ ಉದ್ದೇಶ ಹಳ್ಳಿಗರನ್ನು ಸ್ವಾವಲಂಬಿಗಳನ್ನಾಗಿ ಮತ್ತು ಸ್ವಾಭಿಮಾನಿಗಳನ್ನಾಗಿ ಮಾಡಿ ಅವರ ಭೌತಿಕ ಬೌದ್ಧಿಕ ಮತ್ತು ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಅಧುನಿಕ ಲಭ್ಯ ಸಂಪನ್ಮೂಲಗಳ ಸದುಪಯೋಗ ಮಾಡಲು ಶ್ರಮಿಸುವುದು.

ಕವಿಸ್ಫೂರ್ತಿಯನ್ನು ವಾಸ್ತವವಾಗಿಸಲು ಅನೇಕ ಕ್ರಮಗಳನ್ನು ಕೈಕೊಳ್ಳಲಾಯಿತು: ಸ್ವಾಸ್ಥ್ಯ ಸಹಕಾರಿ ಸಂಘಟನೆಗಳು, ಕೃಷಿ ಪ್ರಾತ್ಯಕ್ಷಿಕೆಗಳು, ಉತ್ತಮ ಬೀಜ ಮತ್ತು ಗೊಬ್ಬರದ ಪೂರೈಕೆ, ಗುಡಿ ಕೈಗಾರಿಕೆಗಳ ಸುಧಾರಣೆ ಯುವಕ ಚಳುವಳಿ–'ವ್ರತಾಚಾರಿ ಚಳುವಳಿ' ಮತ್ತು 'ಶಿಕ್ಷಾ ಸತ್ರ' ಶಿಕ್ಷಾ ಸತ್ರ ಒಂದು ಶಾಲೆ. ಇಲ್ಲಿ ಹಳ್ಳಿಯ ಮಕ್ಕಳಿಗೆ ಬದುಕಿನ ಬಗ್ಗೆ ಹೊಸ ರೀತಿಯ ಶಿಕ್ಷಣ ನೀಡಲಾಗುತ್ತಿತ್ತು. ಕವಿವರ್ಯರ ಈ ಕಾರ್ಯಕ್ರಮಗಳು ಶ್ರೀನಿಕೇತನದ ಸುತ್ತಮುತ್ತ ತುಂಬ ಮಹತ್ವ ಮತ್ತು ಪ್ರಚಾರ ಪಡೆದವು. ಆದರೆ ಈ ಶ್ರೀನಿಕೇತನ ಸಂಸ್ಥೆ ಭಾರತದಾದ್ಯಂತ ಹಬ್ಬಲಿಲ್ಲ. ಈ ಬಗ್ಗೆ ಆಗಿನ ಸರಕಾರ ಆಸಕ್ತಿ ವಹಿಸಲಿಲ್ಲ. ಪ್ರೋತ್ಸಾಹ ನೀಡಲಿಲ್ಲ.

೧೯೨೧ರಲ್ಲಿ 'ಮಾರ್ತಾಂಡಂ ಪ್ರಯೋಗ'ವನ್ನು ಆರಂಭಿಸಲಾಯಿತು. ಇದರ ನಾಯಕತ್ವ ಡಾ. ಸ್ಪೆನ್ಸರ ಹಾಚ ಅವರದು. ಈ ಪ್ರಯೋಗದ ಉದ್ದೇಶ: ಆಧ್ಯಾತ್ಮಿಕವಾಗಿ, ಮಾನಸಿಕವಾಗಿ, ಭೌತಿಕವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಳ್ಳಿಗರ ಬದುಕನ್ನು ಸಂಪೂರ್ಣವಾಗಿ ವೃದ್ಧಿಗೊಳಿಸುವುದು. ಮಾರ್ತಾಂಡಂ ಗ್ರಾಮ ಸುತ್ತಲ ಹಳ್ಳಿಗಳ ನೂರು ಸ್ಥಳೀಯ ಕ್ರಿಶ್ಚಿಯನ್ ಯುವಕರಿಗೆ ತರಬೇತಿ ನೀಡುವ ಕೇಂದ್ರವಾಯಿತು. ಹೊಲ ಸಾಗುವಳಿ, ಪಶುಸಂಗೋಪನೆ, ಜೇನು ಸಾಕುವುದು, ಮತ್ತು ಇತರ ಗುಡಿಕೈಗಾರಿಕೆಗಳಲ್ಲಿ ತರಬೇತಿ ನೀಡುತ್ತಿದ್ದರು. ಗ್ರಾಮೀಣಪರಿವೀಕ್ಷಣೆಯನ್ನು ಕೈಕೊಂಡರು. ನಾಟಕ. ಪ್ರದರ್ಶನ, ಮೇಳ ಮತ್ತು ಜೇನು ಸಾಕುವ ಉದ್ದಿಮೆಗಳ ಸಹಕಾರ ಸಂಘಗಳನ್ನು ಸ್ಥಾಪಿಸಿ, ಈ ಉದ್ದಿಮೆಗಳನ್ನು ಪ್ರಾರಂಭಿಸಿದರು.

"ಪರಿಪೂರ್ಣ ಸಲಹೆಗಳೊಂದಿಗೆ ಸ್ವಸಹಾಯ" ಮಾಡಿಕೊಳ್ಳುವುದೇ ಮಾರ್ತಾಂಡಂ ಪ್ರಯೋಗದ ಉದ್ದೇಶ ಎಂದು ಡಾ. ಸ್ಪೆನ್ಸರ ಹೇಳುತ್ತಾರೆ. ಈ ಪ್ರಯೋಗದ ಇತರ ಉದ್ದೇಶಗಳು: ೧ ಸ್ವಪ್ರೇರಣೆಯಿಂದ ಸ್ವಂತದ ಅಭಿವೃದ್ಧಿಗೆ ಸಿದ್ಧರಾಗಿ ಮುಂದೆ ಬಂದ ಜನರ ಸಲುವಾಗಿ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಕ್ಕೆ ತರುವುದು. ೨ ಸಾಮಾಜಿಕ ಸಂಬಂಧಗಳ ಪೂರ್ಣ ಅರಿವು ಮಾಡಿಕೊಳ್ಳುವುದು. ೩ ವಿವಿಧ ವ್ಯಾಪಕ ಕಾರ್ಯಕ್ರಮಗಳನ್ನು ಹಳ್ಳಿಗಳಲ್ಲಿ ಅನುಷ್ಠಾನಕ್ಕೆ ತರುವುದು. ೪ ಸ್ಥಳೀಯ ಅಗತ್ಯಗಳಿಗನುಗುಣವಾಗಿ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಪಕ್ಕೆ ತರುವುದು. ೫ ಜನರಿಗೆ ಗೊತ್ತಿದ್ದ ರೀತಿಯಲ್ಲಿ ಮತ್ತು ಅವರಲ್ಲಿದ್ದ ಸಂಪನ್ಮೂಲಗಳ ಆಧಾರದ ಮೇಲೆ ಹಳ್ಳಿಗಳ ಅಭಿವೃದ್ಧಿಗಾಗಿ ಹಳ್ಳಿಗಳಲ್ಲಿ ಕೆಲಸ ಪ್ರಾರಂಭಿಸುವುದು. ೬ ಸ್ಥಳೀಯ ನಾಯಕತ್ವ ಮತ್ತು ಜವಾಬ್ದಾರಿಯನ್ನು ವೃದ್ಧಿಗೊಳಿಸುವುದು. ೭ ದೀರ್ಘಕಾಲಿಕ ಯೋಜನೆಗಳನ್ನು ರೂಪಿಸಿ, ಅವುಗಳನ್ನು ಅನುಷ್ಠಾನಕ್ಕೆ ತರುವುದು. ಮಾರ್ತಾಂಡಂನ ಕಾರ್ಯಕರ್ತರು ಗ್ರಾಮೀಣ ಪುನರ್‌ನಿರ್ಮಾಣಕ್ಕಾಗಿ ಬರೋಡ, ಕೊಚಿನ್, ಮೈಸೂರು ಮತ್ತು ಹೈದರಾಬಾದಗಳಲ್ಲಿ ಗ್ರಾಮೀಣ ಅಭಿವೃದ್ಧಿ ಕೇಂದ್ರಗಳನ್ನು ತೆರೆಯಲು ಸಹಾಯ ಮಾಡಿದರು. ಮಾರ್ತಾಂಡಂನ ಪ್ರಭಾವ ಸಿಲೋನ, ಬ್ರಹ್ಮದೇಶ ಮತ್ತು ಇಜಿಪ್ತದೇಶಗಳಲ್ಲಿ ಹಬ್ಬಿತು.

ಬ್ರಯ್ನ ಗೊರಗಾಂವ ಜಿಲ್ಲೆಯ ಕಲೆಕ್ಟರ. ಈತ 'ಬೆಟರ್ ವಿಲೆಜಸ್' ಎನ್ನುವ ಪುಸ್ತಕ ಬರೆದನು. ಇದರಲ್ಲಿ ಗ್ರಾಮೀಣ ಪುನರ್‌ನಿರ್ಮಾಣಕ್ಕಾಗಿ ಬೇಕಾದ ಕಾರ್ಯಕ್ರಮಗಳ ವಿವರಣೆ ಇದೆ. ಬ್ರಯ್ನನ ಪ್ರಕಾರ ಪುನರ್‌ನಿರ್ಮಾಣ ಎಂದರೆ ಶ್ರಮಪಟ್ಟು ದುಡಿಯುವುದು. ಮಿತವ್ಯಯ, ಸ್ವಾಭಿಮಾನ, ಸ್ವನಿಗ್ರಹ, ಸ್ವಸಹಾಯ ಪರಸ್ಪರ ಸಹಾಯ ಮತ್ತು ಪರಸ್ಪರರನ್ನು ಗೌರವಿಸುವುದು–ಈ ಹಳೆಯ ಮೌಲ್ಯಗಳನ್ನು ಪುನಃ ಆಚರಣೆಗೆ ತರುವುದು. ಬ್ರಯ್ನ ತನ್ನ ಈ ಪ್ರಯೋಗವನ್ನು ೧೯೨೦ರಲ್ಲಿ ಜಾರಿಗೆ ತಂದನು. ಅವನ ಪ್ರಕಾರ ಗ್ರಾಮೀಣ ಪುನರ್‌ನಿರ್ಮಾಣದ ನಾಲ್ಕು ಅಗತ್ಯಗಳು: ೧ ಗ್ರಾಮೀಣ ಸಂಘಟನೆಗಳು. ಅಂದರೆ ಪಂಚಾಯತು. ಇವು ಹಳ್ಳಿಯ ಶಾಶ್ವತ ಮತ್ತು ಸತತ ಸುಧಾರಣೆಗೆ ಅಭಿವೃದ್ಧಿಗೆ ಅಗತ್ಯ. ೨ ಜ್ಞಾನ–ಎಲ್ಲರಿಗೆ ಶಿಕ್ಷಣ. ವಿಶೇಷವಾಗಿ ಸ್ತ್ರೀಯರಿಗೆ ಶಿಕ್ಷಣ. ೩ ಹಳ್ಳಿಯ ಸುಶಿಕ್ಷಿತರಿಂದ ಹಳ್ಳಿಗೆ ನಾಯಕತ್ವ. ಹಳ್ಳಿಯ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಈ ಸುಶಿಕ್ಷಿತರು ನಾಯಕತ್ವ ವಹಿಸಬೇಕು. ೪ ಸೇವಾ ಮನೋವೃತ್ತಿ ಮತ್ತು ಕರ್ತವ್ಯ ಪ್ರಜ್ಞೆ.

ಶ್ರಮದ ಗೌರವ ಮತ್ತು ಸ್ವಸಹಾಯದ ಮಹತ್ವವನ್ನು ಕಲಿಸಲು ಬ್ರಯ್ನ ಅರ್ಥಶಾಸ್ತ್ರ ಮತ್ತು ಸ್ಥಳೀಯ ವಿಜ್ಞಾನ ಶಾಲೆಗಳನ್ನು ಸ್ಥಾಪಿಸಿದನು. ಹೊಲಗಳ ಉತ್ಪತ್ತಿಯನ್ನು ಮತ್ತು ಸ್ವಾಸ್ಥ್ಯದ

ಮಟ್ಟಗಳನ್ನು ಹೆಚ್ಚಿಸಲು ಪ್ರಚಾರ ಪ್ರಸಾರ ಕಾರ್ಯವನ್ನು ಫಿಲ್ಮ್. ನಾಟಕ ಮತ್ತು ಹಾಡುಗಳ ಮೂಲಕ ಮಾಡಲಾಯಿತು. 'ಗ್ರಾಮ ಸೇವಕ' ಬ್ರೈನ್ನನ ಸೃಷ್ಟಿ. ಆದರೆ ಅವನ ಪ್ರಯೋಗ ಪಂಜಾಬಿಕ್ಕೆ ಮಾತ್ರ ಸೀಮಿತವಾಯಿತು.

೧೯೩೨ರಲ್ಲಿ ಬರೋಡದಲ್ಲಿ ಗ್ರಾಮೀಣ ಪುನರ್ ನಿರ್ಮಾಣ ಯೋಜನೆ ಬರೋಡದಲ್ಲಿ ದಿವಾನರಾಗಿದ್ದ ವಿ. ಟಿ. ಕೃಷ್ಣಮಾಚಾರಿ ಅವರ ಮಾರ್ಗದರ್ಶನದಲ್ಲಿ ಪ್ರಾರಂಭವಾಯಿತು. ಮಾರ್ತಾಂಡಂನ ಅನುಭವ. ಮತ್ತು ಯುರೋಪಿನ ಸಹಕಾರಿ ಚಳುವಳಿಯ ಅಧ್ಯಯನ ಕೃಷ್ಣಮಾಚಾರಿ ಅವರಿಗೆ ಮಾರ್ಗದರ್ಶನ ನೀಡಲು ನೆರವಾಯಿತು. ಈ ಕಾರ್ಯಕ್ರಮದ ಅಂಶಗಳು ೧ ಸಾರಿಗೆ ಸಂಪರ್ಕಗಳ ಸುಧಾರಣೆ ೨ ಕುಡಿಯುವ ನೀರಿನ ಬಾವಿಗಳನ್ನು ತೋಡುವುದು ೩. ಮಲೇರಿಯಾ ನಿರ್ಮೂಲನ ಕಾರ್ಯಕ್ರಮ ೪ ಹುಲ್ಲುಗಾವಲು ಸುಧಾರಣೆ ೫ ಉತ್ತಮ ಬೀಜಗಳ ವಿತರಣೆ ೬ ಗುಡಿ ಕೈಗಾರಿಕೆಗಳಲ್ಲಿ ತರಬೇತಿ ೭ ಪ್ರತಿಯೊಂದು ಹಳ್ಳಿಗಳನ್ನು ಒಳಗೊಂಡು ಪಂಚಾಯಿತಿ ಮತ್ತು ಸಹಕಾರಿ ಸಂಘಗಳ ಸ್ಥಾಪನೆ ೮ ಗ್ರಾಮೀಣ ಶಾಲೆಗಳ ಅಭಿವೃದ್ಧಿ: ಇವು ಕೃಷಿ ವಿಜ್ಞಾನವನ್ನು ಮತ್ತು ಉತ್ತಮ ಬದುಕನ್ನು ಬದುಕಲು ಕಲಿಸುವ ಕೇಂದ್ರಗಳು. ೧೯೩೨-೪೫ರಲ್ಲಿ ಈ ಕಾರ್ಯಕ್ರಮ ೪೦೬ ಹಳ್ಳಿಗಳನ್ನು ಆವರಿಸಿತ್ತು.

ಗಾಂಧೀಜಿಯವರ ಸೇವಾಗ್ರಾಮ. ಕಾರ್ಯಕ್ರಮಗಳ ಪ್ರಯೋಗಾಲಯ. ಅವರ ಕಾರ್ಯಕ್ರಮ: ೧ ಖಾದಿ ಉಪಯೋಗ ೨ ಹಳ್ಳಿ ಕೈಗಾರಿಕೆ ಅಭಿವೃದ್ಧಿಗೆ ಪ್ರೋತ್ಸಾಹ ೩ ಅಸ್ಪೃಶ್ಯತೆಯ ನಿರ್ಮೂಲನ ೪ ಮೂಲ ಮತ್ತು ಪ್ರೌಢ ಶಿಕ್ಷಣ ೫ ಸ್ವಾಸ್ಥ್ಯ ಮತ್ತು ಸ್ವಚ್ಛತೆಯ ಶಿಕ್ಷಣ ೬ ಕೋಮುಗಳಲ್ಲಿ ಬಾಂಧವ್ಯ. ೭ ಪಾನ ಪ್ರತಿಬಂಧ ೮ ಸ್ತ್ರೀ ಉದ್ಧಾರ ೯ ರಾಷ್ಟ್ರೀಯ ಭಾಷೆಯ ಅಭಿವೃದ್ಧಿ ೧೦ ಹಳ್ಳಿಯ ಸ್ವಚ್ಛತೆ.

ಆಹಾರ ಮತ್ತು ಬಟ್ಟೆಗಳ ಸ್ವಾವಲಂಬನೆಗಳ ಮೇಲೆ ಗಾಂಧಿ ಒತ್ತು ಹಾಕಿದರು. ಪಂಚಾಯಿತಿ ರಾಜ ಮತ್ತು 'ಸಹಕಾರಿ ಸಮಾಜ' ಆಂದೋಲನದ ಮೇಲೆ ಗಾಂಧಿ ಪರಂಪರೆಯ ಛಾಪು. ಸರ್ವೋದಯ. ಗ್ರಾಮದಾನ. ಭೂದಾನ ಚಳುವಳಿಗಳ ಮೂಲಕ ಗಾಂಧಿ ಪರಂಪರೆಯನ್ನು ಇಂದಿಗೂ ಉಳಿಸಿಕೊಂಡು ಬೆಳೆಸಿಕೊಂಡು ಬಂದವರು ವಿನೋಬಾ ಭಾವೆ ಮತ್ತು ಜಯಪ್ರಕಾಶ ನಾರಾಯಣರು.

ಡಾಕ್ಟರ್ ಸ್ಪೆನ್ಸರ ಹಾಚ್. ಗುರುದೇವ ಟಾಗೋರ ಮತ್ತು ಮಹಾತ್ಮಾ ಗಾಂಧಿಯವರು ಕೈಕೊಂಡ ಗ್ರಾಮೀಣ ಪುನರ್‌ನಿರ್ಮಾಣ ಕಾರ್ಯಕ್ರಮಗಳನ್ನು ನಮ್ಮ ಇಂದಿನ ಸಮುದಾಯ ಅಭಿವೃದ್ಧಿಯ ಸಾಂಸ್ಥಿಕ ಕಾರ್ಯಕ್ರಮಗಳಲ್ಲಿ ಕಾಣುತ್ತೇವೆ. ಮಾರ್ತಾಂಡಂ ಪ್ರಯೋಗದ ಅನುಭವ ಸಮುದಾಯ ಅಭಿವೃದ್ಧಿ ಯೋಜನೆಯಲ್ಲಿ ವಿಸ್ತರಣೆಗೊಂಡಿದೆ. ಗ್ರಾಮೀಣ ಭಾಗಗಳಲ್ಲಿ ವಿವಿಧೋದ್ದೇಶ ಕಾರ್ಯಕ್ರಮಗಳನ್ನು ಗ್ರಾಮೋದ್ಧಾರದ ದೃಷ್ಟಿಯಿಂದ ಕೈಕೊಳ್ಳಬೇಕೆಂಬ ಬ್ರೈನ್‌ನ ವಿಚಾರವನ್ನು ಸಮುದಾಯ ಅಭಿವೃದ್ಧಿ ಗಮನಿಸಿದೆ. ಸ್ವಾತಂತ್ರ್ಯದ ನಂತರ ಆಳುವ ಕಾಂಗ್ರೆಸ್ ಪಕ್ಷ ಗಾಂಧಿಯವರ ಗ್ರಾಮೀಣ ಪುನರ್ ನಿರ್ಮಾಣ ಕಾರ್ಯಕ್ರಮಗಳನ್ನು ಆಚರಣೆಗೆ ತರಲು ಬದ್ಧವಾಯಿತು.

ಮದ್ರಾಸಿನಲ್ಲಿ 'ಫಿರ್ಕಾ' ಯೋಜನೆಯನ್ನು ಪ್ರಾರಂಭಿಸಿದರು. ಫಿರ್ಕಾ ಯೋಜನೆಯ ಅಲ್ಪಕಾಲಿಕ ಉದ್ದೇಶ: ಸಂಪರ್ಕ, ನೀರಿನ ಪೂರೈಕೆ, ಆರೋಗ್ಯ, ಸೌಲಭ್ಯ, ಪಂಚಾಯತ್ ಮತ್ತು ಸಹಕಾರಿ ಸಂಘಗಳ ಸಂಘಟನೆ-ಇವುಗಳನ್ನು ಅಭಿವೃದ್ಧಿಪಡಿಸುವುದು. ಮತ್ತು ಪ್ರೋತ್ಸಾಹ ನೀಡುವುದು. ದೀರ್ಘಕಾಲಿಕ ಉದ್ದೇಶ: ಕೃಷಿ ಪಶು ಸಂಗೋಪನೆ, ಖಾದಿ ಮತ್ತು ಗುಡಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಿ ಆಹಾರ. ಉಡುಪು ಮತ್ತು ವಸತಿಗಳಲ್ಲಿ ಸ್ವಾವಲಂಬನೆಯನ್ನು ಸಾಧಿಸುವುದು.

ಈ ಯೋಜನೆಯನ್ನು ೧೯೪೬ರಲ್ಲಿ ೩೪ ಫಿರ್ಕಾಗಳಲ್ಲಿ ಪ್ರಾರಂಭಿಸಿದರು. ೧೯೫೦ರಲ್ಲಿ ೫೦ ಫಿರ್ಕಾಗಳನ್ನು, ೧೯೫೨ರಲ್ಲಿ ೨೪ ಫಿರ್ಕಾಗಳನ್ನು ಈ ಯೋಜನೆಗೆ ಒಳಪಡಿಸಿದರು. ಈ ಯೋಜನೆಯು ಆಚರಣೆಗೆ ನಾಲ್ಕು ಕೋಟಿ ರೂಪಾಯಿ ನಿಧಿಯ ನಿರ್ಮಾಣ. ಗ್ರಾಮೀಣ ಕ್ಷೇಮಾಭ್ಯುದಯ ಅಧಿಕಾರಿಯ

ನೇಮಕ. ಜಿಲ್ಲೆಯ ಮಟ್ಟದಲ್ಲಿ ಅಭಿವೃದ್ಧಿ ಕಾರ್ಯಕ್ರಮದ ಜವಾಬ್ದಾರಿ ಜಿಲ್ಲಾಧಿಕಾರಿಯದು. ಇವನಿಗೆ ಗ್ರಾಮೀಣ ಕ್ಷೇಮಾಭ್ಯುದಯ ಅಧಿಕಾರಿಯ ಸಹಕಾರ. ೫ ರಿಂದ ೧೦ ಗ್ರಾಮ ಸೇವಕರ ಸಹಕಾರ ಮತ್ತು ಸಹಾಯ. ಒಂದು ಫಿರ್ಕಾದಲ್ಲಿ ಸುಮಾರು ೫೦ ಹಳ್ಳಿಗಳು. ಫಿರ್ಕಾಕ್ಕೆ ಕೃಷಿ ಮತ್ತು ಸಾರ್ವಜನಿಕ ಕಾಮಗಾರಿ ಅಧಿಕಾರಿಗಳ ನೇಮಕ. 'ಫಿರ್ಕಾ ಅಭಿವೃದ್ಧಿ ಯೋಜನೆ' ಸಮುದಾಯ ಅಭಿವೃದ್ಧಿ ಯೋಜನೆಯನ್ನು ಹೋಲುತ್ತದೆ. ಫಿರ್ಕಾ ಅಭಿವೃದ್ಧಿ ಯೋಜನೆಯನ್ನು ಸಮುದಾಯ ಅಭಿವೃದ್ಧಿ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಗಳೊಂದಿಗೆ ಸೇರಿಸಲಾಯಿತು.

ನಿಲೋಕೇರಿ ಪ್ರಯೋಗ ಪ್ರತ್ಯಕ್ಷವಾಗಿ ಸಮುದಾಯ ಅಭಿವೃದ್ಧಿಯನ್ನು ಪ್ರಭಾವಿಸಿದೆ. ಇದರ ನಾಯಕತ್ವ ಎಸ್. ಕೆ. ಡೇ ಅವರದ್ದು. ಇವರು ಕೇಂದ್ರ ಸರಕಾರದಲ್ಲಿ ಸಮುದಾಯ ಅಭಿವೃದ್ಧಿ ಮತ್ತು ಸಹಕಾರ ಇಲಾಖೆಯ ಮಂತ್ರಿಗಳಾಗಿದ್ದರು. ಏಳು ಸಾವಿರ ಜನರಿಗೆ ಪುನರ್‌ವಸತಿ ಸೌಲಭ್ಯ ನೀಡಲು ೧೦೦೦ ಎಕರೆ ಸ್ಥಳದಲ್ಲಿ ನಿಲೋಕೇರಿ ಪಟ್ಟಣದ ನಿರ್ಮಾಣವಾಯಿತು. ೧೯೪೮ರಲ್ಲಿ ನಿಲೋಕೇರಿ ವಸಾಹತಿಗೆ [illegible] ಸ್ಥಳ. ನಂತರ ಈ ಪಟ್ಟಣ ತನ್ನ ಸುತ್ತಮುತ್ತಲಿದ್ದ ೧೦೦ ಹಳ್ಳಿಗಳನ್ನು ಸೇರಿಸಿಕೊಂಡಿತು. ಈ ಯೋಜನೆಯನ್ನು 'ಮಜದೂರ ಮಂಜಿಲ್' ಎಂದು ಕರೆದರು. ಯಾಕೆಂದರೆ ಈ ಯೋಜನೆಯನ್ನು 'ದುಡಿಯದವನು ಉಣ್ಣಲಾಗದು' ಎನ್ನುವ ತತ್ವದ ಮೇಲೆ ಕಾರ್ಯಗತ ಮಾಡಲಾಗಿತ್ತು. ನಿಲೋಕೇರಿ ವಸಾಹತಿನ ಹೈನುಗಾರಿಕೆ ಕೇಂದ್ರ, ಕೋಳಿ ಸಾಕಣೆ ಕೇಂದ್ರ, ಹಂದಿ ಸಾಕುವ ಕೇಂದ್ರ; ಮುದ್ರಣಾಲಯ. ಎಂಜಿನಿಯರಿಂಗ್ ವರ್ಕ್‌ಶಾಪ್, ಚರ್ಮಶಾಲೆ. ಎಲುಬಿನ ಗೊಬ್ಬರ ಕಾರಖಾನೆ–ಇವೆಲ್ಲವನ್ನು ಸಹಕಾರ ತತ್ತ್ವದ ಮೇಲೆ ಸಂಘಟಿಸಿ ನಡೆಸಲಾಗಿತ್ತು.

ಸಮುದಾಯ ಅಭಿವೃದ್ಧಿಯ ಮೇಲೆ ನಿಲೋಕೇರಿ ಪ್ರಯೋಗದ ಸ್ಪಷ್ಟ ಛಾಪು ಇದೆ. ಸಾಮುದಾಯಿಕ ಅಭಿವೃದ್ಧಿ ಯೋಜನೆಗಳ ಕಾರ್ಯಕ್ರಮಗಳ ಆಡಳಿತವನ್ನು ಹೇಗೆ ನಡೆಸಬೇಕು ಎನ್ನುವುದರ ಬಗ್ಗೆ ನೈಜ ಕಲ್ಪನೆಯನ್ನು ನಿಲೋಕೇರಿ ಪ್ರಯೋಗ ನೀಡಿತು. ಗ್ರಾಮೀಣ ಅಭಿವೃದ್ಧಿಯಲ್ಲಿ ಕೃಷಿ ಮತ್ತು ಉದ್ದಿಮೆ ಅಭಿವೃದ್ಧಿ ಮುಖ್ಯ ಎಂದು ಈ ಪ್ರಯೋಗ ನಮಗೆ ಮನದಟ್ಟು ಮಾಡಿತು.

ಎಟಾ ಪೈಲಟ್ ಪ್ರಾಜೆಕ್ಟನ್ನು ೧೯೪೮ರಲ್ಲಿ ಆಲ್ಬರ್ಟ್ ಮೇಯರ್ರು ಉತ್ತರ ಪ್ರದೇಶ ಮತ್ತು ಕೇಂದ್ರ ಸರಕಾರದ ಬೆಂಬಲದೊಂದಿಗೆ ಪ್ರಾರಂಭಿಸಿದರು. ಮಹೇವಾ ಬ್ಲಾಕ್ ಎಟ್ಟಾವಾ ಜಿಲ್ಲೆಯಲ್ಲಿದೆ. ಈ ಬ್ಲಾಕಿನಲ್ಲಿ ೬೭ ಹಳ್ಳಿಗಳು. ಉತ್ಪನ್ನತೆಯನ್ನು ಹೆಚ್ಚಿಸುವುದು. ಕಾರ್ಯಕ್ರಮಗಳ ತೀವ್ರ ಅನುಷ್ಠಾನ. ಈ ಕಾರ್ಯಕ್ರಮಗಳನ್ನು ಕಾರ್ಯಗತ ಮಾಡಲು ಸಂಬಂಧಪಟ್ಟ ಇಲಾಖೆಗಳ ನಿರ್ಮಾಣ ಮತ್ತು ಅವುಗಳ ಸಹಕಾರ. ಜನತೆಯ ಸಹಕಾರ, ಅಭಿವೃದ್ಧಿಯ ಬಗ್ಗೆ ಸೂಕ್ಷ್ಮ ಮತ್ತು ಸೂಕ್ತ ಒಲವು ಮತ್ತು ದೃಷ್ಟಿಕೋನ. ಕಾರ್ಯಕ್ರಮಗಳ ಗುರಿಗಳನ್ನು ನಿರ್ದಿಷ್ಟಪಡಿಸುವುದು. ಸಂಬಂಧಪಟ್ಟ ಸಿಬ್ಬಂದಿಯನ್ನು ಕಾಲಕಾಲಕ್ಕೆ ಆಯ್ಕೆ ಮಾಡುವುದು. ಸ್ಥಳೀಯ ಸ್ವಾವಲಂಬನೆ. ಸ್ಥಳೀಯ ಸಂಪನ್ಮೂಲಗಳ ಪ್ರವೃತ್ತಿ. ಸ್ಥಳೀಯ ಧುರೀಣತ್ವದ ವಿಕಾಸ ಈ ಪ್ರಾಜೆಕ್ಟಿನ ಮುಖ್ಯ ಅಂಶಗಳು.

ಭಾರತ ಸಂವಿಧಾನದ ೩೬ರಿಂದ ೫೧ರ ವರೆಗಿನ ಕಲಮುಗಳು ಸಮುದಾಯ ಅಭಿವೃದ್ಧಿ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಗಳಿಗೆ ಸಂವಿಧಾನಾತ್ಮಕ ಒತ್ತಾಸೆಯನ್ನು ನೀಡುತ್ತವೆ. ೪೦, ೪೩ ಮತ್ತು ೪೮ನೇ ಕಲಮುಗಳು ಹೇಳುವಂತೆ: ಹಳ್ಳಿಗಳಲ್ಲಿ ವೈಯಕ್ತಿಕ ಅಥವಾ ಸಹಕಾರಿ ಆಧಾರದ ಮೇಲೆ ಗುಡಿಕೈಗಾರಿಕೆಗಳನ್ನು ಪ್ರೋತ್ಸಾಹಿಸಬೇಕು. ಇದು ಆಹಾರ, [illegible] ಗಳಿಸಲು, ಜೀವನ ಮಟ್ಟ [illegible] ಸಾಮಾಜಿಕ ಮತ್ತು ಸಾಂಸ್ಕೃತಿಕ [illegible] ಉಪಯೋಗಿಸಿ ವಿಶ್ರಾಂತಿ ಪಡೆಯಲು; ರಾಜ್ಯದ ಆದ್ಯ ಕರ್ತವ್ಯ [illegible] ಮತ್ತು [illegible] ಮಟ್ಟವನ್ನು ಹೆಚ್ಚಿಸುವುದು; ಸಾರ್ವಜನಿಕ ಆರೋಗ್ಯವನ್ನು ಸುಧಾರಿಸುವುದು; ಆಧುನಿಕ ವೈಜ್ಞಾನಿಕ ವಿಧಾನದಿಂದ ಕೃಷಿ ಮತ್ತು ಪಶು ಸಂಗೋಪನೆಯನ್ನು ಸಂಘಟಿಸಲು ರಾಜ್ಯ ಪ್ರಯತ್ನಿಸಬೇಕು.

ಭಾರತದಲ್ಲಿ ಸಮುದಾಯ ಅಭಿವೃದ್ಧಿ ಕಾರ್ಯಕ್ರಮದ ಪ್ರಾರಂಭ ೧೯೫೨ನೆಯ ಅಕ್ಟೋಬರ ೨ ರಂದು [illegible] ಈ ಕಾರ್ಯಕ್ರಮವನ್ನು [illegible] ಅಂಶಗಳು: ಇದು ಸಹಕಾರಿ

ಕಾರ್ಯಕ್ರಮ. ಈ ಕಾರ್ಯಕ್ರಮದಲ್ಲಿ ಜನತೆ ಪಾಲ್ಗೊಳ್ಳುವಂತೆ ಮಾಡಬೇಕು. ಆದರೆ ಇದು ಸದಾ ಸರಕಾರಿ ಕಾರ್ಯಕ್ರಮವಾಗಿರಬಾರದು. ಈ ಕಾರ್ಯಕ್ರಮದ ಅರ್ಥ ಮತ್ತು ಮಹತ್ವ ಜನರಿಗೆ ಗೊತ್ತಾಗುತ್ತ ಹೋದಂತೆ ಜನತೆ ಸಂಪೂರ್ಣವಾಗಿ ಈ ಕಾರ್ಯಕ್ರಮವನ್ನು ತಮ್ಮ ದನ್ನಾಗಿ ಮಾಡಿಕೊಳ್ಳಬೇಕು. ಜನತಂತ್ರದಲ್ಲಿ ಇದು ಅಗತ್ಯ ಮತ್ತು ಅನಿವಾರ್ಯ. ಅಂದರೆ ಸಮುದಾಯ ಅಭಿವೃದ್ಧಿ ಕಾರ್ಯಕ್ರಮ ಜನತೆಯ, ಜನರಿಂದ ಮತ್ತು ಜನತೆಗಾಗಿರುವ ಕಾರ್ಯಕ್ರಮವಾಗಬೇಕು. ಈ ಕಾರ್ಯಕ್ರಮದಲ್ಲಿ ಸರಕಾರ ಪಾಲ್ಗೊಳ್ಳಬೇಕು. ಇದಕ್ಕಾಗಿ ೧೯೫೭–೧೯೫೮ರ ಅವಧಿಯಲ್ಲಿ ಸಮುದಾಯ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಮೂರು ಬದಲಾವಣೆಗಳನ್ನು ಹೀಗೆ ತರಲಾಯಿತು: ೧ ಕಾರ್ಯಕ್ರಮದಲ್ಲಿ ಬದಲಾವಣೆ ೨ ಆಡಳಿತದಲ್ಲಿ ಬದಲಾವಣೆ ೩ ಸಂಘಟನೆಯಲ್ಲಿ ಬದಲಾವಣೆ.

ಕಾರ್ಯಕ್ರಮದಲ್ಲಿ ಬದಲಾವಣೆ: ೧ ಕೃಷಿ ಮತ್ತು ಪಶುಸಂಗೋಪನೆಗೆ ಮಹತ್ವ. ಇದಕ್ಕಾಗಿ ಹೆಚ್ಚಿನ ಹಣ ಇಟ್ಟರು. ೨ ಗುಡಿಕೈಗಾರಿಕೆಗಳಿಗೆ ಮಹತ್ವ ನೀಡಲು ವಿಶೇಷ ಯೋಜನೆಗಳನ್ನು ಪ್ರಾರಂಭಿಸಲಾಯಿತು. ಇಂಡಸ್ಟ್ರಿಯಲ್ ಎಕ್ಸ್‌ಟೆನ್ಶನ್ ಆಫೀಸರ್ ಹುದ್ದೆಯ ಮತ್ತು ಅದರ ಸಿಬ್ಬಂದಿಯ ನೇಮಕ. ೩ ಸಾಮಾಜಿಕ ಶಿಕ್ಷಣ ಸಂಘಟನೆಯ ಪಾತ್ರವನ್ನು ಸ್ಪಷ್ಟ ಮಾಡಲಾಯಿತು. ಅಲ್ಲದೆ ಸಮುದಾಯದ ಸಂಘಟನೆ. ೪ ಸ್ತ್ರೀಯರ ಮತ್ತು ಮಕ್ಕಳ ಏಳಿಗೆಗೆ ಮಹತ್ವ. ಇದಕ್ಕಾಗಿ ಸಾಮಾಜಿಕ ಕಲ್ಯಾಣ ಮಂಡಳಿಯೊಂದಿಗೆ ಸಂಬಂಧ. ಇದರಿಂದಾಗಿ ವ್ಯಕ್ತಿ ಶಕ್ತಿ ಮತ್ತು ಗ್ರಾಮ ಸೇವಿಕಾ ಮತ್ತು ಎರಡು ಗ್ರಾಮ ಸೇವಿಕೆಯರು ನೇಮಿಸಲಾಯಿತು. ಆಡಳಿತದಲ್ಲಿ ಬದಲಾವಣೆ: ೧ ಸಮುದಾಯ ಅಭಿವೃದ್ಧಿಯ ಮೊದಲ ಹಂತಗಳ ಸಮನ್ವಯ. ೨ ತರಬೇತಿ ಮತ್ತು ಸಮ್ಮೇಳನಗಳಲ್ಲಿ ಸತತವಾಗಿ ಭಾಗವಹಿಸಲು ಅವರ ವಿಸ್ತರಣಾಧಿಕಾರಿಯೊಡನೆ ತಾಂತ್ರಿಕ ಅಧಿಕಾರಿಯ ಸಂಬಂಧ: ೩ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಮುದಾಯ ಅಭಿವೃದ್ಧಿ ಮಹತ್ವಪಾತ್ರವನ್ನು ವಹಿಸಬೇಕಿತ್ತು. ಸಮುದಾಯದ ಶ್ರೇಣಿಗಳ ಬದಲಿಗೆ [illegible] ಮಟ್ಟದ ಸ್ಥಾನಮಾನವನ್ನು ೧೯೬೦ರಲ್ಲಿ ನೀಡಿದರು. ೪ ಬ್ಲಾಕ್‌ಗಳ ಕಾರ್ಯನಿರ್ವಹಣೆಯನ್ನು ನೋಡಲು ಜಿಲ್ಲಾಧಿಕಾರಿಗಳಿಗೆ ಅಧೀನರಾಗಿರುವ ಜಿಲ್ಲಾ ಮಟ್ಟದ ಅಧಿಕಾರಿಗಳ ನೇಮಕ. ೫ ಉನ್ನತ ಅಧಿಕಾರಿಗಳಿಗೆ, ತಾಂತ್ರಿಕ ಅಧಿಕಾರಿಗಳಿಗೆ, ಸಮುದಾಯ ಅಭಿವೃದ್ಧಿ ಸಿಬ್ಬಂದಿ ವರ್ಗದವರಿಗೆ ಮತ್ತು ಇತರರಿಗೆ ಶಿಕ್ಷಣ ಮತ್ತು ತರಬೇತಿ ನೀಡಲು ಅಧ್ಯಯನ ಮತ್ತು ಸಂಶೋಧನೆಗಳ ಕೇಂದ್ರ ಸೃಷ್ಟಿ (ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಸ್ಟಡಿ ಅಂಡ್ ರಿಸರ್ಚ್) ಸಂಘಟನೆಯಲ್ಲಿ ಬದಲಾವಣೆ: ೧ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳನ್ನು 'ಗವರ್ನಮೆಂಟ್-ಓರಿಯೆಂಟೆಡ್'ದಿಂದ 'ಪೀಪಲ್-ಓರಿಯೆಂಟೆಡ್' ಆಗಿ ಮಾಡಲು ಗ್ರಾಮ ಪಂಚಾಯತಿಗಳನ್ನು ಪ್ರಾರಂಭಿಸಿದರು. ಬ್ಲಾಕ್ ಸಲಹಾ ಸಮಿತಿಗಳನ್ನು ಬಲಪಡಿಸಿದರು. ಲೋಕಸಭಾ ಸದಸ್ಯರ ಮತ್ತು ವಿಧಾನ ಸಭಾ ಸದಸ್ಯರ ಸಲಹಾ ಸಮಿತಿಗಳನ್ನು ಕೇಂದ್ರ ಮತ್ತು ರಾಜ್ಯಗಳಲ್ಲಿ ರಚಿಸಿ ಬಲಪಡಿಸಿದರು. ಬ್ಲಾಕ್ ಸಲಹಾ ಸಮಿತಿಯನ್ನು ಬ್ಲಾಕ್ ಅಭಿವೃದ್ಧಿ ಸಮಿತಿ ಎಂದು ಬದಲಿಸಿದರು. ಪಂಚಾಯತಿಗಳ ಸರಪಂಚರು, ಸಹಕಾರಿ ಸಂಘಗಳ ಪ್ರತಿನಿಧಿಗಳು, ಸಮಾಜಸೇವಾ ಸಂಘಟನೆಗಳ ಪ್ರತಿನಿಧಿಗಳು, ಲೋಕಸಭಾ ಸದಸ್ಯರು, ವಿಧಾನಸಭಾ ಸದಸ್ಯರು ಮತ್ತು ಮಹಿಳಾ ಸಂಘಗಳ ಪ್ರತಿನಿಧಿಗಳು. ಇವರೆಲ್ಲ ಬ್ಲಾಕಿಗೆ ಸೇರಿದರು. ಬ್ಲಾಕ್‌ಗಳಲ್ಲಿ ಸಂಬಂಧಪಟ್ಟ ಪಂಚಾಯತಿಗಳ [illegible] ಸಾವಿರ ರೂಪಾಯಿಗಳ ವರೆಗಿನ ಕಾಮಗಾರಿಗಳನ್ನು ಕೈಕೊಳ್ಳುವ ಅಧಿಕಾರ ಪಡೆದವು.

ಸಮುದಾಯ ಅಭಿವೃದ್ಧಿ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಗಳ ಕಾರ್ಯಚಟುವಟಿಕೆಗಳನ್ನು ಅಧ್ಯಯನ ಮಾಡಲು ಕೇಂದ್ರ ಸರಕಾರ ಬಲವಂತರಾಯ ಮೆಹತಾ ಸಮಿತಿಯನ್ನು ನೇಮಕ ಮಾಡಿತು. ಈ ಸಮಿತಿಯ ಶಿಫಾರಸುಗಳನ್ನು ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಒಪ್ಪಿಕೊಂಡಿತು. ಈ ಸಮಿತಿ ಕೃಷಿ, ಕುಡಿಯುವ ನೀರಿನ ಪೂರೈಕೆ ಮತ್ತು ಗ್ರಾಮೀಣ ಕೈಗಾರಿಕೆಗಳಿಗೆ ಆದ್ಯತೆ ನೀಡಬೇಕೆಂದು ಹೇಳಿತು. ತ್ರಿವಿಧ ವ್ಯವಸ್ಥೆ ಅಗತ್ಯ ಎಂದಿತು: ೧ ಗ್ರಾಮ ಮಟ್ಟದಲ್ಲಿ ಪಂಚಾಯತಿಗಳನ್ನು ರಚಿಸಬೇಕು. ಪಂಚಾಯತಿಯ ಸದಸ್ಯರನ್ನು ಚುನಾಯಿಸಬೇಕು. ಮಹಿಳೆಯರಿಗೆ, ಪರಿಶಿಷ್ಟ ಜಾತಿ, ಗಿರಿಜನರಿಗೆ ಪಂಚಾಯತಿಗಳಲ್ಲಿ ಸದಸ್ಯ ಸ್ಥಾನಗಳನ್ನು ಕಾಯ್ದಿರಿಸಬೇಕು.

ಪಂಚಾಯತಿನ ಜವಾಬ್ದಾರಿ: ನೀರಿನ ಪೂರೈಕೆ. ಸ್ವಚ್ಛತೆ. ದೀಪ ಬೆಳಕು ಸೌಲಭ್ಯ, ರಸ್ತೆಗಳನ್ನು ನೋಡಿಕೊಳ್ಳುವುದು. ಭೂಮಿಯ ವ್ಯವಸ್ಥೆ. ದಾಖಲೆಗಳನ್ನು ಸಂಗ್ರಹಿಸುವುದು ಮತ್ತು ಅವುಗಳನ್ನು ಅಚ್ಚುಕಟ್ಟಾಗಿ ಇಡುವುದು. ಗ್ರಾಮಕ್ಕೆ ಸಂಬಂಧಿಸಿದ ಇತರ ಅಂಕಿ ಅಂಶಗಳನ್ನು ಸಂಗ್ರಹಿಸಿ ಅವುಗಳನ್ನು ಅಚ್ಚುಕಟ್ಟಾಗಿ ಇಡುವುದು. ಪಂಚಾಯತಿಗಳ ಸಂಪನ್ಮೂಲಗಳನ್ನು ಹೆಚ್ಚಿಸುವುದು: ಆಸ್ತಿ ತೆರಿಗೆ, ವಾಹನ ತೆರಿಗೆ. ಜಕಾತಿ ಸುಂಕ. ನೀರು ಮತ್ತು ಬೆಳಕಿನ ಶುಲ್ಕ ಮತ್ತು ಇತರ ನೆರವುಗಳನ್ನು ಎತ್ತಲು ಅಧಿಕಾರ. ಪಂಚಾಯತಿಯ ಆಯವ್ಯಯ ಪಟ್ಟಿಗೆ ಪಂಚಾಯತಿ ಸಮಿತಿಯ ಮಾನ್ಯತೆ ಬೇಕು. ೨ ಬ್ಲಾಕ್ ಮಟ್ಟದಲ್ಲಿ ಪಂಚಾಯತಿ ಸಮಿತಿಯನ್ನು ರೂಪಿಸಬೇಕು. ಸಮಿತಿಯ ಸದಸ್ಯರನ್ನು ಆರಿಸಲು ಚುನಾವಣೆಯನ್ನು ನಡೆಸಬೇಕು. ಅದರ ಕಾರ್ಯಕ್ರಮಗಳು: ಕೃಷಿ ಮತ್ತು ಪಶುಸಂಗೋಪನೆ ಅಭಿವೃದ್ಧಿ. ಸ್ವಾಸ್ಥ್ಯ. ಶಿಕ್ಷಣ ಮತ್ತು ಉದ್ದಿಮೆಗಳ ಸುಧಾರಣೆ ಮತ್ತು ಏಳಿಗೆ. ಸಮುದಾಯ ಅಭಿವೃದ್ಧಿಗೆ ಸಂಬಂಧಿಸಿದ ಅಂಕೆ ಅಂಶಗಳನ್ನು ಸಂಗ್ರಹಿಸಬೇಕು. ಇತರ ಮಹತ್ವದ ಮಾಹಿತಿಯನ್ನು ಸಂಗ್ರಹಿಸಬೇಕು. ಪಂಚಾಯತ ಸಮಿತಿಗೆ ಆದಾಯ: ಸಹಾಯಧನ, ಭೂಕಂದಾಯದ ಮೇಲಿನ ಸೆಸ್, ವೃತ್ತಿತೆರಿಗೆ, ಯಾತ್ರಿಕರಿಂದ ತೆರಿಗೆ. ಸ್ಥಿರ ಆಸ್ತಿಯ ವರ್ಗಾವಣೆಯ ಮೇಲಿನ ಸರಚಾರ್ಜ–ಇತ್ಯಾದಿಗಳಿಂದ. ಬ್ಲಾಕ್ ರಾಜ್ಯ ಸರಕಾರದ ಏಜೆಂಟ. ಅದು ರಾಜ್ಯ ಸರಕಾರ ವಹಿಸಿಕೊಟ್ಟ ಕೆಲಸ ಮಾಡಬೇಕು. ಬ್ಲಾಕಿನ ಕಾರ್ಯಕ್ರಮ ಮತ್ತು ನಿಧಿಗೆ ಜಿಲ್ಲಾ ಪರಿಷತ್ತಿನ ಮಾನ್ಯತೆ ಬೇಕು. ೩ ಜಿಲ್ಲಾ ಪರಿಷದ್. ಇದಕ್ಕೆ ಜಿಲ್ಲೆಯ ಕಲೆಕ್ಟರ ಅಧ್ಯಕ್ಷ. ಪಂಚಾಯತ್ ಸಮಿತಿಯ ಅಧ್ಯಕ್ಷರು. ಲೋಕಸಭಾ ಸದಸ್ಯರು ವಿಧಾನಸಭೆಯ ಸದಸ್ಯರು, ಜಿಲ್ಲೆಯ ಇತರ ಅಧಿಕಾರಿಗಳು–ಈ ಪರಿಷತ್ತಿನ ಸದಸ್ಯರು. ಇದು ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವ. ಅಭಿವೃದ್ಧಿ ಕಾರ್ಯಕ್ರಮಗಳನ್ನು ಕ್ರೋಢೀಕರಿಸುವ ಮತ್ತು ಮೇಲ್ವಿಚಾರಣೆ ಮಾಡುವ ಸಂಸ್ಥೆ. ೪ ಕಾರ್ಯಕ್ರಮದ ನಿರ್ವಹಣೆ: ೮೦೦ ಕುಟುಂಬಗಳಿಗೆ ಒಬ್ಬ ಗ್ರಾಮಸೇವಕ. ಬೇರೆ ಬೇರೆ ವಿಸ್ತರಣಾಧಿಕಾರಿಗಳು. ಇವರಲ್ಲಿ ಮತ್ತು ಬಿ.ಡಿ.ಓ ನಡುವೆ ಸಮನ್ವಯ. ಗ್ರಾಮಸೇವಕ ಮತ್ತು ಪಂಚಾಯತಿಗಳಲ್ಲಿ ಸಮನ್ವಯ. ಜಿಲ್ಲಾಧಿಕಾರಿ ಸಮನ್ವಯಾಧಿಕಾರಿ. ಎಸ್.ಡಿ.ಓ (ಸಬ್ ಡಿವಿಜನಲ್ ಆಫೀಸರ್)ಗೆ ಬ್ಲಾಕ್‌ಗಳ ಕಾರ್ಯನಿರ್ವಹಣೆಯನ್ನು ವೀಕ್ಷಿಸುವ ಅಧಿಕಾರ. ರಿಜನಲ್ ಆಫೀಸರನಿಗೆ ಹೆಚ್ಚಿನ ಅಧಿಕಾರ. ರಾಜ್ಯ ಮಟ್ಟದಲ್ಲಿ ಸಮನ್ವಯ ಮಂಡಳಿ (ಕೋಆರ್ಡಿನೇಶನ್ ಬೋರ್ಡ್). ಈ ಬೋರ್ಡಿನಲ್ಲಿ ರಾಜ್ಯದ ಎಲ್ಲ ಇಲಾಖೆಗಳ ಮುಖ್ಯಾಧಿಕಾರಿಗಳು ಸದಸ್ಯರು. ಡೆವಲಪಮೆಂಟ ಕಮಿಷನರ ಈ ಬೋರ್ಡಿನ ಸೆಕ್ರೆಟರಿ. ಮೆಹತಾ ಸಮಿತಿಯ ಶಿಫಾರಸುಗಳನ್ನು ಮನ್ನಿಸಿ, ಮಿನಿಸ್ಟ್ರಿ ಆಫ್ ಕಮ್ಯುನಿಟಿ ಡೆವಲಪ್‌ಮೆಂಟ್, ಪಂಚಾಯತ್‌ರಾಜ್ ಮತ್ತು ಕೋ ಆಪರೇಶನ್ ಖಾತೆಯನ್ನು ಸೃಷ್ಟಿಸಿ ಅದಕ್ಕೆ ಒಬ್ಬ ಸಚಿವನನ್ನು ನೇಮಿಸಬೇಕಾಯಿತು.

ಪ್ರೊ. ವಿಲ್ಸನ್, ಪ್ರೊ. ಕಾರ್ಲ ಟೇಲರ, ಪ್ರೊ. ಒಸ್ಕಾರ ಲೇವಿಸ್, ಪ್ರೊ. ಒಪ್ಲರ, ಪ್ರೊ. ದುಬೆ, ಪ್ರೊ. ಮಂಡೆಲಬಾಮ ಮತ್ತು ಇತರರು ಸಮುದಾಯ ಅಭಿವೃದ್ಧಿ ಯೋಜನೆ ಗ್ರಾಮೀಣ ಜನರ ಬದುಕನ್ನು ಬದಲಿಸಲು ಯಾವ ರೀತಿಯಲ್ಲಿ ಪ್ರಭಾವಿಸಿತು ಎಂದು ಪರೀಕ್ಷಿಸಿದ್ದಾರೆ. ಪ್ರೊ. ಟೇಲರ ಹೇಳುತ್ತಾರೆ: ಸಮುದಾಯ ಅಭಿವೃದ್ಧಿ ವಿಸ್ತರಣೆ ಕಾರ್ಯಕ್ರಮದ ಮುಖ್ಯ ಉದ್ದೇಶ ಹಳ್ಳಿಯ ಸಮುದಾಯಗಳು. ತಮ್ಮ ಸ್ಥಳೀಯ ಸ್ವಸಹಾಯ ವ್ಯವಸ್ಥೆಯನ್ನು ಎಲ್ಲ ಬಗೆಯ ಸ್ಥಳೀಯ ಸುಧಾರಣೆಗಾಗಿ ಉಪಯೋಗಿಸುವುದು. ಸರಕಾರ ಇದಕ್ಕೆ ಸಹಾಯ ಮಾಡುವುದು: ಅಂದರೆ ಜನತೆ ಈ ಕಾರ್ಯಕ್ರಮದ ರೂಪಣೆ ಮತ್ತು ಕಾರ್ಯಾಚರಣೆಯಲ್ಲಿ ಪಾಲ್ಗೊಳ್ಳಬೇಕು. ೨ ಆದ್ದರಿಂದ ಈ ಯೋಜನೆಗಳು ಅನೇಕ ಸ್ಥಾನಿಕ ಸಂಸ್ಥೆ ಸಂಘಟನೆಗಳನ್ನು ನಿರ್ಮಿಸಬೇಕು. ೩ ಗುಂಪಾಗಿ ಇಲ್ಲವೆ ಒಕ್ಕಟ್ಟಾಗಿ ಅಲ್ಲವೆ ಒಟ್ಟಾಗಿ ಕೆಲಸ ಮಾಡುವ ತಂತ್ರ ವಿಧಾನದ ಮೇಲೆ ಅವಲಂಬನೆ. ೪ ಈ ಯೋಜನೆಯ ಕಾರ್ಯಾಚರಣೆಯ ಎಲ್ಲ ಹಂತಗಳಲ್ಲೂ ಜನತೆಯೂ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಇದು ಸ್ಥಾನಿಕ ಧುರೀಣತ್ವಕ್ಕೆ ನಾಂದಿಯಾಗಬೇಕು. ೫ ಸರಕಾರ ಸಹಾಯಕನ ಪಾತ್ರವನ್ನು ಮಾತ್ರ ವಹಿಸಬೇಕು.

ಪ್ರೊ. ವಿಲ್ಸನ್ ಮತ್ತು ಪ್ರೊ. ಕಾರ್ಲ ಟೇಲರ ನಮ್ಮ ಸಮುದಾಯ ಅಭಿವೃದ್ಧಿ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ಅಡಗಿದ ದೋಷದೋಷಗಳನ್ನು ಎತ್ತಿ ತೋರಿಸಿದರು. ಯು. ಎಸ್.

ಬಿಶನ್ ಭೂದಾನ ಮತ್ತು ಸಮಾಜ ಶಿಕ್ಷಣ ಚಳುವಳಿಗಳಲ್ಲಿರುವ ಹುಳುಕುಗಳನ್ನು ಎತ್ತಿ ತೋರಿಸಿತು. ಸಮುದಾಯ ಅಭಿವೃದ್ಧಿ ಯೋಜನೆಯ ರಾಷ್ಟ್ರೀಯ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಪ್ರೊ. ಟಿಲ್ಮನ್ ಸೂಚಿಸಿದರು. ಈ ಸೂಚನೆಯ ಪ್ರಕಾರ ಈ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಸಮುದಾಯ ಅಭಿವೃದ್ಧಿ ಮತ್ತು ರಾಷ್ಟ್ರೀಯ ವಿಸ್ತರಣ ಯೋಜನೆಗಳನ್ನು ಸಮನ್ವಯಿಸಬೇಕೆಂದು ಪ್ರೊ. ಕಾರ್ವೇಯವರು ಹೇಳಿದರು. ೧೯೫೮ರಲ್ಲಿ ಪ್ರಕಟವಾದ ವರದಿಯಲ್ಲಿ ಗ್ರಾಮೀಣ ಪುನರ್ ನಿರ್ಮಾಣದ ಸಮಸ್ಯೆ ರಾಜಕೀಯ ಸಮಸ್ಯೆ ಎಂದು ರಾಂ. ಎಸ್. ಬಿಶನ್ ಹೇಳಿತು.

ಪ್ರೊ. ಎ. ಆರ್. ದೇಸಾಯಿ ಹೇಳುತ್ತಾರೆ: ಸಮುದಾಯ ಅಭಿವೃದ್ಧಿ ಯೋಜನೆ ಕೆಲವು ಸಾಮಾಜಿಕ ಗ್ರಹಿಕೆಗಳನ್ನು ಮಾಡುತ್ತದೆ. ಈ ಸಾಮಾಜಿಕ ಗ್ರಹಿಕೆಗಳು ಸರಿಯಾಗಿ ಮತ್ತು ಸೂಕ್ತವಾಗಿದ್ದಾಗ ಮಾತ್ರವೇ ಸಮುದಾಯ ಅಭಿವೃದ್ಧಿ ಯೋಜನೆಯ ಕಾರ್ಯಾಚರಣೆ ಯಶಸ್ವೀ ಪ್ರತಿಫಲವೀಯಲು ಸಾಧ್ಯ. ಭಾರತದಲ್ಲಿ ಈ ಯೋಜನೆಗಳು ಯಶಸ್ವಿಯಾಗಲಿಲ್ಲ. ಈ ಸಾಮಾಜಿಕ ಗ್ರಹಿಕೆಗಳು: ೧ ವ್ಯಕ್ತಿಗಳು, ಬಣಗಳು, ಗುಂಪುಗಳು ಮತ್ತು ಹಳ್ಳಿ ಸಮುದಾಯ ಇವೆಲ್ಲವುಗಳ ಹಿತಾಸಕ್ತಿ ಸಾಮಾನ್ಯವಾಗಿ ಒಂದೇ, ಏಕರೂಪದ್ದು. ಆದ್ದರಿಂದ ಈ ಹಿತಾಸಕ್ತಿಯೇ ಈ ಹಳ್ಳಿ ವ್ಯಕ್ತಿ, ಬಣದ, ಗುಂಪು ಮತ್ತು ಹಳ್ಳಿಯ ಸಮುದಾಯವನ್ನು ಒಂದಾಗುವಂತೆ ಮತ್ತು ಒಕ್ಕಟ್ಟಾಗುವಂತೆ ಮಾಡಿದೆ. ೨ ಈ ಹಿತಾಸಕ್ತಿಗಳು ಸಾರ್ವತ್ರಿಕ ಪ್ರಜಾಸತ್ತಾತ್ಮಕ ಮತ್ತು ಅಭಿವೃದ್ಧಿಶೀಲ ವಾತಾವರಣವನ್ನು ನಿರ್ಮಿಸುತ್ತದೆ. ೩ ಸಮುದಾಯದ ಬೇರೆ ಬೇರೆ ಹಿತಾಸಕ್ತಿಗಳಿಂದ ಕೂಡಿದ ಗುಂಪಿನಲ್ಲಿ ಮತ್ತು ಜನರಲ್ಲಿ ಸಂಘರ್ಷ ಇಲ್ಲ. ೪ ರಾಜ್ಯ ಸರಕಾರ ನಿಷ್ಪಕ್ಷಪಾತಿ. ಅದು ಹಳ್ಳಿಗಳ ಸಾಮಾಜಿಕ ಗುಂಪುಗಳ ನಡುವಣ ಅಸಮಾನತೆಯನ್ನು ಬಲ್ಲದು. ೫ ಹಳ್ಳಿ ಸಮುದಾಯದಲ್ಲಿ ಸಾಮಾನ್ಯ ಹಿತಾಸಕ್ತಿ ಇರುವುದರಿಂದ ಜನತೆ ಸ್ವಪ್ರೇರಣೆಯಿಂದ ಸಮುದಾಯ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸಾಧ್ಯ. ನಿಶ್ಚಯವಾಗಿ ಈ ಎಲ್ಲ ಸಾಮಾಜಿಕ ಗ್ರಹಿಕೆಗಳನ್ನು ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ಸಂದರ್ಭದಲ್ಲಿ ಸರಿ ಇಲ್ಲದೆ ತಪ್ಪು ಎಂದು ಆಲೋಚಿಸಲೇ ಇಲ್ಲ ಎಂದು ಪ್ರೊ. ದೇಸಾಯಿ ಹೇಳುತ್ತಾರೆ.

ಸಮುದಾಯ ಅಭಿವೃದ್ಧಿಯನ್ನು ಅನೇಕರು ಕಟುವಾಗಿ ಟೀಕಿಸಿದ್ದಾರೆ. ಅವುಗಳಲ್ಲಿ ಮುಖ್ಯ ಟೀಕೆಗಳು: ೧ ಸಮುದಾಯ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಬೇಕಾದ ಕಾರ್ಯ ನಿರ್ವಹಣೆಯಲ್ಲಿ ನೌಕರಶಾಹಿ ಸ್ವರೂಪದ ಛಾಪೆ ಮೂಡಿಕೊಂಡಿದೆ. ೨ ಅಭಿವೃದ್ಧಿ ಯೋಜನೆಯ ಕಾರ್ಯಾಚರಣೆಯಲ್ಲಿ ಐಕ್ಯತೆಯ ತತ್ವವೇ ಇಲ್ಲ. ೩ ಮೇಲಾಧಿಕಾರಿಗಳು ಕೈಕೊಂಡ ನಿರ್ಣಯಗಳನ್ನೇ ಕೆಳಗಿನ ಅಧಿಕಾರಿಗಳು ಜನರಿಗೆ ತರುವರು. ೪ ಸಮುದಾಯ ಅಭಿವೃದ್ಧಿ ಯೋಜನೆಯ ಕಾರ್ಯನಿರ್ವಹಣೆ ಮತ್ತು ಇತರ ಅದರ ಇಲಾಖೆಗಳ ನಡುವಣ ಸಂಬಂಧದಲ್ಲಿ ಹಳ್ಳಿಗರ ಪಾತ್ರ ಮತ್ತು ಹೊಣೆಗಾರಿಕೆಯ ವಿಷಯದಲ್ಲಿ ಗೊಂದಲವೇ ಹೆಚ್ಚು. ಸಮುದಾಯ ಅಭಿವೃದ್ಧಿ ಯೋಜನೆಯನ್ನು ಕಾರ್ಯಾಚರಣೆಗೆ ತರುವುದರಲ್ಲಿ ಜವಾಬ್ದಾರರಾದ ಸಿಬ್ಬಂದಿ ವರ್ಗ ಮತ್ತು ಜನತಂತ್ರೀಯ ತತ್ವದ ಮೇಲೆ ಚುನಾಯಿತರಾದ ಪ್ರತಿನಿಧಿಗಳಲ್ಲಿ ಹೆಚ್ಚಾಗಿ ಸಾಮಾಜಿಕ ಸೇವಾ ಮನೋಭಾವನೆ ಇಲ್ಲದಿರುವುದು. ೬ ಸಿಬ್ಬಂದಿ ವರ್ಗದಲ್ಲಿ ಸಾಮಾಜಿಕ ಸೇವಾ ಕೆಲಸದ ಪ್ರೋತ್ಸಾಹನೀಯ ಇಲ್ಲದಿರುವುದು. ಪ್ರೊ. ದುಬೆ ಹೇಳುತ್ತಾರೆ: ೧ ಹಳ್ಳಿಯ ಜನರಲ್ಲಿ ಈ ಸಮುದಾಯ ಅಭಿವೃದ್ಧಿ ಯೋಜನೆಯ ಬಗ್ಗೆ ಪ್ರೋತ್ಸಾಹವೇ ಇಲ್ಲದಿರುವುದು. ೨ ಈ ಯೋಜನೆಯ ಬಗ್ಗೆ ಅಧಿಕಾರಿಗಳ ಮತ್ತು ಹೊರಗಿನವರ ಸಂಶಯ ಮತ್ತು [illegible]. ೩ ಪರಿಣಾಮಕಾರಿ ಮತ್ತು ಸಮರ್ಪಕ ಸಂವಹನ ವ್ಯವಸ್ಥೆಯನ್ನು ನಿರ್ಮಿಸುವಲ್ಲಿ ಅಭಿವೃದ್ಧಿ ಯೋಜನೆಯ ಸೋಲು. ೪ ನಮ್ಮ ಪರಂಪರೆ ಮತ್ತು ಸಾಂಸ್ಕೃತಿಕ ಅಂಶಗಳು ಈ ಯೋಜನೆಯನ್ನು ಯಶಸ್ವಿಗೊಳಿಸಿಲ್ಲ.

ಈ ಮೇಲಿನ ಎಲ್ಲ ಅಂಶಗಳನ್ನು ಗಮನಿಸಿದ ಪ್ರೊ. ಎ. ಆರ್. ದೇಸಾಯಿಯವರ ಅಭಿಪ್ರಾಯ ಇದು: ಸಾಮಾಜಿಕವಾಗಿ ಸಮುದಾಯ ಅಭಿವೃದ್ಧಿ ಕಾರ್ಯಕ್ರಮ ಅದರ ಉದ್ದೇಶಗಳಿಗೆ ಸಂಬಂಧಿಸಿದಂತೆ ವಿಫಲಗೊಂಡಿದೆಯಷ್ಟೇ ಅಲ್ಲದೆ ಅದು ಅಪಾಯಕಾರಿಯಾಗುತ್ತಿದೆ.

೨

ಪುರಾಣ ಕಾಲದಲ್ಲಿ ಪರಶುರಾಮ ಕ್ಷೇತ್ರ ಎಂದು ಕುಂತಳ ಎಂದು, ಬೌದ್ಧ ಸಾಹಿತ್ಯದಲ್ಲಿ. ಸತ್ಯಪುತ್ರ ಎಂದು, ತುಳುವರ ಪಾಡ್ದನಗಳಲ್ಲಿ ದೇಯಿಬೈದ್ಯತಿಯ ಕೋಟಿ ಚೆನ್ನಯರ ಸತ್ಯನಾಪುರ ನಾಡೆಂದು. ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ತುಳುನಾಡು, ತುಳುಸೀಮೆ ತೆಂಕುನಾಡು ಎಂದು ದಕ್ಷಿಣ ಕನ್ನಡ ಜಿಲ್ಲೆ ಪ್ರಸಿದ್ಧ. ವಿಜಯನಗರದ ಪತನದ ನಂತರ ಇದು ಹೈದರ–ಟಿಪ್ಪು ಅವರ ಕೈಯಲ್ಲಿ. ಇವರಿಂದ ಈ ನಾಡು ಬ್ರಿಟಿಷರಿಗೆ. ಪೋರ್ತುಗೀಸರು ಈ ಪ್ರದೇಶವನ್ನು 'ಕನ್ನಡ' ಎಂದು ಕರೆಯುವುದರ ಬದಲು 'ಕೆನರಾ' ಎಂದರು. ಇದು ಕರ್ನಾಟಕದ ಕರಾವಳಿಗೆ ಅನ್ವಯಿಸುತ್ತದೆ. ಬ್ರಿಟಿಷರು ಸಹ ಇದನ್ನು 'ಕೆನರಾ' ಎಂದೇ ಕರೆದರು. ೧೮೬೦ರಲ್ಲಿ ಕೆನರಾ ಎರಡು ಭಾಗವಾಯ್ತು.: ೧ ದಕ್ಷಿಣ ಕನ್ನಡ ಜಿಲ್ಲೆ ೨ ಉತ್ತರ ಕನ್ನಡ ಜಿಲ್ಲೆ. ದಕ್ಷಿಣ ಕನ್ನಡ ಜಿಲ್ಲೆ ಮದ್ರಾಸ ಪ್ರಾಂತದಲ್ಲಿತ್ತು. ಉತ್ತರ ಕನ್ನಡ ಜಿಲ್ಲೆ ಮುಂಬಯಿ ಪ್ರಾಂತದಲ್ಲಿತ್ತು. ರಾಜ್ಯ ಪುನರ್ರಚನೆಯ ಬಳಿಕ ಸುಮಾರು ಹದಿನೈದು ಶತಮಾನಗಳ ಕನ್ನಡ ಪ್ರಭಾವ ಇದ್ದ ದಕ್ಷಿಣ ಕನ್ನಡ ಜಿಲ್ಲೆ 'ಕರ್ನಾಟಕ'ಕ್ಕೆ ಸೇರಿತು.

ದಕ್ಷಿಣ ಕನ್ನಡ ಜಿಲ್ಲೆ ಉತ್ತರ ಅಕ್ಷಾಂಶ ೧೨೦–೨೭ ಮತ್ತು ೧೩೦–೫೮ ಮತ್ತು ರೇಖಾಂಶ ೭೪–೩೫ ಮತ್ತು ೭೫೦–೪೦ರ ಮಧ್ಯ ಇದ್ದದೆ. ದಕ್ಷಿಣ ಕನ್ನಡ ಜಿಲ್ಲೆಯ ಉತ್ತರಕ್ಕೆ ಉತ್ತರ ಕನ್ನಡ ಜಿಲ್ಲೆ, ಪೂರ್ವಕ್ಕೆ ಶಿವಮೊಗ್ಗ. ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಜಿಲ್ಲೆಗಳು. ದಕ್ಷಿಣಕ್ಕೆ ಕಾಸರಗೋಡು ತಾಲೂಕು ಮತ್ತು ಪಶ್ಚಿಮಕ್ಕೆ ಅರಬೀ ಸಮುದ್ರ. ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣೋತ್ತರ ಉದ್ದ ನೂರು ಹತ್ತು ಮೈಲು. ಪೂರ್ವ ಪಶ್ಚಿಮ ಅಗಲ ಅರುವತ್ತು ಮೈಲು. ಘಟ್ಟ ಮತ್ತು ಅರಬೀ ಸಮುದ್ರದ ನಡುವೆ ಈ ಜಿಲ್ಲೆ ಕಿರಿದಾಗಿ ಹಬ್ಬಿದೆ. ಘಟ್ಟಗಳು ೨೦೦೦ರಿಂದ ೩೦೦೦ ಅಡಿಗಳಷ್ಟು ಎತ್ತರವಾಗಿವೆ. ಇಲ್ಲಿ ಅನೇಕ ಹೊಳೆ ಹಳ್ಳ ಝರಿ ತೊರೆಗಳು ಹರಿಯುತ್ತಿವೆ. ಇಲ್ಲಿಯ ಕೆಮ್ಮರಳಿನ ಮಣ್ಣು ಭತ್ತ, ತೆಂಗು. ಅಡಕೆ. ಹಲಸು. ಮಾವು. ಗೇರು. ರಾಗಿ. ದ್ವಿದಲ ಧಾನ್ಯ–ಇತ್ಯಾದಿಗಳನ್ನು ಬೆಳೆಸಲು ಅನುಕೂಲ ವಾಗಿದೆ. ಜೂನದಿಂದ ಸಪ್ಟಂಬರ ತನಕ ಮಳೆ. ವರ್ಷದಲ್ಲಿ ಸರಾಸರಿ ೧೫೦ ಅಂಗುಲ ಮಳೆ. ಈ ಜಿಲ್ಲೆಯ ಭೌಗೋಳಿಕ ವಿಸ್ತಾರ ೮೪೪೧ ಕಿಲೋಮೀಟರುಗಳು. ಜನಸಂಖ್ಯೆ ೧೯೮೧ರ ಜನಗಣತಿಯ ಪ್ರಕಾರ ೧೯.೫೭.೩೧೫. ಜನಸಾಂದ್ರತೆ ಪ್ರತಿ ಚದರು ಕಿಲೋಮೀಟರಿಗೆ ೨೩೦. ಗಂಡಸರ ಸಂಖ್ಯೆ ೯,೪೨,೪೬೫. ಹೆಂಗಸರ ಸಂಖ್ಯೆ ೯.೯೬.೮೨೦. ಹಳ್ಳಿಗಳ ಸಂಖ್ಯೆ ೬೬೨. ಹಳ್ಳಿಗಳ ಜನಸಂಖ್ಯೆ ೧೫.೪೬.೧೫೭. ಪಟ್ಟಣಗಳು ೧೮: ಪಟ್ಟಣಗಳ ಜನಸಂಖ್ಯೆ ೩.೯೩.೧೭೮. ಹರಿಜನರು ೯೯.೬೮೭. ಗಿರಿಜನರು ೭೭.೫೯೬. ಈ ಜಿಲ್ಲೆಯಲ್ಲಿ ಎಂಟು ತಾಲೂಕುಗಳು: ಬಂಟವಾಳ. ಬೆಳ್ತಂಗಡಿ. ಕುಂದಾಪುರ. ಕಾರ್ಕಳ. ಮಂಗಳೂರು. ಪುತ್ತೂರು. ಸುಳ್ಯ ಮತ್ತು ಉಡುಪಿ. ಒಂದೊಂದು ತಾಲೂಕು ಒಂದೊಂದು ಸಮುದಾಯ. ಈ ಪ್ರತಿಯೊಂದು ತಾಲೂಕಿನಲ್ಲಿ ತಾಲೂಕು ಅಭಿವೃದ್ಧಿ ಬೋರ್ಡು ಇದೆ. ಈ ಬೋರ್ಡೇ ಒಂದು ಸಮುದಾಯ.

ದಕ್ಷಿಣ ಕನ್ನಡ ಜಿಲ್ಲೆ ಮದ್ರಾಸ ರಾಜ್ಯದಲ್ಲಿದ್ದಾಗ ಸಮುದಾಯ ಅಭಿವೃದ್ಧಿ ಯೋಜನೆ ಪ್ರಾರಂಭವಾಗಿತ್ತು. ಕರ್ನಾಟಕಕ್ಕೆ ದಕ್ಷಿಣ ಕನ್ನಡ ಜಿಲ್ಲೆ ಸೇರಿದ ನಂತರವೂ ಸಮುದಾಯ ಅಭಿವೃದ್ಧಿ ಯೋಜನೆಯ ಕಾರ್ಯಾಚರಣೆ ಮುಂದುವರೆದಿದೆ. ದಕ್ಷಿಣ ಕನ್ನಡ ಜಿಲ್ಲೆಯ ಐದು ತಾಲೂಕುಗಳಲ್ಲಿ ಹನ್ನೆರಡು ಬ್ಲಾಕುಗಳು ಮತ್ತು ಆರು ಪ್ರೋಷ್ಟ ಇಂಟೆನ್ಸಿವ್ ಬ್ಲಾಕ್‌ಗಳು. ಮೊಟ್ಟಮೊದಲು ಒಂದು ಪ್ರದೇಶವನ್ನು ಆಯ್ಕೆ ಮಾಡಿದಾಗ ಅದನ್ನು ರಾಷ್ಟ್ರೀಯ ವಿಸ್ತರಣಾ ಸೇವಾ ಬ್ಲಾಕ್ (ಎನ್.ಇ.ಎಸ್.) ಎಂದು ಪರಿಗಣಿಸಲಾಗುತ್ತದೆ. ಇದು ಮೊದಲನೇ ಹಂತ.ಮೊದಲನೇ ಹಂತದಲ್ಲಿ ಸಮುದಾಯ ಅಭಿವೃದ್ಧಿಗೆ ಬೇಕಾದ ಸೂಕ್ತ ಸ್ಥಿತಿಯನ್ನು ಮತ್ತು ಪ್ರೋತ್ಸಾಹಕಾರಿ ವಾತಾವರಣವನ್ನು ಆಯ್ದ ಪ್ರದೇಶದಲ್ಲಿ ನಿರ್ಮಿಸಲು ಪ್ರಯತ್ನಿಸಲಾಗುತ್ತದೆ. ವಿಸ್ತರಣ ಕ್ರಮ ಮತ್ತು ತಂತ್ರ ವಿಧಾನಗಳ ಪರಿಚಯ ಮಾಡಿಕೊಡಲಾಗುತ್ತದೆ. ಎರಡನೇ ಹಂತದಲ್ಲಿ ಅಭಿವೃದ್ಧಿ ಕ್ಷಿಪ್ರಗತಿಯದ್ದಾಗುತ್ತದೆ. ಈ ಹಂತದಲ್ಲಿ ಎನ್.ಇ.ಎಸ್. ಬ್ಲಾಕನ್ನು ಸಮುದಾಯ ಅಭಿವೃದ್ಧಿ ಬ್ಲಾಕನ್ನಾಗಿ (ಕಮ್ಯುನಿಟಿ ಡೆವಲಪ್‌ಮೆಂಟ್ ಬ್ಲಾಕ್) ಪರಿವರ್ತಿಸಲಾಗುತ್ತದೆ. ಎನ್.ಇ.ಎಸ್. ಯೋಜನೆಯನ್ನು ಆಯ್ದ ಪ್ರದೇಶದಲ್ಲಿ ಮೂರು ವರ್ಷಗಳ ವರೆಗೆ ಕಾರ್ಯಗತ ಮಾಡಿದ ನಂತರ ಸಮುದಾಯ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಕ್ಕೆ ತರುತ್ತಾರೆ. ಎನ್.ಇ.ಎಸ್.

ಬ್ಲಾಕಿಗೆ ೪ ಲಕ್ಷ ರೂಪಾಯಿ. ಎಸ್.ಇ.ಎಸ್ ಬ್ಲಾಕನ್ನು ಸಮುದಾಯ ಅಭಿವೃದ್ಧಿ ಬ್ಲಾಕನ್ನಾಗಿ ಪರಿವರ್ತಿಸಿದಾಗ ೧೨ ಲಕ್ಷ ರೂಪಾಯಿ ನೀಡಲಾಗುತ್ತದೆ. ಎರಡನೇ ಹಂತದಲ್ಲಿರುವ ಬ್ಲಾಕಿಗೆ ೫ ಲಕ್ಷ ರೂಪಾಯಿ. ಈ ಎರಡು ಹಂತಗಳು ಮುಗಿದ ನಂತರ ಪೋಸ್ಟ್ ಇಂಟೆನ್ಸಿವ್ ಸ್ಟೇಜ್ ಪ್ರಾರಂಭ. ಹಲವು ಯೋಜನೆ ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು. ಈ ಬ್ಲಾಕುಗಳ ಮುಖ್ಯ ಕೆಲಸ: ಕೃಷಿ. ಪಶುಸಂಗೋಪನೆ. ಸಾಮಾಜಿಕ ಶಿಕ್ಷಣ. ಸಾರಿಗೆ ಸಂಪರ್ಕ ಗ್ರಾಮೀಣ ಕಲೆ. ಕೈಗಾರಿಕೆ ಮತ್ತು ಸಹಕಾರ–ಇವುಗಳ ಅಭಿವೃದ್ಧಿ.

ದಕ್ಷಿಣ ಕನ್ನಡ ಜಿಲ್ಲಾ ಅಭಿವೃದ್ಧಿ ಸಮಿತಿಗೆ ಜಿಲ್ಲಾಧಿಕಾರಿ ಅಧ್ಯಕ್ಷ. ಈತನೇ ಸಮನ್ವಯಾಧಿಕಾರಿ. ಜಿಲ್ಲಾ ಅಭಿವೃದ್ಧಿ ಮಂಡಳಿಯಲ್ಲಿ ವಿಧಾನಸಭೆ ಸದಸ್ಯರು. ಲೋಕಸಭೆ ಸದಸ್ಯರು. ಕೃಷಿ. ಪಶುಸಂಗೋಪನೆ. ಸಹಕಾರ. ಆರೋಗ್ಯ. ಕೈಗಾರಿಕೆ ಮತ್ತು ಇತರ ಇಲಾಖೆಗಳ ಮುಖ್ಯಸ್ಥರು ಇರುತ್ತಾರೆ. ಇವರೆಲ್ಲ ಸೇರಿ ಇಡೀ ಜಿಲ್ಲೆಯ ಅಭಿವೃದ್ಧಿ ಯೋಜನೆಗಳನ್ನು ರೂಪಿಸುತ್ತಾರೆ. ಅವುಗಳನ್ನು ಹೇಗೆ ಯಶಸ್ವಿಯಾಗಿ ಮತ್ತು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವುದು ಎಂದು ಆಲೋಚಿಸುತ್ತಾರೆ. ಬ್ಲಾಕ್ ಮಟ್ಟದಲ್ಲಿ ಬ್ಲಾಕ್ ಅಭಿವೃದ್ಧಿ ಅಧಿಕಾರಿ (ಬಿ.ಡಿ.ಓ.).

ಮಹಾತ್ಮ ಗಾಂಧಿ ಹುಟ್ಟಿದ ದಿನ ಸಮುದಾಯ ಅಭಿವೃದ್ಧಿ ಬ್ಲಾಕುಗಳ ಉದ್ಘಾಟನೆ ಆಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೨-೧೦-೧೯೫೨ ರಂದು ಹಲವು ಬ್ಲಾಕುಗಳ ಉದ್ಘಾಟನೆ ಮಾಡಿದರು: ಮುಲ್ಕಿ ಮಂಗಳೂರು. ಕಾರ್ಕಳ ಬ್ಲಾಕ್; ಮೂಡಬಿದ್ರಿ ಹುಡಿ ಬಂಟವಾಳ ಈ ಎಲ್ಲ ಬ್ಲಾಕುಗಳ ಎರಡನೇ ಹಂತ. ಸುಳ್ಯ ಸಮುದಾಯ ಅಭಿವೃದ್ಧಿ ಬ್ಲಾಕ್–೧೯೫೩ರಲ್ಲಿ; ಬೈಂದೂರು ಸಮುದಾಯ ಅಭಿವೃದ್ಧಿ ಬ್ಲಾಕ್ ೧೯೫೪ರಲ್ಲಿ; ಕಾಪು ಬ್ಲಾಕ್ ಎರಡನೇ ಹಂತ ೧೯೫೬ರಲ್ಲಿ; ಕುಂದಾಪುರ. ಬೆಳ್ತಂಗಡಿ ಮತ್ತು ಪುತ್ತೂರು ಬ್ಲಾಕ್ ಮೊದಲನೇ ಹಂತ ೧೯೫೮ರಲ್ಲಿ. ಉಡುಪಿ ಬ್ಲಾಕ್ ಪ್ರಾರಂಭ ೧೯೬೦ನೇ ಅಕ್ಟೋಬರ ೨ನೇ ತಾರೀಕಿನಂದು.

ಉಡುಪಿ ತಾಲೂಕಿನ ವಿಸ್ತೀರ್ಣ ೯೨೯.೧ ಚದರ ಕಿಲೋಮೀಟರುಗಳು. ಈ ತಾಲೂಕಿನಲ್ಲಿ ಜನವಸತಿ ಇರುವ ಗ್ರಾಮಗಳು ೧೧೦. ಪಟ್ಟಣಗಳು ೬. ಈ ತಾಲೂಕಿನಲ್ಲಿ ಉಡುಪಿ ನಗರ ಸಭೆ. ಆರು ಟೌನ ಪಂಚಾಯತಿಗಳು ಮತ್ತು ೬೧ ಗ್ರಾಮ ಪಂಚಾಯತಿಗಳು ಇವೆ. ಈ ತಾಲೂಕಿನ ಜನಸಂಖ್ಯೆ ೧೯೬೧ರ ಜನಗಣತಿಯ ಪ್ರಕಾರ ೩.೨೫.೯೫೦. ತಾಲೂಕು ಬೋರ್ಡಿಗೆ ಎಂಟು ಚುನಾವಣಾ ಕ್ಷೇತ್ರಗಳಿಂದ–ಕೋಟ. ಕೊಕ್ಕರ್ಣೆ. ಬ್ರಹ್ಮಾವರ. ಹಿರಿಯಡ್ಕ. ಉಡುಪಿ. ಕಟಪಾಡಿ. ಕಾಪು ಮತ್ತು ಶಿರ್ವ–ಆಯ್ಕೆಯಾದ ಸದಸ್ಯರ ಸಂಖ್ಯೆ ೧೯. ಈ ಚುನಾವಣಾ ಕ್ಷೇತ್ರಗಳಲ್ಲಿ ಹರಿಜನ ಮತ್ತು ಗಿರಿಜನರಿಗೆ ಒಂದು ಸ್ಥಾನವನ್ನು ಮತ್ತು ಮಹಿಳೆಯರಿಗೆ ಎರಡು ಸ್ಥಾನಗಳನ್ನು ಕಾದಿರಿಸಲಾಗಿದೆ. ಹರಿಜನರ ಸಂಖ್ಯೆ ೨೫.೮೧೯. ಗಿರಿಜನರ ಸಂಖ್ಯೆ ೧೨.೬೬೧. ತಾಲೂಕು ಬೋರ್ಡಿನ ಮೀಟಿಂಗಿಗೆ ಈ ತಾಲೂಕಿನಿಂದ ಆರಿಸಿಬಂದ ಎಂ.ಎಲ್.ಎ.ಗಳು ಬರುತ್ತಾರೆ. ೧೯೬೧–೬೨ರಿಂದ ೧೯೬೪–೬೫ರ ವರೆಗಿನ ಅವಧಿಯಲ್ಲಿ ಉಡುಪಿ ತಾಲೂಕು ಅಭಿವೃದ್ಧಿ ಬೋರ್ಡಿನಲ್ಲಿ ೮೬ ಸಾಮಾನ್ಯ ಸಭೆಗಳು ಮತ್ತು ೫೫ ವಿಶೇಷ ಸಭೆಗಳು ನಡೆದಿವೆ. ಈ ಸಭೆಗಳಲ್ಲಿ ಇದೇ ಕಾಲಾವಧಿಯಲ್ಲಿ ೪೨೬೪ ವಿಷಯಗಳನ್ನು ಚರ್ಚಿಸಿ ನಿರ್ಣಯ ತೆಗೆದುಕೊಳ್ಳಲಾಗಿದೆ. ಕುಂದಾಪುರ ತಾಲೂಕಿನ ವಿಸ್ತೀರ್ಣ ೧೫೫೯.೪ ಚದರ ಕಿಲೋಮೀಟರು. ಜನವಸತಿ ಇರುವ ಗ್ರಾಮಗಳು ೧೦೦.ಪಟ್ಟಣಗಳು ೨. ಟೌನ ಮತ್ತು ಗ್ರಾಮ ಪಂಚಾಯತಿಗಳು ೬೩. ಜನಸಂಖ್ಯೆ ೨.೪೨.೮೧೦. ಹರಿಜನರು ೮೦೬೦. ಗಿರಿಜನರು ೫೫೬೦. ತಾಲೂಕು ಬೋರ್ಡ ಚುನಾವಣಾ ಕ್ಷೇತ್ರಗಳು: ಹಾಲಾಡಿ. ಬಿಂಬವಕೋಣೆ. ಬೈಂದೂರು. ಗಂಗೊಳ್ಳಿ. ವಂಡ್ಸೆ. ಶಂಕರನಾರಾಯಣ. ಬಸ್ರೂರು. ಈ ಕ್ಷೇತ್ರಗಳಿಂದ ೧೯ ಸದಸ್ಯರು. ಈ ಮಂಡಳಿಯ ಪ್ರಪ್ರಥಮ ಚುನಾವಣೆ ೧೯೬೦–೬೧ರಲ್ಲಿ ನಡೆಯಿತು. ೧–೬–೧೯೬೧ರಂದು ಈ ತಾಲೂಕು ಅಭಿವೃದ್ಧಿ ಮಂಡಳಿ ರೂಪುಗೊಂಡಿತು. ೧೯ ಸದಸ್ಯರಲ್ಲಿ ಎರಡು ಸ್ಥಾನ ಮಹಿಳೆಯರಿಗೆ ಒಂದು ಸ್ಥಾನ ಪರಿಶಿಷ್ಟ ವರ್ಗದವರಿಗೆ. ಈ ಮಂಡಳಿಯಲ್ಲಿ ಇಬ್ಬರು ಶಾಸಕರು ಇದ್ದಾರೆ. ಪುತ್ತೂರು ತಾಲೂಕಿನ ವಿಸ್ತೀರ್ಣ ೧೦೦೪.೨ ಚದರ ಕಿಲೋಮೀಟರು. ಜನವಸತಿ ಇರುವ ಗ್ರಾಮಗಳು ೬೬.

ಪಟ್ಟಣ ೧. ಜನಸಂಖ್ಯೆ ೧,೫೬,೨೬೬. ಟೌನ್ ಮತ್ತು ಗ್ರಾಮ ಪಂಚಾಯತಿಗಳು ೫೯. ಹರಿಜನರು ೧೬.೨೮೨ ಮತ್ತು ಗಿರಿಜನರು ೯೦೭೭. ಈ ತಾಲೂಕು ಬೋರ್ಡಿನ ಚುನಾವಣಾ ಕ್ಷೇತ್ರಗಳು: ಉಪ್ಪಿನಂಗಡಿ, ಪುತ್ತೂರು. ಕುಂತೂರು, ಸವಣೂರು, ಕಾವು. ಪಾಣಾಜೆ. ಕಡಬ. ಈ ಏಳು ಕ್ಷೇತ್ರಗಳಿಂದ ೧೯ ಸದಸ್ಯರು. ಇವರಲ್ಲಿ ಮೂರು ಹರಿಜನ-ಗಿರಿಜನ ಸದಸ್ಯರು. ಇಬ್ಬರು ಮಹಿಳಾ ಸದಸ್ಯರು. ಮೂರು ಜನ ಶಾಸಕರು ಈ ತಾಲೂಕಿನವರು. ತಾಲೂಕು ಬೋರ್ಡು ಸಭೆಗಳಲ್ಲಿ ಭಾಗವಹಿಸುತ್ತಾರೆ.

ಮಂಗಳೂರು ತಾಲೂಕಿನ ವಿಸ್ತೀರ್ಣ ೫೬೦.೬ ಚದರು ಕಿಲೋಮೀಟರು. ಜನವಸತಿ ಇರುವ ಗ್ರಾಮಗಳು: ೧೦೨. ಪಟ್ಟಣಗಳು ೭. ಜನಸಂಖ್ಯೆ ೪.೯೦,೫೬೬. ಜನಸಾಂದ್ರತೆ ೮೭೫. ಹರಿಜನರ ಸಂಖ್ಯೆ ೧೬,೨೫೬. ಗಿರಿಜನರು ೨,೩೩೬. ಟೌನ ಮತ್ತು ಗ್ರಾಮ ಪಂಚಾಯತಿಗಳು ೭೭. ಪುರಸಭೆ ೧. ಈ ತಾಲೂಕು ಬೋರ್ಡಿನ ಚುನಾವಣಾ ಕ್ಷೇತ್ರಗಳು ಒಂಭತ್ತು: ಪಣಂಬೂರು. ದೇರಳಕಟ್ಟೆ, ಮುಲ್ಕಿ, ಕಿನ್ನಿಗೋಳಿ. ಸುರತ್ಕಲ್. ಮಳಲಿ. ಗುರುಪುರ. ಪದವು ಮತ್ತು ಉಳ್ಳಾಲ. ಸದಸ್ಯರು ೧೯. ಇವರಲ್ಲಿ ಇಬ್ಬರು ಮಹಿಳಾ ಸದಸ್ಯರು ಒಬ್ಬರು ಹರಿಜನ-ಗಿರಿಜನ ಸದಸ್ಯರು. ಕಾದಿಟ್ಟ ಸ್ಥಾನಗಳಿಂದ. ಈ ಅಭಿವೃದ್ಧಿ ಮಂಡಳಿಯ ಕಾರ್ಯಕಲಾಪಗಳಲ್ಲಿ ಆರು ಜನ ಶಾಸಕರು (ಎಂ.ಎಲ್.ಎ. ಮತ್ತು ಎಂ.ಎಲ್.ಸಿ.) ಭಾಗವಹಿಸುತ್ತಾರೆ. ಬಂಟವಾಳ ತಾಲೂಕಿನ ವಿಸ್ತೀರ್ಣ ೭೫೭.೭ ಚದರು ಕಿಲೋಮೀಟರು. ಜನಸಂಖ್ಯೆ ೨.೨೬.೭೮೭. ಜನವಸತಿ ಇರುವ ಗ್ರಾಮಗಳು ೮೫. ಟೌನ್ ಮತ್ತು ಗ್ರಾಮ ಪಂಚಾಯತಿಗಳು ೫೫. ಹರಿಜನರ ಸಂಖ್ಯೆ ೧೦.೮೧೧. ಗಿರಿಜನರು ೧೧.೯೦೩. ಚುನಾವಣಾ ಕ್ಷೇತ್ರಗಳು ಒಂಭತ್ತು: ಸಂಗಬೆಟ್ಟು. ಬಂಟವಾಳ. ಕಾವಳ. ಮೂಡುರು. ಪಾಣೆಮಂಗಳೂರು, ಮಾಣಿ, ವಿಟ್ಲ. ಕೊಳ್ನಾಡು ಮತ್ತು ಕುರ್ನಾಡು. ಸದಸ್ಯರು ೧೯. ಇವರಲ್ಲಿ ಮಹಿಳಾ ಸದಸ್ಯರು ಎರಡು. ಹರಿಜನ ಸದಸ್ಯರು ಇಬ್ಬರು. ಬೆಳ್ತಂಗಡಿ ತಾಲೂಕಿನ ವಿಸ್ತೀರ್ಣ ೧೩೭೫.೩ ಚದರ ಕಿಲೋಮೀಟರು. ಜನಸಂಖ್ಯೆ ೧.೩೭,೫೩೫. ಹರಿಜನರು ೧೧೯೨೨. ಗಿರಿಜನರು ೭.೬೩೮. ಗ್ರಾಮಗಳು ೮೧. ಗ್ರಾಮ ಪಂಚಾಯತಿಗಳು ೪೦. ಚುನಾವಣಾ ಕ್ಷೇತ್ರಗಳು ಒಂಭತ್ತು. ಸದಸ್ಯರ ಸಂಖ್ಯೆ ೧೯. ಹರಿಜನ-ಗಿರಿಜನರಿಗೆ ೩ ಸದಸ್ಯ ಸ್ಥಾನ. ಕಾರ್ಕಳ ತಾಲೂಕಿನ ವಿಸ್ತೀರ್ಣ ೧೩೪೭.೩ ಚದರು ಕಿಲೋಮೀಟರು. ಜನಸಂಖ್ಯೆ ೨,೧೨,೪೯೬. ಹರಿಜನರು ೧೨.೩೦೫. ಗಿರಿಜನರು ೭೪೭೦. ಜನವಸತಿ ಇರುವ ಗ್ರಾಮಗಳು ೭೭. ಪಟ್ಟಣಗಳು ೨. ಗ್ರಾಮೀಣ ಜನಸಂಖ್ಯೆ ೧.೮೮,೦೬೫. ನಗರ ಪ್ರದೇಶದ ಜನಸಂಖ್ಯೆ ೨೪.೪೩೧. ಗ್ರಾಮ ಪಂಚಾಯತಿಗಳು ೫೫. ತಾಲೂಕು ಅಭಿವೃದ್ಧಿ ಮಂಡಳಿಯ ಸದಸ್ಯರು ೧೯. ಇವರಲ್ಲಿ ಇಬ್ಬರು ಹರಿಜನ ಸದಸ್ಯರು ಇಬ್ಬರು ಮಹಿಳಾ ಸದಸ್ಯರು. ಸುಳ್ಯ ತಾಲೂಕಿನ ವಿಸ್ತೀರ್ಣ ೮೨೬.೬ ಕಿಲೋಮೀಟರು. ಜನಸಂಖ್ಯೆ ೮೭೯೪೭. ಗ್ರಾಮಗಳು ೪೦. ಗ್ರಾಮ ಪಂಚಾಯತಿಗಳು ೩೫. ಹರಿಜನರು ೧೦೨೭೫. ಗಿರಿಜನರು ೬೯೮೧. ಚುನಾವಣಾ ಕ್ಷೇತಗಳು ಐದು: ಸುಳ್ಯ. ಬಾಳಿಲ್ಲಾರು. ಬೆಳ್ಳಾರೆ, ಪಂಜ ಮತ್ತು ಗುತ್ತಿಗಾರು ಸದಸ್ಯರು ೧೬.

ದಕ್ಷಿಣ ಕನ್ನಡ ಜಿಲ್ಲೆಯ ಎಂಟು ತಾಲೂಕು ಬೋರ್ಡುಗಳ ಚುನಾವಣೆ ಕ್ಷೇತ್ರಗಳು ೭೮. ಆಯ್ಕೆಯಾದ ಸದಸ್ಯರು ೧೪೯. ಇವರಲ್ಲಿ ಹರಿಜನರಿಗೆ ಮತ್ತು ಗಿರಿಜನರಿಗೆ ಸದಸ್ಯ ಸ್ಥಾನ ಕಾದಿರಿಸ ಬೇಕು. ಮಹಿಳೆಯರಿಗೂ ಅಷ್ಟೇ. ತಾಲೂಕು ಬೋರ್ಡಿನ ಆಡಳಿತ ಪ್ರಜಾಸತ್ತಾತ್ಮಕವಾದದ್ದು ಅಂದರೆ ಜನರು ಈ ಬೋರ್ಡುಗಳ ಸದಸ್ಯರನ್ನು ಮತ ಹಾಕುವ ಮೂಲಕ ಚುನಾಯಿಸಬೇಕು. ಚುನಾಯಿತ ಸದಸ್ಯರು ಜನತೆಯ ಪ್ರತಿನಿಧಿಗಳು. ಜನತೆಯ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿ, ಮತ್ತು ಸ್ವಾಸ್ಥ್ಯ ಸಮಸ್ಯೆಗಳನ್ನು ಅರಿತವರು. ಇವುಗಳಿಗೆ ಸೂಕ್ತ ಮತ್ತು ಸಕಾಲಿಕ ಪರಿಹಾರಗಳನ್ನು ಕಂಡು ಹಿಡಿಯುವಲ್ಲಿ ಶಾಸಕರು ಇದ್ದವರು. ತಾಲೂಕು ಬೋರ್ಡುಗಳಲ್ಲಿ ದಲಿತ ವರ್ಗದವರಿಗೆ ಮತ್ತು ಮಹಿಳೆಯರಿಗೆ ವಿಶೇಷ ಪ್ರಾಶಸ್ತ್ಯ. ಅವರಿಗೆ ಕಾದಿಟ್ಟ ಪ್ರಾತಿನಿಧ್ಯ. ಅವರನ್ನು ನಿರ್ಲಕ್ಷಿಸದೆ ಅವರ ಕ್ಷೇಮಾಭ್ಯುದಯವನ್ನು ಹೆಚ್ಚಿಸುವ ದೃಷ್ಟಿಯಿಂದ ಇದು ಅಗತ್ಯ. ಅಭಿವೃದ್ಧಿ ಕಾರ್ಯಕ್ರಮದಲ್ಲಿ ಜನತೆ ಸಕ್ರಿಯವಾಗಿ ಪಾಲ್ಗೊಳ್ಳಬೇಕಾದ್ದರಿಂದ ಇದು ಅನಿವಾರ್ಯ. ಚುನಾಯಿತ ಸದಸ್ಯರು ಬೇರೆ ಬೇರೆ ಸಮಿತಿಗಳನ್ನು ರಚಿಸಿಕೊಳ್ಳುತ್ತಾರೆ. ೧. ಸ್ಥಾಯಿ ಸಮಿತಿ ೨ ಲೆಕ್ಕ ಪರಿಶೋಧಕ ಸಮಿತಿ

೩ ಸಾರ್ವಜನಿಕ ಆರೋಗ್ಯ ಸಮಿತಿ ೪ ಸಮಾಜ ಕಲ್ಯಾಣ ಸಮಿತಿ ೫ ಕೈಗಾರಿಕೆ ಸಮಿತಿ ೬ ವ್ಯವಸಾಯ ಸಮಿತಿ ೭ ಅಡ್ಹಾಕ್ ಸಮಿತಿ ೮ ಪಂಚಾಯತು ಬಜೆಟ್ ಸಮಿತಿ ೯ ವ್ಯವಸಾಯ ಸಮಿತಿ ೧೦ ಗ್ರಾಮೀಣ ವಿದ್ಯುದೀಕರಣ ಸಮಿತಿ ೧೧ ಹರಿಜನ-ಗಿರಿಜನ ಉದ್ಧಾರ ಸಮಿತಿ ೧೨ ಮಹಿಳಾ ಮತ್ತು ಶಿಶು ಸಂರಕ್ಷಣ ಸಮಿತಿ. ಈ ಸಮಿತಿಗಳಿಗೆಲ್ಲ ಮಾರ್ಗದರ್ಶನ ಬಿ.ಡಿ.ಒ. ಅವರಿಂದ. ಬೇಕಾದ ಸಹಾಯ ಈ ಅಧಿಕಾರಿಯಿಂದ. ಇವರಿಂದ. ಸರಕಾರದಿಂದ. ಬಿ.ಡಿ.ಒ. ಪ್ರೋಗ್ರೆಸ್ ಅಸಿಸ್ಟೆಂಟ್. ಸಹಕಾರಿ ವಿಸ್ತರಣಾಧಿಕಾರಿ. ಕೃಷಿ ವಿಸ್ತರಣಾಧಿಕಾರಿ. ಗ್ರಾಮೀಣ ಇಂಜಿನಿಯರ, ಕೈಗಾರಿಕೆ ವಿಸ್ತರಣಾಧಿಕಾರಿ. ಪಂಚಾಯತಿ ವಿಸ್ತರಣಾಧಿಕಾರಿ. ಸಮಾಜ ಶಿಕ್ಷಣಾಧಿಕಾರಿ. ಪಶು ಸಂಗೋಪನಾಧಿಕಾರಿ. ಹೆಚ್ಚಿನ ಕೃಷಿ ವಿಸ್ತರಣಾಧಿಕಾರಿ. ಮುಖ್ಯ ಸೇವಿಕ. ಗ್ರಾಮ ಸೇವಕರು. ಗ್ರಾಮ ಸೇವಿಕೆಯರು. ಸಮಾಜ ಕಲ್ಯಾಣ ಇನ್ಸ್‌ಪೆಕ್ಟರ-ಇವರೆಲ್ಲ ತಮ್ಮ ತಮ್ಮ ಅಧಿಕಾರ ಸಾಮರ್ಥ್ಯಕ್ಕನುಗುಣವಾಗಿ ಆಯಾ ಕ್ಷೇತ್ರಗಳ ಅಭಿವೃದ್ಧಿಗಾಗಿ ತಾಲೂಕು ಅಭಿವೃದ್ಧಿ ಮಂಡಳಿಯೊಂದಿಗೆ ಅದರ ರಚಿಸಿದ ಸಮಿತಿಗಳೊಂದಿಗೆ ಸಹಕರಿಸುತ್ತಾರೆ. ಸಹಾಯ ನೀಡುತ್ತಾರೆ. ಮಾರ್ಗದರ್ಶನ ಮಾಡುತ್ತಾರೆ. ಈ ಅಧಿಕಾರಿಗಳೆಲ್ಲ ಇದಕ್ಕೆ ಇದ್ದವರು. ಈ ಕೆಲಸಕ್ಕಾಗಿಯೇ ಸರ್ಕಾರ ನೇಮಿಸಿದವರು. ಭತ್ಯ ಪಡೆಯುವವರು. ತಾಲೂಕ ಅಭಿವೃದ್ಧಿ ಮಂಡಳಿಗೆ ಚುನಾಯಿತರಾದ ಸದಸ್ಯರ ಮತ್ತು ಈ ಅಧಿಕಾರಿಗಳ ಏಕೈಕ ಉದ್ದೇಶ: ಸಮುದಾಯದ ಸರ್ವಾಂಗೀಣ ಸಂವರ್ಧನೆಯನ್ನು ಸಾಧಿಸುವಂತೆ ಮಾಡುವುದು.

ಕಾಮಗಾರಿ

ರಸ್ತೆ ಕಟ್ಟಡ ಇತ್ಯಾದಿ ಬಗೆಯ ತಾಲೂಕು ಅಭಿವೃದ್ಧಿ ಮಂಡಳಿಗಳು ಕಾಮಗಾರಿ ಕೆಲಸಗಳನ್ನು ಕೈಕೊಂಡಿವೆ. ಈ ಕಾಮಗಾರಿಗಳಲ್ಲಿ ರಸ್ತೆ ನಿರ್ಮಾಣ, ಕುಡಿಯುವ ನೀರಿನ ಬಾವಿಗಳ ನಿರ್ಮಾಣ ಶಾಲೆ, ಆಸ್ಪತ್ರೆ, ಕಟ್ಟಡಗಳು, ನೀರಾವರಿ ಕಾಮಗಾರಿಗಳು ಇತ್ಯಾದಿ ಸೇರುತ್ತವೆ.

ಬೀದರ ತಾಲೂಕಿನ ಅಭಿವೃದ್ಧಿ ಮಂಡಳಿಯ ಅಧೀನದಲ್ಲಿ ೨೫ ರಸ್ತೆಗಳ ಒಟ್ಟು ೮೬.೬೨೦ ಕಿಲೋಮೀಟರು ೧೯೬೯-೭೦ರಲ್ಲಿ ಟಿ.ಡಿ.ಬಿ. ಹಸ್ತದಲ್ಲಿದ್ದ ರಸ್ತೆಗಳಿವು.

೧೯೬೧-೬೨ರಿಂದ ೧೯೬೯-೭೦ರ ವರೆಗೆ ಅನುಕ್ರಮವಾಗಿ ಟಿ.ಡಿ.ಬಿ. ರಸ್ತೆಗಳನ್ನು ರಚಿಸುತ್ತಲೇ ಬಂದಿದೆ. ೧೯೬೧-೬೨ರಲ್ಲಿ ೧೯ ರಸ್ತೆಗಳನ್ನು ನಿರ್ಮಿಸಿತು. ಸುಮಾರು ೫೬ ಮೈಲು ಉದ್ದ. ೧೯೬೧-೬೨ರಲ್ಲಿ ಈ ರಸ್ತೆಗಳನ್ನು ನೋಡಿಕೊಳ್ಳಲು ೨೪.೨೧೫ ರೂ. ಖರ್ಚಾಯಿತು. ೧೯೬೨-೬೩ರಲ್ಲಿ ಈ ರಸ್ತೆಗೆ ೧೬.೧೬೨ ರೂ. ಖರ್ಚು. ೧೯೬೩-೬೪ರಲ್ಲಿ ೧೬ ರಸ್ತೆಗಳು. ಈ ೧೬ ರಸ್ತೆಗಳನ್ನು ನೋಡಿಕೊಳ್ಳಲು ತಗಲಿದ ೫೫.೧೯೩ ರೂ. ಖರ್ಚು. ೧೯೬೪-೬೫ರಲ್ಲಿ ರಸ್ತೆಗಳಿಗೆ ೪೬.೨೭೪ ರೂ. ಖರ್ಚು. ೧೯೬೫-೬೬ರಲ್ಲಿ ೧೩ ರಸ್ತೆಗಳ ದುರಸ್ತಿಗೆ ೧೫.೫೬೬ ರೂ. ಖರ್ಚು. ಮಂಗಾರೆಡ್ಡಿ ಬಂಗಲೆ ರಸ್ತೆ, ಉದ್ದಗಿರ ಫಿಲ್ ಕನ್ನಿಂಗ್ ಯಾರ್ಡ ರಸ್ತೆ ಮತ್ತು ಅಚ್ಚೋಲ ಜನವಾಡ ರಸ್ತೆ-ಇವುಗಳಿಗೆ ಜಲ್ಲಿ ಮತ್ತು ಡಾಂಬರು ಹಾಕಲು ೨೦.೧೨೬ ರೂ. ಖರ್ಚು. ೧೯೬೬-೬೭ರಲ್ಲಿ ಟಿ.ಡಿ.ಬಿ.ಯ ನಿಯಂತ್ರಣದಲ್ಲಿ ೨೩ ರಸ್ತೆಗಳು. ಇವುಗಳ ಉದ್ದ ೫೫ ಮೈಲು. ೧೯೬೬-೬೭ರಲ್ಲಿ ೧೯.೨೭೨ ರೂ. ಖರ್ಚು. ರಸ್ತೆ, ಸಂಕ, ಕಟ್ಟಡಗಳು, ಸಣ್ಣ ನೀರಾವರಿ ಕಾಮಗಾರಿಗಳ ನಿರ್ಮಾಣ ಮತ್ತು ದುರಸ್ತಿಗೆ ೬೧.೨೪೧ ರೂ. ಖರ್ಚು. ೧೯೬೭-೬೮ರಲ್ಲಿ ೨೧ ರಸ್ತೆಗಳು ಟಿ.ಡಿ.ಬಿ.ಯ ನಿಯಂತ್ರಣದಲ್ಲಿ.

೧೯೬೭-೬೮ರಲ್ಲಿ ರಸ್ತೆಗಳ ಅಭಿವೃದ್ಧಿ, ದುರಸ್ತಿ, ಕಾಲು ಸಂಕಗಳ ರಚನೆ ಮತ್ತು ಮೋರಿಗಳನ್ನು ರಚಿಸಲೆಂದು ೮೨.೧೧೨ ರೂ. ಖರ್ಚು. ೧೯೬೮-೬೯ರಲ್ಲಿ ೨೦ ರಸ್ತೆಗಳು ಟಿ.ಡಿ.ಬಿ. ಅಧೀನ. ಇವುಗಳ ದುರಸ್ತಿ ಇತ್ಯಾದಿಗಳಿಗೆ ಖರ್ಚಾದ ಹಣ ೨.೬೮.೯೦೮ ರೂ. ೧೯೬೯-೭೦ರಲ್ಲಿ ೨೧ ರಸ್ತೆಗಳು ಟಿ.ಡಿ.ಬಿ. ವಶಕ್ಕೆ. ಇವುಗಳ ದುರಸ್ತಿ ಇತ್ಯಾದಿಗೆಂದು ಖರ್ಚಾದ ಹಣ ೧.೩೩.೫೫೦ ರೂ. ೧೯೬೯-೭೦ರಲ್ಲಿ ೨೫ ರಸ್ತೆಗಳು ಟಿ.ಡಿ.ಬಿ.ಯ ಅಧೀನ. ಕೇಂದ್ರ ಸರಕಾರದ ಗ್ರಾಮೀಣ ನಿರುದ್ಯೋಗ ನಿವಾರಣಾ ಯೋಜನೆಯಂತೆ ಕೈಕೊಂಡ ಐದು ರಸ್ತೆಗಳು: ಈ ಐದು ರಸ್ತೆಗಳ ಉದ್ದ ೩೫.೦೦೦ ಕಿಲೋಮೀಟರ್. ೧೯೭೪-೭೫ರಲ್ಲಿ ಈ ಕಾಮಗಾರಿ ಮುಂದುವರಿದಿತ್ತು.

೧೯೭೦-೭೧ರಲ್ಲಿ ಕುಂದಾಪುರ ಟಿ.ಡಿ.ಬಿ.ಯ ನಿಯಂತ್ರಣದಲ್ಲಿದ್ದ ಗ್ರಾಮಾಂತರ ರಸ್ತೆಗಳು: ಒಟ್ಟು ೨೨ ಇವಲ್ಲದೆ ೫೯ ಇತರ ರಸ್ತೆಗಳು ಸೇರಿ ಒಟ್ಟು ೮೧ ರಸ್ತೆಗಳಾಗುತ್ತವೆ:

ಪುತ್ತೂರು ತಾಲೂಕಿನ ಅಭಿವೃದ್ಧಿ ಮಂಡಳಿಯ ಅಧೀನದಲ್ಲಿ ೧೯೭೪-೭೫ರಲ್ಲಿ ಇದ್ದ ರಸ್ತೆಗಳು ೬೭. ಈ ರಸ್ತೆಗಳ ಉದ್ದ ೧೫೫ ಕಿಲೋಮೀಟರ. ೧೯೬೯-೭೦ರಲ್ಲಿ ಟಿ.ಡಿ.ಬಿ. ಅಧೀನದಲ್ಲಿ ೨೮ ರಸ್ತೆಗಳು ಇದ್ದುವು. ಇವುಗಳ ಉದ್ದ ೮೭ ಕಿಲೋಮಿಟರ್. ಈ ರಸ್ತೆಗಳ ದುರಸ್ತಿಗೆಂದು ೨೨,೬೬೯ ರೂ. ಖರ್ಚು. ೧೯೭೦-೭೧ರಲ್ಲಿ ಟಿ.ಡಿ.ಬಿ. ಅಧೀನದಲ್ಲಿ ೧೪ ಗ್ರಾಮೀಣ ರಸ್ತೆಗಳು ಮತ್ತು ೧೧ ಇತರ ರಸ್ತೆಗಳು. ಒಟ್ಟು ೨೫ ರಸ್ತೆಗಳು. ಇವುಗಳನ್ನು ನೋಡಿಕೊಳ್ಳಲು ಆದ ಖರ್ಚು ೨೧,೫೩೭ ರೂ. ೧೯೭೦-೭೧ರಲ್ಲಿ ಮಡ್ಡೂರು-ಸೂಳ್ಯಪದವು ಈ ಏಳು ಮೈಲು ನಾಲ್ಕು ಫರ್ಲಾಂಗ ಉದ್ದದ ರಸ್ತೆಯನ್ನು ಪಿ.ಡಬ್ಲ್ಯು.ಡಿ.ಗೆ ವರ್ಗಾಯಿಸಲಾಯಿತು. ೧೯೭೧-೭೨ರಲ್ಲಿ ಟಿ.ಡಿ.ಬಿ. ಅಧೀನ ೨೨ ರಸ್ತೆಗಳು: ೧೨ ಗ್ರಾಮಾಂತರ ರಸ್ತೆಗಳು ಮತ್ತು ೧೦ ಇತರ ರಸ್ತೆಗಳು. ೧೯೭೧-೭೨ರಲ್ಲಿ ೧೨ ಗ್ರಾಮೀಣ ರಸ್ತೆಗಳನ್ನು ಮತ್ತು ೬ ಇತರ ರಸ್ತೆಗಳನ್ನು ದುರಸ್ತಿ ಮಾಡಲಾಗಿದೆ. ಇದಕ್ಕಾಗಿ ಖರ್ಚು ೧೯.೫೩೦ರೂ. ೧೯೭೧-೭೨ರಲ್ಲಿ ಅಜ್ಜಿನಡ್ಕ-ನೆಟ್ಟಾರು ರಸ್ತೆ ಪಿ.ಡಬ್ಲ್ಯು.ಡಿ.ಗೆ ೧೯೭೩-೭೪ರಲ್ಲಿ ಟಿ.ಡಬ್ಲ್ಯು.ಡಿ. ಅಧೀನ ೨೭ ರಸ್ತೆಗಳು: ೧೨ ಗ್ರಾಮಾಂತರ ರಸ್ತೆಗಳು: ೧೫ ಇತರ ರಸ್ತೆಗಳು. ಈ ರಸ್ತೆ ದುರಸ್ತಿಗೆ ತಗಲಿದ ಖರ್ಚು ೩೬.೦೩೮ ರೂ. ಟಿ.ಡಿ.ಬಿ. ೧೯೭೪-೭೫ರಲ್ಲಿ ೧೭ ರಸ್ತೆಗಳ ದುರುಸ್ತಿಗಾಗಿ ೧.೨೭.೦೫೭ ರೂ. ಖರ್ಚುಮಾಡಿದೆ.

ಮಂಗಳೂರು ತಾಲೂಕು ಅಭಿವೃದ್ಧಿ ಮಂಡಳಿ (ಟಿ.ಡಿ.ಬಿ.) ಅಧೀನ ೧೯೭೪-೭೫ರಲ್ಲಿ ಇದ್ದ ರಸ್ತೆಗಳು ೭. ಈ ಏಳು ರಸ್ತೆಗಳ ಉದ್ದ ೬೨-೯೭ ಕಿಲೋಮಿಟರ. ೧೯೭೪-೭೫ರಲ್ಲಿ ಪಿ.ಡಬ್ಲ್ಯು.ಡಿ. ೧೫೩-೬೦ ಕಿಲೋಮೀಟರ ಉದ್ದದ ೬೬ ರಸ್ತೆಗಳನ್ನು ಟಿ.ಡಿ.ಬಿ.ಗೆ ವರ್ಗಾಯಿಸಿದೆ. ಟಿ.ಡಿ.ಬಿ. ನಿರ್ಮಿಸಿದ ಇತರ ೧೧ ರಸ್ತೆಗಳ ಉದ್ದ ೨೪.೯೦ ಕಿಲೋಮೀಟರ. ೧೯೭೪-೭೫ರಲ್ಲಿ ಮಂಗಳೂರು ಟಿ.ಡಿ.ಬಿ. ಅಧೀನ ೫೧ ರಸ್ತೆಗಳು. ಇವುಗಳ ಉದ್ದ ೨೦೦-೯೭ ಕಿಲೋಮೀಟರ್. ಇವುಗಳ ದುರಸ್ತಿಗೆ ತಗಲಿದ ಖರ್ಚು ೨೬.೬೫೧.೯೧ ರೂ.

೧೯೭೪-೭೫ರಲ್ಲಿ ಬಂಟವಾಳ ತಾಲೂಕು ಬೋರ್ಡಿನ ಅಧೀನ ದಲ್ಲಿದ್ದ ರಸ್ತೆಗಳು ೨೮. ಇವುಗಳ ಉದ್ದ ೧೨೫.೫೫ ಕಿ.ಮಿ. ಇವುಗಳ ಸಂರಕ್ಷಣೆಗಾಗಿ ೧೯೭೪-೭೫ರಲ್ಲಿ ೨೯.೧೮೫ ರೂ. ಖರ್ಚು.

ಸುಳ್ಯ ತಾಲೂಕಿನ ಅಭಿವೃದ್ಧಿ ಮಂಡಳಿಯ ರಸ್ತೆಗಳು ೫. ಕಾರ್ಕಳ ತಾಲೂಕಿನ ಅಧೀನದಲ್ಲಿ ೨೯ ಸಾದಾ ರಸ್ತೆಗಳು ಮೂರು ತಾರು ರೋಡುಗಳು ಇವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಂಟು ತಾಲೂಕು ಬೋರ್ಡುಗಳ ಅಧೀನದಲ್ಲಿ ೨೫೦ಕ್ಕೂ ಮೇಲ್ಪಟ್ಟು ರಸ್ತೆಗಳಿವೆ. ಇವು ಎರಡು ಬಗೆಯವು: ೧. ಗ್ರಾಮಾಂತರ ರಸ್ತೆಗಳು. ೨ ಹೆದ್ದಾರಿಯನ್ನು ಕೂಡುವ ಇಲ್ಲವೆ ಪಟ್ಟಣದೊಂದಿಗೆ ಸೇರುವ ರಸ್ತೆಗಳು. ಇದರಿಂದ ಈ ರಸ್ತೆಗಳು ಹಳ್ಳಿ ಹಳ್ಳಿಯೊಂದಿಗೆ ಮತ್ತು ಹಳ್ಳಿ ಪಟ್ಟಣಗಳೊಂದಿಗೆ ಸಂಪರ್ಕ ಬೆಳೆಸಲು ಸಹಾಯವಾಗುತ್ತವೆ. ಆರ್ಥಿಕ ಅಭಿವೃದ್ಧಿಗೆ ಕಾರಣವಾಗುತ್ತವೆ. ಶಿಕ್ಷಣ ಮತ್ತು ಸಂಸ್ಕೃತಿ ಪ್ರಸಾರ ಮತ್ತು ಪ್ರಚಾರಗಳಿಗೆ ನೆರವಾಗುತ್ತದೆ.

ಉಡುಪಿ ತಾಲೂಕು ಬೋರ್ಡು ಹತ್ತು ದಾಟಿ ಇಲ್ಲವೆ ಕಡವುಗಳನ್ನು (Ferries) ನಡೆಸಿಕೊಂಡು ಹೋಗುತ್ತಿದೆ. ೧೯೭೨ರಿಂದ ಕೆ ಕೃರ್ಜೆ ದಾಟಿಯ ಆಡಳಿತ ಪಿ. ಡಬ್ಲ್ಯು.ಡಿ. ತೆಗೆದುಕೊಂಡಿದೆ. ೧೯೫೯-೬೦ರಲ್ಲಿ ಇವುಗಳಿಂದ ಆದಾಯ ೬೦೬೯ರೂ. ೧೯೬೦-೬೧ರಲ್ಲಿ ೫೫೫೧ರೂ. ೧೯೬೧-೬೨ರಲ್ಲಿ ಆದಾಯ ಇಳಿಯಲು ಕಾರಣ ಕಲ್ಯಾಣಪುರ ಮತ್ತು ಮಾಬುಕಳ ಹೊಳೆಗೆ ಸಂಕ ಕಟ್ಟಿದ್ದರಿಂದ. ೧೯೬೨-೬೩ರಲ್ಲಿ ಆದಾಯ ೪೦೧೨ ರೂ. ೧೯೬೩-೬೪ರಲ್ಲಿ ೬೦೨೭ ರೂ. ೧೯೬೪-೬೫ರಲ್ಲಿ ೨೭೭೧ ರೂ. ೧೯೬೫-೬೬ರಲ್ಲಿ ೨೭೮೨ ರೂ. ೧೯೬೬-೬೭ರಲ್ಲಿ ೨೨೪೯ ರೂ. ೧೯೬೭-೬೮ರಲ್ಲಿ ೬೭೭೪ ರೂ. ೧೯೬೮-೬೯ರಲ್ಲಿ ೪೮೫೭ ರೂ. ೧೯೬೯-೭೦ರಲ್ಲಿ ೧೭೫೦ ರೂ. ೧೯೭೦-೭೧ರಲ್ಲಿ ೧೬೬೧ರೂ. ೧೯೭೧-೭೨ರಲ್ಲಿ ೬೧೮೪ ರೂ. ೧೯೭೨-೭೩ರಲ್ಲಿ ೪೫೮೭ ರೂ. ೧೯೭೩-೭೪ರಲ್ಲಿ ೪೮೧೧ ರೂ. ೧೯೭೪-೭೫ರಲ್ಲಿ ೪೭೭೭ರೂ. ಹೀಗೆ ೧೯೬೦-೬೧ರಿಂದ ೧೯೭೪-೭೫ರ

ವರೆಗೆ ಈ ಫೆರಿಗಳಿಂದ ಬಂದ ಆದಾಯ: ರೂ. ೫೪.೯೯೪. ಕುಂದಾಪುರ ಟಿ.ಡಿ.ಬಿ. ಅಧೀನದಲ್ಲಿದ್ದ ಫೆರಿಗಳು ೧೦. ಪುತ್ತೂರು ತಾಲೂಕಿನ ಅಭಿವೃದ್ಧಿ ಮಂಡಳಿಯ ಅಧೀನ ಇದ್ದ ಫೆರಿಗಳು: ೧೦. ಈ ಫೆರಿಗಳಿಂದ ೧೯೬೯–೭೦ರಲ್ಲಿ ಬಂದ ಆದಾಯ ರೂ. ೨೦೬೫. ೧೯೭೦–೭೧ರಲ್ಲಿ ೩೧೮೧ರೂ. ೧೯೭೦–೭೧ರಲ್ಲಿ ಲೋಕೋಪಯೋಗಿ ಇಲಾಖೆಯಿಂದ ಸರ್ವೆ, ಜೋಳಾರ, ಅಡೇಕಲ್ ಮತ್ತು ಪಾಲಂಬೆ ಫೆರಿಗಳಲ್ಲಿ ಸಂಕಗಳು ರಚಿತವಾಗಿವೆ. ಆದ್ದರಿಂದ ಪುತ್ತೂರಿನ ಟಿ.ಡಿ.ಬಿ. ಅಧೀನ ಆರು ಫೆರಿಗಳು ಇವೆ. ೧೯೭೧–೭೨ರಲ್ಲಿ ಈ ಕಡವುಗಳಿಂದ ಬಂದ ಆದಾಯ ೧೧೭೬ ರೂ. ೧೯೭೨–೭೩ರಲ್ಲಿ ೧೧೬೮ರಷ್ಟು ರೂ. ಆದಾಯ ಬಂದಿದೆ. ೧೯೭೪–೭೫ರಲ್ಲಿ ೧೬೭೪ ರೂ. ಆದಾಯ.

ಬಂಟವಾಳ ತಾಲೂಕಿನ ಅಭಿವೃದ್ಧಿ ಮಂಡಳಿ ೧೯೭೪–೭೫ರಲ್ಲಿ ತನ್ನ ಅಧೀನ ಇದ್ದ ೧೩ ಫೆರಿಗಳನ್ನು ಏಲಂ ಹಾಕಿ ೧೧೧೧೪ ರೂ. ಆದಾಯ ಪಡೆದಿದೆ. ಕಾರ್ಕಳ ಟಿ.ಡಿ.ಬಿ. ಅಧೀನ ೧೯೭೩–೭೪ರಲ್ಲಿ ಇದ್ದ ಫೆರಿಗಳು ೭

ಬೆಳ್ತಂಗಡಿ ಟಿ.ಡಿ.ಬಿ.ಯು ಪಡೆದಿದ್ದ ಕಡವುಗಳು ೪. ಸುಳ್ಯ ತಾಲೂಕಿನ ಅಭಿವೃದ್ಧಿ ಮಂಡಳಿಯ ಅಧೀನ ಇದ್ದ ಫೆರಿಗಳು: ಮಂಜಿಕಲ್ಲು ಮತ್ತು ಬಳ್ಪಾರು. ಮಂಗಳೂರು ತಾಲೂಕು ಅಭಿವೃದ್ಧಿ ಮಂಡಳಿಯ ಅಧೀನದಲ್ಲಿ ೧೯೭೪–೭೫ರಲ್ಲಿದ್ದ ಫೆರಿಗಳು ೧೩.

ದಕ್ಷಿಣ ಕನ್ನಡ ಜಿಲ್ಲೆಯ ತಾಲೂಕು ಅಭಿವೃದ್ಧಿ ಮಂಡಳಿಗಳ ಅಧೀನ ಒಟ್ಟು ೬೭ ಫೆರಿಗಳು ಈಗ ಇವೆ. ಈ ಫೆರಿಗಳನ್ನು ಏಲಂ ಹಾಕಿ ಟಿ.ಡಿ.ಬಿ.ಯು ಆದಾಯ ಪಡೆಯುತ್ತದೆ. ಈ ಫೆರಿಗಳು ಆಂತರಿಕ ಜಲಮಾರ್ಗದ ಒಂದು ಸಾಧನ. ಹೊಳೆ ದಾಟಲು ಅನುಕೂಲ. ಹೊಳೆ ದಾಟಿ ಇನ್ನೊಂದು ಊರು ಸೇರಲು ಈ ಫೆರಿಗಳ ಉಪಯೋಗ.

ಉಡುಪಿಯ ಟಿ.ಡಿ.ಬಿ. ನಡೆಸುತ್ತಿರುವ ಪ್ರವಾಸಿ ಮಂದಿರಗಳು: ಕಾಪು: ಶಿರ್ವ: ಹಿರಿಯಡ್ಕ: ಬ್ರಹ್ಮಾವರ ಮತ್ತು ಕೋಟ. ಈ ಪ್ರವಾಸಿ ಮಂದಿರಗಳಿಂದ ಆದಾಯ ಬರುತ್ತದೆ. ಇದಕ್ಕಾಗಿ ಹಣ ಖರ್ಚು ಮಾಡಬೇಕಾಗುತ್ತದೆ. ಕುಂದಾಪುರ ಟಿ.ಡಿ.ಬಿ ಅಧೀನದಲ್ಲಿದ್ದ ಪ್ರವಾಸಿ ಮಂದಿರಗಳು: ೧ ಕಮಲೇಶ್ವರ. ೨ ಶಂಕರನಾರಾಯಣ ೩ ಬೈಂದೂರು ೪ ಹೊಸಂಗಡಿ. ಪುತ್ತೂರು ತಾಲೂಕಿನ ಅಭಿವೃದ್ಧಿ ಮಂಡಳಿ ನಡೆಸಿಕೊಂಡು ಹೋಗುತ್ತಿರುವ ಪ್ರವಾಸಿ ಮಂದಿರಗಳು: ೧ ಉಪ್ಪಿನಂಗಡಿ ಮತ್ತು ೨ ಕಡಬ. ಮಂಗಳೂರು ಟಿ.ಡಿ.ಬಿ.ಯ ಅಧೀನ ಇದ್ದ ಪ್ರವಾಸಿ ಮಂದಿರಗಳು: ೧ ಗುರುಪುರ ೨ ಅಡ್ಕಾಳ ೩ ಸುರತ್ಕಲ್ ೪ ಕೋಟೆಕಾರ ೫ ಮುಲ್ಕಿ ೬ ಬಜ್ಪೆ. ಬಂಟವಾಳ ಟಿ.ಡಿ.ಬಿ. ಅಧೀನ ಇದ್ದ ಪ್ರವಾಸಿ ಮಂದಿರಗಳು ೧ ವಿಟ್ಲ ೨ ಬಸ್ತಿಕಟ್ಟೆ ೩ ಮಾಣಿ ೪ ಕಲ್ಲಡ್ಕ. ಸುಳ್ಯ ಟಿ.ಡಿ.ಬಿ. ನಡೆಸುತ್ತಿರುವ ಪ್ರವಾಸಿ ಮಂದಿರಗಳು: ೧ ಸುಳ್ಯ ೨ ಜಾಲ್ಸೂರು ಮತ್ತು ೩ ಪಂಜ. ಬೆಳ್ತಂಗಡಿಯ ಚಾರ್ಮಾಡಿಯಲ್ಲಿನ್ನ ಪ್ರವಾಸಿ ಮಂದಿರ ಬೆಳ್ತಂಗಡಿಯ ಟಿ.ಡಿ.ಬಿ. ಅಧೀನ. ಕಾರ್ಕಳ ಟಿ.ಡಿ.ಬಿ. ಅಧೀನದಲ್ಲಿದ್ದ ಪ್ರವಾಸಿ ಮಂದಿರಗಳು ೧ ಹೆಬ್ರಿ ೨ ಬೆಳ್ಮಣ್ಣು ೩ ಬಿರ್ಲಾಡಿ ೪ ಸೋಮೇಶ್ವರ ೫ ಅಜೆಕಾರ್ ೬ ಸೋಮೇಶ್ವರ ಛತ್ರ. ಹೀಗೆ ದಕ್ಷಿಣ ಕನ್ನಡ ಜಿಲ್ಲೆಯ ತಾಲೂಕು ಅಭಿವೃದ್ಧಿ ಮಂಡಳಿಯ ಅಧೀನ ಮೂವತ್ತೊಂದು ಪ್ರವಾಸಿ ಮಂದಿರಗಳು ಇವೆ.

೧೯೭೧–೭೨ರಿಂದ ೧೯೭೪–೭೫ರ ವರೆಗೆ ಉಡುಪಿಯ ತಾಲೂಕು ಅಭಿವೃದ್ಧಿ ಮಂಡಳಿ ಸುಮಾರು ೧೦೨ ಕುಡಿಯುವ ನೀರಿನ ಬಾವಿಗಳನ್ನು ತೋಡುವ ಕೆಲಸ ಕೈಕೊಂಡಿತು. ಇದಕ್ಕೆ ಸುಮಾರು ನಾಲ್ಕು ಲಕ್ಷ ರೂ. ಹಣ ಗ್ರ್ಯಾಂಟು ಸಿಕ್ಕಿದೆ. ಇವುಗಳಲ್ಲಿ ೬೫ ಬಾವಿಗಳ ಕೆಲಸ ಪೂರ್ತಿಗೊಂಡಿದೆ. ಕುಂದಾಪುರದಲ್ಲಿ ೧೯೭೫ರ ವರೆಗೆ ೭೬.೭೨೬ ರೂ.ಗಳಲ್ಲಿ ೩೬ ಬಾವಿಗಳನ್ನು ಕಟ್ಟಲಾಗಿದೆ: ದುರಸ್ತಿ ಮಾಡಲಾಗಿದೆ. ೧೯೬೯–೭೦ರಲ್ಲಿ ೩೨ ಬಾವಿಗಳನ್ನು ಕಟ್ಟಲು ೬೭.೦೦೦ ರೂ. ಖರ್ಚು ಮಾಡಲಾಗಿದೆ. ೧೯೭೦–೭೧ರಲ್ಲಿ ೧೦ ಬಾವಿಗಳನ್ನು ಕಟ್ಟಲು ೧೬.೫೦೦ ರೂ. ಖರ್ಚು ಮಾಡಿದ್ದಾರೆ. ಈ ಜಿಲ್ಲೆಯ ಎಲ್ಲ ತಾಲೂಕು ಬೋರ್ಡುಗಳು ಕುಡಿಯುವ ನೀರಿನ ಬಾವಿಗಳನ್ನು ತೋಡಲು ಹಣ ಖರ್ಚು ಮಾಡಿವೆ. ದಕ್ಷಿಣ ಕನ್ನಡ ಜಿಲ್ಲೆಯ ಎಂಟು ತಾಲೂಕು ಅಭಿವೃದ್ಧಿ ಮಂಡಳಿಗಳು ಮೋರಿ. ಕಾಲುಸಂಕ. ಶಾಲೆಗೆ ಬೇಕಾದ ಕಟ್ಟಡ. ಆಸ್ಪತ್ರೆಗಳಿಗೆ ಬೇಕಾದ ಕಟ್ಟಡ. ತಾಲೂಕು ಅಭಿವೃದ್ಧಿ ಮಂಡಳಿಯ ಸಿಬ್ಬಂದಿ ವರ್ಗದವರಿಗೆ

ಬೇಕಾದ ಮನೆಗಳು– ಇತ್ಯಾದಿಗಳನ್ನು ಅಗತ್ಯ ಇದ್ದ ಸ್ಥಳಗಳಲ್ಲಿ ರಚಿಸಿವೆ. ವಿದ್ಯುಚ್ಛಕ್ತಿಯನ್ನು ಪೂರೈಸಿವೆ. ಕೆರೆ, ರಸ್ತೆ, ಕಟ್ಟಡಗಳ ದುರಸ್ತಿ ಮಾಡಿವೆ.

ಸಾರ್ವಜನಿಕ ಆರೋಗ್ಯ

೧೯೭೪–೭೫ರಲ್ಲಿ ಉಡುಪಿ ತಾಲೂಕಿನ ಅಭಿವೃದ್ಧಿ ಮಂಡಳಿಯ ಅಧೀನದಲ್ಲಿ ೨೧ ವೈದ್ಯಕೀಯ ಸಂಸ್ಥೆಗಳಿವೆ. ಸ್ಥಳೀಯ ಆಸ್ಪತ್ರೆ: ಶಿರ್ವ. ಬಾರ್ಕೂರು; ಸ್ಥಳೀಯ ಔಷಧಾಲಯಗಳು: ೧ ಕಾಪು, ೨ ಕುಕ್ಕೆಹಳ್ಳಿ, ೩ ಕೊಕ್ಕರ್ಣೆ. ೪ ಸಾಸ್ತಾನ ೫ ಮಲ್ಪೆ ಎಚ್.ಯು.ಟಿ. ಔಷಧಾಲಯಗಳು: ೧ ಸ್ಯಾಬರಕಟ್ಟೆ, ೨ ಕೊಳಲಗಿರಿ ೩ ಮಣಿಪುರ ೪ ಕೆಮ್ಮಣ್ಣು ೫ ಹಿರೇಬೆಟ್ಟು. ಗ್ರಾಮೀಣ ಔಷಧಾಲಯಗಳು: ೧ ಬೆಳ್ಳೆ ೨ ಮುದರಂಗಡಿ ೩ ಪೆರ್ಡೂರು ೪ ಫಲಿಮಾರು ೫ ಕರ್ಜೆ ೬ ಕಂಚಾಲು ೭ ಹಿರೂರು. ೪೧ ಪ್ರಸವ ಮತ್ತು ಶಿಶು ರಕ್ಷಣಾ ಕೇಂದ್ರ: ೧ ಪೆರ್ಡೂರು ೨ ಬ್ರಹ್ಮಾವರ. ಕುಂದಾಪುರ ತಾಲೂಕಿನಲ್ಲಿ ಸ್ಥಳೀಯ ಆಸ್ಪತ್ರೆಗಳು: ೧ ಶಿರೂರು ೨ ಕೊಲ್ಲೂರು ೩ ಅಮಾಸೆಬೈಲು. ೪ ಕಾಳಾವರ. ೫ ಬೆಳ್ವಾಲ. ಬಂಟ್ವಾಳ ತಾಲೂಕಿನಲ್ಲಿ ಸ್ಥಳೀಯ ಆಸ್ಪತ್ರೆಗಳು: ೧ ಮಾಣಿ. ೨ ಕುರ್ನಾಡು ಎಚ್.ಯು.ಟಿ. ಆಸ್ಪತ್ರೆ: ೧ ಮಂಚಿ ಬೆಂಜನಪದವು ೩ ಅಡ್ಯನಡ್ಕ. ೪ ಶಂಭೂರು. ಪ್ರಸವ ಮತ್ತು ಶಿಶುಪಾಲನಾ ಕೇಂದ್ರಗಳು: ೧ ಸರಪಾಡಿ ೨ ಪೆರ್ನೆ ೩ ಬಿ.ಸಿ. ರೋಡ್. ಮಂಗಳೂರು ತಾಲೂಕಿನಲ್ಲಿ: ಮಂಗಳೂರು ತಾಲೂಕು ಅಭಿವೃದ್ಧಿ ಮಂಡಳಿ ಆಸ್ಪತ್ರೆ. ಮುಲ್ಕಿ. ಸ್ಥಳೀಯ ಆಸ್ಪತ್ರೆಗಳು: ಕೋಟೆಕಾರ. ಪ್ರಸವ ಮತ್ತು ಶಿಶುಪಾಲನಾ ಕೇಂದ್ರಗಳು: ೧ ಮುಲ್ಕಿ. ೨ ಕಿನ್ನಿಗೋಳಿ ೩ ಅರ್ಕುಳ. ೪ ಕೋಟೇಕಾರು ೫ ಉಳ್ಳಾಲ ೬ ಅತಿಕಾರಿಬೆಟ್ಟು ೭ ಕುಳೂರು. ೮ ಬೊಳಿಯಾರು ೯ ಪಕ್ಕಲಡ್ಕ. ಪುತ್ತೂರು ತಾಲೂಕಿನಲ್ಲಿ: ಉಪ್ಪಿನಂಗಡಿಯಲ್ಲಿ ಎಲ್. ಎಫ್ ಆಸ್ಪತ್ರೆ. ಸ್ಥಳೀಯ ಆಸ್ಪತ್ರೆಗಳು: ಕೈಲ. ಉಪಕೇಂದ್ರಗಳು: ಕುಂತೂರು, ೨ ನೆಲ್ಯಾಡಿ ೩ ಈಶ್ವರಮಂಗಲ ಉಪಕೇಂದ್ರಗಳು: ೧ ಕಾವು, ೨ ಮೈಂದಡ್ಕ. ೩ ತಿಂಗಳಾಡಿ. ಉಪಕೇಂದ್ರಗಳು: ೧ ಮುಂಡೂರು ೨ ಮಾಡಾವು. ಸುಳ್ಯ ತಾಲೂಕಿನ ಆಸ್ಪತ್ರೆಗಳು: ೧ ಪಂಜ ೨ ಗುತ್ತಿಗಾರು ೩ ಸುಬ್ರಹ್ಮಣ್ಯ ೪ ಬೆಳ್ಳಾರೆ. ಬೆಳ್ತಂಗಡಿ ತಾಲೂಕಿನ ಲೋಕಲ್‌ಫಂಡ್ ಆಸ್ಪತ್ರೆಗಳು: ೧ ಉಜಿರೆ, ಇಲ್ಲಿ ಕ್ಷಯರೋಗ ಚಿಕಿತ್ಸಾ ಕೇಂದ್ರ ಇದೆ. ೨ ವೇಣೂರು ೩ ಧರ್ಮಸ್ಥಳ ೪ ಅಳದಂಗಡಿ ೫ ಕೊಕ್ಕಡ. ಮಾದರಿ ಆರೋಗ್ಯ ಕೇಂದ್ರಗಳು: ೧ ಪತ್ಯಡ್ಕ ೨ ಬಂಗಾಡಿ ೩ ನಾಯನ ೪ ಮುಂಡಾಜೆ. ಕಾರ್ಕಳದಲ್ಲಿ ಲೋಕಲ್‌ಫಂಡ ಆಸ್ಪತ್ರೆಗಳು: ೧ ಸಚೇರಿಪೇಟೆ ೨ ದೊಂಡರಂಗಡಿ ೩ ವೈಲೂರು ೪ ಬಜೆಗೋಳಿ ೫ ಕಲ್ಲಮುಂಡಕೂರು. ಗ್ರಾಮೀಣ ಆಸ್ಪತ್ರೆಗಳು: ೧ ಸೋಮೇಶ್ವರ ೨ ನಿಂಜೂರು ೩ ಕಾಂತಾವರ ೪ ಮಾಳ. ಪ್ರಸೂತಿ ಗೃಹ ಮತ್ತು ಶಿಶುಪಾಲನಾ ಕೇಂದ್ರ: ಸುದಾ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಂಟು ತಾಲೂಕು ಅಭಿವೃದ್ಧಿ ಮಂಡಳಿಗಳಲ್ಲಿ ೯೭ಕ್ಕೂ ಹೆಚ್ಚು ವೈದ್ಯಕೀಯ ಸಂಸ್ಥೆಗಳಿವೆ. ಈ ವೈದ್ಯಕೀಯ ಸಂಸ್ಥೆಗಳಲ್ಲಿ ಧರ್ಮಾರ್ಥವಾಗಿ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲು ಅರ್ಹತೆಯುಳ್ಳ ವೈದ್ಯರು ಸೇವೆ ಸಲ್ಲಿಸುತ್ತಿದ್ದಾರೆ. ಕೆಲವು ಆಸ್ಪತ್ರೆಗಳಲ್ಲಿ 'ಕ್ಷ' ಕಿರಣದ ಅನುಕೂಲತೆ ಇದೆ. ಉಡುಪಿ ತಾಲೂಕು ಅಭಿವೃದ್ಧಿ ಮಂಡಳಿಯ ಆಧೀನದಲ್ಲಿದ್ದ ಆಸ್ಪತ್ರೆಗಳಲ್ಲಿ ೧೯೭೦–೭೧ರಿಂದ ೧೯೭೪–೭೫ರ ವರೆಗಿನ ಅವಧಿಯಲ್ಲಿ ೩೧.೫೨.೬೮೬ ಹೊರರೋಗಿಗಳು. ಗ್ರಾಮೀಣ ಆಸ್ಪತ್ರೆಗಳಲ್ಲಿ ೫.೨೫.೩೯೭ ಹೊರರೋಗಿಗಳು ಮತ್ತು ಸುಮಾರು ೬೦ ಸಾವಿರ ಒಳರೋಗಿಗಳು ಚಿಕಿತ್ಸೆ ಪಡೆದಿದ್ದಾರೆ. ಈ ಅವಧಿಯಲ್ಲಿ ಗ್ರಾಮೀಣ ಮತ್ತು ಇತರ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾದ ರೋಗಿಗಳ ಸಂಖ್ಯೆ ೨೧.೪೭೧. ದಾಕು ಹಾಕಿಸಿಕೊಂಡವರು ಸುಮಾರು ಮೂರು ಲಕ್ಷ ಜನ. ಈ ಅವಧಿಯಲ್ಲಿ ಔಷಧಿಗಳಿಗಾಗಿ ಖರ್ಚಾದ ಹಣ ೩.೮೪,೧೦೦ ರೂ. ವೈದ್ಯಕೀಯ ಸಿಬ್ಬಂದಿಗಳಿಗೆ ಸಂಬಳ ನೀಡಲು ಖರ್ಚಾದ ಹಣ ೨೫.೫೨.೪೯೯ ರೂ. ಪುತ್ತೂರು ತಾಲೂಕು ಅಭಿವೃದ್ಧಿ ಮಂಡಳಿ ೧೯೬೯–೭೦ರಿಂದ ೧೯೭೪–೭೫ರ ವರೆಗಿನ ಅವಧಿಯಲ್ಲಿ ತನ್ನ ಅಧೀನದಲ್ಲಿದ್ದ ಆಸ್ಪತ್ರೆಗಳ ಮೂಲಕ ೧೪೦೭೧೨ ಹೊರರೋಗಿಗಳಿಗೆ ಮತ್ತು ೫೨೯೨ ಒಳರೋಗಿಗಳಿಗೆ ಚಿಕಿತ್ಸೆ ನೀಡಿದೆ. ಈ ಅವಧಿಯಲ್ಲಿ ವೈದ್ಯಕೀಯ ಸಿಬ್ಬಂದಿಗಳಿಗೆ ಸಂಬಳ ನೀಡಲು ೩,೬೬,೮೭೨ ರೂ. ಖರ್ಚಾಗಿದೆ. ಔಷಧಕ್ಕೆ ೨೨,೬೩೪ ರೂ. ಖರ್ಚಾಗಿದೆ.

ತಾಲೂಕು ಅಭಿವೃದ್ಧಿ ಮಂಡಳಿಗಳು ಕೈಕೊಂಡ ಕುಟುಂಬ ಯೋಜನಾ ಕಾರ್ಯಕ್ರಮಗಳ ಬಗ್ಗೆ ಕೆಲ ಮಾತುಗಳನ್ನು ಹೇಳಬೇಕು. ಸಂತಾನ ಹರಣ ಮತ್ತು ನಿಯಂತ್ರಣದ ದೃಷ್ಟಿಯಿಂದ ಈ ಕಾರ್ಯಕ್ರಮ ಈಗ ನಮ್ಮ ಭಾರತದಲ್ಲಿ ಅತ್ಯಂತ ಮಹತ್ವವನ್ನು ಪಡೆದಿದೆ. ಉಡುಪಿ ತಾಲೂಕಿನ ಅಭಿವೃದ್ಧಿ ಮಂಡಳಿಗೆ ಸಂಬಂಧಿಸಿದ ವೈದ್ಯಾಧಿಕಾರಿಗಳು ೧೯೭೦-೭೧ರಿಂದ ೧೯೭೪-೭೫ರ ವರೆಗಿನ ಅವಧಿಯಲ್ಲಿ ೧,೫೬,೦೫೭ ಭಾಷಣಗಳನ್ನು ಆರೋಗ್ಯದ ಕುರಿತು ನೀಡಿದ್ದಾರೆ. ಈ ಮಂಡಳಿ ೧೯೬೯ರಲ್ಲಿ ೬; ೧೯೭೦ರಲ್ಲಿ ೪ ಮತ್ತು ೧೯೭೧-೭೨ರಲ್ಲಿ ೪ ಕುಟುಂಬ ಯೋಜನಾ ಶಿಬಿರಗಳನ್ನು ನಡೆಸಿದೆ. ೧೯೬೯-೭೦ರಿಂದ ೧೯೭೪-೭೫ರ ವರೆಗೆ ಉಡುಪಿ ತಾಲೂಕಿನಲ್ಲಿ ಐ.ಯು.ಡಿ.ಸಿ.ಯಿಂದ ಪ್ರಯೋಜನ ಪಡೆದವರು ೧೯೨ ಜನ. ಈ ಅವಧಿಯಲ್ಲಿ ವೆಸೆಕ್ಟಮಿ ಆಪರೇಷನ್ ಮಾಡಿಸಿಕೊಂಡವರು ೨೦೦ ಮಂದಿ. ೧೯೭೧-೭೨ರಲ್ಲಿ ಜಿಲ್ಲಾ ಮಟ್ಟದಲ್ಲಿ ಮಂಗಳೂರಿನಲ್ಲಿ ನಡೆದ ಬೃಹತ್ ಕುಟುಂಬ ಯೋಜನಾ ಶಿಬಿರದಲ್ಲಿ ಉಡುಪಿ ತಾಲೂಕಿನ ೬೩ ಗಂಡಸರು ಮತ್ತು ೧೮ ಹೆಂಗಸರು ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡಿದ್ದಾರೆ. ಮಣಿಪಾಲದಲ್ಲಿ ನಡೆದ ಕುಟುಂಬ ಯೋಜನಾ ಶಿಬಿರದಲ್ಲಿ ಶಸ್ತ್ರಚಿಕಿತ್ಸೆ ಪಡೆದವರು ೨೦೦ ಮಂದಿ.

ಪುತ್ತೂರು ತಾಲೂಕಿನಲ್ಲಿ ೧೯೬೯-೭೦ರಿಂದ ೧೯೭೪-೭೫ರ ವರೆಗಿನ ಅವಧಿಯಲ್ಲಿ ನಡೆದ ಕುಟುಂಬ ಯೋಜನಾ ಶಿಬಿರಗಳು ೬೦. ಈ ಶಿಬಿರಗಳಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡವರು ೪೦೫ ಮಂದಿ. ವಂಕಿ ಧಾರಣೆ ಮಾಡಿಸಿಕೊಂಡ ಹೆಂಗಸರು ೬೫. ಮಂಗಳೂರಿನಲ್ಲಿ ನಡೆದ ಬೃಹತ್ ಕುಟುಂಬ ಯೋಜನಾ ಶಿಬಿರದಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡವರು ೪೯ ಮಂದಿ. ಪುತ್ತೂರಿನಲ್ಲಿ ನಡೆದ ಕುಟುಂಬ ಯೋಜನಾ ಶಿಬಿರಗಳಲ್ಲಿ ೧೫೨ ಮಂದಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದಾರೆ. ಇಂಥ ಕಾರ್ಯಕ್ರಮಗಳನ್ನು ಇತರ ತಾಲೂಕು ಅಭಿವೃದ್ಧಿ ಮಂಡಳಿಗಳು ನಡೆಸುತ್ತಿವೆ.

ಸಂಗೋಪನೆ

ಸಾಮುದಾಯಿಕ ಅಭಿವೃದ್ಧಿ ಯೋಜನೆಯಲ್ಲಿ ಪಶುಸಂಗೋಪನೆ ಕೂಡ ಮಹತ್ವ ಪಡೆದಿದೆ. ಸಾಗುವಳಿಗೆ ಬೇಕಾದ ಉತ್ತಮ ಎತ್ತುಗಳನ್ನು ಒದಗಿಸುವುದು, ಹಾಲಿನ ಉತ್ಪಾದನೆಯನ್ನು ಹೆಚ್ಚಿಸುವುದು, ಹಾಲಿನ ತರಾ ಸರಬರಾಜನ್ನು ಹೆಚ್ಚಿಸುವುದು. ಕೋಳಿಗಳ ತರಾ ಉತ್ಪತ್ತಿಯನ್ನು ಹೆಚ್ಚಿಸುವುದು. ಪಶು ಸಂಪತ್ತಿಗೆ ಪೌಷ್ಟಿಕ ಆಹಾರವನ್ನು ಒದಗಿಸುವುದು ಮತ್ತು ಉತ್ತಮ ಪಶುಸಂಗೋಪನಾ ಸೌಲಭ್ಯಗಳನ್ನು ಒದಗಿಸುವುದು–ಇವೆಲ್ಲ ಪಶುಸಂಗೋಪನೆಯ ಮುಖ್ಯ ಉದ್ದೇಶಗಳು.

ಉತ್ತಮ ತಳಿಯ ದನಗಳನ್ನು ಹುಟ್ಟಿಸುವ ಉದ್ದೇಶದಿಂದ ೧೯೫೫ರಲ್ಲಿ ಕೃತಕ ಗರ್ಭಧಾರಣೆ ಕೇಂದ್ರವನ್ನು ಮಂಗಳೂರಿನಲ್ಲಿ ಪ್ರಾರಂಭಿಸಿದರು. ಜರ್ಸಿ. ಹೋಲ್ಸ್ಟೀನ್ ಮೊದಲಾದ ವಿದೇಶಿ ತಳಿ ಎತ್ತುಗಳ ವೀರ್ಯವನ್ನು ಸಂಗ್ರಹಿಸುವರು. ಜಿಲ್ಲೆಯ ೨೭ ಉಪ ಕೃತಕಗರ್ಭಧಾರಣೆ ಕೇಂದ್ರಗಳಿಗೆ ಈ ತಳಿಯ ವೀರ್ಯವನ್ನು ಪೂರೈಸುತ್ತಿದ್ದರು. ಈ ಜಿಲ್ಲೆಯಲ್ಲಿ ಒಂದು ಜಿಲ್ಲಾ ಜಾನುವಾರು ಫಾರ್ಮ್ ಇದೆ. ೨೭ ಡೇರಿ ಫಾರ್ಮುಗಳು ಇವೆ. ಈ ಜಿಲ್ಲೆಯಲ್ಲಿ ಜಾನುವಾರುಗಳ ಕೊರತೆ ತುಂಬ. ಆದ್ದರಿಂದ ಪ್ರತಿ ವರ್ಷ ಹಳೆ ಮೈಸೂರು ಮತ್ತು ಧಾರವಾಡಗಳಿಂದ ಸುಮಾರು ೪೦ರಿಂದ ೫೦ ಸಾವಿರ ಜಾನುವಾರುಗಳನ್ನು ಆಮದಿಸಿಕೊಳ್ಳುತ್ತಾರೆ. ಇದಕ್ಕಾಗಿ ವಾರ್ಷಿಕ ಜಾನುವಾರು ಜಾತ್ರೆಗಳು ಸುಳ್ಯ ತಾಲೂಕಿನ ಕುಳಕುಂದದಲ್ಲಿ ಕಾರ್ಕಳ ತಾಲೂಕಿನ [illegible] ನಡೆಯುತ್ತಿದೆ. ಕುಂದಾಪುರ ತಾಲೂಕಿನ ಕೋಟದಲ್ಲಿ. ಉಡುಪಿ ತಾಲೂಕಿನ ಕುಂಜಾಲಿನಲ್ಲಿ ವಾರದ ಸಂತೆಗಳು ಮತ್ತು ಇತರ ಭಾಗಗಳಲ್ಲಿ ನಡೆಯುವ ಜಾನುವಾರು ಸಂತೆಗಳು ಜಾನುವಾರುಗಳನ್ನು ಕೊಳ್ಳಲು ದಕ್ಷಿಣ ಕನ್ನಡ ಜಿಲ್ಲೆಯವರಿಗೆ ನೆರವಾಗಿವೆ. ಈ ಜಿಲ್ಲೆಯಲ್ಲಿ ಆಡುಕುರಿಗಳೂ ಸಹ ಸಾಕಷ್ಟಿಲ್ಲ. ಆದ್ದರಿಂದ ಮಾಂಸದ ಪೂರೈಕೆಯ ದೃಷ್ಟಿಯಿಂದ ಇವುಗಳನ್ನು ಬೇರೆ ಕಡೆಗಳಿಂದ ತರಿಸಿಕೊಳ್ಳಬೇಕಾಗುತ್ತದೆ.

೧೯೬೬ರ ಜಾನುವಾರು ಗಣತಿಯ ಪ್ರಕಾರ ಈ ಜಿಲ್ಲೆಯ ಜಾನುವಾರುಗಳ ಸಂಖ್ಯೆ ೬,೬೩,೯೫೭. ಇವುಗಳಲ್ಲಿ ಕೆಲಸಕ್ಕೆ ಬರುವಂಥವು ೨,೭೮,೦೦೬. ಅಂದರೆ ಇದು ಒಟ್ಟು ಜಾನುವಾರುಗಳ ಶೇಕಡ ೩೬ರಷ್ಟು. ೧೯೬೬ರಲ್ಲಿ ಎತ್ತುಗಳ ಸಂಖ್ಯೆ ೧,೫೮,೨೧೦: ಕೋಣಗಳ ಸಂಖ್ಯೆ ೧,೨೮,೮೧೪ ಇವೆಲ್ಲ

ಮೂರು ವರ್ಷ ಮೇಲಿನವು. ಪಸುಗಳು ೨.೧೧.೪೮೫. ಎಮ್ಮೆಗಳು ೪೮.೯೩೪. ಹಾಲು ಹಿಂಡುವ ಪಸುಗಳು ೯೪.೧೭೮. ಕರು ಹಾಕದ ಹಸುಗಳು ೨೫.೨೮೪. ಹಾಲು ಕೊಡದ ಹಸುಗಳು ೮೬.೦೭೨. ಹಾಲು ಹಿಂಡುವ ಎಮ್ಮೆಗಳು ೨೪.೮೮೦. ಹಾಲು ಕೊಡದ ಎಮ್ಮೆಗಳು ೧೮.೧೭೧. ಕರು ಹಾಕದ ಎಮ್ಮೆಗಳು ೪.೫೭೦. ಇವೆಲ್ಲ ಮೂರು ವರ್ಷದ ಮೇಲಿನವು. ಮೂರು ವರ್ಷದ ಕೆಳಗಿನ ಎಮ್ಮೆ ೨೭.೩೪೪. ಒಟ್ಟು ಹಸುಗಳು ೨.೦೦.೧೪೯ ಮತ್ತು ಮೂರು ವರ್ಷದ ಕೆಳಗಿನ ಎಮ್ಮೆ ೨೭,೩೪೪. ಒಟ್ಟು ಹಸುಗಳು ೫೭೦.೮೮೪ ಮತ್ತು ಎಮ್ಮೆಗಳು ೨.೦೫.೦೯೨. ೧೯೭೩–೭೪ರಲ್ಲಿ ದಕ್ಷಿಣ ಕನ್ನಡದಲ್ಲಿ ಒಟ್ಟು ಹಸು ಮತ್ತು ಎತ್ತುಗಳ ಸಂಖ್ಯೆ ೬,೧೯,೫೫೮, ಕೋಣಗಳು ಮತ್ತು ಎಮ್ಮೆಗಳ ಸಂಖ್ಯೆ ೨,೦೨,೭೮೬. ಹೀಗೆ ಒಟ್ಟು ದನಗಳ ಸಂಖ್ಯೆ ೮,೨೨,೩೪೪.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡು ವೆಟರ್ನರಿ ಹಾಸ್ಪಿಟಲುಗಳು, ೧೪ ವೆಟರ್ನರಿ ಆಸ್ಪತ್ರೆಗಳು, ೨೫ ಗ್ರಾಮೀಣ ವೆಟರ್ನರಿ ಆಸ್ಪತ್ರೆಗಳು. ಮೂರು ಪ್ರಥಮ ಚಿಕಿತ್ಸೆ ವೆಟರ್ನರಿ ಕೇಂದ್ರಗಳು. ೯ ಶಿಬಿರ ವೆಟರ್ನರಿ ಕೇಂದ್ರಗಳು. ೯ ಶಿಬಿರ ವೆಟರ್ನರಿ ಆಸ್ಪತ್ರೆಗಳು. ಒಂದು ಪ್ರಾದೇಶಿಕ ಮೊಟ್ಟೆ ಫಾರ್ಮು, ಒಂದು ಜಿಲ್ಲಾ ಜಾನುವಾರು ಫಾರ್ಮು. ೪೦ ಖಾಸಗಿ ಮೊಟ್ಟೆ ಫಾರ್ಮುಗಳು. ೧೯೬೨–೬೩. ೧೯೭೧–೭೨ರ ಈ ಅವಧಿಯಲ್ಲಿ ೧.೪೨.೩೭೪ ದನಗಳಿಗೆ ಕೃತಕಗರ್ಭಧಾರಣೆ ಮಾಡಿಸಿದಾರೆ. ಇದರಿಂದ ಹುಟ್ಟಿದ ಗಂಡು ಕರುಗಳು ೨೧.೮೨೨: ಹೆಣ್ಣು ಕರುಗಳು ೨೫.೨೩೦. ೧೯೭೦ರಲ್ಲಿ ಈ ಜಿಲ್ಲೆಯಲ್ಲಿ ೨೮ ವೆಟರ್ನರಿ ಅಸಿಸ್ಟೆಂಟ್ ಸರ್ಜನ್ನರು, ೭೧ ವೆಟರ್ನರಿ ಮತ್ತು ಲಿವಸ್ಟೋಕ್ ಇನ್ಸ್ಪೆಕ್ಟರುಗಳು ೮೭ ವೆಟರ್ನರಿ ಕಂಪೌಂಡರು ಮತ್ತು ೭೫ ಪೇದೆಗಳು.

ತಾಲೂಕು ಅಭಿವೃದ್ಧಿ ಮಂಡಳಿಗಳು ಗೋಆಸ್ಪತ್ರೆಗಳನ್ನು ನಡೆಸುತ್ತಿವೆ. ಅಲ್ಲದೆ ಸರಕಾರದ ಜಾನುವಾರು ಆಸ್ಪತ್ರೆಗಳಿಗೆ ಧನ ಸಹಾಯ ಮಾಡುತ್ತದೆ. ಅದಮಾರು. ಶಿರ್ವ, ಕಾಪು. ಕುಕ್ಕೆಹಳ್ಳಿ, ಮಲ್ಪೆ ಮತ್ತು ಕೋಟೆ–ಈ ಸರಕಾರಿ ಜಾನುವಾರು ದವಾಖಾನೆಗಳಿಗೆ ಉಡುಪಿ ತಾಲೂಕು ಬೋರ್ಡು ಸಹಾಯಧನ ನೀಡಿದೆ. ಕಲ್ಯಾಣಪುರ. ಹಿರಿಯಡ್ಕ ಮತ್ತು ಪಡುಬಿದ್ರೆಗಳಲ್ಲಿ ಜಾನುವಾರು ಆಸ್ಪತ್ರೆಗಳನ್ನು ತೆರೆಯಲು ಸರಕಾರದ ಅನುಮತಿ ಸಿಕ್ಕಿದೆ. ಮಣಿಪುರ. ಶಿರೂರು–೫೧ ಮತ್ತು ಫಲಿಮಾರುಗಳಲ್ಲಿ ಗೋಆಸ್ಪತ್ರೆಗಳನ್ನು ತೆರೆಯಲು ಸರಕಾರದ ಅನುಮತಿಯನ್ನು ೧೯೭೪–೭೫ರಲ್ಲಿ ಕೇಳಲಾಗಿತ್ತು. ಪುತ್ತೂರು ತಾಲೂಕಿನ ಕಡಬ, ಪಾಣಾಜೆ ಮತ್ತು ಕೋಡಿಂಬಾಡಿಯಲ್ಲಿರುವ ಸರಕಾರದ ಜಾನುವಾರು ಆಸ್ಪತ್ರೆಗಳಿಗೆ ಪುತ್ತೂರು ತಾಲೂಕು ಅಭಿವೃದ್ಧಿ ಮಂಡಳಿ ಧನಸಹಾಯ ಸಲ್ಲಿಸಿದೆ. ಬಂಟವಾಳ ತಾಲೂಕಿನಲ್ಲಿರುವ ಏಳು ಪಶುವೈದ್ಯ ಕೇಂದ್ರಗಳು ಇಲಾಖಾವತಿಯಿಂದ ನಡೆಯುತ್ತಿವೆ. ಬಂಟವಾಳ. ವೇಣೂರು. ಕುಂದಾಪುರ. ಕಾರ್ಕಳ. ಪುತ್ತೂರು, ಉಪ್ಪಿನಂಗಡಿ, ಸುಳ್ಯ, ಕಳಂಜೆ ಮೊದಲಾದವುಗಳ ಕಡೆ ಕೃತಕ ಗರ್ಭಧಾರಣೆ ಉಪಕೇಂದ್ರಗಳಿವೆ. ೧೯೭೩–೭೪ರಲ್ಲಿ ಬಂಟವಾಳದಲ್ಲಿ ೭, ಬೆಳ್ತಂಗಡಿಯಲ್ಲಿ ೩, ಕುಂದಾಪುರದಲ್ಲಿ ೮. ಕಾರ್ಕಳದಲ್ಲಿ ೬, ಮಂಗಳೂರಿನಲ್ಲಿ ೭, ಪುತ್ತೂರಿನಲ್ಲಿ ೫; ಸುಳ್ಯದಲ್ಲಿ ೫ ಮತ್ತು ಉಡುಪಿಯಲ್ಲಿ ೧೧ ಪಶುವೈದ್ಯ ಸಂಸ್ಥೆಗಳಿವೆ. ಅಂದರೆ ೧೯೭೪–೭೫ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದ ಪಶುವೈದ್ಯ ಸಂಸ್ಥೆಗಳು ೫೨.

೧೯೫೭ರಲ್ಲಿ ಕಿನ್ನಿಗೋಳಿಯಲ್ಲಿ ಕೀ ವಿಲೇಜ ಸ್ಕೀಮನ್ನು ಪ್ರಾರಂಭಿಸಿದರು. ಈ ಯೋಜನೆ ಹಳ್ಳಿಯ ಜಾನುವಾರು ಅಭಿವೃದ್ಧಿಗೆ ಕೀಲಿಕೈ. ಇದರ ಏಳು ಉಪಕೇಂದ್ರಗಳು ಮೆನ್ನಬೆಟ್ಟು, ಹಳೆಯಂಗಡಿ. ಕಾರ್ನಾಡ. ಮುಂಡಾಕೂರ, ಸುರತ್ಕಲ್. ಬಳಕುಂಜೆ. ನಿಡ್ಡೋಡಿ ಮತ್ತು ಗಂಜಿಮಠಗಳಲ್ಲಿ ಇವೆ. ೧೯೬೦ರಲ್ಲಿ ಬೀಜದನಗಳನ್ನು ವೃದ್ಧಿಗೊಳಿಸುವ ಯೋಜನೆಯನ್ನು ಪ್ರಾರಂಭಿಸಿದರು. ಇದರ ಮುಖ್ಯ ಕಾರ್ಯಾಲಯ ಉಡುಪಿ. ಎರಡು ಉಪಕೇಂದ್ರಗಳು ಕಲ್ಯಾಣಪುರ ಮತ್ತು ಹಿರಿಯಡ್ಕಗಳಲ್ಲಿ ಇವೆ. ಈ ಕೇಂದ್ರಗಳಿಗೆ ಬೇಕಾದ ವೀರ್ಯವನ್ನು ಮಂಗಳೂರಿನ ಕೃತಕ ಗರ್ಭಧಾರಣೆ ಕೇಂದ್ರ ಒದಗಿಸುತ್ತದೆ. ಕ್ರಾಸ್–ಬ್ರೀಡಿಂಗ್. ಬೀಜ ಒದಗಿಸುವುದು. ರೋಗ ನಿಯಂತ್ರಣ ಇತ್ಯಾದಿಗಳು ಈ ಯೋಜನೆಯ ಕಾರ್ಯಕ್ರಮಗಳು. ಇದರ ವೆಚ್ಚ ೨೮೫೫೨ ರೂ.

೧೯೫೦ರಲ್ಲಿ ಕೊಯ್ಯೂರಿನಲ್ಲಿ ಲೈವ್‌ಸ್ಟಾಕ್ ಫಾರ್ಮನ್ನು ಸ್ಥಾಪಿಸಿದರು. ಕೊಯ್ಯೂರು ಮಂಗಳೂರಿನಿಂದ ೩೮ ಮೈಲು ದೂರ ಪುತ್ತೂರು ತಾಲೂಕಿನಲ್ಲಿ ಇದೆ. ಈ ಫಾರ್ಮಿನ ವಿಸ್ತಾರ ೭೬೪ ಎಕ್ರೆಗಳು. ಈ ಫಾರ್ಮಿನಲ್ಲಿ ಧಾರವಾಡದ ಎಮ್ಮೆ, ಮುರ್ರಾ ಎಮ್ಮೆ ಮತ್ತು ಹಸುಗಳನ್ನು ಸಾಕುತ್ತಾರೆ. ಈ ಫಾರ್ಮ ೩೦೦-೪೦೦ ಲೀಟರ ಹಾಲನ್ನು ಉತ್ಪಾದಿಸುತ್ತಿದೆ. ಜರ್ಸಿ ತಳಿಯನ್ನು ಪ್ರಾರಂಭಿಸಲು ಜರ್ಸಿ ತಳಿಯ ಕೃತಕ ಗರ್ಭಧಾರಣೆಯನ್ನು ೧೯೭೧ರಿಂದ ಪ್ರಾರಂಭಿಸಲ್ಪಟ್ಟಿದೆ. ಈ ಫಾರ್ಮ್ ದನಗಳ ಮೇವು, ಅಭಿವೃದ್ಧಿ ಯೋಜನೆ, ಮಲೆನಾಡು ಹುಲ್ಲುಗಾವಲು ಪುನರ್ ನಿರ್ಮಾಣ ಯೋಜನೆ ಮತ್ತು ಲಿಫ್ಟ್ ಇರಿಗೇಶನ್ ಯೋಜನೆಗಳನ್ನು ಕೈಕೊಂಡಿದೆ.

೧೯೬೭ರಲ್ಲಿ ಸರಕಾರಿ ಡೈರಿಯನ್ನು ಮಂಗಳೂರಿನ ಕುಲಶೇಖರದಲ್ಲಿ ಪ್ರಾರಂಭಿಸಿದ್ದಾರೆ. ಈ ಡೈರಿಯಲ್ಲಿ ಮಂಗಳೂರು, ಬಂಟ್ವಾಳ ತಾಲೂಕು, ಉಡುಪಿ, ಪುತ್ತೂರು ಮತ್ತು ಬೆಳ್ತಂಗಡಿ ತಾಲೂಕುಗಳ ಕೆಲ ಭಾಗಗಳು ಹಾಲನ್ನು ಪೂರೈಸುತ್ತವೆ. ಈ ಡೈರಿಗೆ ೨,೭೯,೦೮೨ ಹಸುಗಳು ಮತ್ತು ೧,೫೫,೬೨೮ ಎಮ್ಮೆಗಳು ಹಾಲು ಒದಗಿಸುತ್ತವೆ. ಪ್ರತಿನಿತ್ಯ ೫೦೦೦ ಲೀಟರು ಹಾಲು ಸಂಗ್ರಹಿಸಲಾಗುತ್ತದೆ. ೨೭ ಹಾಲು ಉತ್ಪಾದಕ ಸಹಕಾರಿ ಸಂಘಗಳಿಂದ ಸುಮಾರು ೪೩೮೦ ಲೀಟರು ಮತ್ತು ಕೊಯ್ಯೂರಿನಿಂದ ೨೦೦ ಲೀಟರು ಹಾಲು. ೧೯೬೩-೬೪ರಲ್ಲಿ ಈ ಡೈರಿ ೩೫೫ ಲೀಟರ ಹಾಲು ಸಂಗ್ರಹಿಸಿತ್ತು. ಇದರಿಂದ ಬಂದ ಉತ್ಪನ್ನ ೩೯೦ ರೂ. ಖರ್ಚಾದ ಹಣ ೩೫೫೩ ರೂ. ೧೯೬೭-೬೮ರಲ್ಲಿ ಪಡೆದ ಹಾಲು ೮,೩೩,೪೦೬ ಲೀಟರು. ಬಂದ ಆದಾಯ ೧೦,೩೪,೯೨೨ ರೂ. ಆದ ಖರ್ಚು ೯,೪೩,೬೯೦ ರೂ. ೧೯೭೧-೭೨ರಲ್ಲಿ ಸಂಗ್ರಹಿಸಿದ ಹಾಲು ೧೧,೫೫,೨೧೨ ಲೀಟರು. ಬಂದ ಆದಾಯ ೧೭,೭೭,೯೩೭ ರೂ. ಆದ ಖರ್ಚು ೧೭,೩೫,೧೦೫ ರೂ. ೨೭ ಖಾಸಗಿ ಡೈರಿಗಳಿಂದ ಪ್ರತಿನಿತ್ಯ ೫೦೦೦ ಲೀಟರು ಹಾಲು ಸಂಗ್ರಹಿಸಲಾಗುತ್ತದೆ. ಖಾಸಗಿ ಡೈರಿಗಳು ಮನೆಗಳಿಗೆ, ಹೋಟೇಲುಗಳಿಗೆ ಮತ್ತು ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ಹಾಲನ್ನು ಪೂರೈಸುತ್ತಿವೆ.

ಈ ಜಿಲ್ಲೆಯ ಕೋಳಿ ಸಾಕಣೆಯ ವಿಷಯದಲ್ಲಿ ಕೆಲ ವಿಷಯಗಳನ್ನು ಹೇಳಬೇಕು. ೧೯೫೮ರಲ್ಲಿ ಮಂಗಳೂರಿನಲ್ಲಿ ಕೋಳಿ ಸಾಕಣೆ ವಿಸ್ತರಣೆ ಕೇಂದ್ರವನ್ನು ಸ್ಥಾಪಿಸಿದರು. ಇದಕ್ಕೆ ತಗಲಿದ ಖರ್ಚು ೪೫,೦೦೦ ರೂ. ಮಂಗಳೂರಿನ ಕೋಳಿ ಸಾಕಣೆ ವಿಸ್ತರಣೆ ಕೇಂದ್ರ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಕೋಳಿ ಸಾಕಣೆ ಕೇಂದ್ರ ಕೊಯ್ಯೂರು ೧೯೬೫ರಲ್ಲಿ ಒಂದಾದವು. ೬೫೦೦೦ ರೂ. ವೆಚ್ಚದಲ್ಲಿ ಪ್ರಾದೇಶಿಕ ಕೋಳಿ ಸಾಕಣೆ ಫಾರ್ಮನ್ನು ಕೊಯ್ಯೂರಿನಲ್ಲಿ ಸ್ಥಾಪಿಸಿದರು. ೧೯೬೭ರಲ್ಲಿ ಇದರ ಮುಖ್ಯ ಕಾರ್ಯಾಲಯ ಮಂಗಳೂರಿಗೆ. ೧೯೭೧ರಲ್ಲಿ ಈ ಪ್ರಾದೇಶಿಕ ಕೋಳಿ ಸಾಕಣೆ ಕೇಂದ್ರ ಒಡೆಯಿತು. ಕೊಯ್ಯೂರು ಕೋಳಿ ಸಾಕಣೆ ಫಾರ್ಮ್ ಪ್ರತ್ಯೇಕವಾಯಿತು. ಕುಂದಾಪುರದಲ್ಲಿ ಕೋಳಿ ಸಾಕಣೆ ವಿಸ್ತರಣೆ ಕೇಂದ್ರ ಇದೆ. ಕೋಳಿ ಸಾಕಣೆ ಅಭಿವೃದ್ಧಿ ಯೋಜನೆ ಕಾರ್ಯಮಗ್ನವಾಗಿದೆ. ೧೯೬೪ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಕೋಳಿ ಸಾಕುವವರ ಸಹಕಾರಿ ಸಂಘ ನಿಯಮಿತ ಮಂಗಳೂರಿನಲ್ಲಿ ಪ್ರಾರಂಭವಾಗಿದೆ.

೧೯೬೮-೬೯ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಕೋಳಿಗಳು ೧೧,೬೩,೨೨೨. ಇವುಗಳಲ್ಲಿ ಬಂಟ್ವಾಳ ತಾಲೂಕಿನ ೧,೫೧,೪೯೨; ಬೆಳ್ತಂಗಡಿಯಲ್ಲಿ ೧,೦೨,೭೩೨; ಕುಂದಾಪುರದಲ್ಲಿ ೨,೦೨,೫೯೭; ಕಾರ್ಕಳದಲ್ಲಿ ೧,೩೩,೭೮೫; ಮಂಗಳೂರಿನಲ್ಲಿ ೧,೬೪,೬೬೬; ಪುತ್ತೂರಿನಲ್ಲಿ ೧,೨೭,೫೫೧; ಸುಳ್ಯದಲ್ಲಿ ೬೬,೨೭೧ ಮತ್ತು ಉಡುಪಿಯಲ್ಲಿ ೨,೨೩,೦೨೦ ಕೋಳಿಗಳು. ಕೋಳಿಗಳ ಅಭಿವೃದ್ಧಿಗೆ ಸಮುದಾಯ ಅಭಿವೃದ್ಧಿ ಯೋಜನೆ ತುಂಬ ಪ್ರೋತ್ಸಾಹ ನೀಡುತ್ತಲೇ ಬಂದಿದೆ.

ಕೃಷಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಗುವಳಿಯೇ ಮುಖ್ಯ ವ್ಯವಸಾಯ. ದಕ್ಷಿಣ ಕನ್ನಡ ಜಿಲ್ಲೆಯ ಎಂಟು ತಾಲೂಕು ಅಭಿವೃದ್ಧಿ ಮಂಡಳಿಗಳು ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ಅಭಿವೃದ್ಧಿಗಾಗಿ ಸಕಾಲಿಕ ಮತ್ತು ಸೂಕ್ತ ಕ್ರಮಗಳನ್ನು ಕೈಕೊಂಡಿವೆ. ೧೯೬೬ರಿಂದ ಭಾರತದಲ್ಲಿ ರಾಸಾಯನಿಕ ಗೊಬ್ಬರ ಮತ್ತು ಅಧಿಕೋತ್ಪತ್ತಿ ಬೀಜಗಳ ಮೂಲಕ ಉಂಟಾದ ಹಸಿರು ಕ್ರಾಂತಿ ಇಲ್ಲವೆ ಕೃಷಿ ಕ್ರಾಂತಿಗೆ ದಕ್ಷಿಣ ಕನ್ನಡ

ಜಿಲ್ಲೆಯ ತಾಲೂಕು ಅಭಿವೃದ್ಧಿ ಮಂಡಳಿಗಳು ಸಹ ಪ್ರೋತ್ಸಾಹ ನೀಡಿವೆ. ಹಸಿರು ಕ್ರಾಂತಿಯನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಂಟು ಮಾಡಲು ಪ್ರಯತ್ನಿಸಿವೆ. ಕೃಷಿಯ ಲೋಪದೋಷಗಳನ್ನು ನಿವಾರಿಸಿ ಕೃಷಿ ಉತ್ಪನ್ನತೆಯನ್ನು ಮತ್ತು ಉತ್ಪಾದನೆಯನ್ನು ಹೆಚ್ಚಿಸಲು ಪ್ರಯತ್ನಿಸಿದ.

ಈ ಜಿಲ್ಲೆಯಲ್ಲಿ ಮುಖ್ಯ ಬೆಳೆ ಭತ್ತ. ಒಟ್ಟು ಉತ್ಪಾದನೆಯಲ್ಲಿ ಭತ್ತದ ಬೆಳೆಯ ಪಾಲು ಶೇಕಡ ೮೦ರಷ್ಟು. ಇಲ್ಲಿ ನೀರಾವರಿಯ ಸೌಲಭ್ಯಗಳನ್ನು ಅವಲಂಬಿಸಿ ಮೂರು ಬೆಳೆಗಳನ್ನು ಬೆಳೆಯುತ್ತಾರೆ. ಬೈಲು ಭೂಮಿಯಲ್ಲಿ ಮೂರು ಬೆಳೆಗಳನ್ನು, ಮಜಲು ಭೂಮಿಯಲ್ಲಿ ಎರಡು ಬೆಳೆಗಳನ್ನು ಮತ್ತು ಗುಡ್ಡ ಭೂಮಿಯಲ್ಲಿ ಒಂದು ಬೆಳೆಯನ್ನು ಬೆಳೆಸುತ್ತಾರೆ. ಮೊದಲ ಬೆಳೆಯಲ್ಲಿ ಭತ್ತ, ರಾಗಿ, ಮೆಣಸು, ಶುಂಠಿ, ಎಳ್ಳು ಮತ್ತು ತರಕಾರಿಗಳನ್ನು, ಎರಡನೇ ಬೆಳೆಯಲ್ಲಿ ಭತ್ತ, ರಾಗಿ, ಮೆಣಸು, ಹುರುಳಿ, ಹೆಸರು, ಉದ್ದು ಮತ್ತು ತರಕಾರಿಗಳನ್ನು. ಮೂರನೇ ಬೆಳೆಯಲ್ಲಿ ಭತ್ತ, ಗೆಣಸು, ರಾಗಿ ಮತ್ತು ಕಬ್ಬುಗಳನ್ನು ಬೆಳೆಸುತ್ತಾರೆ. ಕೃಷಿ ಇಲಾಖೆ ಮೊದಲ ಬೆಳೆಗೆ ಪಿಟಿಬಿ–೯, ಪಿಟಿಬಿ–೧೦, ಎಂಟಿಯು–೩, ಎಂಟಿಯು–೨೦, ಎಂಪಿಪಿಲ್ ಬೀಜಗಳನ್ನು; ಎರಡನೇ ಬೆಳೆಗೆ ಸಿಓ–೧೪, ಸಿಓ–೨೫, ಪಿಟಿಬಿ–೨೦ ಬೀಜಗಳನ್ನು; ಮೂರನೇ ಬೆಳೆಗೆ ಪಿಟಿಬಿ–೯, ಪಿ.ಟಿಬಿ–೧೪೦, ಎಂಟಿಯು–೨೦ ಬೀಜಗಳನ್ನು ಶಿಫಾರಸು ಮಾಡಿದೆ. ಇವುಗಳಲ್ಲಿ ಪಿಟಿಬಿ–೯ ಮತ್ತು ಎಂಟಿಯು–೩ ಈ ಬೀಜಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತುಂಬ ಪ್ರಸಿದ್ಧವಾಗಿವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇಕಡ ೬೦ರಷ್ಟು ಜನರು ಕೃಷಿಕರು. ಇಲ್ಲಿ ಎಲ್ಲ ಜಾತಿಯ ಜನರು ಕೃಷಿಯಲ್ಲಿ ತೊಡಗಿದ್ದಾರೆ. ಬಂಟರು, ಕ್ರಿಶ್ಚಿಯನ್ನರು, ಬ್ರಾಹ್ಮಣರು, ಮತ್ತು ಜೈನರು ಭೂಮಾಲಿಕರು. ಇವರಲ್ಲಿ ಬಂಟರ ಜಾತಿಯವರಲ್ಲಿ ಭೂಮಾಲೀಕರ ಸಂಖ್ಯೆ ಹೆಚ್ಚು. ಬ್ರಾಹ್ಮಣರಲ್ಲಿ ಹವ್ಯಕರು ಅಡಿಕೆ ತೋಟದ ಮಾಲಿಕರು. ಪುತ್ತೂರು ತಾಲೂಕಿನಲ್ಲಿ ಇವರ ಸಂಖ್ಯೆ ಹೆಚ್ಚು. ಕರ್ನಾಟಕದ ಭೂ ಸುಧಾರಣೆ ಶಾಸನವನ್ನು ಸಂಪೂರ್ಣವಾಗಿ ಜಾರಿಗೆ ತಂದಾಗ ಅದು ಬಂಟರ, ಕ್ರಿಶ್ಚಿಯನ್ನರ ಮತು ಜೈನರ. ಭೂಮಾಲೀಕತ್ವಕ್ಕೆ ದೊಡ್ಡ ಪೆಟ್ಟು ಕೊಡುತ್ತದೆ. ಇವರಲ್ಲಿ ಹೆಚ್ಚಿನ ಪೆಟ್ಟು ಬಂಟರ ಜಾತಿಯವರಿಗೆ ಹೆಚ್ಚಿನ ಭೂಮಿಯನ್ನು ಕಳೆದುಕೊಳ್ಳುವವರು ಬಂಟರು. ಗೇಣಿದಾರರಾಗಿ ನೆಲೆಸಿದ್ದ ಬಿಲ್ಲವರು ಮತ್ತು ಇತರ ಜಾತಿಯವರು ಭೂ ಶಾಸನ ಜಾರಿಯಿಂದ ಹೆಚ್ಚಿನ ಪ್ರಯೋಜನ ಪಡೆಯುತ್ತಾರೆ– ಈ ಕೆಳಗೆ ಕೊಟ್ಟ ಮಾಹಿತಿ ಫಲಕವು (A) ದಕ್ಷಿಣ ಕನ್ನಡ ಜಿಲ್ಲೆಯ ಒಟ್ಟು ಜನಸಂಖ್ಯೆ, ತಾಲೂಕುವಾರು ಜನಸಂಖ್ಯೆ. ಕಾರ್ಮಿಕರು, ಕೃಷಿ ಕಾರ್ಮಿಕರು, ಕೃಷಿಕರು, ಇತ್ಯಾದಿಗಳ ಬಗ್ಗೆ ಮಾಹಿತಿ ನೀಡುತ್ತದ.

ಮಂಗಳೂರು, ಕುಂದಾಪುರ. ಬಂಟವಾಳ ಮತ್ತು ಕಾರ್ಕಳ ತಾಲೂಕುಗಳ ಜನಸಂಖ್ಯೆ ಹೆಚ್ಚು. ಮಂಗಳೂರು, ಉಡುಪಿ ಮತ್ತು ಬಂಟವಾಳ ತಾಲೂಕುಗಳಲ್ಲಿ ಕಾರ್ಮಿಕರ ಸಂಖ್ಯೆ ಹೆಚ್ಚು. ಉಡುಪಿ, ಕುಂದಾಪುರ, ಕಾರ್ಕಳ. ಬಂಟವಾಳ ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ಕೃಷಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಒಟ್ಟು ಕಾರ್ಮಿಕರ ಶೇಕಡ ಸುಮಾರು ೬೦ರಷ್ಟು ಕೃಷಿಕರು ಮತ್ತು ಸುಮಾರು ೨೪ರಷ್ಟು ಕೃಷಿ ಕಾರ್ಮಿಕರು.

ದಕ್ಷಿಣ ಕನ್ನಡ ಜಿಲ್ಲೆಯ ಕೃಷಿಕರು ಭೂಹಿಡುವಳಿಯ ಸಮಸ್ಯೆಯನ್ನು ಎದುರಿಸಬೇಕಾಗಿದೆ. ಕೆಳಗೆ ಕೊಟ್ಟ ಮಾಹಿತಿ ಫಲಕವು (B) ಭೂ ಹಿಡುವಳಿಯ ಕುರಿತು ನೈಜ ಚಿತ್ರವನ್ನು ನೀಡುತ್ತದೆ.

ಭೂ ಹಿಡುವಳಿ ಕುರಿತಾದ ಮಾಹಿತಿ–ಫಲಕವನ್ನು ನೋಡಿದಾಗ ನಮಗೆ ಕೆಲವೊಂದು ಅಂಶಗಳು ಸ್ಪಷ್ಟವಾಗುತ್ತವೆ: ಅರ್ಧಕ್ಕಿಂತ ಕಡಿಮೆ ಹೆಕ್ಟೇರು ಇದ್ದ ಭೂಹಿಡುವಳಿಗಳೇ ಹೆಚ್ಚು. ಇಂಥ ಭೂಹಿಡುವಳಿಗಳನ್ನು ಸಾಗುವಳಿ ಮಾಡುವ ಕೃಷಿಕರಿಗೆ ಕೃಷಿಯಾಂತ್ರೀಕರಣದ ಕುರಿತು ಆಲೋಚಿಸಲು ಸಾಧ್ಯವೇ ಇಲ್ಲ. ಕೃಷಿಗೆ ಬೇಕಾದ ಟ್ರಾಕ್ಟರು ಮತ್ತು ಕೃಷಿ ಯಂತ್ರೋಪಕರಣಗಳನ್ನು ಕೊಳ್ಳುವುದು ಸಾಧ್ಯವಿಲ್ಲ. ಇವುಗಳನ್ನು ವೈಜ್ಞಾನಿಕವಾಗಿ ಉಪಯೋಗಿಸಲು ಇಂಥ ಅರ್ಥಿಕ ಹಿಡುವಳಿಗಳಲ್ಲಿ ಅಸಾಧ್ಯ. ಇಂಥ ಸಾಗುವಳಿದಾರರಿಗೆ ಕೃಷಿ ರಾಸಾಯನಿಕರಣ ಇಲ್ಲವೆ ಜಪಾನೀ ಪದ್ಧತಿಯ ಬೇಸಾಯ ಪ್ರಾಯೋಗಿಕ ಎಂದು ಅನಿಸದು. ಸಾಗುವಳಿ ಯೋಗ್ಯ ಭೂಮಿಯ ಫಲ ದ್ರೂಪತೆಯನ್ನು ಹೆಚ್ಚಿಸುವ ದುಬಾರಿಯಾದ ರಾಸಾಯನಿಕ ಗೊಬ್ಬರಗಳನ್ನು ಕೊಳ್ಳಲು ಬೇಕಾದ

ತಾಕತ್ತು ಸಹ ಇವರಿಗೆ ಇಲ್ಲದಿರಬಹುದು. ದಕ್ಷಿಣ ಕನ್ನಡ ಜಿಲ್ಲೆ ಭೂಹಿಡುವಳಿಯ ಸಮಸ್ಯೆಯನ್ನು ಎದುರಿಸುತ್ತಿದೆ. ಇಲ್ಲಿಯ ಶೇಕಡಾ ಭೂ ಹಿಡುವಳಿ ಅರ್ಧ ಎಕರೆ. ಸುಮಾರು [illegible] ಭೂ ಹಿಡುವಳಿಗಳ ಕ್ಷೇತ್ರ ಎರಡು ಹೆಕ್ಟೇರುಗಳು ಅಥವಾ ಅದಕ್ಕಿಂತ ಕಡಿಮೆ. ಇಂಥ ಭೂ ಹಿಡುವಳಿಗಳು ಕೃಷಿ ಉತ್ಪನ್ನದ ಬೆಳೆಯನ್ನು ಮತ್ತು ಉತ್ಪಾದನೆಯನ್ನು ಹೆಚ್ಚಿಸವು. ಇಲ್ಲಿ ಕೃಷಿ ಯಾಂತ್ರೀಕರಣ ಮತ್ತು ಕೃಷಿ ರಾಸಾಯನೀಕರಣ ವೈಯಕ್ತಿಕ ಮಟ್ಟದಲ್ಲಿ ಅಸಾಧ್ಯ ಎಂದೇ ಹೇಳಬೇಕು. ಸಹಕಾರಿ ಮಟ್ಟದಲ್ಲಿ ಇದು ಸಾಧ್ಯವಾಗಬಹುದು. ಆದರೆ ಸಹಕಾರಿ ಸಾಗುವಳಿ ಸಂಘಗಳ ಸಂಘಟನೆಗೆ ಇಲ್ಲಿ ಅನೇಕ ತೊಂದರೆಗಳಿವೆ. [illegible] ಭೂ ಹಿಡುವಳಿಗಳು ಒಟ್ಟು ಭೂ ಹಿಡುವಳಿಗಳ ಅರ್ಧದಷ್ಟು. ಈ ಭೂ ಹಿಡುವಳಿಗಳನ್ನು ಸಾಗುವಳಿ ಯೋಗ್ಯ ಭೂ ಹಿಡುವಳಿಗಳನ್ನಾಗಿ ಪರಿವರ್ತಿಸಬೇಕು. ಇದಕ್ಕಾಗಿ ಸರಕಾರ ಕಾಯ್ದೆಯನ್ನು ಜಾರಿಗೆ ತಂದಿದೆ. ಈ ಕಾಯ್ದೆ 'ದಿ ಪ್ರಿವೆನ್ಶನ್ ಆಫ್ ಫ್ರಾಗ್ಮೆಂಟೇಶನ್ ಅಂಡ್ ಕನ್ಸಾಲಿಡೇಶನ್ ಆಕ್ಟ್ [illegible]'. ಈ ಕಾಯ್ದೆ [illegible] ಮೇ ತಿಂಗಳ ಒಂದನೇ ತಾರೀಕಿನಿಂದ ಜಾರಿಯಲ್ಲಿದೆ. ಈ ಕಾಯ್ದೆಯ ಸಫಲತೆ ಜನತೆ, ಕೃಷಿಕರ ಸಹಕಾರ ಮತ್ತು ಅಧಿಕಾರಿ ವರ್ಗದ ಕಾರ್ಯದಕ್ಷತೆಯ ಮೇಲೆ ಅವಲಂಬಿಸಿದೆ.

ಭೂ ಹಿಡುವಳಿಯ ಕ್ಷೇತ್ರ ಹೆಚ್ಚುತ್ತ ಹೋದಂತೆ ಭೂ ಹಿಡುವಳಿಗಳ ಸಂಖ್ಯೆ ಕಡಿಮೆಯಾಗುತ್ತ ಹೋಗುತ್ತದೆ. ಅರ್ಧ ಹೆಕ್ಟೇರು ಕ್ಷೇತ್ರಕ್ಕಿಂತ ಕಡಿಮೆ ಕ್ಷೇತ್ರ ಇದ್ದ ಭೂಹಿಡುವಳಿಗಳ ಸಂಖ್ಯೆ [illegible] ಆದರೆ [illegible] ಹೆಕ್ಟೇರು ಕ್ಷೇತ್ರದ ಹಿಡುವಳಿಗಳು [illegible] ಹೆಕ್ಟೇರು ಮತ್ತು ಅದಕ್ಕೆ ಮೇಲಿನ ಕ್ಷೇತ್ರದ ಭೂ ಹಿಡುವಳಿಗಳು ಕೇವಲ [illegible]. ಭೂ ಹಿಡುವಳಿಯು ಗಾತ್ರ ಅರ್ಧ ಹೆಕ್ಟೇರಿಗಿಂತ ಕಡಿಮೆ ಇದ್ದ ಒಟ್ಟು ಕ್ಷೇತ್ರ [illegible] ಹೆಕ್ಟೇರುಗಳು. ಅರ್ಧದಿಂದ ಒಂದು ಹೆಕ್ಟೇರು ಗಾತ್ರದ ಭೂ ಹಿಡುವಳಿಗಳಿಂದ ಕ್ಷೇತ್ರ [illegible] ಹೆಕ್ಟೇರು. ೧೦ ರಿಂದ ೨೦ ಹೆಕ್ಟೇರು ಗಾತ್ರದ ಭೂಹಿಡುವಳಿಯು ಕ್ಷೇತ್ರ [illegible] ಹೆಕ್ಟೇರುಗಳು. ೨೦ ಮತ್ತು ಅದಕ್ಕಿಂತ ಮೇಲಿನ ಗಾತ್ರದ ಭೂಹಿಡುವಳಿಯು ಕ್ಷೇತ್ರ [illegible] ಹೆಕ್ಟೇರುಗಳು.

ಈ ಮಾಹಿತಿ ಪಟ್ಟಿಯಿಂದ ಇನ್ನೂ ಕೆಲವು ಅಂಶಗಳು ಸ್ಪಷ್ಟವಾಗುತ್ತವೆ: ಸ್ವಂತ ಸಾಗುವಳಿ ಸಂಪೂರ್ಣ ಒಡೆತನ ಮತ್ತು ಸಂಪೂರ್ಣ ಗೇಣಿಗೆ ಕೊಟ್ಟ ಭೂಹಿಡುವಳಿಗಳ ಬಗ್ಗೆ ಸಹ ನಮಗೆ ಮಾಹಿತಿ ಸಿಗುತ್ತದೆ. ಗೇಣಿಗೆ ಕೊಟ್ಟ ಭೂಮಿ ಈಗ ಕೃಷಿಕರ-ಗೇಣಿದಾರರಿಗೆ. ಈ ಭೂಮಿ ಅವರಿಗೆ ಈಗ ಸೇರಿದ್ದು. ಭೂ ಮಾಲೀಕರು ಗೇಣಿಗೆ ಕೊಟ್ಟ ಭೂಮಿಯಿಂದ ಹಣ ಮತ್ತು ಧಾನ್ಯಗಳ ರೂಪದಲ್ಲಿ ಗೇಣಿ ಪಡೆಯುತ್ತಿದ್ದರು. ಭೂಮಾಲಿಕ ಭೂಮಿಯನ್ನು ಅನ್ಯರಿಗೆ ಸಾಗುವಳಿ ನೀಡುತ್ತಿದ್ದ. ಒಂದು ಫಸಲಿನಲ್ಲಿ ಪಾಲು ಪಡೆಯುವ ಆಧಾರದ ಮೇಲೆ ಅಂದರೆ ಒಂದು ಉತ್ಪನ್ನದಲ್ಲಿ ಭೂಮಾಲೀಕನಿಗೆ ಮತ್ತು ಸಾಗುವಳಿ ಮಾಡುವವನಿಗೆ ಇಂತಿಷ್ಟು ಪಾಲು ಎಂದು ನಿರ್ಧರಿಸಿಕೊಂಡು ಕರಾರು ಮಾಡುತ್ತಿದ್ದರು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿಕರ ಭೂಹಿಡುವಳಿಯು ಗಾತ್ರ ಕಡಿಮೆ ಇದ್ದರೂ ಇವರು ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗಿ ಆದಾಯ ಗಳಿಸುವುದನ್ನು ಬಲ್ಲರು. ನೀರಿನ ಸೌಲಭ್ಯ ಮತ್ತು ಭೂಮಿಯ ಫಲವತ್ತತೆಯನ್ನು ಅನುಸರಿಸಿ ಇಲ್ಲಿಯ ಕೃಷಿಕರು ಎರಡು ಮತ್ತು ಮೂರು ಬೆಳೆಯನ್ನು ಪಡೆಯುತ್ತಾರೆ. ಸಾಗುವಳಿ ಮುಗಿದ ನಂತರ ಇಲ್ಲವೆ ಸಾಗುವಳಿ ನಡೆಯುತ್ತಿದ್ದಾಗಲೇ ಸಿಕ್ಕ ಸಮಯದಲ್ಲಿ ಬೀಡಿ ಕಟ್ಟುವ ಇಲ್ಲವೆ ಇತರ ಗುಡಿಕೈಗಾರಿಕೆಯಲ್ಲಿ ತೊಡಗಿರುತ್ತಾರೆ. ಕೃಷಿ ಕಾರ್ಮಿಕರು ಸಹ ಇಂಥ ಉದ್ಯೋಗದಲ್ಲಿ ತೊಡಗಿರುತ್ತಾರೆ. ಉದ್ಯಮ ಸಾಹಸಿಗಳಾದ ಇಲ್ಲಿಯ ಜನ ದಕ್ಷಿಣ ಕನ್ನಡ ಜಿಲ್ಲೆಯಿಂದ ಹೊರಗೆ ಹೋಗಿ ಹೋಟೆಲು ಮೊದಲಾದ ಉದ್ಯಮಗಳಲ್ಲಿ ತೊಡಗಿರುತ್ತಾರೆ. ಇವರು ತಮ್ಮ ಊರಿನಲ್ಲಿ ಇರುವ ತಮ್ಮ ಸಂಬಂಧಿಕರಾದ ಕೃಷಿಕರಿಗೆ, ಗೇಣಿದಾರರಿಗೆ ಮತ್ತು ಕೃಷಿ ಕಾರ್ಮಿಕರಿಗೆ ಮನಿಯಾರ್ಡರುಗಳನ್ನು ಕಳಿಸುತ್ತಾರೆ. ಇದೊಂದು ಇಲ್ಲಿಯ ವೈಶಿಷ್ಟ್ಯ [illegible]. ಈ ಹಣ ಜೀವನೋಪಾಯಕ್ಕೆ ಮತ್ತು ಸಾಗುವಳಿಗೆ ಸಹಾಯವಾಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗ ಬೆಳೆಯುವ ಒಟ್ಟು ಕ್ಷೇತ್ರ [illegible] ಹೆಕ್ಟೇರು. ಸುಳ್ಯ, ಉಡುಪಿ, ಕಾರ್ಕಳ, ಕುಂದಾಪುರ ಮತ್ತು ಪುತ್ತೂರು ತಾಲೂಕುಗಳಲ್ಲಿ ಈ ಕ್ಷೇತ್ರ ಹೆಚ್ಚು. ಈ ಜಿಲ್ಲೆಯ ಸಾಗುವಳಿಯ ನಿವ್ವಳ ಭೂಮಿ [illegible] ಹೆಕ್ಟೇರುಗಳು. ಉಡುಪಿ, ಕಾರ್ಕಳ, ಕುಂದಾಪುರ,

ಮಂಗಳೂರು ಮತ್ತು ಬಂಟವಾಳ ತಾಲೂಕುಗಳಲ್ಲಿ ಸಾಗುವಳಿಗೆ ಸಿಗುವ ನಿವ್ವಳ ಭೂಮಿಯ ಕ್ಷೇತ್ರ ಹೆಚ್ಚಿದೆ. ಸಾಗುವಳಿಯ ನಿವ್ವಳ ಭೂಮಿಯಲ್ಲಿ ಭತ್ತ ಬೆಳೆಯುವ ಕ್ಷೇತ್ರ ೧.೭೫.೬೨೨ ಹೆಕ್ಟೇರುಗಳು. ಉಡುಪಿ. ಕುಂದಾಪುರ, ಕಾರ್ಕಳ. ಮಂಗಳೂರು. ಬಂಟವಾಳ ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ಭತ್ತ ಬೆಳೆಯುವ ಪ್ರದೇಶ ಹೆಚ್ಚು. ೧೯೭೪-೭೫ರಲ್ಲಿ ಉಡುಪಿ ತಾಲೂಕಿನಲ್ಲಿ ಭತ್ತ ಬೆಳೆಸುವ ಭೂಮಿಯ ವಿಸ್ತೀರ್ಣ: ಎಣೆಲು ಬೆಳೆ ಇಲ್ಲವೆ ಮೊದಲನೇ ಬೆಳೆ ೬೫.೧೬೪ ಎಕ್ರೆ. ಎರಡನೇ ಬೆಳೆ ಇಲ್ಲವೆ ಸುಗ್ಗಿ: ೧೯, ೨೨೨ ಎಕ್ರೆ. ಮೂರನೇ ಬೆಳೆ ಇಲ್ಲವೆ ಕಾರ್ತಿ ಬೆಳೆ ಇಲ್ಲವೆ ಕೊಳಕೆ ಬೆಳೆ:೩,೮೭೦ ಎಕ್ರೆ. ಮಂಗಳೂರು ತಾಲೂಕಿನಲ್ಲಿ ಎಣೆಲು ಬೆಳೆ ಬೆಳೆಸುವ ಪ್ರದೇಶ: ೫೫..೨೦೦ ಎಕ್ರೆ. ಸುಗ್ಗಿ ಬೆಳೆ: ೧೯.೦೫೦ ಎಕ್ರೆ. ಕಾರ್ತಿ ಬೆಳೆ: ೬.೬೭೦ ಎಕ್ರೆ. ಬಂಟವಾಳ ತಾಲೂಕಿನಲ್ಲಿ ಎಣೆಲು ಬೆಳೆ: ೨೪.೮೪೯ ಎಕ್ರೆ. ಸುಗ್ಗಿ ಬೆಳೆ: ೧೧.೦೬೩ ಎಕ್ರೆ. ಕಬೆಳೆ: ೨೭೭೧ ಎಕ್ರೆ. ಪುತ್ತೂರು ತಾಲೂಕಿನಲ್ಲಿ ೧೪,೩೮೮ ಎಕ್ರೆ. ಎಕ್ರೆ ಎಣೆಲು ಬೆಳೆಯಲ್ಲಿ. ೮.೦೬೦ ಎಕ್ರೆ ಸುಗ್ಗಿ ಬೆಳೆಯಲ್ಲಿ. ೬೪೧ ಎಕ್ರೆ ಕೊಳಕೆ ಬೆಳೆಯಲ್ಲಿ. ಕುಂದಾಪುರ ತಾಲೂಕಿನಲ್ಲಿ ೭೭,೭೩೩ ಎಕ್ರೆ, ಸುಳ್ಯ ತಾಲೂಕಿನಲ್ಲಿ ೧೬.೫೮೫ ಎಕ್ರೆ. ಬೆಳ್ತಂಗಡಿ ತಾಲೂಕಿನಲ್ಲಿ ೫೩.೫೪೦ ಎಕ್ರೆ ಮತ್ತು ಕಾರ್ಕಳ ತಾಲೂಕಿನಲ್ಲಿ ೭೮.೫೭೭ ಎಕ್ರೆ ಭೂಮಿ ಭತ್ತದ ಸಾಗುವಳಿಗೆ ಮೀಸಲು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದಕ್ಕಿಂತ ಹೆಚ್ಚು ಸಲ ಸಾಗುವಳಿ ಮಾಡುವ ಕ್ಷೇತ್ರ ೮೯೧೮ ಹೆಕ್ಟೇರುಗಳು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಗುವಳಿ ಮಾಡದೇ ಇದ್ದ ಬಂಜರು ಭೂಮಿ ೨,೭೬,೯೯೨ ಎಕ್ರೆಗಳು. ಪ್ರಸಕ್ತ ಬಂಜರು ಭೂಮಿ ೩೫,೦೭೭ ಹೆಕ್ಟೇರು. ಇತರ ಬಂಜರು ಭೂಮಿ ೧೯,೫೪೭ ಹೆಕ್ಟೇರು. ಪ್ರಸಕ್ತ ಬಂಜರು ಭೂಮಿ ತುಂಬ ಹೆಚ್ಚು ಇದ್ದದ್ದು ಕಾರ್ಕಳ ತಾಲೂಕಿನಲ್ಲಿ ೨೦.೭೮೨ ಹೆಕ್ಟೇರುಗಳು. ಇತರ ಬಂಜರು ಭೂಮಿ ತುಂಬ ಹೆಚ್ಚು ಇದ್ದುದು ಉಡುಪಿ ತಾಲೂಕಿನಲ್ಲಿ ೬.೮೧೩ ಹೆಕ್ಟೇರುಗಳು. ಬಂಜರು ಭೂಮಿಯನ್ನು ತೋಟಗಳನ್ನಾಗಿ ಪರಿವರ್ತಿಸಿ, ಈ ತೋಟಗಳಲ್ಲಿ ಮಾವು, ಚಿಕ್ಕು, ಅನಾನಸ ಮತ್ತು ಗೇಣಸು ಬೆಳೆಸುವ ಪ್ರಯತ್ನ ಯೋಗ್ಯವಾಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹುಲ್ಲುಗಾವಲು ಪ್ರದೇಶ ೩೩,೫೨೬ ಹೆಕ್ಟೇರುಗಳು. ಹುಲ್ಲುಗಾವಲು ಹೆಚ್ಚು ಇದ್ದ ಪ್ರದೇಶ ಸುಳ್ಯ. ಉಡುಪಿ, ಕುಂದಾಪುರ, ಪುತ್ತೂರು, ಬೆಳ್ತಂಗಡಿ ತಾಲೂಕುಗಳು. ಮರಗಳು ತೋಪುಗಳಿದ್ದ ಪ್ರದೇಶ ೯೪.೪೭೫ ಹೆಕ್ಟೇರುಗಳು. ಕಾರ್ಕಳ ಕುಂದಾಪುರ ಬೆಳ್ತಂಗಡಿ, ಉಡುಪಿ ಮತ್ತು ಪುತ್ತೂರುಗಳಲ್ಲಿ ಮರದ ತೋಪುಗಳು ಹೆಚ್ಚು. ಮಂಗಳೂರು ತಾಲೂಕಿನಲ್ಲಿ ಅರಣ್ಯವೇ ಇಲ್ಲ. ಈ ಜಿಲ್ಲೆಯ ಅರಣ್ಯ ಪ್ರದೇಶ ೨.೫೧.೯೭೪ ಹೆಕ್ಟೇರುಗಳು. ಕುಂದಾಪುರ, ಬೆಳ್ತಂಗಡಿ, ಸುಳ್ಯ ಕಾರ್ಕಳ ಮತ್ತು ಪುತ್ತೂರು ತಾಲೂಕುಗಳಲ್ಲಿ ಅರಣ್ಯ ಪ್ರದೇಶ ಹೆಚ್ಚಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯ ತಾಲೂಕುವಾರು ನೀರಾವರಿ ಮತ್ತು ಇತರ ಸೌಲಭ್ಯಗಳ ಬಗ್ಗೆ ಮಾಹಿತಿಯನ್ನು ಪದಕ ನೀಡುತ್ತದೆ.

ಈ ವಿದ್ಯುತ್‌ಶಕ್ತಿ ಪಡೆದ ಗ್ರಾಮಗಳು ಮತ್ತು ಪಟ್ಟಣಗಳು ೫೭೯. ನೀರಾವರಿ ವಿದ್ಯುತ್ ಪಂಪ್‌ಸೆಟ್‌ಗಳು ೧೭.೫೧೨. ಇವುಗಳ ಸಂಖ್ಯೆ ಉಡುಪಿ ತಾಲೂಕಿನಲ್ಲಿ ಹೆಚ್ಚು. ೫.೮೪೫ ಪಂಪು ಸೆಟ್ಟುಗಳು. ನಂತರ ಇವುಗಳ ಸಂಖ್ಯೆ ಮಂಗಳೂರು ತಾಲೂಕಿನಲ್ಲಿ ಹೆಚ್ಚು. ನೀರಾವರಿಗಾಗಿ ಡಿಸೆಲ್ ಪಂಪು ಸೆಟ್ಟುಗಳು ೬.೧೪೭. ಬಂಟವಾಳ, ಮಂಗಳೂರು ಮತ್ತು ಉಡುಪಿ ತಾಲೂಕುಗಳಲ್ಲಿ ಇವುಗಳ ಸಂಖ್ಯೆ ಹೆಚ್ಚು. ನೀರಾವರಿ ಸೌಲಭ್ಯಗಳಿಂದ ಸಾಗುವಳಿ ಮಾಡುವ ಭೂಮಿ ೭೪.೩೬೪ ಹೆಕ್ಟೇರು. ಉಡುಪಿ. ಬಂಟವಾಳ. ಕಾರ್ಕಳ. ಬೆಳ್ತಂಗಡಿ ಮತ್ತು ಮಂಗಳೂರು ತಾಲೂಕುಗಳಲ್ಲಿ ನೀರಾವರಿಯಿಂದ ಸಾಗುವಳಿಯಾಗುವ ಕ್ಷೇತ್ರ ಹೆಚ್ಚಿದೆ. ನೀರಾವರಿಯನ್ನು ಕೆರೆ. ಬಾವಿ ಮತ್ತು ಇತರ ಮೂಲಗಳಿಂದ ಪಡೆಯಲಾಗುತ್ತದೆ. ಇತರ ಮೂಲಗಳಿಂದ ೪೭.೧೭೯ ಹೆಕ್ಟೇರುಗಳಿಗೆ, ಬಾವಿಗಳಿಂದ ೨೦.೩೬೬ ಹೆಕ್ಟೇರುಗಳಿಗೆ ಮತ್ತು ಕೆರೆಗಳಿಂದ ೬.೬೮೮ ಹೆಕ್ಟೇರುಗಳಿಗೆ ನೀರಾವರಿ ಸೌಲಭ್ಯಗಳು ದೊರಕುತ್ತವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೀರಾವರಿ ಬಾವಿಗಳ ಸಂಖ್ಯೆ ೨೮.೬೪೫. ಈ ಬಾವಿಗಳಿಂದ ಈ ಜಿಲ್ಲೆಯಲ್ಲಿ ೨೦.೬೬೬ ಹೆಕ್ಟೇರುಗಳಿಗೆ ನೀರಾವರಿ ಸೌಲಭ್ಯ ದೊರಕುತ್ತಿದೆ. ದಕ್ಷಿಣ

ಕನ್ನಡ ಜಿಲ್ಲೆಯಲ್ಲಿ ಅಧಿಕೋತ್ಪತ್ತಿ ಬೀಜಗಳ ಬಿತ್ತನೆಗೆ ಒಳಪಟ್ಟ ಕ್ಷೇತ್ರ ೩೮, ೨೬೨ ಹೆಕ್ಟೇರುಗಳು. ಅಧಿಕೋತ್ಪತ್ತಿ ಬೀಜಗಳು ಐಆರ್.-೮. ಐಆರ್-೨೦, ಜಗನ್ನಾಥ, ಟಿಟಿಬಿ-೩೬. ೩೭, ೩೮, ಐಇಟಿ-೧೯೯೧. ಅಧಿಕೋತ್ಪತ್ತಿ ಬೀಜಗಳ ಬಿತ್ತನೆಗೆ ಒಳಪಟ್ಟ ಕ್ಷೇತ್ರ ಉಡುಪಿ. ಬಂಟವಾಳ, ಮಂಗಳೂರು. ಕಾರ್ಕಳ ಮತ್ತು ಪುತ್ತೂರು ತಾಲೂಕುಗಳಲ್ಲಿ ಹೆಚ್ಚು.

ದಕ್ಷಿಣ ಕನ್ನಡ ಜಿಲ್ಲೆಯ ತೋಟಗಾರಿಕೆ ಬೆಳೆಗಳ ತಾಲೂಕುವಾರು ವಿವರಣೆಯನ್ನು ಈ ಕೆಳಗಿನ D ಮಾಹಿತಿ ಪದಕ ನೀಡುತ್ತದೆ.

ಅಡಿಕೆ ಬೆಳೆಯಲ್ಲಿ ಪುತ್ತೂರು ತಾಲೂಕಿಗೆ ಪ್ರಥಮ ಸ್ಥಾನ ೫.೮೦೦ ಎಕರೆಗಳು. ನಂತರ ಸುಳ್ಯ, ಬಂಟವಾಳ. ಬೆಳ್ತಂಗಡಿ ಮತ್ತು ಕಾರ್ಕಳ ತಾಲೂಕುಗಳಲ್ಲಿ ಅಡಿಕೆ ಬೆಳೆಯುವ ಕ್ಷೇತ್ರ ಹೆಚ್ಚು. ಪುತ್ತೂರು ಕಡೆ ಬಿಟ್ಟ ಹಾಗಣೆ ಅಡಿಕೆಯನ್ನು ಮಂಗಳೂರು ಮಾರುಕಟ್ಟೆಗೆ ಮತ್ತು ಕುಂದಾಪುರ ಕಡೆಯ ಹೊನ್ನಾರ ಹಾಗಣೆ ಅಡಿಕೆಯನ್ನು ಶಿವಮೊಗ್ಗ ಮಾರುಕಟ್ಟೆಗೆ ಕಳಿಸುತ್ತಾರೆ. ಅಡಿಕೆಗೆ ಕೊಳೆರೋಗ ಬರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಡಿಕೆ ಬೆಳೆಯುವ ಒಟ್ಟು ಪ್ರದೇಶ ೧೦.೭೩೧ ಹೆಕ್ಟೇರುಗಳು. ಉಡುಪಿ ತಾಲೂಕಿನಲ್ಲಿ ತೆಂಗು ಬೆಳೆಯುವ ಪ್ರದೇಶ ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಹೆಚ್ಚು ೧೦.೯೮೬ ಎಕರೆಗಳು. ತೆಂಗು ಬೆಳೆಯುವ ಒಟ್ಟು ಪ್ರದೇಶ ೧೨.೩೫೦ ಹೆಕ್ಟೇರುಗಳು. ಒಂದು ಎಕರೆಗೆ ೭೫ ತೆಂಗಿನ ಮರಗಳು ಚೆನ್ನಾಗಿ ಬೆಳೆಯುತ್ತವೆ. ೧೯೨೨ರಲ್ಲಿ ಮೊಟ್ಟಮೊದಲ ಸಲ ತೆಂಗಿನ ಮರಗಳಿಗೆ ರೋಗ ಬಂದಿತ್ತು. ಇದನ್ನು ನಿವಾರಿಸಲು ಕೃಷಿ ಇಲಾಖೆ ತುಂಬ ಪ್ರಯತ್ನಿಸಿತ್ತು.

ಗೇರಿನ ತವರು ಮನೆ ದಕ್ಷಿಣ ಅಮೆರಿಕ. ನಾಲ್ಕುನೂರು ವರ್ಷಗಳ ಹಿಂದೆ ಪೋರ್ಚುಗೀಜರು ಇದನ್ನು ಭಾರತಕ್ಕೆ ತಂದರು. ಕಳೆದ ೨೫ ವರ್ಷಗಳಿಂದ ಈ ಬೆಳೆಗೆ ವಾಣಿಜ್ಯ ಮಹತ್ವ ಸಿಕ್ಕಿದೆ. ಬಂಟವಾಳ, ಕುಂದಾಪುರ ಮತ್ತು ಕಾರ್ಕಳ ತಾಲೂಕುಗಳಲ್ಲಿ ಗೇರನ್ನು ತುಂಬ ಹೆಚ್ಚಾಗಿ ಬೆಳೆಸುತ್ತಾರೆ. ಬೆಳ್ತಂಗಡಿ ತಾಲೂಕಿನಲ್ಲಿ ಕೋಕೋ ಬೆಳೆಸುವ ಪ್ರದೇಶ ೧೫೦ ಎಕರೆಗಳು. ಬಂಟವಾಳ ಮತ್ತು ಪುತ್ತೂರು ತಾಲೂಕುಗಳಲ್ಲಿ ವೀಳ್ಯದೆಲೆಗಳನ್ನು ಬೆಳೆಸುವ ಪ್ರದೇಶ ಹೆಚ್ಚು. ಬೆಳ್ತಂಗಡಿ ಮತ್ತು ಮಂಗಳೂರು ತಾಲೂಕುಗಳಲ್ಲಿ ಮೆಣಸು ಬೆಳೆಸುವ ಕ್ಷೇತ್ರ ಹೆಚ್ಚು. ಕುಂದಾಪುರ ಮತ್ತು ಉಡುಪಿ ತಾಲೂಕುಗಳಲ್ಲಿ ಮೆಣಸಿನಕಾಯಿ ಬೆಳೆಸಲು ಉಪಯೋಗಿಸಿದ ಪ್ರದೇಶ ಹೆಚ್ಚು. ಕಾರ್ಕಳ. ಮಂಗಳೂರು. ಬೆಳ್ತಂಗಡಿ. ಬಂಟವಾಳ ಮತ್ತು ಉಡುಪಿ ತಾಲೂಕುಗಳಲ್ಲಿ ಹೆಚ್ಚು ತರಕಾರಿಯನ್ನು ಬೆಳೆಸುತ್ತಾರೆ. ಕಾರ್ಕಳ. ಬಂಟವಾಳ ಮತ್ತು ಮಂಗಳೂರುಗಳಲ್ಲಿ ಶುಂಠಿಯನ್ನು ಬೆಳೆಸುವ ಪ್ರದೇಶ ಹೆಚ್ಚು. ಯಾಲಕ್ಕಿ ಬೆಳ್ತಂಗಡಿ ಮತ್ತು ಸುಳ್ಯ ತಾಲೂಕುಗಳಲ್ಲಿ ಮಾತ್ರ ಬೆಳೆಯುತ್ತದೆ. ಅರಸಿಣ ಕಾರ್ಕಳ ಮತ್ತು ಬೆಳ್ತಂಗಡಿ ತಾಲೂಕಿನಲ್ಲಿ ಹೆಚ್ಚು ಬೆಳೆಯುತ್ತದೆ. ಉಡುಪಿ ಮತ್ತು ಮಂಗಳೂರು ತಾಲೂಕುಗಳಲ್ಲಿ ಗೆಣಸು ಹೆಚ್ಚು ಬೆಳೆಯುತ್ತದೆ. ಜ್ಯೇಷ್ಠಮಧ ಬೆಳ್ತಂಗಡಿ ತಾಲೂಕಿನಲ್ಲಿ ಹೆಚ್ಚು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾಗಿ ಬೆಳೆಸುವ ಒಟ್ಟು ಕ್ಷೇತ್ರ ಹೆಕ್ಟೇರುಗಳು. ಹೆಚ್ಚು ರಾಗಿ ಬೆಳೆಸುವದು ೪೯೦ ಉಡುಪಿ ತಾಲೂಕಿನಲ್ಲಿ. ದ್ವಿದಳ ಧಾನ್ಯ ಬೆಳೆಸುವ ಕ್ಷೇತ್ರ ೧೮೦,೩೯೭ ಹೆಕ್ಟೇರುಗಳು. ಉಡುಪಿ ಮತ್ತು ಕುಂದಾಪುರಗಳಲ್ಲಿ ಈ ಬೆಳೆ ಬೆಳೆಸುವ ಕ್ಷೇತ್ರ ಹೆಚ್ಚು. ಕಬ್ಬು ಬೆಳೆಸುವ ಒಟ್ಟು ಕ್ಷೇತ್ರ ೧,೫೩೫ ಹೆಕ್ಟೇರುಗಳು. ಕುಂದಾಪುರ, ಮಂಗಳೂರು ಮತ್ತು ಉಡುಪಿ ತಾಲೂಕುಗಳಲ್ಲಿ ಕಬ್ಬು ಬೆಳೆಸುವ ಕ್ಷೇತ್ರ ಹೆಚ್ಚು.

ಉಡುಪಿ ತಾಲೂಕು ಅಭಿವೃದ್ಧಿ ಮಂಡಳಿ ೧೯೬೧-೬೨ರಿಂದ ೧೯೭೪-೭೫ರ ವರೆಗೆ ಸುಮಾರು ೨ ಲಕ್ಷ ಗೇರು ಅಡಿಕೆ ಸಸಿಗಳನ್ನು . ೨೫ ಸಾವಿರ ಹಣ್ಣಿನ ಸಸಿಗಳನ್ನು. ೭ ಸಾವಿರ ಪಪ್ಪಾಯಿ ಸಸಿಗಳನ್ನು ೬ ಸಾವಿರ ಬಾಳೆಗಿಡಗಳನ್ನು ಹಂಚಿದೆ. ಉಡುಪಿ ತಾಲೂಕು ಅಭಿವೃದ್ಧಿ ಮಂಡಳಿ ಕೈಕೊಂಡ ಇಂಥ ಕಾರ್ಯ ಕ್ರಮಗಳನ್ನು ದಕ್ಷಿಣ ಕನ್ನಡ ಜಿಲ್ಲೆಯ ಇತರ ತಾಲೂಕು ಅಭಿವೃದ್ಧಿ ಮಂಡಳಿಗಳು ಸಹ ಕೈಕೊಂಡಿವೆ.

ತೋಟಗಾರಿಕೆ ಬೆಳೆಗಳ ಅಭಿವೃದ್ಧಿಗಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವು ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ೧೯೭೨ರಲ್ಲಿ. ಗೇರು. ಮೆಣಸು. ಬಾಳೆಹಣ್ಣು. ಕೋಕೋ. ತೆಂಗು. ಹಣ್ಣು ತರಕಾರಿ. ಅಡಿಕೆ ಇವುಗಳಿಗಾಗಿ ೨೫ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿದ್ದಾರೆ. ೧೯೫೩ರಲ್ಲಿ

ಗೇರು ಸಂಶೋಧನ ಸಂಸ್ಥೆ (ಕ್ಯಾಷು ರೀಸರ್ಚ್ ಸ್ಟೇಷನ್)ಯನ್ನು ಮಂಗಳೂರು ತಾಲೂಕಿನ ಉಳ್ಳಾಲದಲ್ಲಿ ಸ್ಥಾಪಿಸಿದ್ದಾರೆ. ೧೯೫೬ರಲ್ಲಿ ವಿಟ್ಲದಲ್ಲಿ ತೋಟಗಾರಿಕೆ ಬೆಳೆಗಳ ಸಂಶೋಧನ ಕೇಂದ್ರವನ್ನು **Plantation Crops Research Institute** ಸ್ಥಾಪಿಸಿದ್ದಾರೆ. ೧೯೭೦ರಲ್ಲಿ ಇದನ್ನು ಕೇಂದ್ರ ತೋಟಗಾರಿಕೆ ಬೆಳೆಗಳ ಸಂಶೋಧನ ಸಂಸ್ಥೆ ಸಂಕೀರ್ಣದ ಪ್ರಾದೇಶಿಕ ಕೇಂದ್ರವನ್ನಾಗಿ **Regional Station of the Central Plantation Crops Research Institute** ಮಾಡಿದ್ದಾರೆ. ಮಂಗಳೂರು, ಪಡಿಲ, ಮದ್ದಡ್ಕ, ಬೆಳ್ತಂಗಡಿ, ಕಾರ್ಕಳ, ರಾಮಸಮುದ್ರ, ಶಿವಳ್ಳಿ, ಕುಂಭಾಶಿ, ಸುಳ್ಯ ಚಾರ್ಮಾಡಿ, ತುಂಬೆ, ವಿಟ್ಲ ಕೇದೂರು ಮತ್ತು ಬಂಟವಾಳಗಳಲ್ಲಿ ಈ ಜಿಲ್ಲೆಯ ತೋಟಗಾರಿಕೆ ಇಲಾಖೆಯವರು ೧೪ ನರ್ಸರಿ ಮತ್ತು ಫಾರ್ಮ್‌ಗಳನ್ನು ನಡೆಸುತ್ತಿದ್ದಾರೆ. ಇದೆಲ್ಲ ತೋಟಗಾರಿಕೆ ಅಭಿವೃದ್ಧಿಗಾಗಿ.

ದಕ್ಷಿಣ ಕನ್ನಡ ಜಿಲ್ಲೆ ಸಹಕಾರಿ ಸರಬರಾಜು ಮಾರುಕಟ್ಟೆ ಸಂಘವು ರಾಸಾಯನಿಕ ಗೊಬ್ಬರಗಳನ್ನು ಹಂಚುತ್ತದೆ. ಗೊಬ್ಬರ ಹಂಚುವ ಕೆಲಸವನ್ನು ಈ ಜಿಲ್ಲೆಯ ೨೮೨ ಸೇವಾ ಸಂಘಗಳು, ೧೫೦ ಖಾಸಗಿ ವ್ಯಾಪಾರಿಗಳು ಮತ್ತು ಯುವಕ ಕೃಷಿಕರ ಕ್ಲಬ್ಬುಗಳು ಮಾಡುತ್ತಿವೆ. ೧೯೭೧-೭೨ರ ಕೊನೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿ ತಾಲೂಕು ಅಭಿವೃದ್ಧಿ ಮಂಡಳಿಗಳು ೧೦೦ರಿಂದ ೨೫ ಲಕ್ಷ ಗ್ಲಿಸರಿಡ ಸಸಿಗಳನ್ನು ಹಂಚಿದೆ. ಉಡುಪಿ ತಾಲೂಕು ಅಭಿವೃದ್ಧಿ ಮಂಡಳಿ ೧೯೬೧-೬೨ರಿಂದ ೧೯೭೪-೭೫ರ ವರೆಗೆ ಹಸಿರು ಗೊಬ್ಬರವನ್ನು ಹೆಚ್ಚಿಸುವ ದೃಷ್ಟಿಯಿಂದ ೨೫ ಲಕ್ಷಕ್ಕಿಂತಲೂ ಹೆಚ್ಚು ಗ್ಲಿಸರಿಡ ಸಸಿಗಳನ್ನು ವಿತರಣೆ ಮಾಡಿದೆ. ಕೊಳಂಜೆ, ಸಣಬು ಮತ್ತು ಗ್ಲಿಸರಿಡ ಬೀಜಗಳನ್ನು ಹಂಚಿದೆ. ಹಳ್ಳಿಗಳಲ್ಲಿರುವ ಕಸ ಇತ್ಯಾದಿ ವ್ಯರ್ಥಗಳಿಂದ ಈ ಹಳ್ಳಿಗಳಲ್ಲಿ ಕಂಪೋಸ್ಟ ಗೊಬ್ಬರದ ಗುಂಡಿಗಳನ್ನು ತೆರೆಯುತ್ತಾರೆ. ೧೯೫೮-೫೯ರಲ್ಲಿ ೩೮೩೭ ಕಂಪೋಸ್ಟ ಗೊಬ್ಬರದ ಗುಂಡಿಗಳನ್ನು ತೆರೆದರು. ೪೮೦ ಹಳೆಯ ಗುಂಡಿಗಳನ್ನು ಪುನಃ ತುಂಬಿದರು. ೧೯೭೧-೭೨ರಲ್ಲಿ ೩೫೦ ಹೊಸ ಗುಂಡಿಗಳನ್ನು ತೋಡಿದರು. ೧೯೭೧-೭೨ರಲ್ಲಿ ೪೨೫.೦೦೦ ಟನ್ನು ಕಂಪೋಸ್ಟ ಗೊಬ್ಬರವನ್ನು ಉತ್ಪಾದಿಸಲಾಯಿತು. ಪಟ್ಟಣ ಮತ್ತು ನಗರ ಪ್ರದೇಶಗಳಲ್ಲಿ ಹೇಲು ಮತ್ತು ಕಸಗಳಿಂದ ಮುನಿಸಿಪಾಲಿಟಿ ಮತ್ತು ಪಂಚಾಯತಿಗಳು ಕಂಪೋಸ್ಟ ಗೊಬ್ಬರ ತಯಾರಿಸುತ್ತಿವೆ. ೧೯೭೧-೭೨ರಲ್ಲಿ ೧೧೧೪ ಟನ್ನು ಕಂಪೋಸ್ಟ ಗೊಬ್ಬರ ತಯಾರಿಸಿದರು. ಉಡುಪಿ ತಾಲೂಕು ಅಭಿವೃದ್ಧಿ ಮಂಡಳಿ ೧೯೬೧-೬೨ರಿಂದ ೧೯೭೪-೭೫ರ ವರೆಗೆ ಅನೇಕ ಕಂಪೋಸ್ಟ ಗೊಬ್ಬರದ ಗುಂಡಿಗಳನ್ನು ತೋಡಿದೆ. ೪೦ ಸಾವಿರಕ್ಕೂ ಹೆಚ್ಚು ಟನ್ ರಾಸಾಯನಿಕ ಗೊಬ್ಬರವನ್ನು ಕೃಷಿಕರಿಗೆ ಹಂಚಿದೆ. ಇಲ್ಲಿಯ ವರೆಗೆ ಸುಮಾರು ನಾಲ್ಕು ಲಕ್ಷ ಕಿಲೋ ಉತ್ತಮ ಬೀಜಗಳನ್ನು ಹಂಚಿದೆ. ಇಲ್ಲಿಯವರೆಗೆ ಒಂದು ಲಕ್ಷ ಎಕರೆ ಭೂಮಿಗೆ ಬೆಳೆ ಸಂರಕ್ಷಣೆಯನ್ನು ಒದಗಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಲ್ಕು ಸ್ಥಳಗಳಲ್ಲಿ ಬೀಜಗಳನ್ನು ಉತ್ಪಾದಿಸುವ ಫಾರ್ಮುಗಳನ್ನು ಪ್ರಾರಂಭಿಸಿದ್ದಾರೆ. ಅವುಗಳ ವಿವರ ಇಂತಿದೆ.

ಸ್ಥಳ	ತಾಲೂಕು	ಪ್ರಾರಂಭ ಮಾಡಿದ ವರ್ಷ	ಸೀಡ ಫಾರ್ಮಿನ ಕ್ಷೇತ್ರ ಎಕರೆಗಳಲ್ಲಿ
ಬೆಳ್ತಂಗಡಿ	ಬೆಳ್ತಂಗಡಿ	೧೯೫೮-೫೯	೨೪-೧೫
ಸಾಣೂರು	ಕಾರ್ಕಳ	೧೯೫೮-೫೯	೩೨-೩೩
ಬ್ರಹ್ಮಾವರ	ಉಡುಪಿ	೧೯೫೯-೬೦	೨೩-೨೮
ಕೋಟೇಶ್ವರ	ಕುಂದಾಪುರ	೧೯೬೨-೬೩	೨೭-೦೦

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೀಕ್ಷ್ಣ ಬೇಸಾಯ ಕಾರ್ಯಕ್ರಮ ೧೯೬೬-೬೭ರಲ್ಲಿ ಪ್ರಾರಂಭವಾಗಿದೆ. ಎಲ್ಲ ತಾಲೂಕು ಅಭಿವೃದ್ಧಿ ಮಂಡಳಿಗಳು ಈ ಕಾರ್ಯಕ್ರಮಕ್ಕೆ ತುಂಬ ಮಹತ್ವ ಕೊಟ್ಟಿವೆ. ಜಪಾನಿ ಪದ್ಧತಿಯ ಬೇಸಾಯವನ್ನು ಅಭಿವೃದ್ಧಿ ಮಂಡಳಿ ಪ್ರಾರಂಭಿಸಿದೆ. ಉಡುಪಿ ತಾಲೂಕು ಅಭಿವೃದ್ಧಿ ಮಂಡಳಿ ೨೦ ಸಾವಿರ ಎಕರೆಯಲ್ಲಿ ಜಪಾನೀ ಪದ್ಧತಿಯ ಬೇಸಾಯವನ್ನು ಕೈಕೊಂಡಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೨೩ ಐಜಿಸಿಡಿ ಪ್ರಾತ್ಯಕ್ಷಿಕೆ ಪ್ಲಾಟುಗಳು ಇವೆ. ಕುಂದಾಪುರದಲ್ಲಿ ಎರಡು, ಪುತ್ತೂರಿನಲ್ಲಿ ಎರಡು ಮತ್ತು ಮಂಗಳೂರಿನಲ್ಲಿ ಒಂದು-ಹೀಗೆ ಐದು ರಾಷ್ಟ್ರೀಯ ಪ್ರಾತ್ಯಕ್ಷಿಕೆಗಳು ಇವೆ. ೨೦ ಪ್ರಾತ್ಯಕ್ಷಿಕೆಗಳು ಇವೆ. ಇವೆಲ್ಲ ಸುಧಾರಿತ ಕಂಪೋಸ್ಟು, ಸೂರ್ಯಕಾಂತಿ ಮತ್ತು ಸುಧಾರಿತ ಧಾನ್ಯ-ಇವುಗಳ ಬಗ್ಗೆ ಪ್ರಾತ್ಯಕ್ಷಿತೆಗಳನ್ನು ಏರ್ಪಡಿಸಿದ್ದವು.

ಮಂಗಳೂರಿನ ಕಂಕನಾಡಿಯಲ್ಲಿ ಕೃಷಿ ಸಂಶೋಧನ ಕೇಂದ್ರವನ್ನು (ಅಗ್ರಿಕಲ್ಚರಲ್ ರೀಸರ್ಚ್ ಸ್ಟೇಷನ್) ೧೯೪೪ರಲ್ಲಿ ಪ್ರಾರಂಭಿಸಿದರು. ೧೯೬೫ರಿಂದ ಈ ಕೇಂದ್ರ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ನಿಯಂತ್ರಣದಲ್ಲಿ. ೧೯೬೮ರಲ್ಲಿ ಮಂಗಳೂರಿನಲ್ಲಿ ಮಣ್ಣು ಪರೀಕ್ಷಾ ಪ್ರಯೋಗಾಲಯವನ್ನು ಪ್ರಾರಂಭಿಸಿದ್ದಾರೆ. ೧೯೭೧-೭೨ರಲ್ಲಿ ೧೮.೦೧೩ ಮಣ್ಣುಗಳ ಸ್ಯಾಂಪಲುಗಳ ಪರೀಕ್ಷೆಯಾಗಿದೆ. ೧೯೭೧-೭೨ರಿಂದ ೧೯೭೪-೭೫ರ ವರೆಗೆ ಉಡುಪಿ ತಾಲೂಕು ಅಭಿವೃದ್ಧಿ ಮಂಡಳಿ ಸುಮಾರು ೧೫ ಸಾವಿರ ಮಣ್ಣಿನ ಸ್ಯಾಂಪಲುಗಳನ್ನು ಮಣ್ಣಿನ ಪರೀಕ್ಷೆಗಾಗಿ ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ಮಣ್ಣು ಪರೀಕ್ಷಾ ಕೇಂದ್ರಕ್ಕೆ ಕಳಿಸಿದೆ.

ಸಹಕಾರ

ದಕ್ಷಿಣ ಕನ್ನಡ ಜಿಲ್ಲೆ ಸಹಕಾರಿ ರಂಗದಲ್ಲಿ ಸಹ ಗಮನಾರ್ಹ ಪ್ರಗತಿಯನ್ನು ಸಾಧಿಸಲು ತಾಲೂಕು ಅಭಿವೃದ್ಧಿ ಮಂಡಳಿಗಳು ನೆರವಾಗಿವೆ. ೧೯೧೩ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕನ್ನು ಪುತ್ತೂರಿನಲ್ಲಿ ಪ್ರಾರಂಭಿಸಿದರು. ೧೯೨೭ರ ಏಪ್ರಿಲು ತಿಂಗಳಲ್ಲಿ ಈ ಬ್ಯಾಂಕನ್ನು ಮಂಗಳೂರಿಗೆ ತಂದರು. ೧೯೭೨ರಲ್ಲಿ ೬೬೧ ಸಹಕಾರಿ ಉದ್ದರಿ ಸಂಘಗಳ ಶೇರು ಬಂಡವಾಳ ೪೮.೭೫.೭೦೦ ರೂ. ಕೃಷಿ ಅಭಿವೃದ್ಧಿ ಸಂಘಗಳು ಇಲ್ಲಿವೆ. ಪ್ರತಿಯೊಂದು ತಾಲೂಕಿನಲ್ಲಿ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕು ಇದೆ. ಅಂದರೆ ಎಂಟು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಿವೆ. ಪ್ರತಿಯೊಂದು ತಾಲೂಕಿಗೆ ಒಂದರಂತೆ ಎಂಟು ಮಾರಾಟ ಸಹಕಾರಿ ಸಂಘಗಳಿವೆ. ಅಡಿಕೆ ಮಾರಾಟ ಸಹಕಾರಿ ಸಂಘ ಉತ್ತಮ ಕೆಲಸ ಮಾಡುತ್ತಿದೆ. ತೋಟಗಾರಿಕೆ (ಹಣ್ಣು ಮತ್ತು ತರಕಾರಿ) ಬೆಳೆಗಳ ಮಾರಾಟ ಸಹಕಾರಿ ಸಂಘ ಮಂಗಳೂರಿನಲ್ಲಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೬೮೭ ಹಳ್ಳಿಗಳಿವೆ. ಇವುಗಳಲ್ಲಿ ೬೫೪ ಹಳ್ಳಿಗಳಿಗೆ ಸಹಕಾರಿ ಸಂಘಗಳಿಂದ ಸೇವೆ ಸಲ್ಲುತ್ತದೆ. ೧೯ ತುಂಬ ದೊಡ್ಡ ಸಹಕಾರಿ ಪತ್ತಿನ ಸಂಘಗಳು ಇವೆ. ಎರಡನೇ ಮಹಾಯುದ್ಧದ ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೮೮ ಗ್ರಾಹಕರ ಅಂಗಡಿಗಳಿದ್ದುವು. ಈಗ ಇವುಗಳ ಸಂಖ್ಯೆ ತುಂಬ ಹೆಚ್ಚಿದೆ. ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಸಗಟು ವ್ಯಾಪಾರ ಅಂಗಡಿ ಉತ್ತಮ ಸೇವೆಯನ್ನು ಸಲ್ಲಿಸುತ್ತಿದೆ. ಇದಕ್ಕೆ ೯ ಶಾಖೆಗಳಿವೆ. ಈ ಅಂಗಡಿ ಮಂಗಳೂರಿನಲ್ಲಿ ಜನತಾ ಬಜಾರ ಪ್ರಾರಂಭ ಮಾಡಿದೆ. ಇತ್ತೀಚೆಗೆ ಸಣ್ಣ ಜನತಾ ಬಜಾರನ್ನು ಕಾರ್ಕಳದಲ್ಲಿ ಪ್ರಾರಂಭ ಮಾಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೯೮ ಪ್ರಾಥಮಿಕ ಗ್ರಾಹಕರ ಮತ್ತು ವಿದ್ಯಾರ್ಥಿಗಳ ಸಹಕಾರಿ ಅಂಗಡಿಗಳು ಇವೆ. ೧೯೬೪ರಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಕೋಳಿ ಸಾಕುವವರ ಸಹಕಾರಿ ಸಂಘವನ್ನು ಪ್ರಾರಂಭಿಸಿದರು. ಈ ಜಿಲ್ಲೆಯಲ್ಲಿ ೬೬ ಸಹಕಾರಿ ಬ್ಯಾಂಕುಗಳಿವೆ. ೨೪೧ ವಾಣಿಜ್ಯ ಬ್ಯಾಂಕುಗಳಿವೆ. ೧೯೭೩-೭೪ರಲ್ಲಿ ಕೃಷಿ ಸಾಲ ನೀಡುವ ಸಹಕಾರಿ ಸಂಘಗಳು ೨೬೮. ಇತರ ಕೃಷಿ ಸಹಕಾರಿ ಸಂಘಗಳು ೫೮೮.

೧೯೭೨ರಲ್ಲಿ ಈ ಜಿಲ್ಲೆಯಲ್ಲಿ ನೇಕಾರರ ಸಹಕಾರಿ ಸಂಘಗಳು ೧೯. ಇವುಗಳಲ್ಲಿ ಸದಸ್ಯರು ೧೩,೦೦೦. ಈ ಸಂಘಗಳು ೨೪೧೨೪೮೬ ರೂ. ಬೆಲೆಬಾಳುವ ಬಟ್ಟೆಯನ್ನು ಉತ್ಪಾದಿಸಿವೆ. ೧೯.೬೮.೦೩೪ ರೂ. ಬೆಲೆಬಾಳುವ ಬಟ್ಟೆಯನ್ನು ಮಾರಾಟ ಮಾಡಿವೆ. ಮಂಗಳೂರು, ಸುರತ್ಕಲ್, ಪಡುಪಣಂಬೂರು, ತಾಳಿಪಾಡಿ, ಉಡುಪಿ, ಶಿವಳ್ಳಿ, ಬ್ರಹ್ಮಾವರ, ಬಸ್ರೂರು ಮತ್ತು ಮಿಜಾರು-ಇಲ್ಲಿ ನೇಕಾರರ ಸಹಕಾರಿ

ಸಂಘಗಳು ಚೆನ್ನಾಗಿ ಕೆಲಸ ಮಾಡುತ್ತಿವೆ. ಈ ಜಿಲ್ಲೆಯಲ್ಲಿ ಆರು ಎಣ್ಣೆ ಉದ್ದಿಮೆ ಸಹಕಾರಿ ಸಂಘಗಳು ಹಳ್ಳಿಗಳಲ್ಲಿ ಇವೆ. ಆಹಾರ ಧಾನ್ಯ ಮತ್ತು ದ್ವಿದಳ ಧಾನ್ಯಗಳ ೧೯ ಸಹಕಾರಿ ಸಂಘಗಳು ಇವೆ. ಕುಂಬಾರರ ಆರು ಸಹಕಾರಿ ಸಂಘಗಳು ಇವೆ. ನಾಲ್ಕು ಹಳ್ಳಿಯ ಚರ್ಮ ಉದ್ದಿಮೆಯ ಸಹಕಾರಿ ಸಂಘಗಳು ಇವೆ. ಉಡುಪಿ. ಉಪ್ಪಿನಾಳ. ಮುಲ್ಕಿ. ಗಂಗೊಳ್ಳಿ, ಕಲ್ಯಾಣಪುರ, ಕಾಪು. ಬ್ರಹ್ಮಾವರ. ಅಂಗಳ್ಳಿ. ಶಿರೂರು, ತೆಕ್ಕಟ್ಟೆ. ಕೋಟ ಮತ್ತು ಮಂಗಳೂರುಗಳಲ್ಲಿ ೧೨ ಕತ್ತದ ಸಹಕಾರಿ ಸಂಘಗಳು ಇವೆ. ಈ ಸಂಘಗಳ ಸದಸ್ಯರ ಸಂಖ್ಯೆ ಸುಮಾರು ೯೦೦. ಶೇರು ಬಂಡವಾಳ ೧೬ ಸಾವಿರ. ಬಲ್ಮಠ, ಕದ್ರಿ, ಉದ್ಯಾವರ ಮತ್ತು ಬೆಳ್ವೆಗಳಲ್ಲಿ ನಾಲ್ಕು ಸಣ್ಣ ಕೈಗಾರಿಕೆ ಸಂಘಗಳು ಇವೆ. ಈ ಸಂಘಗಳ ಸದಸ್ಯರು ೧೬೦೦. ಶೇರು ಬಂಡವಾಳ ೪೨ ಸಾವಿರ ರೂ. ಕೋಟಾ ಮತ್ತು ಮಂಗಳೂರಿನಲ್ಲಿ ಸುವರ್ಣ ಕಲಾಕಾರರ ಎರಡು ಸಹಕಾರಿ ಸಂಘಗಳಿವೆ. ಇವುಗಳ ಸದಸ್ಯರು ೧೧೯. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರು ಹೆಂಡಿಕ್ರಾಫ್ಟ ಸಹಕಾರಿ ಸಂಘಗಳಿವೆ: (೧) ಬಂಟವಾಳ ಕಂಚು ಲೋಹದ ಕೆಲಸಗಾರರ ಉದ್ಯಮಿಕ ಸಹಕಾರಿ ಸಂಘ ಬಂಟವಾಳ, (೨) ಮಂಡೇಕೋಲು ಗಿರಿಜನ ಬೆತ್ತದ ಕುಶಲ ಕೈಗಾರಿಕೆ ಸಹಕಾರಿ ಸಂಘ ಮಂಡೆಕೋಲು, (೩) ಅಜೆಕಾರ ಬಾಸ್ಕೇಟ ತಯಾರಕರ ಸಹಕಾರಿ ಸಂಘ, ಮುನಿಯಾಳ. ರನ್ನದೇವ, ಬೆಲ್ಲಾರೆ, ಕೊರಗ, ಗೌಡ, ಕುಡುಬ—ಈ ಜನರು ಬುಟ್ಟಿ ತಯಾರಿಸುತ್ತಾರೆ. ಕುಂದಾಪುರ, ಕಾರ್ಕಳ ಬೆಳ್ತಂಗಡಿ ಮತ್ತು ಸುಳ್ಯ ತಾಲೂಕುಗಳ ೨೦೦೦ ಕುಂಟುಂಬಗಳ ಜೀವನ ಈ ಕೈಗಾರಿಕೆಯನ್ನು ಅವಲಂಬಿಸಿದೆ. ಈಗ ಈ ಕೈಗಾರಿಕೆಯ ಸಹಕಾರಿ ಸಂಘಗಳು ಕುಂದಾಪುರ ತಾಲೂಕಿನ ಯಲಗಿತ ಮತ್ತು ಸಿದ್ಧಾಪುರ ಗಳಲ್ಲಿ ಕಾರ್ಕಳ ತಾಲೂಕಿನ ಅಜೇಕಾರ ಮತ್ತು ನಡಕಾಲಗ್ಗಳಲ್ಲಿ ಬೆಳ್ತಂಗಡಿ ತಾಲೂಕಿನ ನಾರಾವಿ ಮತ್ತು ಅರಶಿನಮಕ್ಕಿಯಲ್ಲಿ ಮತ್ತು ಸುಳ್ಯ ತಾಲೂಕಿನ ಮಂಡೆಕೋವನಲ್ಲಿ ಇವೆ. (೪) ಕುಂದಾಪುರ ಲೋಹ ಕೆಲಸಗಾರರ ಸಹಕಾರಿ ಸಂಘ, ಕುಂದಾಪುರ.

ಈ ಜಿಲ್ಲೆಯಲ್ಲಿ ಸಹಕಾರಿ ಕೈಗಾರಿಕೆ ಬ್ಯಾಂಕು ಇದೆ. ಮಣಿಪಾಲ ಸಹಕಾರಿ ಕೈಗಾರಿಕೆ ಎಸ್ಟೇಟ ಮಣಿಪಾಲದಲ್ಲಿವೆ. ಹನ್ನೆಬೆಲ್ಲ ತಯಾರಕರ, ಬಳಕೆದಾರರ, ಆದಿ ದ್ರಾವಿಡರ ಮತ್ತು ಮಹಿಳೆಯರ ಕೈಗಾರಿಕೆ ಸಂಘಗಳು ಇವೆ. ಗೃಹ ನಿರ್ಮಾಣ ಸಹಕಾರಿ ಸಂಘಗಳು, ವಿವಿಧೋದ್ದೇಶ ಸಹಕಾರಿ ಸಂಘಗಳು, ನೌಕರರ ಪತ್ತಿನ ಸಹಕಾರಿ ಸಂಘಗಳು, ಸಹಕಾರಿ ಗೆರೇಜ, ಸಾರಿಗೆ ಸಹಕಾರಿ ಸಂಘ—ಇವೆಲ್ಲ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಗತಿ ಹೊಂದುತ್ತಿವೆ. ಸಹಕಾರಿ ಕ್ಯಾಂಟೀನುಗಳಿವೆ.

ಜಿಲ್ಲಾ ಕೇಂದ್ರ ಬ್ಯಾಂಕು ಗ್ರಾಮೀಣ ಪ್ರಾಥಮಿಕ ಸಹಕಾರಿ ಸಂಘಗಳಿಗೆ ಸಾಲ ಒದಗಿಸುತ್ತವೆ. ಈ ಸಹಕಾರಿ ಸಂಘಗಳು ಕೃಷಿಕರಿಗೆ ಬೆಳೆ ಸಾಲ ಒದಗಿಸುತ್ತವೆ. ಇದು ಅಲ್ಪಕಾಲಿಕ ಸಾಲ. ಮಾರಾಟ ಸಹಕಾರಿ ಸಂಘಗಳು ಕೃಷಿ ಸರಕುಗಳ ಮಾರಾಟದ ವ್ಯವಸ್ಥೆಯನ್ನು ಮಾಡುತ್ತವೆ. ತಾಲೂಕು ಕೃಷಿ ಉತ್ಪನ್ನ ಮಾರಾಟ ಸಂಘಗಳು ತಾಲೂಕು ಮಟ್ಟದಲ್ಲಿ ಕೃಷಿಕರ ಕೃಷಿ ಉತ್ಪತ್ತಿಗಳನ್ನು ಯೋಗ್ಯ ಬೆಲೆಯಲ್ಲಿ ಮಾರಾಟ ಮಾಡುವ ವ್ಯವಸ್ಥೆಯನ್ನು ಮಾಡುತ್ತಿವೆ. ಕೃಷಿಕರಿಗೆ ಸಾಲ ನೀಡುತ್ತಿವೆ. ಕೃಷಿಕರಿಗೆ ಬೇಕಾದ ರಾಸಾಯನಿಕ ಗೊಬ್ಬರ. ಕ್ರಿಮಿನಾಶಕ ಮತ್ತು ಕೃಷಿ ಉಪಕರಣಗಳನ್ನು ಒದಗಿಸುತ್ತಿವೆ. ಭೂ ಅಭಿವೃದ್ಧಿ ಬ್ಯಾಂಕು ಕೃಷಿಕರಿಗೆ ಬಾವಿ ತೋಡಲು. ಪಂಪು ಸೆಟ್ಟುಗಳನ್ನು ಕೊಳ್ಳಲು ಮತ್ತು ಕೃಷಿ ಯಂತ್ರಗಳನ್ನು ಕೊಂಡುಕೊಳ್ಳಲು ಕಡಿಮೆ ಬಡ್ಡೀ ದರದಲ್ಲಿ ದೀರ್ಘಾವಧಿ ಸಾಲಗಳನ್ನು ಒದಗಿಸುತ್ತವೆ.

ಕುಂದಾಪುರ ತಾಲೂಕು ಹೆಲ್ತ ಕೋಪರೇಟಿವ್ ಸೊಸೈಟಿ ಹಳ್ಳಿಗಳಲ್ಲಿ ನಾಲ್ಕು ಆಸ್ಪತ್ರೆಗಳನ್ನು ನಡೆಸುತ್ತಿದೆ. ಉಡುಪಿ ಟೀಚರ್ಸ್ ಕೋಆಪರೇಟಿವ್ ಬ್ಯಾಂಕ್ ಉತ್ತಮ ಸೇವೆಯನ್ನು ಸಲ್ಲಿಸುತ್ತಿದೆ. ೧೯೭೫–೭೬ರಲ್ಲಿ ಉಡುಪಿ ತಾಲೂಕು ಕಾರ್ಮಿಕರ ಗುತ್ತಿಗೆ ಸಹಕಾರಿ ಸಂಘಗಳನ್ನು ಪ್ರಾರಂಭಿಸಿದೆ. ಶೇಕಡ ೮೦ರಷ್ಟು ಕೃಷಿ ಕುಟುಂಬಗಳು ಕೃಷಿ ಸೇವಾ ಸಹಕಾರಿ ಸಂಘಗಳ ಸೇವೆಯನ್ನು ಪಡೆಯುತ್ತಿವೆ.

ಮೀನುಗಾರಿಕೆ

ಈ ಜಿಲ್ಲೆಯ ಮೀನುಗಾರಿಕೆ ಅಭಿವೃದ್ಧಿಗಾಗಿ ತಾಲೂಕು ಅಭಿವೃದ್ಧಿ ಮಂಡಳಿಗಳು ಸಕಾರಿಕ ಪ್ರೋತ್ಸಾಹ ನೀಡಿವೆ. ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ೧೪೧ ಕಿಲೋಮೀಟರು ಉದ್ದ. ವರ್ಷದಲ್ಲಿ

ಸುಮಾರು ಸರಾಸರಿ ೮೦ ಸಾವಿರ ಮೆಟ್ರಿಕ್ ಟನ್ ಮೀನು ಹಿಡಿಯುತ್ತಾರೆ. ಇವುಗಳ ಬೆಲೆ ಸುಮಾರು ೧೬೨ ಲಕ್ಷ ರೂ. ಈ ಜಿಲ್ಲೆಯಲ್ಲಿ ೮೫ ಮೀನು ಹಿಡಿಯುವ ಹಳ್ಳಿಗಳಿವೆ. ಈ ಹಳ್ಳಿಗಳಲ್ಲಿ ಮೀನುಗಾರರ ಸಂಖ್ಯೆ ೬೦,೦೦೦. ಇವರಲ್ಲಿ ಮೀನು ಹಿಡಿಯುವ ಪ್ರೌಢರ ಸಂಖ್ಯೆ ೧೫,೩೬೫. ಮೀನು ವ್ಯಾಪಾರದಲ್ಲಿ ತೊಡಗಿದ ಹೆಂಗಸರ ಸಂಖ್ಯೆ ೧೦೦೦೨. ಗಂಡಸರು ೧೫೩೬. ಮೊಗವೀರರು, ಬೋವಿ, ಖಾರ್ವಿ, ಹರಿಕಂತ್ರರು, ಹಾಲ್ಕಿಗಳು ಮತ್ತು ಮಾಪ್ಲರು ಈ ಜಿಲ್ಲೆಯ ಮೀನುಗಾರರು. ೧೯೫೮ರಿಂದ ೧೯೭೨ರ ವರೆಗೆ ಈ ಜಿಲ್ಲೆಯಲ್ಲಿ ೬೬೬ ಯಾಂತ್ರೀಕೃತ ದೋಣಿಗಳು ಕೆಲಸದಲ್ಲಿ ತೊಡಗಿವೆ. ೧೯೭೨ರಲ್ಲಿ ಈ ಜಿಲ್ಲೆಯಲ್ಲಿ ೩೪ ಮೀನುಗಾರರ ಸಹಕಾರಿ ಸಂಘಗಳು ಇದ್ದುವು. ಶೇಕಡ ೮೦ ರಷ್ಟು ಮೀನುಗಾರರು ಮೀನುಗಾರರ ಸಹಕಾರಿ ಸಂಘಗಳ ಸದಸ್ಯರಾಗಿದ್ದಾರೆ. ಈ ಸಹಕಾರಿ ಸಂಘಗಳು ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಮೀನು ಮಾರಾಟ ಫೆಡರೇಶನ್ನಿನ ಅಧಿಕಾರ ಕಕ್ಷೆಗೆ ಸೇರಿವೆ. ಈ ಜಿಲ್ಲೆಯಲ್ಲಿ ೧೯೭೨ರಲ್ಲಿ ೨೪ ದೋಣಿ ನಿರ್ಮಾಣ ಸಂಸ್ಥೆಗಳಿದ್ದುವು. ಇವುಗಳಲ್ಲಿ ಒಂದು ಸಂಸ್ಥೆ ಸರಕಾರದ್ದು. ಎರಡು ಸಹಕಾರಿ ಸಂಸ್ಥೆಗಳು ಮತ್ತು ೨೧ ಖಾಸಗಿ ದೋಣಿ ಕಟ್ಟುವ ಸಂಸ್ಥೆಗಳು.

ಸಮಾಜ ಶಿಕ್ಷಣ

ಸಮುದಾಯ ಅಭಿವೃದ್ಧಿ ಯೋಜನೆ ಯುವಜನ ಸೇವಾ ಸಂಘಗಳನ್ನು ಸ್ಥಾಪಿಸಿ ಯುವಜನ ಸೇವಾ ಚಟುವಟಿಕೆಗಳನ್ನು ನೆರವೇರಿಸಲು ಪ್ರೋತ್ಸಾಹ ನೀಡಿದೆ. ಯುವಜನ ಸೇವಾ ಕಾರ್ಯಕ್ರಮ ದಲ್ಲಿಯ ವಿದ್ಯಾರ್ಥಿಗಳಲ್ಲದ, ಗ್ರಾಮೀಣ ಭಾಗದ ೧೫ರಿಂದ ೨೫ ವರ್ಷ ಪ್ರಾಯದ ಯುವಕರು ಯುವಕ ಮಂಡಳಿಗಳ ಇಲ್ಲವೆ ಯುವಕ ಸಂಘದ ಸದಸ್ಯರಾಗುವ ಅರ್ಹತೆಯನ್ನು ಪಡೆದಿರುತ್ತಾರೆ. ೧೯೬೦ರಲ್ಲಿ ಜಿಲ್ಲಾ ಯುವಜನ ಸೇವಾ ಬೋರ್ಡನ್ನು ಸ್ಥಾಪಿಸಿದರು. ಜಿಲ್ಲಾಧಿಕಾರಿಯೇ ಈ ಬೋರ್ಡಿನ ಅಧ್ಯಕ್ಷ. ಜಿಲ್ಲಾ ವಿದ್ಯಾಧಿಕಾರಿ ಇದರ ಸೆಕ್ರೆಟರಿ. ಜಿಲ್ಲಾ ಯೋಜನಾಧಿಕಾರಿ ಇದರ ಜಂಟಿ ಸೆಕ್ರೆಟರಿ. ಯುವಜನ ಕಲ್ಯಾಣವನ್ನು ಪ್ರೋತ್ಸಾಹಿಸುವುದು ಈ ಅಧಿಕಾರಿಯ ಕರ್ತವ್ಯ. ಯುವಜನ ಕಲ್ಯಾಣಕ್ಕಾಗಿ ಲಭ್ಯ ಸಂಪನ್ಮೂಲಗಳ ಸದುಪಯೋಗವಾಗುವಂತೆ ನೋಡಿಕೊಳ್ಳುವುದು ಈತನ ಜವಾಬ್ದಾರಿ.

ಯುವಕ ಮಂಡಳಿಗಳು ಗಮನಾರ್ಹ ಕೆಲಸಗಳನ್ನು ಮಾಡುತ್ತಿವೆ: ಪ್ರೌಢ ಶಿಕ್ಷಣ ವರ್ಗ ಗಳನ್ನು ನಡೆಸುವುದು. ವಾಚನಾಲಯ. ಗ್ರಂಥಾಲಯ. ಸಾಂಸ್ಕೃತಿಕ ಮತ್ತು ಮನರಂಜನಾ ಕಾರ್ಯಕ್ರಮ ಗಳನ್ನು ನಡೆಸುವುದು: ಶ್ರಮದಾನ ಕಾರ್ಯಕ್ರಮಗಳನ್ನು ನಡೆಸುವುದು; ರೈತರಿಗೆ ಸುಧಾರಿತ ಬೇಸಾಯದ ಕ್ರಮಗಳ ಪ್ರಯೋಜನಗಳ ಬಗ್ಗೆ ಮನದಟ್ಟು ಮಾಡುವುದು. ಕಂಪೋಸ್ಟ್ ಮತ್ತು ಹಸಿರುಗೊಬ್ಬರ ಗಳನ್ನು ಹೇಗೆ ತಯಾರಿಸಬೇಕು ಎನ್ನುವುದನ್ನು ಕಲಿಸುವುದು. ತರಕಾರಿ ಬೆಳೆಸುವುದು. ಕೋಳಿಸಾಕಣೆ, ಉತ್ತಮ ತಳಿಗಳನ್ನು ಸಾಕುವುದು: ನಾಟಕ: ಹರಿಕಥೆ. ಪುರಾಣಪ್ರವಚನ ಮತ್ತು ಭಜನ ಕಾರ್ಯ ಕ್ರಮಗಳನ್ನು ನಡೆಸುವುದು. ಗ್ರಾಮಾಭಿವೃದ್ಧಿ ಕಾರ್ಯಕ್ರಮದಲ್ಲಿ ತೊಡಗುವುದು: ಶಾಲಾ ಪ್ರಾಯದ ಮಕ್ಕಳನ್ನು ಶಾಲೆಗೆ ಸೇರಿಸಲು ನೆರವಾಗುವುದು. ಮಾರ್ಗದ ದುರಸ್ತಿ ಮತ್ತು ಹಳೆ ಬಾವಿ ದುರಸ್ತಿ ಕಾರ್ಯಕ್ರಮದಲ್ಲಿ ಶ್ರಮದಾನ ಮಾಡುವುದು; ಕೃಷಿ ಅಭಿವೃದ್ಧಿ ಯೋಜನೆಗಳಲ್ಲಿ ಪಾಲ್ಗೊಳ್ಳುವುದು. ಪುತ್ತೂರು ತಾಲೂಕಿನ ಇರ್ದೆ ಮತ್ತು ಬೆಟ್ಟಂಪಾಡಿ ಯುವಕ ಸಂಘಗಳು ಕಳ್ಳ ನಿರೋಧಕ ಕಾರ್ಯದಲ್ಲಿ ಕೆಲಸ ಮಾಡಿವೆ.

ಉತ್ತಮ ಯುವಕ ಸಂಘಕ್ಕೆ ಸರಕಾರದಿಂದ ೩೦೦ ರೂ. ನೆರವು ಸಿಗುತ್ತದೆ. ಉತ್ತಮ ಕೆಲಸ ಮಾಡಿ ತೋರಿಸಿದ ಸಂಘಕ್ಕೆ ೪೦೦ರಿಂದ ೧೦೦೦ ರೂ.ಗಳ ವರೆಗಿನ ಪ್ರೋತ್ಸಾಹಕ ಬಹುಮಾನಗಳು ಸಿಗುತ್ತವೆ. ೧೯೭೧-೭೨ರಲ್ಲಿ ೮೦ ಯುವಜನ ಸಂಘಗಳಿಗೆ ೨೪,೧೦೦ ರೂ. ಹಣ ನೀಡಲಾಗಿದೆ. ಉತ್ತಮ ಕೆಲಸ ಮಾಡಿದ ೨೫ ಯುವಕ ಸಂಘಗಳಿಗೆ ಪ್ರೋತ್ಸಾಹಕ ಬಹುಮಾನಗಳ ರೂಪದಲ್ಲಿ ೧೨,೨೬೦ ರೂ. ಕೊಡಲಾಗಿದೆ. ಯುವಜನ ಸಂಘಗಳ ಸಂಘಟನೆಯ ನಿಯಮದ ಪ್ರಕಾರ ಪ್ರತಿಯೊಂದು ಯುವಕ ಸಂಘವನ್ನು ಜಿಲ್ಲಾ ಯುವಜನ ಸೇವಾ ಮಂಡಳಿಗೆ ಎಫಿಲಿಯೇಟ ಮಾಡಬೇಕು. ಆಗ ಮಾತ್ರ ಇಂಥ ಯುವಕ ಮಂಡಳವನ್ನು ಸರಕಾರ ಗುರುತಿಸುತ್ತದೆ. ಹಣಕಾಸಿನ ನೆರವು ನೀಡುತ್ತದೆ.

೧೯೭೨ರಲ್ಲಿ ೧೧೪ ಯುವಕ ಸಂಘಗಳನ್ನು ಜಿಲ್ಲೆಯಲ್ಲಿ ಜಿಲ್ಲಾ ಯುವಜನ ಸೇವಾ ಮಂಡಳಿಗೆ ಎಫಿಲಿಯೇಟ ಮಾಡಿದರು. ಪುತ್ತೂರು ತಾಲೂಕಿನಲ್ಲಿ ೨೬ ಯುವಕ ಸಂಘಗಳನ್ನು ಜಿಲ್ಲಾ ಯುವಜನ ಸೇವಾ ಮಂಡಳಿಗೆ ಎಫಿಲಿಯೇಟ ಮಾಡಿದ್ದರು.

ದಲಿತೋದ್ಧಾರ

ಹರಿಜನರು, ಗಿರಿಜನರು, ದಲಿತರು, ಪತಿತರು, ಅಸ್ಪೃಶ್ಯರು, ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಹಿಂದುಳಿದವರು. ಇವರ ಶೋಷಣೆ ಆಗುತ್ತಲೇ ಬಂದಿದೆ.

ಈ ಜಿಲ್ಲೆಯಲ್ಲಿ ದಲಿತರ ಉದ್ಧಾರಕ್ಕಾಗಿ ಶ್ರಮಿಸಿದ ಸಂಸ್ಥೆಗಳಿವೆ, ವ್ಯಕ್ತಿಗಳಿದ್ದಾರೆ. ಈ ಕ್ಷೇತ್ರದಲ್ಲಿ ದಿವಂಗತ ಕುದುಮಲ ರಂಗರಾವ ಅವರ ಹೆಸರು ಮಹತ್ವದ್ದು. ೧೮೯೭ರಲ್ಲಿ ಅವರು ಉಡುಪಿ ಮತ್ತು ಮಂಗಳೂರುಗಳಲ್ಲಿ ದಲಿತರ ಮಕ್ಕಳ ಬಗ್ಗೆ ಕೆಲವು ಶಾಲೆಗಳನ್ನು ಪ್ರಾರಂಭಿಸಿದರು. ಹರಿಜನೋದ್ಧಾರಕ್ಕಾಗಿ ಶ್ರೀ ರಂಗರಾವ ಅವರು ಮಾಡಿದ ಕೆಲಸವನ್ನು ೧೯೩೭ರಲ್ಲಿ ಮಂಗಳೂರಿಗೆ ಬಂದ ಮಹಾತ್ಮಾ ಗಾಂಧಿಯವರು ಮುಕ್ತ ಕಂಠದಿಂದ ಹೊಗಳಿದ್ದಾರೆ. ದಿವಂಗತ ಕಾರ್ನಾಡ ಸದಾಶಿವರಾವ ಅವರು ಸಹ ಹರಿಜನೋದ್ಧಾರಕ್ಕಾಗಿ ತುಂಬ ಹೆಣಗಿದರು. ೧೯೩೩ರಲ್ಲಿ ಕಾರ್ಮಿಕರ ಇಲಾಖೆ ದಲಿತೋದ್ಧಾರಕ್ಕಾಗಿ ಈ ಜಿಲ್ಲೆಯಲ್ಲಿ ತುಂಬ ಪ್ರಯತ್ನಿಸಿತು. ಈ ಇಲಾಖೆ ದಲಿತರಿಗೆಂದು ಭೂಮಿಯನ್ನು ಕಾದಿರಿಸಿತ್ತು. ದಲಿತರ ಮಕ್ಕಳಿಗೆಂದು ಅದು ಶಾಲೆಗಳನ್ನು ತೆರೆಯಿತು. ೧೯೪೯ರಲ್ಲಿ ಪ್ರತ್ಯೇಕವಾದ ಹರಿಜನ ಕ್ಷೇಮಾಭ್ಯುದಯ ಇಲಾಖೆಯನ್ನು ತೆರೆದರು. ಹರಿಜನ-ಗಿರಿಜನರ ಕಲ್ಯಾಣಕ್ಕಾಗಿ. ಇದಕ್ಕಾಗಿ ಜಿಲ್ಲಾ ಕಲ್ಯಾಣ ಅಧಿಕಾರಿಯ ನೇಮಕ. ಈ ಇಲಾಖೆ ಹರಿಜನರಿಗೆ ಮನೆಕಟ್ಟಲು ನಿವೇಶನಗಳನ್ನು ನೀಡಿತು. ಹರಿಜನ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಶೈಕ್ಷಣಿಕ ಸೌಲಭ್ಯ. ಕುಡಿಯುವ ನೀರಿನ ಬಾವಿಗಳು, ಸಾಗುವಳಿಗಾಗಿ ಸಾಗುವಳಿ ಯೋಗ್ಯ ಭೂಮಿ. ಮನೆಕಟ್ಟಲು ಸಹಾಯಧನ. ಸಾಗುವಳಿಗಾಗಿ ಎತ್ತು, ಬೀಜ ಮತ್ತು ಕೃಷಿ ಉಪಕರಣಗಳನ್ನು ನೀಡಿದೆ. ಪ್ರಥಮ ಪಂಚವಾರ್ಷಿಕ ಯೋಜನೆ ಪ್ರಾರಂಭ ವಾದಂದಿನಿಂದ ಹರಿಜನ-ಗಿರಿಜನ ಕಲ್ಯಾಣ ಕಾರ್ಯಕ್ರಮ ಹೊಸ ಆಯಾಮ ಮತ್ತು ಮಹತ್ವ ಪಡೆಯಿತು. ಇದಕ್ಕಾಗಿ ಹೊಸ ಹೊಸ ಕಾರ್ಯಕ್ರಮಗಳನ್ನು ರೂಪಿಸಿದರು. ಅವುಗಳನ್ನು ಅನುಷ್ಠಾನಕ್ಕೆ ತಂದರು. ೧೯೫೬ರ ನಂತರ ಸಮಾಜ ಕಲ್ಯಾಣ ಇಲಾಖೆ ಈ ಜವಾಬ್ದಾರಿಯನ್ನು ಹೊರಬೇಕಾಯಿತು. ಜಿಲ್ಲಾ ಮಟ್ಟದಲ್ಲಿ ದಲಿತೋದ್ಧಾರ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ಜವಾಬ್ದಾರಿ ಜಿಲ್ಲಾಧಿಕಾರಿಯದ್ದು. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ. ತಾಲೂಕು ಮಟ್ಟದಲ್ಲಿ ಸಮಾಜ ಕಲ್ಯಾಣ ಇನ್‌ಸ್ಪೆಕ್ಟರ ಹರಿಜನೋದ್ಧಾರ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ನೆರವಾಗುತ್ತಾರೆ.

ದಲಿತರ ಉದ್ಧಾರ ಆಗಬೇಕು. ಕ್ಷೇಮಾಭ್ಯುದಯ ಸಾಧಿಸಬೇಕು. ಇವರ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸ್ಥಿತಿ ಸುಧಾರಿಸಬೇಕು. ಇವರ ಎಲ್ಲ ಸಮಸ್ಯೆಗಳಿಗೆ ಪರಿಹಾರ ಸಿಗಬೇಕು. ಇವರು ನೆಮ್ಮದಿಯಿಂದ ಬದುಕುವಂತಾಗಬೇಕು. ದಕ್ಷಿಣ ಕನ್ನಡ ಜಿಲ್ಲೆಯ ತಾಲೂಕು ಅಭಿವೃದ್ಧಿ ಮಂಡಳಿಗಳು ದಲಿತೋದ್ಧಾರಕ್ಕಾಗಿ ಕ್ರಮಗಳನ್ನು ಕೈಕೊಂಡಿವೆ. ಸಮಾಜ ಕಲ್ಯಾಣ ಯೋಜನೆಗಳ ಆಡಳಿತ ನಿರ್ವಹಣೆಯನ್ನು ರೆವೆನ್ಯೂ ಇಲಾಖೆಯಿಂದ ತಾಲೂಕು ಅಭಿವೃದ್ಧಿ ಮಂಡಳಿಗೆ ವರ್ಗಾಯಿಸಲಾಗಿದೆ. ೧೯೭೧ರ ಜನಗಣತಿಯ ಪ್ರಕಾರ ಈ ಜಿಲ್ಲೆಯ ಹರಿಜನ ಗಿರಿಜನರ ಜನಸಂಖ್ಯೆಯ ಕುರಿತು ಮಾಹಿತಿಯನ್ನು ಕೆಳಗಿನ ಮಾಹಿತಿ ಪಟಕ ನೀಡುತ್ತದೆ:

ದಕ್ಷಿಣ ಕನ್ನಡ ಜಿಲ್ಲೆಯ ಹರಿಜನರು ಮತ್ತು ಗಿರಿಜನರು

	ಹರಿಜನರು			ಗಿರಿಜನರು		
ತಾಲೂಕುಗಳು	ಹೆಣ್ಣು	ಗಂಡು	ಒಟ್ಟು	ಹೆಣ್ಣು	ಗಂಡು	ಒಟ್ಟು
ಬೆಳ್ತಂಗಡಿ	೫.೪೨೦	೫.೫೦೩	೧೦.೯೨೩	೩.೮೭೯	೩.೭೫೯	೭.೬೩೮
ಬಂಟವಾಳ	೫.೫೯೩	೫.೨೧೮	೧೦.೮೧೧	೬.೦೩೭	೫.೮೬೬	೧೧.೯೦೩
ಕುಂದಾಪುರ	೩.೮೦೬	೪.೨೫೪	೮.೦೬೦	೨.೯೧೩	೨.೫೪೭	೫,೪೬೦
ಕಾರ್ಕಳ	೫.೯೭೫	೬.೩೩೦	೧೨.೩೦೫	೩.೫೧೩	೩.೯೫೭	೭,೪೭೦
ಮಂಗಳೂರು	೭.೯೪೯	೮.೩೦೪	೧೬.೨೫೩	೧.೦೮೧	೧,೨೫೫	೨,೩೩೬
ಪುತ್ತೂರು	೮.೩೨೧	೭.೯೨೧	೧೬.೨೪೨	೪.೫೫೫	೪.೫೨೨	೯,೦೭೭
ಸುಳ್ಯ	೫,೩೦೨	೪,೯೭೩	೧೦,೨೭೫	೩,೬೧೨	೩,೩೬೯	೬,೯೮೧
ಉಡುಪಿ	೭.೩೧೯	೭.೫೦೦	೧೪.೮೧೯	೬.೨೭೩	೬.೪೫೮	೧೨,೭೩೧
ಒಟ್ಟು	೪೯.೬೮೫	೫೦.೦೦೩	೯೯.೬೮೯	೩೧.೮೬೩	೩೧.೭೩೩	೬೩.೫೯೬

ಈ ಜಿಲ್ಲೆಯಲ್ಲಿ ಹರಿಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಸರಕಾರ ಅನೇಕ ಕ್ರಮಗಳನ್ನು ಕೈಕೊಂಡಿದೆ. The Untouchability (offences) Act, ೧೯೫೫ ಜಾರಿಯಲ್ಲಿದೆ. ಈ ಕಾಯ್ದೆಯನ್ನು ಜಾರಿಗೆ ತಂದುದರ ಉದ್ದೇಶ: ಹರಿಜನರು ಮತ್ತು ಗಿರಿಜನರು ಸಮಾನ ನಾಗರಿಕ ಹಕ್ಕುಗಳನ್ನು ಪಡೆಯುವಂತೆ ಮಾಡಲು ಮತ್ತು ಎಲ್ಲರಂತೆ ಚೆನ್ನಾಗಿ ನೆಮ್ಮದಿಯಿಂದ ಬಾಳಲು. ಇದಕ್ಕೆ ಅಡ್ಡ ಬರುವವರನ್ನು ಈ ಕಾಯ್ದೆಯ ಅನ್ವಯ ಶಿಕ್ಷಿಸುತ್ತಿದ್ದರು. ದಂಡಿಸುತ್ತಿದ್ದರು. ಹರಿಜನೋದ್ಧಾರಕ್ಕಾಗಿ ಗಿರಿಜನೋದ್ಧಾರಕ್ಕಾಗಿ ಸಮುದಾಯ ಅಭಿವೃದ್ಧಿ ಯೋಜನೆಗಳಲ್ಲಿ ಇವರಿಗೆ ಶೈಕ್ಷಣಿಕ ನೆರವು. ಆರ್ಥಿಕ ನೆರವು. ಆರೋಗ್ಯ ವಸತಿ ಮತ್ತು ಸ್ವಚ್ಛತೆಗಳ ಸೌಲಭ್ಯಗಳನ್ನು ನೀಡಲಾಗಿದೆ. ಈ ಜಿಲ್ಲೆಯಲ್ಲಿ ಹರಿಜನ ಮಕ್ಕಳಿಗಾಗಿ ೩೨ ಹರಿಜನ ಕಲ್ಯಾಣ ಶಾಲೆಗಳಿದ್ದವು. ಜಿಲ್ಲೆಯಲ್ಲಿ ೧೫ ಹರಿಜನ ಹಾಸ್ಟೆಲುಗಳಿವೆ. ಇವುಗಳಲ್ಲಿ ೧೦ ಹಾಸ್ಟೆಲುಗಳು ಗಂಡು ಮಕ್ಕಳಿಗೆ. ೫ ಹಾಸ್ಟೆಲುಗಳು ಹೆಣ್ಣು ಮಕ್ಕಳಿಗೆ. ೧೯೭೨ರಲ್ಲಿ ಇವುಗಳಲ್ಲಿದ್ದ ಮಕ್ಕಳು ೫೫೭. ಮಂಗಳೂರಿನಲ್ಲಿ ಕದ್ರಿ ಮತ್ತು ಕೊಡಿಯಾಲ್‌ಬೈಲ್‌ಗಳಲ್ಲಿ ಎರಡು ಹಾಸ್ಟೆಲುಗಳಿವೆ. ಬೆಳ್ತಂಗಡಿ. ಬಂಟವಾಳ. ಕಾರ್ಕಳ. ಮೂಡಬಿದ್ರಿ. ಪಡುಬಿದ್ರಿ. ಸುಳ್ಯ ಮತ್ತು ಮುಲ್ಕಿಗಳಲ್ಲಿ ತಲಾ ಒಂದು ಹಾಸ್ಟೆಲು ಇದೆ. ಇವುಗಳನ್ನು ಸರಕಾರ ನಡೆಸುತ್ತಿದೆ. ಇಲ್ಲಿಯ ಹಾಸ್ಟೆಲಿನ ಮಕ್ಕಳಿಗೆ ಪುಕ್ಕಟೆ ಊಟ. ವಸತಿ ಮತ್ತು ಬಟ್ಟೆಗಳನ್ನು ನೀಡುತ್ತಾರೆ. ಹರಿಜನರ ಖಾಸಗಿ ಹಾಸ್ಟೆಲುಗಳಿವೆ. ಇವುಗಳಿಗೆ ಸಮಾಜ ಕಲ್ಯಾಣ ಇಲಾಖೆ ಸಹಾಯ ಧನ ಒದಗಿಸುತ್ತದೆ.

ಪ್ರಾಥಮಿಕ ಶಾಲೆಯಲ್ಲಿ ಓದುವ ಹರಿಜನ ವಿದ್ಯಾರ್ಥಿಗೆ ವರ್ಷಕ್ಕೆ ೫೦ ರೂ. ಮತ್ತು ಮಾಧ್ಯಮಿಕ ಶಾಲೆಯಲ್ಲಿ ಓದುವ ಹರಿಜನ ವಿದ್ಯಾರ್ಥಿಗೆ ವರ್ಷಕ್ಕೆ ೭೫ ರೂ. ವಿದ್ಯಾರ್ಥಿ ವೇತನ ನೀಡಲಾಗುತ್ತದೆ. ೧೯೭೧–೭೨ರಲ್ಲಿ ೮೦೦ ಪ್ರಾಥಮಿಕ ಶಾಲೆಗಳು ಮತ್ತು ೩೨೦ ಮಾಧ್ಯಮಿಕ ಶಾಲೆಗಳ ಹರಿಜನ ವಿದ್ಯಾರ್ಥಿಗಳು ವಿದ್ಯಾರ್ಥಿವೇತನ ಪಡೆದರು. ಇದಕ್ಕಾಗಿ ೧೯೭೧–೭೨ರಲ್ಲಿ ಖರ್ಚಾದ ಹಣ ೬೫.೦೦೦ರೂ. ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವ ಹರಿಜನ ವಿದ್ಯಾರ್ಥಿಗೆ ಪ್ರಗತಿ ವೇತನ ವರ್ಷಕ್ಕೆ ೭೫ ರೂ. ಮತ್ತು ಮಾಧ್ಯಮಿಕ ಶಾಲೆಯಲ್ಲಿ ಓದುವ ವಿದ್ಯಾರ್ಥಿಗೆ ಓದುವುದರಲ್ಲಿ ಪ್ರಗತಿಯನ್ನು ತೋರಿಸಿದರೆ ವರ್ಷಕ್ಕೆ ೧೦೦ ರೂ. ಪ್ರಗತಿ ಸ್ಕಾಲರ್‌ಶಿಪ್ ಸಿಗುತ್ತದೆ. ೧೯೭೧–೭೨ರಲ್ಲಿ ೬೯ ಪ್ರಾಥಮಿಕ ಶಾಲೆಯ

ಮತ್ತು ೩೯ ಹೈಸ್ಕೂಲುಗಳಲ್ಲಿ ಓದುತ್ತಿರುವ ಹರಿಜನ ಮಕ್ಕಳಿಗೆ ಪ್ರಗತಿ ಸ್ಕಾಲರ್‌ಶಿಪ್ ಸಿಕ್ಕಿದೆ. ೧೯೭೧-೭೨ರಲ್ಲಿ ಇದಕ್ಕಾಗಿ ಖರ್ಚಾದ ಹಣ ರೂ. ೭,೫೦೦.

೧೯೭೧-೭೨ರಲ್ಲಿ ೧೨೫೦ ಎಕರೆ ಭೂಮಿಯನ್ನು ೬೨೮ ಹರಿಜನ-ಗಿರಿಜನ ಕುಟುಂಬಗಳಿಗೆ ಹಂಚಲಾಗಿದೆ. ಸಾಗುವಳಿಗೆ ಬೇಕಾದ ಬೀಜ ಮತ್ತು ಗೊಬ್ಬರ, ಎತ್ತು, ಕೃಷಿ ಉಪಕರಣಗಳನ್ನು ೧೦೦ ಹರಿಜನ ಕುಟುಂಬಗಳಿಗೆ ನೀಡಲಾಗಿದೆ. ಇದಕ್ಕಾಗಿ ೧೭,೦೦೦ ರೂ. ಖರ್ಚು. ಬಡ ಹರಿಜನ ಕುಟುಂಬಗಳಿಗೆ ನೆರವು: ಹಾಲು ಹಿಂಡುವ ಹಸು ಮತ್ತು ಎಮ್ಮೆಗಳನ್ನು ಕೊಳ್ಳಲು, ಕುರಿ ಸಾಕಲು, ಕೋಳಿ ಸಾಕಲು. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕಾಗಿ ೩೦ ಸಾವಿರ ರೂ. ಖರ್ಚು. ಹರಿಜನರ ಸಹಕಾರಿ ಸಂಘಗಳಿಗೆ ನೆರವು ನೀಡಲಾಗಿದೆ.

ಹರಿಜನರಿಗಾಗಿ ವಸಾಹತುಗಳ ಯೋಜನೆಯನ್ನು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಕೇಂದ್ರ ಸರಕಾರ ಪ್ರಾರಂಭ ಮಾಡಿದೆ. ಈ ಯೋಜನೆಯ ಅನ್ವಯ ೨೫೧ ಸಾವಿರ ರೂಪಾಯಿಗಳಲ್ಲಿ. ಹರಿಜನ ಕೃಷಿ ವಸಾಹತುಗಳು ಸುಳ್ಯ ತಾಲೂಕಿನಲ್ಲಿ ಅಜಾವರ ಮತ್ತು ಸುಬ್ರಹ್ಮಣ್ಯಗಳಲ್ಲಿ; ಪುತ್ತೂರು ತಾಲೂಕಿನಲ್ಲಿ ನಲ್ಕೂರು, ಮತ್ತು ನೆಟ್ಟನಿಂಜೆ ಮುಡುನು, ಬೆಳ್ತಂಗಡಿ ತಾಲೂಕಿನಲ್ಲಿ ಇಂದಬೆಟ್ಟು, ನಾರಾವಿ ಮತ್ತು ನೆರಿಯಾಗಳಲ್ಲಿ. ಉಡುಪಿ ತಾಲೂಕಿನಲ್ಲಿ ಹಿರೇಬೆಟ್ಟು ಮತ್ತು ಪುತ್ತೂರು, ಕಾರ್ಕಳ ತಾಲೂಕಿನಲ್ಲಿ ಇಡು ಮತ್ತು ಮಾಳಾಗಳಲ್ಲಿ ಇವೆ. ಈ ಕೃಷಿ ವಸಾಹತುಗಳಲ್ಲಿ ನೆಲೆಸಿದ ಪ್ರತಿ ಕುಟುಂಬಕ್ಕೆ ೫ ರಿಂದ ೧೦ ಎಕರೆ ಸಾಗುವಳಿ ಯೋಗ್ಯ ಭೂಮಿ ನೀಡಲಾಗಿದೆ. ಮನೆ ಕಟ್ಟಲು ಪ್ರತಿ ಕುಟುಂಬಕ್ಕೆ ೪೦೦ ರೂ. ನೆರವು ನೀಡಲಾಗಿದೆ. ಉಳುವ ಎತ್ತುಗಳನ್ನು ಕೊಳ್ಳಲು ೩೦೦ ರೂ. ಸಹಾಯ ಕೊಡಲಾಗಿದೆ. ಪ್ರತಿ ವಸಾಹತಿಗೆ ಸಮಾಜ ಮಂದಿರ ಮತ್ತು ಶಾಲೆಯ ಕಟ್ಟಡ ೨,೫೦೦ ರೂ.ಗಳಲ್ಲಿ. ೩೦೦ ರೂ.ಗಳಲ್ಲಿ ಒಂದು ರೇಡಿಯೋ ಸಮಾಜ ಮಂದಿರಕ್ಕೆ. ಈ ವಸಾಹತುಗಳಲ್ಲಿ ಕುಡಿಯುವ ನೀರಿನ ಬಾವಿಗಳ ಸೌಲಭ್ಯ ಮತ್ತು ಸಂಪರ್ಕ ರಸ್ತೆಯ ಸೌಕರ್ಯಗಳನ್ನು ಒದಗಿಸಲಾಗಿದೆ.

ಹರಿಜನ ಮಹಿಳೆಯರಿಗಾಗಿ ಎರಡು ಹೊಲಿಗೆ ತರಬೇತಿ ಕೇಂದ್ರಗಳನ್ನು ಉಡುಪಿ ಮತ್ತು ಮಂಗಳೂರುಗಳಲ್ಲಿ ಪ್ರಾರಂಭ ಮಾಡಿದ್ದಾರೆ. ಮಂಗಳೂರು ನಗರದ ಕೊಡಿಯಾಲಬೈಲಿನಲ್ಲಿ ಬಟ್ಟೆ ಹೊಲಿಯುವ ಕೇಂದ್ರ ಇದೆ. ಪ್ರತಿಯೊಂದು ಹೊಲಿಗೆ ತರಬೇತಿ ಕೇಂದ್ರದಲ್ಲಿ ೧೨ ಮಹಿಳೆಯರಿಗೆ ಹೊಲಿಗೆ ತರಬೇತಿಯನ್ನು ಹನ್ನೆರಡು ತಿಂಗಳು ನೀಡಲಾಗುತ್ತದೆ. ತರಬೇತಿ ಪಡೆಯುವವರಿಗೆ ಪ್ರತಿ ತಿಂಗಳು ೨೫ ರೂ. ಸಹಾಯಧನ. ಹೊಲಿಗೆಯಲ್ಲಿ ತರಬೇತಿಯನ್ನು ಪಡೆದ ನಂತರ ಪ್ರತಿಯೊಬ್ಬರಿಗೆ ಒಂದು ಹೊಲಿಗೆ ಯಂತ್ರವನ್ನು ಪುಕ್ಕಟೆಯಾಗಿ ನೀಡುತ್ತಾರೆ. ತರಬೇತಿ ಪಡೆದ ಕೆಲವರನ್ನು ಬಟ್ಟೆ ಹೊಲಿಯುವ ಕೇಂದ್ರಕ್ಕೆ ಸೇರಿಸಿಕೊಳ್ಳಲಾಗುತ್ತದೆ. ಮಂಗಳೂರು ನಗರದಲ್ಲಿ ಕತ್ತದ ತರಬೇತಿ ಕೇಂದ್ರ ಕದ್ರಿಯಲ್ಲಿದೆ. ಈ ಕೇಂದ್ರ ಹರಿಜನ ಹೆಂಗಸರಿಗೆ ಕತ್ತದ ವಸ್ತುಗಳನ್ನು ತಯಾರಿಸಲು ಬೇಕಾದ ಶಿಕ್ಷಣ ಮತ್ತು ತರಬೇತಿಯನ್ನು ನೀಡುತ್ತದೆ. ಈ ಕೇಂದ್ರದಲ್ಲಿ ಒಮ್ಮೆ ೨೫ ಹೆಂಗಸರಿಗೆ ತರಬೇತಿ ನೀಡುವ ಅವಕಾಶವಿದೆ. ತರಬೇತಿ ಕಾಲದಲ್ಲಿ ತರಬೇತಿ ಪಡೆಯುವವರಿಗೆ ಪ್ರತಿ ತಿಂಗಳು ೫೦ ರೂ. ಸ್ಟೈಪೆಂಡ್ ನೀಡುತ್ತಾರೆ. ೧೯೭೧-೭೨ರಲ್ಲಿ ಈ ಕೇಂದ್ರಗಳಿಗಾಗಿ ಸಮಾಜಕಲ್ಯಾಣ ಇಲಾಖೆ ೪೩,೩೪೫ ರೂ. ಖರ್ಚುಮಾಡಿದೆ.

ಪ್ರಥಮ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಸರಕಾರ ಹರಿಜನರಿಗಾಗಿ ವಸತಿ ಕಾರ್ಯಕ್ರಮವನ್ನು ಪ್ರಾರಂಭ ಮಾಡಿತು. ಈ ಕಾರ್ಯಕ್ರಮ ನಂತರದ ಪಂಚವಾರ್ಷಿಕ ಯೋಜನೆಗಳಲ್ಲಿ ಮುಂದುವರಿಯಿತು. ಹರಿಜನರು ಅನಾರೋಗ್ಯಕರ ಪರಿಸರದಲ್ಲಿ ಹುಲ್ಲಿನ ಗುಡಿಸಲುಗಳಲ್ಲಿ ವಾಸಿಸುತ್ತಿದ್ದರು. ಇವರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಯೋಗ್ಯ ನಿವೇಶನಗಳನ್ನು ಹಂಚುವ ದೃಷ್ಟಿಯಿಂದ ಸರಕಾರ ಯೋಗ್ಯ ಭೂಮಿಯನ್ನು ಗೊತ್ತು ಮಾಡಿತು. ೧೯೬೮-೧೯೭೧ರ ಅವಧಿಯಲ್ಲಿ ೭೨೫ ಕುಟುಂಬಗಳಿಗೆ ಮನೆ ಕಟ್ಟಿಕೊಳ್ಳಲು ನಿವೇಶನಗಳನ್ನು ಹಂಚಲಾಗಿದೆ. ೧೯೭೨ರಿಂದ ಈ ಕಾರ್ಯಕ್ರಮವನ್ನು ತುಂಬ ಚುರುಕುಗೊಳಿಸಲಾಗಿದೆ. ತುಂಬ ಹರಿಜನ ಕುಟುಂಬಗಳಿಗೆ ಮನೆ ಕಟ್ಟಿಕೊಳ್ಳಲು

ನಿವೇಶನಗಳು ಸಿಕ್ಕಿವೆ. ಪ್ರಕಟಿತ ನಿವೇಶನಗಳನ್ನು ಹಂಚಿದ್ದಷ್ಟೇ ಅಲ್ಲದೆ, ಅರ್ಹ ಹರಿಜನ ಕುಟುಂಬಕ್ಕೆ ಮನೆ ಕಟ್ಟಿಕೊಳ್ಳಲು ೭೦೦ ರೂ. ನೆರವು ನೀಡಲಾಗಿದೆ.

ಈ ಜಿಲ್ಲೆಯ ಪ್ರತಿಯೊಂದು ತಾಲೂಕಿನಲ್ಲಿ ಹರಿಜನ–ಗಿರಿಜನರಿಗಾಗಿ ಗೃಹನಿರ್ಮಾಣ ಸಹಕಾರಿ ಸಂಘ ಇದೆ. ಈ ಸಂಘಗಳು ಮನೆ ಇಲ್ಲದ ಹರಿಜನ–ಗಿರಿಜನರಿಗೆ ಮನೆ ಕಟ್ಟಿಕೊಳ್ಳಲು ಸಾಲ ನೀಡುತ್ತವೆ. ಈ ಸಂಘ ನೀಡುವ ಸಾಲ ಪ್ರತಿ ಕುಟುಂಬಕ್ಕೆ ಒಂದು ಸಾವಿರ ರೂಪಾಯಿಗಳಿಂದ ಮೂರು ಸಾವಿರ ರೂಪಾಯಿಗಳ ವರೆಗೆ. ಅಲ್ಲದೆ ಪ್ರತಿಯೊಬ್ಬ ಸಾಲಗಾರನಿಗೆ ಮನೆಕಟ್ಟಿಕೊಳ್ಳಲು ಸಹಾಯವಾಗಲು ಎರಡು ನೂರು ರೂಪಾಯಿ ಬೆಲೆಬಾಳುವ ಕಟ್ಟಿಗೆಯನ್ನು ಪ್ರಕಟಿಯಾಗಿ ಪೂರೈಸಲಾಗುತ್ತದೆ. ೧೯೭೧–೭೨ರಲ್ಲಿ ಜಿಲ್ಲೆಯ ಹರಿಜನ–ಗಿರಿಜನ ಗೃಹನಿರ್ಮಾಣ ಸಹಕಾರಿ ಸಂಘಗಳು ೧೭೭ ಹರಿಜನ ಗಿರಿಜನ ಕುಟುಂಬಗಳಿಗೆ ೪.೮೮.೫೫೦ ರೂ. ಸಾಲ ನೀಡಿವೆ. ೧೭೭ ಮನೆಗಳಲ್ಲಿ ೧೩೬ ಮನೆಗಳು ಪೂರ್ಣ ತಯಾರಾಗಿವೆ. ಉಳಿದ ಮನೆಗಳು ತಯಾರಾಗುತ್ತಿವೆ.

ಸಮಾಜದ ಭಿನ್ನ ಭಿನ್ನ ಸಮಾಜದವರಲ್ಲಿ ಪರಸ್ಪರ ಸ್ನೇಹ ಮತ್ತು ಒಕ್ಕಟ್ಟನ್ನು ಕುದುರಿಸುವ ದೃಷ್ಟಿಯಿಂದ ಸಮಾಜ ಮಂದಿರಗಳು ಪ್ರಯೋಜನಕಾರಿಯಾಗಿವೆ. ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ಈ ಸಮಾಜ ಮಂದಿರಗಳು ಇವೆ. ೧೯೭೧–೭೨ರಲ್ಲಿ ಈ ಜಿಲ್ಲೆಯಲ್ಲಿ ೪೩೧ ಸಮಾಜ ಮಂದಿರಗಳು ಇದ್ದುವು. ಇವುಗಳಲ್ಲಿ ೨೪ ಹರಿಜನರಿಗಾಗಿ ಮತ್ತು ಉಳಿದವು ಗಿರಿಜನ ಮತ್ತು ಹಿಂದುಳಿದ ವರ್ಗದವರಿಗಾಗಿ. ಇಷ್ಟೇ ಅಲ್ಲದೆ ಹರಿಜನ ಅಭಿವೃದ್ಧಿಗಾಗಿ ಇನ್ನೂ ಕೆಲವು ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದಾರೆ: ಕುಡಿಯುವ ನೀರಿನ ಬಾವಿಗಳು. ಹರಿಜನ ವಸಾಹತುಗಳಿಗೆ ಸಂಪರ್ಕ ರಸ್ತೆ, ಹರಿಜನ ಕಲ್ಯಾಣ ಕಾರ್ಯದಲ್ಲಿ ತೊಡಗಿದವರಿಗೆ ನೆರವು. ಬಡವರಿಗೆ ಕಾನೂನು ನೆರವು. ಅಸ್ಪೃಶ್ಯತೆಯ ವಿರುದ್ಧ ಪ್ರಚಾರ ಮತ್ತು ಪ್ರಸಾರ. ಜಾಡಮಾಲಿ ಮತ್ತು ಭಂಗಿಗಳಿಗೆ ಕೈಬಂಡಿ ಚಕ್ರಗಳ ಮತ್ತು ಕೈಗಾಡಿಗಳ ಪೂರೈಕೆ. ಹರಿಜನ ವಿದ್ಯಾರ್ಥಿಗಳಿಗೆ ಊಟಕ್ಕಾಗಿ ಗ್ರ್ಯಾಂಟು. ಇತ್ಯಾದಿ.

ಈ ಜಿಲ್ಲೆಯ ಗಿರಿಜನೋದ್ಧಾರಕ್ಕಾಗಿ ಸಹ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದಾರೆ. ಆಶ್ರಮ ಶಾಲೆಗಳ ಸ್ಥಾಪನೆ. ಶೈಕ್ಷಣಿಕ ನೆರವು. ಕೃಷಿ ಮತ್ತು ಗುಡಿ ಕೈಗಾರಿಕೆಗಳಿಗೆ ನೆರವು, ಗಿರಿಜನರ ಉದ್ಧಾರಕ್ಕಾಗಿ ತಾತ್ಕಾಲಿಕ ಬ್ಲಾಕುಗಳ ಸ್ಥಾಪನೆ. ವಸತಿ ಸೌಕರ್ಯ ನಿರ್ಮಾಣ ಇತ್ಯಾದಿ. ಗಿರಿಜನ ವಿದ್ಯಾರ್ಥಿಗಳಿಗಾಗಿ ವಿಟ್ಲ. ಮುಂಡಾಜೆ. ಅಜೆಕಾರು ಮತ್ತು ಬೆಳ್ತಂಗಡಿಗಳಲ್ಲಿ ನಾಲ್ಕು ಹಾಸ್ಟೆಲುಗಳನ್ನು ಪ್ರಾರಂಭಿಸಿದ್ದಾರೆ. ಈ ನಾಲ್ಕು ಹಾಸ್ಟೆಲುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ೨೦೭. ಅಡ್ಯನಡ್ಕದಲ್ಲಿ ಗಿರಿಜನರ ೫೦ ವಿದ್ಯಾರ್ಥಿಗಳ ಒಂದು ಹಾಸ್ಟೆಲು ಇದೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಓದುತ್ತಿರುವ ಗಿರಿಜನ ವಿದ್ಯಾರ್ಥಿಗಳಿಗೆ ಅನುಕ್ರಮವಾಗಿ ವರ್ಷಕ್ಕೆ ೫೦ ರೂ. ಮತ್ತು ೭೫ ರೂ. ಸ್ಕಾಲರ್‌ಶಿಪ್‌ಗಳನ್ನು ನೀಡುತ್ತಿದ್ದಾರೆ. ಇದರಿಂದ ಪ್ರಯೋಜನ ಪಡೆದ ವಿದ್ಯಾರ್ಥಿಗಳು ೮೨೦. ಇದಕ್ಕಾಗಿ ೧೯೭೧–೭೨ರಲ್ಲಿ ಖರ್ಚಾದ ಹಣ ೪೮.೪೨೫ ರೂ. ೧೯೭೧–೭೨ರಲ್ಲಿ ೮೦೦ ಗಿರಿಜನ ಮಕ್ಕಳಿಗೆ ೧೬.೦೦೦ ರೂ.ಗಳಲ್ಲಿ ಬಟ್ಟೆಬರೆಗಳನ್ನು ಒದಗಿಸಿದರು. ಗಿರಿಜನ ತಾತ್ಕಾಲಿಕ ಅಭಿವೃದ್ಧಿ ಬ್ಲಾಕುಗಳ ೬೦೦ ಗಿರಿಜನ ಮಕ್ಕಳಿಗೆ ಸಮವಸ್ತ್ರಗಳನ್ನು ಒದಗಿಸಿದರು. ೬೦೦೦ ರೂ.ಗಳಲ್ಲಿ.

ಗಿರಿಜನ ಮಕ್ಕಳ ಶಿಕ್ಷಣಕ್ಕಾಗಿ ಆಶ್ರಮ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೩ ಆಶ್ರಮ ಶಾಲೆಗಳಲ್ಲಿ ೬೩೫ ಗಿರಿಜನ ವಿದ್ಯಾರ್ಥಿಗಳಿಗೆ ಶಿಕ್ಷಣ ಪಡೆಯುವ ಅವಕಾಶ ಇದೆ. ಆಶ್ರಮ ಶಾಲೆಗಳಲ್ಲಿ ಮಕ್ಕಳಿಗೆ ಪ್ರಾಥಮಿಕ ಶಾಲೆಯ ನಾಲ್ಕನೇ ಈಯತ್ತೆಯವರೆಗೆ ಶಿಕ್ಷಣ ನೀಡುತ್ತಾರೆ. ಈ ಶಾಲೆಗಳಲ್ಲಿ ಮಕ್ಕಳಿಗೆ ಉಚಿತ ವಸತಿ. ಬಟ್ಟೆಬರೆ ಮತ್ತು ಪುಸ್ತಕ ಇತ್ಯಾದಿಗಳನ್ನು ಒದಗಿಸಲಾಗುತ್ತದೆ. ೧೯೭೧–೭೨ರಲ್ಲಿ ಈ ಶಾಲೆಗಳಿಗಾಗಿ ಸರಕಾರ ಒಂದೂಕಾಲು ಲಕ್ಷ ರೂಪಾಯಿ ಖರ್ಚು ಮಾಡಿದೆ.

ಗಿರಿಜನರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಉದ್ದೇಶದಿಂದ ಅನೇಕ ಗಿರಿಜನರಿಗೆ ಸಾಗುವಳಿ ಯೋಗ್ಯ ಭೂಮಿಯನ್ನು ನೀಡಲಾಗಿದೆ. ಗಿರಿಜನ ಕೃಷಿಕರಿಗೆ ಹೊಲ ಉಳುವ ಎತ್ತುಗಳು, ಕೃಷಿ ಉಪಕರಣಗಳು, ಬೀಜಗಳು, ಗೊಬ್ಬರ. ಇತ್ಯಾದಿಗಳನ್ನು ಪೂರೈಸಲಾಗಿದೆ. ನೀರಾವರಿ ಸೌಲಭ್ಯ

ಗಳನ್ನು ಪಡೆಯಲು ಕೆಲವರಿಗೆ ಸಾಲಗಳನ್ನು ಒದಗಿಸಲಾಗಿದೆ. ೧೯೭೧-೭೨ರಲ್ಲಿ ಸುಮಾರು ನೂರು ಕುಟುಂಬಗಳಿಗೆ ೨೮,೦೦೦ ರೂ.ಗಳ ಕೃಷಿ ನೆರವು ನೀಡಲಾಗಿದೆ. ನಾಲ್ಕು ಕುಟುಂಬಗಳಿಗೆ ೧೫೦೦ ರೂ.ಗಳ ನೀರಾವರಿ ಸಾಲ ನೀಡಲಾಗಿದೆ. ತಮ್ಮ ಗಳಿಕೆಯನ್ನು ಹೆಚ್ಚಿಸಿಕೊಳ್ಳಲು ಬಯಸುವ ಅರ್ಹ ಗಿರಿಜನರಿಗೆ ಆಡು ಮತ್ತು ಕುರಿಗಳನ್ನು, ಕೋಳಿಗಳನ್ನು, ಹಂದಿಗಳನ್ನು ಹಾಲು ಹಿಂಡುವ ಹಸುಗಳನ್ನು ಹಂಚ ಲಾಗಿದೆ. ೧೯೭೧-೭೨ರಲ್ಲಿ ಸುಮಾರು ೨೦ ಕುಟುಂಬಗಳಿಗೆ ಈ ಸೌಲಭ್ಯ ೫೦೦೦ ರೂ.ಗಳಲ್ಲಿ ಸಿಕ್ಕಿದೆ. ಗಿರಿಜನ ಕೂಲಿಕಾರರಿಗಾಗಿ ಗಿರಿಜನ ಅರಣ್ಯ ಕೂಲಿಕಾರರ ಸಹಕಾರಿ ಸಂಘವನ್ನು ಪುತ್ತೂರು, ಬೆಳ್ತಂಗಡಿ ಮತ್ತು ಸುಳ್ಯ ತಾಲೂಕುಗಳಲ್ಲಿ ಪ್ರಾರಂಭ ಮಾಡಿದ್ದಾರೆ. ಉಡುಪಿ, ಕಾರ್ಕಳ ಮತ್ತು ಬೆಳ್ತಂಗಡಿಯಲ್ಲಿ ತಾತ್ಕಾಲಿಕ ಗಿರಿಜನ ಅಭಿವೃದ್ಧಿ ಬ್ಲಾಕುಗಳನ್ನು ಗಿರಿಜನರ ಅಭಿವೃದ್ಧಿಗಾಗಿ ಪ್ರಾರಂಭಿಸಲಾಗಿದೆ. ಇದು ಕೇಂದ್ರ ಸರಕಾರದ ಯೋಜನೆ. ಗಿರಿಜನರ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಲು ಈ ಮೂರು ಬ್ಲಾಕುಗಳಿಗೆ ಸೇರಿದ ಗಿರಿಜನರಿಗೆ ಎಲ್ಲ ವಿಧವಾದ ಸವಲತ್ತುಗಳನ್ನು ಗಿರಿಜನರ ಅಭಿವೃದ್ಧಿ ದೃಷ್ಟಿ ಯಿಂದ ನೀಡಲಾಗುತ್ತಿದೆ. ಹೊಲ ಉಳಲು ಎತ್ತುಗಳನ್ನು ಭೂಮಿಯನ್ನು ಸಾಗುವಳಿಗೆ ತರಲು ಬೇಕಾದ ಸೌಲಭ್ಯಗಳನ್ನು, ವಸತಿ ಸೌಕರ್ಯಗಳನ್ನು, ಕುರಿ ಸಾಕಲು, ಕೋಳಿ ಸಾಕಲು ಸವಲತ್ತುಗಳನ್ನು, ಕುಡಿಯುವ ನೀರಿನ ಸೌಲಭ್ಯಗಳನ್ನು ಆರೋಗ್ಯದ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಇದಕ್ಕಾಗಿ ೧೯೭೧-೭೨ರಲ್ಲಿ ೧,೨೦,೫೭೦ ರೂ.ಗಳನ್ನು ಖರ್ಚು ಮಾಡಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿಯೊಂದು ತಾಲೂಕು ಅಭಿವೃದ್ಧಿ ಮಂಡಳಿ ಹರಿಜನ-ಗಿರಿಜನ ಕ್ಷೇಮಾಭ್ಯುದಯಕ್ಕಾಗಿ ಅವರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸ್ಥಿತಿ ಸುಧಾರಣೆಗಾಗಿ ಅನೇಕ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದಿದೆ.

ಹಣಕಾಸು

ದಕ್ಷಿಣ ಕನ್ನಡ ಜಿಲ್ಲೆಯ ತಾಲೂಕು ಅಭಿವೃದ್ಧಿ ಮಂಡಳಿಯ ಆಯ ವ್ಯಯದ ಬಗ್ಗೆ ಕೆಲವು ಮಾತು ಗಳನ್ನು ಹೇಳಬೇಕು. ತಾಲೂಕು ಅಭಿವೃದ್ಧಿ ಮಂಡಳಿಗಳು ಯಾವ ಯಾವ ಮೂಲಗಳಿಂದ ತಾಲೂಕು ಅಭಿವೃದ್ಧಿ ಮಂಡಳಿಗಳಿಗೆ ಬೇಕಾದ ಆದಾಯಗಳನ್ನು ಪಡೆಯುತ್ತಿವೆ, ಯಾವ ಯಾವುದಕ್ಕೆ ಈ ಹಣ ಖರ್ಚಾಗುತ್ತದೆ-ಈ ಕುರಿತು ತಾಲೂಕು ಅಭಿವೃದ್ಧಿ ಮಂಡಳಿಯ ಆಯವ್ಯಯ ಪಟ್ಟಿ ಮಾಹಿತಿ ನೀಡುತ್ತದೆ. ಉಡುಪಿ ತಾಲೂಕಿನ ಅಭಿವೃದ್ಧಿ ಮಂಡಳಿಯ ಆಯವ್ಯಯದ ಬಗ್ಗೆ ನಮಗೆ ೧೯೬೧-೬೨ ರಿಂದ ೧೯೭೪-೭೫ರ ವರೆಗೆ ಮಾಹಿತಿ ಸಿಗುತ್ತದೆ. ಇದರಲ್ಲಿ ೧೯೬೭-೬೮ರ ಕುರಿತು ಮಾತ್ರ ಆಯ ವ್ಯಯದ ಬಗ್ಗೆ ಮಾಹಿತಿ ಸಿಗಲಿಲ್ಲ.

ಉಡುಪಿ ತಾಲೂಕು ಅಭಿವೃದ್ಧಿ ಮಂಡಳಿ ೧೩ ವರ್ಷಗಳ ಅಭಿವೃದ್ಧಿಯಲ್ಲಿ ೭೬,೯೯,೦೭೫ ರೂ.ಗಳ ಆದಾಯ ಪಡೆದಿದೆ. ಸರಕಾರದಿಂದ ಪಡೆದ ಸಹಾಯ: ಇದರಲ್ಲಿ (ಎ) ಉಡುಪಿ ತಾಲೂಕಿ ನಲ್ಲಿ ಸಂಗ್ರಹಿಸಲಾದ ಭೂ ಕಂದಾಯದ ಶೇಕಡ ೨೦ರಷ್ಟು ಹಣ ಮೈಸೂರು ಗ್ರಾಮ ಪಂಚಾಯತ ಮತ್ತು ಲೋಕಲ್ ಬೋರ್ಡ್ ಆ್ಯಕ್ಟ್ ೧೯೫೯ರ ಪ್ರಕಾರ. ಈ ಪಾಲು ೧೯೬೯-೭೦ರಲ್ಲಿ ಶೇಕಡ ೫೦ಕ್ಕೆ ಏರಿತು. (ಬಿ), ಭೂಕಂದಾಯದ ಪಾಲು. (ಸಿ) ಭೂಕಂದಾಯದ ಮೇಲೆ ಸ್ಥಳೀಯ ಸೆಸ್-ಇವು ಸೇರುತ್ತವೆ. ದರಗಳು ಮತ್ತು ತೆರಿಗೆಗಳು ಇದರಲ್ಲಿ (ಎ) ಸ್ಥಿರ ಆಸ್ತಿಯ ವರ್ಗಾವಣೆಯ ಮೇಲೆ ಸುಂಕ, (ಬಿ) ಲೈಸನ್ಸ್ ಫೀ. ತಾಲೂಕು ಅಭಿವೃದ್ಧಿ ಮಂಡಳಿಯ ಆಸ್ತಿಪಾಸ್ತಿಗಳಿಂದ ಪಡೆದ ಆದಾಯ: (ಎ) ಕಟ್ಟಡ ಮತ್ತು ಸ್ಥಳಬಾಡಿಗೆ. (ಬಿ) ಹುಲ್ಲು ಮತ್ತು ಮರದ ಉತ್ಪತ್ತಿ ಮಾರಾಟ ಇತ್ಯಾದಿ. (ಸಿ) ಕಡವುಗಳಿಂದ ಆದಾಯ (ಡಿ) ಆಸ್ಪತ್ರೆ ಮತ್ತು ದವಾಖಾನೆಗಳಿಂದ. (ಇ) ಪ್ರವಾಸಿ ಮಂದಿರಗಳಿಂದ, (ಎಫ್)ಹಳೆಯ ಉಪಯೋಗಿಸಿದ ಸಾಮಾನುಗಳಿಂದ, (ಜಿ) ಭೂಮಿ ಮತ್ತು ಸ್ಥಳ ಮಾರಾಟದಿಂದ. ವಿವಿಧ ರೀತಿಯ ಜಮೆ ಮತ್ತು ಶಿಕ್ಷಣ: ಅನುದಾನ ಮತ್ತು ಸಹಾಯಧನ ಇದರಲ್ಲಿ (ಎ). ಮೈಸೂರು ಸರಕಾರದ ವೆಹಿಕಲ್ ಟೆಕ್ಸೇಶನ್ ಆ್ಯಕ್ಟ ಪ್ರಕಾರ ಪರಿಹಾರ ಧನ, (ಬಿ) ವೈದ್ಯಕೀಯ ಸಂಸ್ಥೆಗಳ ಬಗ್ಗೆ ಅನುದಾನ-ಇವು ಸೇರುತ್ತವೆ. ಸಾಲದ ಖಾತೆಗಳಲ್ಲಿ: (ಎ). ಸಾಲ, (ಬಿ)ಠೇವಣಿ, (ಸಿ). ಮುಂಗಡ, (ಡಿ). ಸರಕಾರದಿಂದ ಗೊತ್ತುಪಡಿಸಲ್ಪಟ್ಟ ಉದ್ದೇಶಗಳಿಗಾಗಿ ಅನುದಾನ-ಇವು ಸೇರುತ್ತವೆ.

೧೩ ವರ್ಷಗಳ ಅವಧಿಯಲ್ಲಿ ಉಡುಪಿ ತಾಲೂಕು ಅಭಿವೃದ್ಧಿ ಮಂಡಳಿ ಖರ್ಚು ಮಾಡಿದ ಹಣ: ೯೮,೩೧,೩೪೮ ರೂ.ಗಳು.

ಲೋಕೋಪಯೋಗಿ ಇಲಾಖೆಯಿಂದ ಮಾಡಿಸಲ್ಪಟ್ಟ ಸಾರ್ವಜನಿಕ ಕೆಲಸಗಳು ಮತ್ತು ಮೂಲಕೆಲಸಗಳು:

ತಾಲೂಕು ಅಭಿವೃದ್ಧಿ ಮಂಡಳಿ ಮಾಡಿದ ಸಾರ್ವಜನಿಕ ಕಾಮಗಾರಿಗಳು:

೧. ಮೂಲ ಕೆಲಸಗಳು: (ಎ) ಕಟ್ಟಡಗಳು, (ಬಿ) ರಸ್ತೆಗಳು ಮತ್ತು ಸಂಕಗಳು. (ಸಿ) ಸರಕಾರಿ ಪ್ರಾಥಮಿಕ ಶಾಲೆ ಕಟ್ಟಡಗಳು, (ಡಿ) ಸಣ್ಣ ನೀರಾವರಿ ಕೆಲಸಗಳು

೨. ದುರಸ್ತಿ: ಕಟ್ಟಡಗಳು. (ಬಿ) ರಸ್ತೆಗಳು ಮತ್ತು ಸಂಕಗಳು. ಸಿಬ್ಬಂದಿ ವರ್ಗ: (ಎ) ಸಿಬ್ಬಂದಿ ವರ್ಗದ ಸಂಬಳ (ಬಿ) ಪ್ರಯಾಣ ಭತ್ತೆ, (ಸಿ) ಸಾದಿಲವಾರು ಖರ್ಚು. (ಡಿ) ರಜೆ ಸಂಬಳ ಮತ್ತು ವಿಶ್ರಾಂತಿ ವೇತನ ಅಂಶದಾನ.

ಸಾರ್ವಜನಿಕ ಆರೋಗ್ಯದ ಬಗ್ಗೆ ಖರ್ಚು: (೧) ಹೆಲ್ತ ಇನ್‌ಸ್ಪೆಕ್ಟರ ಮತ್ತು ಸೂಲಗಿತ್ತಿಯರು:

ಸಾರ್ವಜನಿಕ ಆರೋಗ್ಯದ ಬಗ್ಗೆ ಖರ್ಚು: (೧) ಹೆಲ್ತ ಇನ್‌ಸ್ಪೆಕ್ಟರ ಮತ್ತು ಸೂಲಗಿತ್ತಿಯರು: (ಎ) ಸಂಬಳ. (ಬಿ) ಪ್ರಯಾಣ ಭತ್ತೆ. (ಸಿ) ಸಾದಿಲವಾರು ಖರ್ಚು, (ಡಿ) ಭವಿಷ್ಯನಿಧಿ. (೨) ಆಸ್ಪತ್ರೆ ಮತ್ತು ಔಷಧಾಲಯ: (ಎ) ವೈದ್ಯಾಧಿಕಾರಿಗಳ ಸಂಬಳ. (ಬಿ) ಇತರ ಸಿಬ್ಬಂದಿಗಳ ಸಂಬಳ, ಭತ್ತೆ ಇತ್ಯಾದಿ (ಸಿ) ಸಿಬ್ಬಂದಿಗಳ ಭವಿಷ್ಯನಿಧಿ ಮತ್ತು ಲಾಭಾಂಶ ನಿಧಿಗೆ ಅನುದಾನ. (ಡಿ) ಔಷಧ. (ಇ) ರೋಗಿಗಳಿಗೆ ಪಥ್ಯದ ಆಹಾರ. (ಎಫ್) ಆಸ್ಪತ್ರೆ ಉಪಕರಣಗಳು. (ಜಿ) ಲೇಖನ ಸಾಮಗ್ರಿ ಮತ್ತು ಮುದ್ರಣ. (ಎಚ್) ಕ್ಷ-ಕಿರಣ ಸಾಮಗ್ರಿಗಳು. (ಐ) ಶೀತೋಪಕರಣ ಮತ್ತು ಇತರ ಉಪಕರಣಗಳು (ಜೆ) ಟಪ್ಪಾಲು ಮತ್ತು ತಂತಿ, (ಕೆ) ಇತರ ಸಾದಿಲ್ವಾರು ಖರ್ಚು.

೩. ಆರೋಗ್ಯ ಘಟಕ ಮಾದರಿ ಔಷಧಾಲಯಗಳು: (ಎ) ವೈದ್ಯಾಧಿಕಾರಿಗಳ ಸಂಬಳ, (ಬಿ) ಇತರ ಸಿಬ್ಬಂದಿಗಳ ಸಂಬಳ. (ಸಿ) ಪ್ರಯಾಣ ಭತ್ತೆ. (ಡಿ) ಟಪ್ಪಾಲು ಮತ್ತು ತಂತಿ. (ಇ) ಸಾದಿಲ್ವಾರು ಖರ್ಚು. (ಎಫ್) ಕಟ್ಟಡದ ಬಾಡಿಗೆ. (ಜಿ) ಔಷಧ(ಎಚ್) ಕುಟುಂಬ ಯೋಜನೆ (ಐ) ಲೇಖನ ಸಾಮಗ್ರಿ ಮತ್ತು ಮುದ್ರಣ (ಜೆ) ಶೀತೋಪಕರಣಗಳು. (ಕೆ) ಸಿಬ್ಬಂದಿಯವರ ಭವಿಷ್ಯನಿಧಿಗೆ.

೪. ಆಯುರ್ವೇದ ಪಂಡಿತರು ಮತ್ತು ಹಳ್ಳಿಯ ವೈದ್ಯರು: (ಎ) ಸಿಬ್ಬಂದಿ ಸಂಬಳ. (ಬಿ) ಸಾದಿಲ್ವಾರು. (ಸಿ) ವೈದ್ಯರಿಗೆ ಸಹಾಯಧನ ನಾಗರಿಕ ಸೌಕರ್ಯಕ್ಕಾಗಿ ಖರ್ಚು: (ಎ) ಪ್ರವಾಸಿ ಮಂದಿರಗಳ ಸಿಬ್ಬಂದಿಗಳ ಸಂಬಳದ ಖರ್ಚು, (ಬಿ) ಪ್ರಯಾಣ ಭತ್ತೆ. (ಸಿ) ಸಾದಿಲ್ವಾರು ಖರ್ಚು. ಶಿಕ್ಷಣ: ಸಮಾಜ ಶಿಕ್ಷಣಕ್ಕಾಗಿ ಖರ್ಚು. ಅನುದಾನ ಮತ್ತು ಸಹಾಯ ಧನ ನೀಡಲು ಖರ್ಚು: (ಎ) ನೆರೆ ಮತ್ತು ಬೆಂಕಿ ಅನಾಹುತದಿಂದ ಪೀಡಿತರಾದವರಿಗೆ ಸಹಾಯಧನ. (ಬಿ) ರೆಡ್‌ಕ್ರಾಸ್ ಸಂಸ್ಥೆಗೆ ಸಹಾಯಧನ (ಸಿ) ಭಾರತ ಸ್ಕೌಟ ಮತ್ತು ಗೈಡ ಸಂಸ್ಥೆಗಳಿಗೆ ಸಹಾಯಧನ. (ಡಿ) ವಿದ್ಯಾ ಸಂಸ್ಥೆಗಳಿಗೆ ಅನುದಾನ ನಾನಾ ತರದ ಖರ್ಚು: (ಎ) ಜಾರಿಗಳ ಆಡಳಿತಕ್ಕಾಗಿ, (ಬಿ) ಕೃಷಿಯ ಬಗ್ಗೆ. (ಸಿ) ಹರಿಜನ ಏಳಿಗೆಗಾಗಿ (ಡಿ) ಇತರ ವಿವಿಧ ಆದಾಯದ ವಾಪಸಾತಿ (ಇ) ಪಂಪ್ರಸೆಟ್ಟು ಖರೀದಿ. ಸಾಲ: (ಎ) ಠೇವಣಿಗಳು. (ಬಿ) ಸರಕಾರದ ವಿಶೇಷ ಉದ್ದೇಶಗಳಿಗಾಗಿ ಅನುದಾನ (ಸಿ) ಮುಂಗಡಗಳು. (ಡಿ) ಅಂಚೆ ಖಾತೆಯಲ್ಲಿ ವಿನಿಯೋಗಿಸಿದ ಹಣ

ಉಡುಪಿ ತಾಲೂಕು ಅಭಿವೃದ್ಧಿ ಮಂಡಳಿಯ ಆಯವ್ಯಯದ ಇಲ್ಲಿವೆ ಹಣಕಾಸಿನ ವ್ಯವಸ್ಥೆಯಂತೆ ಇತರ ತಾಲೂಕು ಅಭಿವೃದ್ಧಿ ಮಂಡಳಿಗಳ ಹಣಕಾಸಿನ ವ್ಯವಸ್ಥೆ ಇರುತ್ತದೆ.

೩

ದಕ್ಷಿಣ ಕನ್ನಡ ಜಿಲ್ಲೆಯ ತಾಲೂಕು ಅಭಿವೃದ್ಧಿ ಮಂಡಳಿಗಳು ತಾಲೂಕು ಅಭಿವೃದ್ಧಿ ಮಂಡಳಿಯ– ಸಾಮುದಾಯಿಕ ಅಭಿವೃದ್ಧಿಯ ಇಷ್ಟ ಗುರಿಗಳನ್ನು ಸಾಧಿಸಿವೆಯೆ? ಉದ್ದೇಶಗಳನ್ನು ಪ್ರಾರ್ಥಿ

ಗೊಳಿಸಿವೆಯೆ? ಆಲೋಚಿಸಬೇಕಾದ ಪ್ರಶ್ನೆ. ದಕ್ಷಿಣ ಕನ್ನಡಿಗನಿಗೆ ಗ್ರಾಮೀಣ ಪ್ರದೇಶಗಳಲ್ಲಿ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸಾಂಸ್ಕೃತಿಕ, ರಾಜಕೀಯ ಮತ್ತು ಆರೋಗ್ಯದ ಸ್ಥಿತಿ ಮತ್ತು ಪರಿಸ್ಥಿತಿ ಪ್ರಾಪ್ತವಾಗಿವೆಯೆ? ಈ ಸ್ಥಿತಿಗಳಲ್ಲಿ ಸುಧಾರಣೆ ಸಾಮುದಾಯಿಕ ಅಭಿವೃದ್ಧಿ ಯೋಜನೆಗಳನು ಅನುಷ್ಠಾನಕ್ಕೆ ತರುವುದರಿಂದ ಸಾಧ್ಯವಾಗಿದೆಯೆ? ಇದಕ್ಕಾಗಿ ತಾಲೂಕು ಅಭಿವೃದ್ಧಿ ಮಂಡಲಿಗಳಿಗೆ ಚುನಾಯಿತರಾದ ಸದಸ್ಯರು, ಅಧ್ಯಕ್ಷರು ಅಧಿಕಾರ ವರ್ಗದವರು ಪ್ರಯತ್ನಿಸಿದ್ದಾರೆಯೆ? ಅಥವಾ ತಮ್ಮ ತಮ್ಮ ಅಧಿಕಾರಕ್ಕೆ ಕಟ್ಟಿಕೊಂಡು ತಮ್ಮ ಭವಿಷ್ಯಕ್ಕಾಗಿ ಭವ್ಯ ಭವಿಷ್ಯ ನಿರ್ಮಾಣಕ್ಕಾಗಿ ಸಾಮುದಾಯಿಕ ಅಭಿವೃದ್ಧಿಯನ್ನು ಕಚ್ಚಾ ಸರಕನ್ನಾಗಿ ಉಪಯೋಗಿಸಿದ್ದಾರೆಯೆ? ಇವೆಲ್ಲವನ್ನು ಆಲೋಚಿಸಬೇಕು.

ಗ್ರಂಥಋಣ

1. Community Development and Panchayat Raj, Sugun Chand Jain, Allied Publishers Private Ltd., Bombay, New Delhi, Calcutta and Madras, 1967.
2. Rural Sociology in India, A.R. Desai, Popular Prakashan, Bombay Fourth Edition, 1969.
3. Karnataka State Gazetteer, South Kanara District, 197³.
4 ದಕ್ಷಿಣ ಕನ್ನಡ ಜಿಲ್ಲೆ, ಮೈಸೂರು ಸರಕಾರದ ಪ್ರಚಾರ ಮತ್ತು ವಾರ್ತಾ ಇಲಾಖೆಯ ಪ್ರಕಟನೆ (೧೯೭೬) ಬೆಂಗಳೂರು.
5. Indian Economy, Ruddar Dutt and KPM Sundharam, Eleventh Revised Edition 1975. S. Chand & Co., Private Ltd., Ramanagar, New Delhi.
6. Reports on the Administration of the Taluk Development Board Udupi, S.K. for the years: 1961–62: 1962–63; 196 -64; 1964–65; 1965–66; 1966–67; 1967–68; 1968–69; 1969–70; 1970–71; 1971–72; 1972–73; 1973–74; 1974–75.
7 ಪುತ್ತೂರು, ತಾಲೂಕು ಅಭಿವೃದ್ಧಿ ಮಂಡಳಿಯ ಆಡಳಿತ ವರದಿಗಳು ೧೯೬೯–೭೦; ೧೯೭೦–೭೧; ೧೯೭೧–೭೨; ೧೯೭೩–೭೪; ೧೯೭೪–೭೫.
8 ಕುಂದಾಪುರ ತಾಲೂಕು ಅಭಿವೃದ್ಧಿ ಮಂಡಳಿಯ ಸಂಸ್ಮರಣ ಸಂಚಿಕೆ. ೧೯೬೯
9 ಕುಂದಾಪುರ ತಾಲೂಕು ಅಭಿವೃದ್ಧಿ ಮಂಡಳಿಯ ಆಡಳಿತ ವರದಿಗಳು: ೧೯೬೯–೭೦, ೧೯೭೦–೭೧
10 ಬಂಟ್ವಾಳ ತಾಲೂಕು ಅಭಿವೃದ್ಧಿ ಮಂಡಳಿ, ಆಡಳಿತ ವರದಿ ೧೯೭೪–೭೫.
11 ಮಂಗಳೂರು ತಾಲೂಕು ಅಭಿವೃದ್ಧಿ ಮಂಡಳಿ ಆಡಳಿತ ವರದಿ ೧೯೭೪–೭೫.
12 ಸುಳ್ಯ ತಾಲೂಕು ಅಭಿವೃದ್ಧಿ ಮಂಡಳಿ ಆಡಳಿತ ವರದಿ
13 ಕಾರ್ಕಳ ತಾಲೂಕು ಅಭಿವೃದ್ಧಿ ಮಂಡಳಿಯ ಆಡಳಿತ ವರದಿ
14 ಬೆಳ್ತಂಗಡಿ ತಾಲೂಕು ಅಭಿವೃದ್ಧಿ ಮಂಡಳಿಯ ಆಡಳಿತ ವರದಿ.
15 Syndicate Agriculture Foundation, Manipal. Annual Report 1974.
16 ಕೃಷಿಲೋಕ, ಮುಂಗಾರು ಸಂಚಿಕೆ, ಆಗಸ್ಟ್ ೧೯೭೪, ಸಿಂಡಿಕೇಟ ಎಗ್ರಿಕಲ್ಚರ ಫೌಂಡೇಶನ್, ಮಣಿಪಾಲ.

17. Southern Economist, October 1975, Karnataka–A Special Survey.

18. Report of the Land Bank Survey South Kanara District Economic Research Department, Syndicate Bank, Manipal, 1973.

19. Karnataka at a Glance 1974, Bureau of Economics and Statistics, Bangalore.

20. South Kanara District at a Glance 1973–74, Bureau of Economics and Statistics, Bangalore.

21 ಚಿತ್ರಮಯ ದಕ್ಷಿಣ ಕನ್ನಡ. ಶಿವರಾಮ ಕಾರಂತ, ಬಾಸೆಲಮಿಶನ್ ಬುಕ್ ಎಂಡ್ ಟ್ರೆಕ್ಟ ಡಿಪೊಸಿಟರಿ, ಮಂಗಳೂರು ೧೯೩೪

ದಕ್ಷಿಣ ಕನ್ನಡ ಜಿಲ್ಲೆಯ ತಾಲೂಕು ಅಭಿವೃದ್ಧಿ ಮಂಡಳಿಯ ಆಡಳಿತ ವರದಿಗಳನ್ನು ಒದಗಿಸಿದ ತಾಲೂಕು ಅಭಿವೃದ್ಧಿ ಮಂಡಳಿಗಳಿಗೂ. ಅನೇಕ ಸಲ ಬರೆದು ವೈಯಕ್ತಿಕವಾಗಿ ವಿನಂತಿಸಿಕೊಂಡಾಗಲೂ ತಾಲೂಕು ಅಭಿವೃದ್ಧಿ ಮಂಡಳಿಗಳ ವರದಿಗಳನ್ನು ಒದಗಿಸದ ತಾಲೂಕು ಅಭಿವೃದ್ಧಿ ಮಂಡಳಿಗಳಿಗೂ. ದಕ್ಷಿಣ ಕನ್ನಡ ಜಿಲ್ಲೆಯ ಸಾಮುದಾಯಿಕ ಅಭಿವೃದ್ಧಿ ಮಂಡಳಿಗಳ ಬಗ್ಗೆ ಮಾಹಿತಿ ಪಡೆಯಲು ಸಹಾಯ ಮಾಡಿದ ಜಿಲ್ಲಾಧಿಕಾರಿಯವರ ಪಿ.ಪಿ.ಎ. ಶ್ರೀ ಯು. ವಾಸು ಅವರಿಗೂ ಈ ಲೇಖಕನ ಕೃತಜ್ಞತೆಗಳು.

A

ಮಾಹಿತಿ—ಪದಕಗಳು

ಬಗೆಗಳು	ತಾಲೂಕುಗಳು								
	ಬಂಟವಾಳ	ಬೆಳ್ತಂಗಡಿ	ಕುಂದಾಪುರ	ಕಾರ್ಕಳ	ಮಂಗಳೂರು	ಪುತ್ತೂರು	ಸುಳ್ಯ	ಉಡುಪಿ	ಮೊತ್ತಜಿಲ್ಲೆಯ
ಜನಸಂಖ್ಯೆ	೨,೨೬,೭೮೭	೧,೩೭.೫೩೫	೨,೪೨,೮೧೦	೨,೧೨,೪೯೬	೪,೯೦.೫೬೬	೧,೫೬.೨೬೬	೮೭.೯೪೬	೧.೮೪.೯೦೯	೧೯,೩೯,೩೧೫
ಕಾರ್ಮಿಕರು	೧,೦೦,೯೯೯	೫೭.೪೧೩	೮೮,೬೬೦	೮೬,೬೯೫	೧,೯೦,೬೭೯	೫೯ ೭೯೮	೩೨.೯೭೦	೧.೩೧.೫೩೦	೭,೪೮,೭೪೪
ಕಾರ್ಮಿಕರಲ್ಲದವರು	೧,೨೫,೭೮೮	೮೦,೧೨೨	೧,೫೪,೧೫೦	೧,೨೫,೮೦೧	೨,೯೯.೮೮೭	೯೬,೪೬೮	೫೪.೯೭೬	೨.೫೩.೩೭೯	೧೧,೯೦,೫೭೧
ಕೃಷಿಕರು	೨೫,೪೬೭	೨೨.೮೩೮	೩೮,೫೦೬	೩೮,೫೩೧	೨೩.೩೩೧	೧೮.೬೯೫	೯.೨೧೨	೪೫.೦೯೪	೨೧,೯,೯೪೫
ಕೃಷಿ ಕಾರ್ಮಿಕರು	೨,೫೧೨೮	೨೧,೯೮೧	೨೫,೧೧೨	೨೬,೫೨೬	೨೧,೬೧೨	೧೭,೮೨೦	೧೧,೬೬೧	೩೪,೦೩೮	೧,೮೫,೫೯೮

B

ಭೂಹಿಡುವಳಿಗಳು

ಭೂಹಿಡುವಳಿ ಗುಂಪು	ಒಟ್ಟು ಭೂ ಹಿಡುವಳಿಗಳು	ಕ್ಷೇತ್ರ	ಸಂಪೂರ್ಣ ಒಡೆತನ		ಅಸಂಪೂರ್ಣ ಒಡೆತನ ಮತ್ತು ಭಾಗಶ ಗೇಣಿಗೆ ಕೊಟ್ಟದ್ದು			ಸಂಪೂರ್ಣವಾಗಿ ಗೇಣಿಗೆ ಕೊಟ್ಟ ಭೂಮಿ	
			ಒಟ್ಟು ಹಿಡುವಳಿ	ಕ್ಷೇತ್ರ	ಒಟ್ಟು ಹಿಡುವಳಿ	ಸ್ವತಃ ಸಾಗುವಳಿ ಕ್ಷೇತ್ರ	ಗೇಣಿಗೆ	ಒಟ್ಟು ಹಿಡುವಳಿ	ಕ್ಷೇತ್ರ ಕ್ಷೇತ್ರ
೦.೫ ಹೆಕ್ಟೇರು ಕೆಳಗೆ	೩೨.೬೪೦	೮.೪೫೩	೧೬.೫೨೩	೪.೧೯೦	೧.೩೩೭	೨೦೬	೧೭೫	೧೪.೭೮೦	೩.೭೭೪
೦.೫–೧.೦ ಹೆಕ್ಟೇರು	೨೮.೬೨೮	೨೧.೦೯೫	೧೨.೦೯೫	೯.೦೦೧	೧.೯೫೫	೭೪೨	೭೪೨	೭೪೨ × × ×	
೦.೫–೧.೦ ಹೆಕ್ಟೇರು	೨೮.೬೨೮	೨೧.೦೯೫	೧೨.೦೯೫	೯.೦೦೧	೧.೯೫೫	೭೪೨	೭೪೨	೧೪.೪೧೬	೧೧.೬೯೫
೧–೨ ಹೆಕ್ಟೇರು	೩೬.೭೩೮	೫೨.೦೧೬	೧೪.೯೭೩	೨೧.೨೬೪	೨.೯೭೦	೨.೧೬೩	೨.೦೦೩	೧೮.೭೯೫	೨೬.೩೬೦
೨–೩ ಹೆಕ್ಟೇರು	೧೬.೦೩೮	೩೮.೩೭೪	೬.೭೮೮	೧೬.೩೦೩	೧.೬೪೯	೨.೦೭೭	೧.೯೮೪	೭.೫೯೬	೧೭.೯೮೪
೩–೪ ಹೆಕ್ಟೇರು	೬.೫೮೩	೨೨.೪೦೧	೩.೧೨೦	೧೦.೬೪೮	೮೫೩	೧.೬೨೨	೧.೨೯೨	೨.೬೦೯	೮.೭೬೭
೪–೫ ಹೆಕ್ಟೇರು	೩.೪೩೯	೧೫.೦೯೬	೧.೮೨೨	೮.೦೦೪	೫೨೯	೧.೨೪೧	೧.೦೮೦	೧.೦೮೮	೪.೭೧೭
೫–೧೦ ಹೆಕ್ಟೇರು	೪.೬೫೪	೩೦.೮೧೪	೨.೯೩೨	೧೯.೫೧೯	೭೮೪	೩.೦೨೭	೨.೦೯೩	೯೩೮	೫.೯೬೯
೧೦–೨೦ ಹೆಕ್ಟೇರು	೯೯೪	೧೨.೮೨೧	೭೩೨	೯.೫೨೮	೧೮೩	೧.೫೯೪	೭೨೬	೭೯	೯೫೯
೨೦–೩೦ ಹೆಕ್ಟೇರು	೧೨೫	೨.೯೦೭	೧೧೧	೨.೩೬೭	೨೦	೨೭೯	೧೮೯	೪	೮೯
೩೦–೪೦ ಹೆಕ್ಟೇರು	೨೯	೯೭೩	೨೬	೮೬೮	೩	೮೩	೨೨	—	—
೪೦–೫೦ ಹೆಕ್ಟೇರು	೧೧	೪೮೭	೯	೩೯೫	೨	೪೨	೫೦	—	—
೫೦–ಹೆಕ್ಟೇರ್ ೫೦ ಹೆಕ್ಟೇರ್ ಮತ್ತು ಮೇಲೆ	೭	೪೬೮	೬	೪೦೫	೧	೬೦	೩	—	—

ಕ್ಷೇತ್ರ: ಹೆಕ್ಟೇರುಗಳಲ್ಲಿ ೧ ಹೆಕ್ಟೇರ್: ೨.೫ ಎಕರೆಗಳು

C

ತಾಲೂಕುವಾರು ನೀರಾವರಿ ಮತ್ತು ಇತರ ಸೌಲಭ್ಯಗಳು (ಸಂಖ್ಯೆಗಳಲ್ಲಿ)

ಬಗೆಗಳು	ಬಂಟವಾಳ	ಬೆಳ್ತಂಗಡಿ	ಕುಂದಾಪುರ	ಕಾರ್ಕಳ	ಮಂಗಳೂರು	ಪುತ್ತೂರು	ಸುಳ್ಯ	ಉಡುಪಿ	ಜಿಲ್ಲೆಯ ಮೊತ್ತ
	ತಾಲೂಕುಗಳು								
ವಿದ್ಯುಚ್ಛಕ್ತಿ ಪಡೆದ ಗ್ರಾಮಗಳು ಮತ್ತು ಪಟ್ಟಣಗಳು	೬೮	೭೧	೭೩	೬೪	೧೧೨	೪೮	೨೮	೧೧೫	೫೭೯
ನೀರಾವರಿ ವಿದ್ಯುತ್ ಪಂಪು ಸೆಟ್ಟುಗಳು	೧.೮೬೭	೬೩೧	೧.೭೫೩	೧.೮೭೨	೩.೬೯೮	೧.೦೨೭	೮೧೯	೫.೮೪೫	೧೭.೫೧
ನೀರಾವರಿ ಬಾವಿಗಳು	೬.೫೩೨	೮೦೮	೩.೬೩೬	೨.೪೦೦	೪.೦೯೩	೧.೬೮೦	೭೦೮	೮.೭೭೮	೨೮.೬೪೫
ಕುಡಿಯುವ ನೀರಿನ ಬಾವಿಗಳು	೯.೩೨೦	೩.೬೮೫	೧೯.೪೪೮	೯.೪೦೪	೮.೩೩೪	೫.೦೫೩	೨.೫೩೪	೮.೨೪೪	೬೬,೧೩೨
ನೀರಾವರಿಗಾಗಿ ಡಿಸಿಲ್ ಪಂಪ್ ಸೆಟ್ಟುಗಳು	೧.೮೦೯	೨೨೭	೩೪೦	೪೬೬	೧.೦೪೯	೭೫೯	೩೬೭	೧.೦೩೨	೬,೦೪೯
ಕೃಷಿ ಯಂತ್ರೋಪಕರಣಗಳು	೩೯.೫೨೬	೩೯,೪೦೬	೪೬.೨೭೧	೫೭.೮೦೯	೨೫.೦೭೮	೩೦.೪೭೦	೧೬.೯೬೫	೪೯.೪೧೫	೩.೦೫.೦೦೦
ಟ್ರ್ಯಾಕ್ಟರುಗಳು.	೧೬	೩೫	೩೧	೨೨	೨೬	೪೦	೩೧	೧೨	೨೨೨
ನೀರಾವರಿ ಕ್ಷೇತ್ರ (ಹೆಕ್ಟೇರುಗಳು)	೧೧.೮೦೦	೯;೭೭೫	೬.೯೪೯	೯.೯೭೮	೮.೮೯೪	೬.೭೯೩	೫.೦೬೪	೧೫.೦೧೧	೭೪,೩೬೪
ಕೆರೆಗಳಿಂದ ನೀರಾವರಿ (ಹೆಕ್ಟೇರು)	೩೫	೧೦೦	೧೬೧	೯೯೬	೧೮೮	೧.೩೨೦	—	೩.೮೮೭	೬.೬೮೮
ಬಾವಿಗಳಿಂದ ನೀರಾವರಿ (ಹೆಕ್ಟೇರು)	೨.೭೦೦	೨.೨೧೭	೨.೦೪೮	೩.೫೫೮	೨.೬೬೫	೭೭೩	೧.೭೦೫	೪.೦೦೦	೨೦,೩೬೬
ಇತರ ಮೂಲಗಳಿಂದ ನೀರಾವರಿ (ಹೆಕ್ಟೇರು)	೯.೦೬೫	೭.೪೫೭	೪.೦೪೦	೫.೪೨೪	೬,೦೪೧	೪.೭೦೦	೩.೨೨೮	೨.೭೨೪	೪೭,೧೭೯
ಅಧಿಕೋತ್ಪತ್ತಿ ಬೀಜಗಳು ಬಿತ್ತನೆಗೆ ಒಳಪಟ್ಟ ಕ್ಷೇತ್ರ (ಹೆಕ್ಟೇರು)	೫.೮೯೨	೪,೨೮೦	೩.೭೧೩	೪.೭೬೬	೫.೬೭೩	೪.೬೭೩	೨.೪೮೦	೬.೭೭೫	೩೮.೨೬೨

D

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆಗಳ ಕ್ಷೇತ್ರ, ತಾಲೂಕುವಾರು ವಿವರಣೆ ೧೯೭೧-೭೨ರಲ್ಲಿ

(ಕ್ಷೇತ್ರ: ಎಕರೆಗಳಲ್ಲಿ)

ಬೆಳೆಗಳ ಹೆಸರುಗಳು	ತಾಲೂಕುಗಳು							
	ಬೆಳ್ತಂಗಡಿ	ಬಂಟವಾಳ	ಕುಂದಾಪುರ	ಕಾರ್ಕಳ	ಮಂಗಳೂರು	ಪುತ್ತೂರು	ಸುಳ್ಯ	ಉಡುಪಿ
ಅಡಿಕೆ	೨,೭೪೦	೪,೨೫೦	೧,೬೬೯	೨,೩೯೦	೧,೯೨೦	೫,೮೦೦	೪,೯೦೦	೯೦೦
ತೆಂಗು	೧,೮೦೭	೨,೯೧೭	೬,೭೨೧	೪,೦೬೯	೫,೪೬೫	೧,೫೯೧	೧,೬೯೮	೧೦,೯೮೭
ಗೇರು	೨,೮೯೫	೯,೨೬೭	೬,೯೨೯	೬,೯೨೯	೩,೬೪೩	೩,೪೯೦	೩,೯೪೧	೩,೫೨೯
ಕೋಕೋ	೧೫೦	೫೩	೧೨	೩೭	೫೦	೪೯	೫೫	೧೪
ವೀಳ್ಯದೆಲೆ	೧೦೦	೨೦೦	೭೫	೧೦೦	೯೦	೨೦೦	೧೦೦	೫೦
ಮೆಣಸು	೧,೦೩೭	೮೭೦	೧೦೭	೧೯೯	೧,೬೫೫	೧೬೬	೮೭	೬೨
ಮೆಣಸಿನಕಾಯಿ	೨೪೫	೫೧೦	೧,೦೩೦	೪೬೦	೬೦೦	೪೦೦	೨೦೦	೧,೯೦೦
ತರಕಾರಿ	೯೭೫	೯೬೦	೮೫೦	೧,೩೦೦	೧,೩೫೦	೭೧೫	೫೧೦	೯೧೦
ಶುಂಠಿ	೧೨೫	೨೬೫	೭೫	೩೧೪	೨೪೦	೧೦೦	೫೦	೬೫
ಏಲಕ್ಕಿ	೬೦೦	—	—	—	—	—	೫೦	—
ಅರಸಿಣ	೭೫	೫೦	೫೦	೮೫	೫೭	೨೫	೧೫	೨೫
ಲವಂಗ, ಜಾಯಿಕಾಯಿ, ದಾಲಚೀನಿ	೯	—	—	—	—	೫	೨	—
ಗೊಡೆಕಾಪ್ಪ (ಜ್ಯೇಷ್ಠಮಧ)	೧೦	೨	೪	೬	೨	೫	೬	೨
ಕಣಗಿಲ ಬಿಟ್ಟು	೬೦೦	೫೦	೧೫	೨೦೦	೮೦	೫೦೦	೮೦೦	೨೦
ಗೆಣಸು	೩೦೦	೭೦೦	೯೦೦	೫೦೦	೧,೨೫೦	೩೫೦	೨೫೦	೧,೬೦೦
ಮಾವು	೫೦೦	೮೦೦	೧,೦೨೦	೧,೦೧೦	೧,೦೭೦	೬೦೦	೪೨೫	೬೦೦
ಬಾಳೆಹಣ್ಣು	೮೦೦	೮೦೦	೪೦೦	೮೦೦	೨,೦೦೦	೩,೪೫೦	೨,೦೪೦...	೩೦೦
ನಿಂಬೆಹಣ್ಣು, ಇತ್ಯಾದಿ	೫	೩	೨	೨	೨	೬	೩	೧
ಸಪೋಟ	೧೦	೨೦	?೨೫	೭೫	೫೦	೫	೫	೧೦೦
ಅನನಾಸ್	೨೦೦	೧೦೦	೩೦೫	೬೩೦	೫೦	೫೦	೫೦	೧೫೦
[illegible]	೧,೦೦೦	೧,೦೦೦	೬೦೫	೧,೨೦೦	೧,೦೦೦	೯೦೦	೬೦೦	೬೦೫

ಎ. ಮಾಧವ ಉಡುಪ

ಅಮೆರಿಕದಲ್ಲೆದ್ದ ಬೆಂಕಿ ಜಗಕ್ಕೆಲ್ಲ ಹಬ್ಬಿತು

ಅಮೆರಿಕದ ನೆಲಸಿಗರ ಮೇಲೆ ಅಧಿಕಾರ ಚಲಾಯಿಸ ಹೊರಟ ಆಂಗ್ಲೇಯರು, ಲಾಭದ ಆಸೆಗೆ ಬಲಿಬಿದ್ದು, ಆ ಜನರ ಸ್ವಾತಂತ್ರ್ಯಗಳನ್ನು ಒಂದೊಂದಾಗಿ ಕಸಿದುಕೊಳ್ಳತೊಡಗಿದರು. ತಮ್ಮೊಡನಲ್ಲದೆ ಬೇರೆ ಯುವರೊಡನೆ ವ್ಯಾಪಾರ ವಹಿವಾಟು ಸಲ್ಲವೆಂದರು. ಸುಂಕದ ಹೊರೆಯಿಲ್ಲದ ವ್ಯವಹಾರ ಅಪರಾಧ ವೆಂದರು. ಆಂಗ್ಲೇತರ ದೇಶಗಳಿಂದ ರಮ್ ಮತ್ತು ಕಾಕಂಬಿಗಳನ್ನು ಆಮದು ಮಾಡಿಕೊಳ್ಳಕೂಡ ದೆಂದರು. ವಸಾಹತು ಕೇಂದ್ರಗಳಲ್ಲಿ ಸಾವಿರಾರು ಜನ ಸೈನಿಕರನ್ನಿರಿಸಿ ಜನರ ಭಾವನೆಗಳನ್ನು ಕೆರಳಿಸಿದರು. ಆ ಸೈನಿಕರ ಪೋಷಣೆಗೆ ಬೇಕಾದ ಹಣಕ್ಕಾಗಿ, ಎಲ್ಲಾ ವೃತ್ತ ಪತ್ರಿಕೆಗಳಿಗೂ, ಲೈಸನ್ಸುಗಳಿಗೂ, ಕಾಗದ ಪತ್ರಗಳಿಗೂ ಬ್ರಿಟನ್ನಿನ ರೆವಿನ್ಯೂ ಸ್ಟಾಂಪನ್ನು ಹಚ್ಚಲೇಬೇಕೆಂದು ಕಡ್ಡಾಯ ಮಾಡಿದರು. ಮುಂಚಿ ನಿಂದಲೂ ಸ್ವಾತಂತ್ರ್ಯದ ಸವಿಯನ್ನುಂಡಿದ್ದ ಆ ನೆಲಸಿಗರಿಗೆ, ಬ್ರಿಟಿಷರ ಆ ತರದ ದಬ್ಬಾಳಿಕೆಯನ್ನು ಸಹಿಸಲಾಗಲಿಲ್ಲ. ಕ್ರಾಂತಿಯ ಕಿಡಿ ಅವರಲ್ಲಿ ಹೊಗೆಯಾಡತೊಡಗಿತು. ವಸಾಹತುಗಳಲ್ಲೆಲ್ಲ ಸ್ವಾತಂತ್ರ್ಯದ ಕೂಗು ಕೇಳಿಸಿತು. ಜನರೆಲ್ಲ ಒಟ್ಟಾದರು. ತಮ್ಮ ಹಕ್ಕುಗಳನ್ನು ಹತ್ತಿಕ್ಕುವ ಪ್ರಯತ್ನವನ್ನು ಏಕಕಂಠದಿಂದ ವಿರೋಧಿಸಿದರು. ಸ್ವಾತಂತ್ರ್ಯ ಸಂಗ್ರಾಮಕ್ಕೆ ಅಣಿಯಾದರು. ತಮ್ಮೆಲ್ಲ ಅಹವಾಲುಗಳನ್ನು ಒಟ್ಟು ಹಾಕಿ, ೧೭೭೬ರ ಜುಲೈ ೪ ರಂದು ಸ್ವಾತಂತ್ರ್ಯದ ಘೋಷಣೆಗೈದರು.

"ಮಾನವರೆಲ್ಲರೂ ಹುಟ್ಟಿನಿಂದಲೇ ಸ್ವತಂತ್ರರು, ಸಮಾನರು. ಜೀವಿಸುವ, ಸ್ವತಂತ್ರವಾಗಿರುವ ಮತ್ತು ಸಂತಸ ಪಡೆಯುವ ಹಕ್ಕುಗಳನ್ನು ದೇವರು ಅವರೆಲ್ಲರಿಗೂ ಕೊಟ್ಟಿದ್ದಾನೆ. ಆ ಹಕ್ಕುಗಳನ್ನು ಕಾಪಾಡಲು ಜನ ಸರಕಾರಗಳನ್ನು ನೇಮಿಸುತ್ತಾರೆ. ಸರಕಾರಗಳು ತಮ್ಮ ಅಧಿಕಾರಗಳನ್ನು ಪ್ರಜೆಗಳ ಅನುಮತಿಯಿಂದ ಪಡೆಯುತ್ತವೆ. ಆದರೆ ಸರಕಾರವು ಪ್ರಜೆಗಳ ಮೂಲಭೂತ ಹಕ್ಕುಗಳನ್ನು ನಾಶ ಮಾಡಲು ಪ್ರಯತ್ನಿಸಿದರೆ, ಅಂತಹ ಸರಕಾರವನ್ನು ಕಿತ್ತು ಹಾಕುವ ಅಧಿಕಾರ ಪ್ರಜೆಗಳಿಗಿದೆ. ತಮ್ಮ ಕ್ಷೇಮಕ್ಕೂ, ಸುಖಸಂತೋಷಗಳಿಗೂ ಧಕ್ಕೆ ತಗಲದಂತೆ ಮತ್ತೊಂದು ಸರಕಾರವನ್ನು ಅಧಿಕಾರಕ್ಕೆ ತರುವ ಹಕ್ಕೂ ಅವರಿಗಿದೆ." ಎಂದು ಪ್ರಜಾಪ್ರಭುತ್ವದ ಧ್ಯೇಯಗಳನ್ನು ಒತ್ತಿಹೇಳಿ, ಬ್ರಿಟಿಷ್ ಆಡಳಿತ ದಿಂದ ಅಮೆರಿಕವು ಹೊರಗಾಗಿದೆಯೆಂದು ಘೋಷಿಸಲಾಯಿತು.

"ಸರಕಾರವಿರುವುದು ಜನರಿಗಾಗಿ, ಜನರಿರುವುದು ಸರಕಾರಕ್ಕಾಗಿ ಅಲ್ಲ" ಎಂಬ ಆ ಘೋಷಣೆಯ ಚೇತನವು ಅಮೆರಿಕದ ಜನರನ್ನು ಬಡಿದೆಬ್ಬಿಸಿತು. ಅವರಲ್ಲಿದ್ದ ಸ್ವಾತಂತ್ರ್ಯದ ಕೆಚ್ಚು ಕೆರಳಿತು. ದೇಶ ಭಕ್ತಿಯು ಹೊಸಲು ಅವರ ನರನಾಡಿಗಳಲ್ಲಿ ಹರಿಯಿತು. ಬ್ರಿಟಿಷರ ವಿರುದ್ಧ ಹೋರಾಡಲು ಅದೇ ಅಸ್ತ್ರವಾಯಿತು.

ಜಾರ್ಜ್ ವಾಷಿಂಗ್ಟನ್ನನ ಸೇನಾಧಿಪತ್ಯದಲ್ಲಿ ಬ್ರಿಟಿಷರೊಡನೆ ಕಾದಾಟ ಜರುಗಿದಾಗ, ಮೊದ ಮೊದಲು ಅವರ ಪಾಲಿಗೆ ಬಂದುದು ಸೋಲೇ. ಆದರೆ ಸ್ವಾತಂತ್ರ್ಯದ ತೀವ್ರ ಹಂಬಲ ಅವರನ್ನು ಅಧೀರರನ್ನಾಗಿ ಮಾಡಲಿಲ್ಲ. ಅದೇ ವೇಳೆಗೆ ಬೆಂಜಮಿನ್ ಫ್ರಾಂಕ್ಲಿನ್, ಜಾನ್ ಆಡಮ್ಸ್‌ನಂಥ ರಾಜನೀತಿ ನಿಪುಣರೂ ಸುಮ್ಮನೆ ಕುಳಿತುಕೊಳ್ಳಲಿಲ್ಲ. ಇಂಗ್ಲೆಂಡಿನ ವೈರಿಯಾಗಿದ್ದ ಫ್ರಾನ್ಸಿಗೆ ತೆರಳಿದ ಫ್ರಾಂಕ್ಲಿನ್,

ಅಮೆರಿಕದ ಸ್ವಾತಂತ್ರ್ಯ ಘೋಷಣೆಯ ಸಂದೇಶವನ್ನನುಸರಿಸಿದ. ಫ್ರಾನ್ಸಿನ ರಾಜ ೧೬ನೇ ಲೂಯಿಯ ಮನ ಒಲಿಸಿ, ಅಮೆರಿಕದ ಸ್ವಾತಂತ್ರ್ಯ ಯುದ್ಧಕ್ಕಾಗಿ ಫ್ರಾನ್ಸಿನ ಸಹಾಯವನ್ನು ಪಡೆಯುವುದರಲ್ಲೂ ಯಶಸ್ವಿಯಾದ. ಫ್ರೆಂಚ ಪಾಲ್ಗೊಳ್ಳುವಿಕೆಯಿಂದ ಯುದ್ಧದಲ್ಲಿ ಜಯ ಅಮೆರಿಕನರ ಪಾಲಿಗೊಲಿಯಿತು. ೧೭೮೩ರಲ್ಲಿ ಅಮೆರಿಕದ ಸಂಯುಕ್ತ ಸಂಸ್ಥಾನಗಳಿಗೆ ಸ್ವತಂತ್ರ ರಾಷ್ಟ್ರವೆಂಬ ಅಂಗೀಕಾರದ ಮುದ್ರೆ ಬಿದ್ದಿತು.

ಬ್ರಿಟನಿನಿಂದ ಬಿಡುಗಡೆಗೊಂಡ ಪ್ರಥಮ ವಸಾಹತು ಸಾಮ್ರಾಜ್ಯಶಾಹಿತ್ವವನ್ನು ಕಿತ್ತೊಗೆದು [illegible] ರಾಷ್ಟ್ರವಾಗಿ [illegible]. ಅದಕ್ಕೆ [illegible]. [illegible] ಪತ್ರಿಕೆ The Gentleman's Magazine [illegible] "The ball is now struck, and time only can show where it will rest" ([illegible]). [illegible] ಬರೆಯಿತು. [illegible]

ಕ್ರಾಂತಿ ಕೆರಳಿಸಿದ ಸ್ವಾತಂತ್ರ್ಯ ಪ್ರಜ್ಞೆ

ಅಮೆರಿಕದ ಕ್ರಾಂತಿಯ [illegible] ಪತ್ರಿಕೆಗಳ ಮೂಲಕ [illegible] ರಾಷ್ಟ್ರಗಳಿಗೆಲ್ಲ ತಿಳಿಯಿತು. ರೂಸೋ, ವಾಲ್ಟೇರ್ ಮೊದಲಾದ [illegible] ಗ್ರಂಥಗಳಿಂದಾಗಿ ಜನರಲ್ಲಿ ವಿಚಾರ [illegible] ಕಾಲವದು. ಅಂತಹ [illegible] ಅಮೆರಿಕದ ಕ್ರಾಂತಿಯ ವಿಚಾರಗಳು [illegible] ಇನ್ನೊಂದು [illegible] ಸಹಾಯವಾಯಿತು. ಯುದ್ಧದಲ್ಲಿ ಪಾಲ್ಗೊಂಡ [illegible] ಸೈನಿಕರೂ ಅಲ್ಲಿನ ಸ್ವತಂತ್ರ ಜನರ [illegible]. ಜನರ ಮನಸ್ಸಿನಲ್ಲಿ ಸ್ವಾತಂತ್ರ್ಯಪ್ರಿಯತೆ ಮೊಳಕೆ [illegible] ಥಾಮಸ್ ಜಫರ್ಸನ್, ಬೆಂಜಮಿನ್ ಫ್ರಾಂಕ್ಲಿನ್, ಜಾನ್ ಆಡಮ್ಸ್ ಮೊದಲಾದವರು ಅಮೆರಿಕದ [illegible] ಕ್ರಾಂತಿಯ [illegible]. ಅಮೆರಿಕದ ಸ್ವಾತಂತ್ರ್ಯ ಹೋರಾಟದ ಬಗ್ಗೆ ಅನೇಕ ಪುಸ್ತಕಗಳು ಬಿಡುಗಡೆಗೊಂಡುವು. [illegible] ಆ ದೇಶದ ಜನರಲ್ಲಿ ಕ್ರಾಂತಿದೃಷ್ಟಿ [illegible]. ತಮಗಾದ ಸಾಮಾಜಿಕ ಹಾಗೂ ಆರ್ಥಿಕ ಅನ್ಯಾಯಗಳನ್ನು ತೀವ್ರವಾಗಿ ವಿರೋಧಿಸಿ, ತಮಗೆ ಬೇಕಾದ ಹಕ್ಕುಗಳನ್ನು ಕ್ರಾಂತಿಯಿಂದ ಪಡೆಯುತ್ತಿದ್ದರು.

ಫ್ರಾನ್ಸಿನಲ್ಲಾಗ [illegible] ಅಮೆರಿಕದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡುದರಿಂದ [illegible]. [illegible] ಅತನ [illegible] ಬಿಕ್ಕಟ್ಟು [illegible] ಹೋಯಿತು. [illegible] ಮುಳುಗಿದ್ದ [illegible]. ಜನರ [illegible] ಮೇಲೆ [illegible]. ಅಮೆರಿಕದ ಕ್ರಾಂತಿ ಅವರಿಗೆ ಸ್ಫೂರ್ತಿಯ ಸೆಲೆಯಾಯಿತು. "ಸ್ವಾತಂತ್ರ್ಯ, ಸಮಾನತೆ, ಸೋದರತೆ"ಗಳಿಗಾಗಿ ೧೭೮೭ರಲ್ಲಿ ಪ್ರಾರಂಭವಾದ ಆ ಹೋರಾಟ, ೧೭೯೯ರ ವರೆಗೂ ನಡೆಯಿತು. ಅದರ ಫಲವಾಗಿಯೇ ೧೭೮೯ರ ಆಗಸ್ಟ್ ೨೬ರಂದು ಸಾಮ್ರಾಜ್ಯಶಾಹಿತ್ವ ಕೊನೆಗೊಂಡು, ಪ್ರಜೆಗಳ ಹಕ್ಕುಗಳನ್ನು ಘೋಷಿಸಲಾಯಿತು.

ಈ ಕ್ರಾಂತಿಯ [illegible] ಸುತ್ತುಮುತ್ತಲಿನ ದೇಶಗಳಿಗೆಲ್ಲ ಹಬ್ಬಿತು. ಫ್ರಾನ್ಸಿನಲ್ಲಿ ಅಮೆರಿಕದ ಕ್ರಾಂತಿಯ ಸಂದೇಶವನ್ನು ಫ್ರಾಂಕ್ಲಿನ್ ಬೀರಿದ ಕಾಲದಲ್ಲೇ ಜಾನ್ ಆಡಮ್ಸ್ ಹಾಲೆಂಡಿನಲ್ಲಿ ಅದೇ ಕೆಲಸ ಮಾಡಿದ. ಫ್ರಾನ್ಸಿನ ಕ್ರಾಂತಿಯ [illegible] ಹಿಡಿದಿದ್ದರು. ಆದರೆ ಅವರಿಗದರಲ್ಲಿ ಯಶಸ್ಸು ಸಿಗಲಿಲ್ಲ. ಇಂಗ್ಲೆಂಡಿನ ಸಹಾಯವನ್ನು ಪಡೆದ ಅಲ್ಲಿನ ರಾಜ ಕ್ರಾಂತಿಯನ್ನು ಅಡಗಿಸಿಬಿಟ್ಟ. ಆದರ ನೆರೆಯ [illegible] ಬೆಲ್ಜಿಯಮ್‌ನಲ್ಲಿ ಕ್ರಾಂತಿ ನಡೆದೇ ಬಿಟ್ಟಿತು.

೧೮೦೪ರಲ್ಲಿ ಸ್ವಾತಂತ್ರ್ಯವನ್ನಲ್ಲಿ ಘೋಷಿಸಲಾಯಿತು. ೧೮೦೨ರ ಡಿಸೆಂಬರ್ ೨ರಂದು ಪುನಃ ವಿದೇಶೀಯರ ಆಳ್ವಿಕೆಗದು ಒಳಗಾದರೂ. ೧೮೩೦ರಲ್ಲಿ ಮತ್ತೊಮ್ಮೆ ಕ್ರಾಂತಿಯಾಗಿ ಬೆಲ್ಜಿಯಮ್ ಸ್ವತಂತ್ರವಾಯಿತು. ಸ್ವೀಡನ್ನೂ ಅಮೆರಿಕದ ಕ್ರಾಂತಿಯಿಂದ ಸ್ಫೂರ್ತಿಗೊಂಡು ೧೮೦೯ರಲ್ಲಿ ಕ್ರಾಂತಿಯನ್ನೆಬ್ಬಿಸಿ ಸ್ವತಂತ್ರ್ಯವಾಯಿತು. ೧೮೧೪ರಲ್ಲಿ ನಾರ್ವೆಯೂ ಹಾಗೆಯೇ ಸ್ವತಂತ್ರವಾಯಿತು. (ನಾರ್ವೆಯ ಸ್ವಾತಂತ್ರ್ಯ ಹೋರಾಟಗಾರ ಓ. ಎಮ್. ಫಾಲ್ಸನ್ ಅಮೆರಿಕದ ಕ್ರಾಂತಿಗೆಷ್ಟು ಮಾರುಹೋಗಿದ್ದನೆಂದರೆ, ಆತ ಆ ವರ್ಷ ಹುಟ್ಟಿದ ತನ್ನ ಮಗುವಿಗೆ. ಜಾರ್ಜ್ ವಾಷಿಂಗ್ಟನ್ ಮತ್ತು ಬೆಂಜಮಿನ್ ಫ್ರಾಂಕ್ಲಿನ್‌ರ ಹೆಸರುಗಳನ್ನು ಸಂಯೋಗಿಸಿ ಜಾರ್ಜ್ ಬೆಂಜಮಿನ್ ಎಂದೇ ಹೆಸರಿಟ್ಟ.) ತುರ್ಕಿಯರ ವಶವಾಗಿದ್ದ ಗ್ರೀಸಿಗೂ ಕ್ರಾಂತಿಯ ಅಲೆ ತಾಗಿತು. ೧೮೨೧ರಲ್ಲಿ ಅಲ್ಲಿ ಕ್ರಾಂತಿಯುಂಟಾಗಿ ಸ್ವಾತಂತ್ರ್ಯವನ್ನು ಘೋಷಿಸಲಾಯಿತು. ೧೮೪೮ರಲ್ಲಿ ಜರ್ಮನಿಯ ಉದಯಕ್ಕೆ ಕಾರಣವಾದ ಕ್ರಾಂತಿಯಲ್ಲೂ ಅಮೇರಿಕದ ಕ್ರಾಂತಿಯ ವಾಸನೆಯಿದೆ. ಇಂಗ್ಲಿಷರ ಪರವಾಗಿ ಅಮೆರಿಕದಲ್ಲಿ ಹೋರಾಡಿದ ಸೈನಿಕರಲ್ಲಿ ಬಹುಮಂದಿ ಜರ್ಮನರಾಗಿದ್ದರು. ಆ ಸೈನಿಕರೇ ಕ್ರಾಂತಿಯನ್ನಲ್ಲಿ ಉಂಟುಮಾಡಿದ್ದರು. ಅದೇ ವರ್ಷ ಲೂಯಿಸ್ ಕೊಸೌತ್‌ನ ನೇತೃತ್ವದಲ್ಲಿ ಹಂಗೇರಿಯೂ ಸ್ವಾತಂತ್ರ್ಯವನ್ನು ಘೋಷಿಸಿತು. ಇಟಲಿಯ ಏಕೀಕರಣವೂ ಬಿರುಸಾಯಿತು. ೧೮೬೦ರಲ್ಲಿ ಇಟಲಿಯ ಏಕೀಕರಣವನ್ನು ಸಾಧಿಸಿದ ಗಾರಿಬಾಲ್ಡಿಯೂ ಅಮೇರಿಕದ ಕ್ರಾಂತಿಯಿಂದ ಪ್ರಭಾವಿತನಾಗಿದ್ದ. ಜೆಕೋಸ್ಲೊವೇಕಿಯಾದ ಸ್ವಾತಂತ್ರ್ಯ ಹೋರಾಟಗಾರ ಥಾಮಸ್ ಜಿ. ಮಸಾರಿಕ್ ಸಹ ಅಮೆರಿಕದ ಕ್ರಾಂತಿಯ ಆರಾಧಕನಾಗಿದ್ದ.

ಇಂಗ್ಲೆಂಡಿನಲ್ಲೂ ಅಮೆರಿಕದ ಕ್ರಾಂತಿ ಪ್ರತಿಧ್ವನಿಸದೆ ಇರಲಿಲ್ಲ. ಅಮೆರಿಕದ ಕ್ರಾಂತಿಯನ್ನೇ ಆದರ್ಶವಾಗಿಟ್ಟುಕೊಂಡು. ಪಾರ್ಲಿಮೆಂಟಿನ ಸುಧಾರಣೆಗಾಗಿ ಇಂಗ್ಲೆಂಡಿನಲ್ಲೂ ಪ್ರಯತ್ನಗಳು ನಡೆದುವು. ವ್ಹಿಗ್ ಪಕ್ಷದ ಮುಖಂಡನಾದ ಚಾರ್ಲ್ಸ್ ಜೇಮ್ಸ್ ಫಾಕ್ಸ್ ಅದಕ್ಕಾಗಿ ತುಂಬ ಪ್ರಯತ್ನಿಸಿದ. ಅದರಿಂದಾಗಿ ಜನರೆಲ್ಲ ಪ್ರಚೋದಿಸಲ್ಪಟ್ಟು ಕೆಲವು ಸಾಮಾಜಿಕ ಸುಧಾರಣೆಗಳಿಗಾಗಿಯೂ. ಮತದಾನದ ಹಕ್ಕು ಬೇಕೆಂದೂ ೧೭೮೦ರ ಜೂನ್‌ನಲ್ಲಿ ಎಂಟು ದಿನ ದಂಗೆ ಎದ್ದರು. ಕೆರಳಿದ ಜನ ಮೂರನೇ ಜಾರ್ಜ್ ದೊರೆಯ ಕೊಲೆಯ ಒಳಸಂಚನ್ನೂ ನಡೆಸಿದರು. ಅವನ್ನೆಲ್ಲ ತಾಳಲಾರದೆ ಪ್ರಜೆಗಳ ಮೆಚ್ಚಿಗೆ ಕಳೆದುಕೊಂಡ ಲಾರ್ಡ್ ನಾರ್ಥನ ಮಂತ್ರಿಮಂಡಲವು ೧೭೮೨ರಲ್ಲಿ ರಾಜಿನಾಮೆ ಸಲ್ಲಿಸಬೇಕಾಯಿತು. ಇಡೀ ಮಂತ್ರಿಮಂಡಲವು ರಾಜಿನಾಮೆ ಸಲ್ಲಿಸಿದ್ದು ಇಂಗ್ಲೆಂಡಿನ ಇತಿಹಾಸದಲ್ಲಿ ಅದೇ ಮೊದಲು.

ಅಮೆರಿಕದ ಮುಂದಾಳುಗಳ ಬೆಂಬಲ ಪಡೆದು ಐರ್ಲೆಂಡಿನ ಜನನಾಯಕ ಚಾರ್ಲ್ಸ್ ಲೂಕಾಸ್ ತನ್ನ ದೇಶದಲ್ಲೂ ಕ್ರಾಂತಿಯ ಸನ್ನಾಹ ನಡೆಸಿದ. ಅಮೆರಿಕದ ಕ್ರಾಂತಿಯಿಂದ ಪಾಠ ಕಲಿತ ಇಂಗ್ಲೆಂಡು ಐರ್ಲೆಂಡನ್ನು ಕಳೆದುಕೊಳ್ಳಲು ಬಯಸಲಿಲ್ಲ. ೧೭೮೨ರಲ್ಲಿಯೂ ಐರ್ಲೆಂಡಿನ ಮೇಲೆ ಹೇರಿದ್ದ ವ್ಯಾಪಾರ ವ್ಯವಹಾರಗಳ ಕಾಯಿದೆಯನ್ನು ಸಡಿಲಗೊಳಿಸಿ. ಐರಿಷ್ ಪಾರ್ಲಿಮೆಂಟಿಗೇ ಮತ್ತಷ್ಟು ಅಧಿಕಾರವನ್ನು ವಹಿಸಿಬಿಟ್ಟಿತು.

ಅಮೆರಿಕದ ಕ್ರಾಂತಿಯ ಕಹಳೆ ರಷ್ಯಾಕ್ಕೂ ಕೇಳಿಸಿತು. ಎರಡನೆಯ ಕ್ಯಾಥರಿನ್ ರಾಣಿ ರಷ್ಯಾವನ್ನಾಗ ಆಳುತ್ತಿದ್ದಳು. ಫ್ರಾನ್ಸಿನ ಕ್ರಾಂತಿಯ ವಿಚಾರಗಳು ರಷ್ಯರನ್ನು ಕೆರಳಿಸಬಹುದೆಂದು ಆ ಸುದ್ದಿ ಸಮಾಚಾರಗಳನ್ನೆಲ್ಲ ಆಕೆ ಸೆನ್ಸಾರ್ ಮಾಡಿಸುತ್ತಿದ್ದಳು. ಆದರೆ ಅಮೇರಿಕದ ಕ್ರಾಂತಿಯ ಬಗ್ಗೆ ಆಕೆಯ ಭಾವನೆ ಆ ತರದಲ್ಲಿರಲಿಲ್ಲ. ಹಾಗಾಗಿ ಅಮೆರಿಕದ ಕ್ರಾಂತಿಯ ವಿಚಾರಗಳು ರಷ್ಯಾದ ಪತ್ರಿಕೆಗಳಲ್ಲಿ ಪ್ರಕಟವಾದುವಲ್ಲದೆ. ಅಮೆರಿಕದ ಕ್ರಾಂತಿಯ ಕತೆಯನ್ನು ಬರೆದ ಅನೇಕ ಪುಸ್ತಕಗಳೂ ಬೆಳಕು ಕಂಡುವು. ಅಮೇರಿಕದ ಸ್ವಾತಂತ್ರ್ಯ ಹೋರಾಟವು ಯುರೋಪಿನ ರಾಜಕೀಯ ಪರಿಸ್ಥಿತಿಯ ಮೇಲೆ ಬೀರುತ್ತಿರುವ ಪ್ರಭಾವದಿಂದಾಗಿ ಜಗತ್ತಿನ ಚರಿತ್ರೆಯೇ ಬದಲಾಗುತ್ತಿದೆಯೆಂದು ಪ್ರೊಸ್ಕೋವ್‌ಸ್ಕಿ ಪಿಡೊಮೊಸ್ತಿ ಮೊದಲಾದ ಅನೇಕರು ಅವುಗಳಲ್ಲಿ ಬರೆದರು. ಎ. ಎನ್. ರಾಡಿಶ್ಚೆವ್ ಎಂಬೊಬ್ಬ ಲೇಖಕ ಅಮೆರಿಕದ ಕ್ರಾಂತಿಯನ್ನೆತ್ತಿಹಿಡಿದು ರಷ್ಯಾಕ್ಕೂ ಅಂತಹದೇ ವ್ಯವಸ್ಥೆ ಬೇಕೆಂದು ತನ್ನ ಪುಸ್ತಕದಲ್ಲಿ ಮಂಡಿಸಿದ. ಅದಕ್ಕಾಗಿ ಆತನನ್ನು ಸೈಬೀರಿಯಕ್ಕೆ ಗಡೀಪಾರು ಮಾಡಲಾಯಿತು. ಜನರ ಸ್ವಾತಂತ್ರ್ಯ ದಾಹವನ್ನು ಪತ್ತಿಕ್ಕಿ. ಕ್ರಾಂತಿಯ ಕೊಳ್ಳಿ ಹೊರಡದಂತೆ ಅದರ ಬಾಯಿ ಮುಚ್ಚಿಸುವ ಪ್ರಯತ್ನವನ್ನು ಅಲ್ಲಿನ ರಾಣಿ

ಅದೆಷ್ಟು ಮಾಡಿದರೂ, ಆ ಆಟ ಹೆಚ್ಚು ದಿನ ಸಾಗಲಿಲ್ಲ. ಜನರ ಅತೃಪ್ತಿಯ ಒತ್ತಡವನ್ನು ತಡೆ ಹಿಡಿಯುವುದರಲ್ಲಾಕೆ ಗೆಲ್ಲಲಿಲ್ಲ. ೧೮೨೫ರಲ್ಲಿ ರಷ್ಯಾದಲ್ಲೂ ಚಳುವಳಿ ಸುರುವಾಗಿ, ೧೯೧೭ರ ಕ್ರಾಂತಿಯಲ್ಲದು ಕೊನೆಗೊಂಡಿತು. ಆ ಕ್ರಾಂತಿಗೂ ಅಮೇರಿಕದ ಹಾಗೂ ಫ್ರಾನ್ಸಿನ ಕ್ರಾಂತಿಗಳೇ ಮೂಲವೆನ್ನುತ್ತಾರೆ.

ಅಮೆರಿಕದ ಕ್ರಾಂತಿಯ ಗಾಳಿ ಬೀಸಿ ಯುರೋಪಿನಲ್ಲೆಲ್ಲಾ ಕ್ರಾಂತಿಯುಂಟಾಗಿದ್ದ ಕಾಲದಲ್ಲೇ ಲ್ಯಾಟಿನ್ ಅಮೇರಿಕ (ದಕ್ಷಿಣ ಅಮೇರಿಕ, ಮಧ್ಯ ಅಮೇರಿಕ ಮತ್ತು ಮೆಕ್ಸಿಕೋಗಳನ್ನೊಟ್ಟಿಗೆ ಈ ಹೆಸರಿನಿಂದ ಕರೆಯುತ್ತಾರೆ)ದ ಸ್ಪೈನಿನ ವಸಾಹತುಗಳನ್ನೂ ಕ್ರಾಂತಿ ಅಲುಗಾಡಿಸಿತು. ಅಲ್ಲಿನ ಭೂಮಿಯ ಬಹುಪಾಲು ಭೂಮಾಲಿಕರ ವಶದಲ್ಲಿದ್ದು, ಉಳಿದ ಜನ ತುಂಬ ಬಡವರಾಗಿದ್ದರು. ಆ ಭೂಮಾಲಿಕರ ಶ್ರೀಮಂತಿಕೆಯ ಅಟ್ಟಹಾಸ ಆ ಬಡಜನರ ಭಾವನೆಗಳನ್ನು ಕೆಣಕಿತು. ಅದೇ ಕಾಲಕ್ಕೆ ಆ ಬಡಜನರ ಮೇಲೆ ತೆರಿಗೆಗಳ ಹೊರೆ ಬಿತ್ತು. ಜನ ಸಹಿಸದಾದರು. ಅವರ ರೋಷ ಕ್ರಾಂತಿಯನ್ನು ಹೊತ್ತಿಸಿತು. ಅಮೇರಿಕದ ಕ್ರಾಂತಿ ಮತ್ತು ಫ್ರಾನ್ಸಿನ ಕ್ರಾಂತಿಗಳವರಿಗೆ ಸ್ಫೂರ್ತಿಯನ್ನಿತ್ತುವು. ೧೭೮೦ರಲ್ಲೇ ಪೆರು, ಅರ್ಜೆಂಟೈನಾ, ಬೊಲಿವಿಯಾಗಳಲ್ಲಿ ಮೊದಲ ಬಾರಿಗೆ ಅಂತಹ ಕ್ರಾಂತಿಗಳುಂಟಾದುವು. ಆದರೆ ಸ್ಪಾನಿಷರು ಅವುಗಳನ್ನು ಅಮಾನುಷ ರೀತಿಯಲ್ಲಿ ಹತ್ತಿಕ್ಕಿದರು. ೧೭೮೧ರಲ್ಲಿ ಚಿಲಿಯಲ್ಲೂ ಸ್ವಾತಂತ್ರ್ಯ ಹೋರಾಟ ಹಿಂಸಾತ್ಮಕ ರೂಪವನ್ನು ತಳೆಯಿತು. ಆದರೆ ಅದೂ ವ್ಯರ್ಥವಾಯಿತು. ೧೭೮೯ರಲ್ಲಿ ಬ್ರೆಜಿಲಿನಿಂದ ಪೋರ್ಚುಗೀಸರನ್ನೋಡಿಸಲು ಮಾಡಿದ ಹೋರಾಟವೂ ನಿಷ್ಫಲವಾಯಿತು. ಅದೇ ವರ್ಷ ಹೈತಿ ದ್ವೀಪದಲ್ಲುಂಟಾದ ಕ್ರಾಂತಿಯೂ ಅದೇ ಸಾಲಿಗೆ ಸೇರಿತು. ಸ್ವಾತಂತ್ರ್ಯಕ್ಕಾಗಿ ಅಲ್ಲಿ ಉಗ್ರವಾಗಿ ಹೋರಾಡಿದ ಟೌಸೈಟ್ ಲವರ್ಚರ್ ಎಂಬಾತನನ್ನು ಹಿಡಿದು ಚಿತ್ರಹಿಂಸೆಯನ್ನಿತ್ತು ಕೊಲ್ಲಲಾಯಿತಾದರೂ, ಆತನ ಸಾವಿನ ಒಂದು ವರುಷದ ತರುವಾಯ, ೧೮೦೪ರಲ್ಲಿ, ಲ್ಯಾಟಿನ್ ಅಮೆರಿಕಾದಲ್ಲೇ ಮೊದಲನೆಯದಾಗಿ ಹೈತಿ ಸ್ವತಂತ್ರವಾಯಿತು.

೧೮೦೬ರಲ್ಲಿ ಫ್ರಾನ್ಸಿಸ್ಕೊ ಡಿ. ಮಿರಾಂಡನಿಂದ ವೆನಿಜುಲಾದಲ್ಲಿ ಕ್ರಾಂತಿಯೆದ್ದಿತು. ಅದರದೂ ಫಲಕಾರಿಯಾಗಲಿಲ್ಲ. ಫ್ರಾನ್ಸಿನ ಕ್ರಾಂತಿಯಿಂದ ಪ್ರಭಾವಿತನಾಗಿದ್ದ ಹಿಡಾಲ್ಗೋನಿಂದ ೧೮೧೦ರಲ್ಲಿ ಮೆಕ್ಸಿಕೋದಲ್ಲೂ ಕ್ರಾಂತಿಯುಂಟಾಯಿತು. ಅರ್ಜೆಂಟೈನಾದಲ್ಲೂ ಅದೇ ವರ್ಷ ಕ್ರಾಂತಿಯ ಕಿಡಿ ಹಾರಿತು. ಆದರೆ ಅವೆಲ್ಲ ಯಶಸ್ವಿಯಾಗಲಿಲ್ಲ. ಆದರೂ ಹೋರಾಟ ಮುನ್ನಡೆಯಿತು. ಕಟ್ಟಕಡೆಗೆ ೧೮೧೬ರಲ್ಲಿ ಅರ್ಜೆಂಟೈನಾಕ್ಕೆ ಸ್ವಾತಂತ್ರ್ಯ ಲಭಿಸಿತು. ೧೮೨೧ರಲ್ಲಿ ಮೆಕ್ಸಿಕೋ ಸ್ವತಂತ್ರವಾಯಿತು. ಅದೇ ಕಾಲದಲ್ಲಿ ಲ್ಯಾಟಿನ್ ಅಮೇರಿಕದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸೈಮನ್ ಬೊಲಿವರ್ ಮತ್ತು ಜೊಸೆ ಡಿ ಸಾನ್ ಮಾರ್ಟಿನರು ಪಾಲ್ಗೊಂಡರು. ಸ್ವಾತಂತ್ರ್ಯ ಪ್ರೇಮವೇ ಮೈವೆತ್ತಂತಿದ್ದ ಅವರ ನಾಯಕತ್ವದಿಂದ ಲ್ಯಾಟಿನ್ ಅಮೆರಿಕದ ರಾಷ್ಟ್ರಗಳು ಒಂದೊಂದಾಗಿ ಸ್ವತಂತ್ರವಾದುವು. ೧೮೨೬ರ ಹೊತ್ತಿಗೆ ಅಲ್ಲಿನ ಎಲ್ಲಾ ದೇಶಗಳೂ ಸ್ವಾತಂತ್ರ್ಯ ಘೋಷಣೆ ಮಾಡಿದುವು. ಅದೇ ವೇಳೆಗೆ ಅಮೇರಿಕದೊಡನೆ ಸಂಪರ್ಕಹೊಂದಿದ ಕೆನಡಾಕ್ಕೂ ಕ್ರಾಂತಿಯ ಬಿಸಿತಾಗಿತು. ವಿಲಿಯಂ ಮೆಕೆಂಜಿಯ ನೇತೃತ್ವದಲ್ಲಿ ೧೮೩೭ರ ಡಿಸೆಂಬರ್‌ದಲ್ಲೇ ಕ್ರಾಂತಿ ಸಿಡಿಯಿತಾದರೂ ಅದು ಸ್ವತಂತ್ರವಾದುದು ೧೮೬೭ರಲ್ಲಿ.

೧೭೯೨ರ ಸುಮಾರಿಗೇ ಸಾವಿರಾರು ಜನ ನೀಗ್ರೋಗಳು ಕೆನಡಾದ ನೋವಾಸ್ಕೋಷಿಯಾದಿಂದ ಆಫ್ರಿಕಾದ ಸಿಯೆರ್ರಾ ಲಿಯೋನ್‌ನಲ್ಲಿ ಬಂದು ನೆಲೆಸಿದ್ದರು. ಅಲ್ಲೂ ಸಹ ಅವರ ಸ್ವಾತಂತ್ರ್ಯಕ್ಕೆ ಧಕ್ಕೆಯೊದಗಿದಾಗ ಅವರೆಲ್ಲ ದಂಗೆ ಎದ್ದಿದ್ದರು. ಅಮೇರಿಕದ ಕ್ರಾಂತಿಯೇ ಅವರಿಗೆ ಸ್ಫೂರ್ತಿಯಾಗಿತ್ತೆನ್ನುತ್ತಾರೆ. ಅದೇ ವೇಳೆಗೆ ಲೈಬೀರಿಯಾದ ಕರಾವಳಿಯಲ್ಲೊಂದು ವಸಾಹತನ್ನು ಸ್ಥಾಪಿಸಿ, ತನ್ನ ದೇಶದ ಗುಲಾಮರನ್ನೆಲ್ಲ ಅಲ್ಲಿ ನೆಲೆಗೊಳಿಸುವ ಯೋಚನೆಯನ್ನು ಅಮೇರಿಕವೂ ಮಾಡಿತು. ಆ ಉದ್ದೇಶದಿಂದ ಅದು ಸುಮಾರು ೧೫ ಸಾವಿರ ನೀಗ್ರೋಗಳನ್ನೂ ಅಲ್ಲಿಗೆ ಸಾಗಿಸಿತ್ತು. ಆದರೆ ಅಷ್ಟರಲ್ಲೇ ಅಂತಃಕಲಹವು ಪ್ರಾರಂಭವಾಗಿ, ಅದರ ಕನಸು ಮಣ್ಣುಗೂಡಿತು. ಹಾಗೆ ಲೈಬೀರಿಯಾದಲ್ಲಿ ನೆಲೆಸಿದವರಲ್ಲಿ ಹಿಲರಿ ಟೀಗ್ ಎಂಬಾತನೂ ಒಬ್ಬನಾಗಿದ್ದ. ವರ್ಜೀನಿಯಾದಲ್ಲಿ ಜನಿಸಿದ್ದ ಆತ ಅಮೇರಿಕಾದ ಕ್ರಾಂತಿಯ ಕತೆಯನ್ನೆಲ್ಲಾ ಅರಿತಿದ್ದ. ಆತ ೧೮೪೭ರಲ್ಲೇ ಲೈಬೀರಿಯಾದ ಸ್ವಾತಂತ್ರ್ಯವನ್ನು ಘೋಷಿಸಿದ. ಈಜಿಪ್ಟಿನ

ರಾಜಕೀಯದಲ್ಲೂ ಪರಕೀಯರ ಪ್ರವೇಶವಾದಂದಿನಿಂದ, ಅಲ್ಲಿನ ಜನರಲ್ಲಿ ಅತೃಪ್ತಿ ಹೆಚ್ಚುತ್ತಾ ಹೋಗಿ, ಸ್ವಾತಂತ್ರ್ಯಕ್ಕಾಗಿ ಜನ ೧೮೮೨ರಲ್ಲಿ ದಂಗೆ ಎದ್ದರು. ಬ್ರಿಟಿಷರು ಆ ದಂಗೆಯನ್ನಡಗಿಸಿದರೂ, ಜನರಲ್ಲಿದ್ದ ಕ್ರಾಂತಿಯ ಮನೋಭಾವವನ್ನು ಅಳಿಸಲಾರದಾದರು. ೧೯೧೯ರಲ್ಲಿ ಸಾ ಅದ್ ಸಗ್ಲೂಲ್ ಪಾಷಾನ ಮುಖಂಡತ್ವದಲ್ಲಿ ಭಾರಿ ಸ್ವಾತಂತ್ರ್ಯ ಚಳುವಳಿ ಪ್ರಾರಂಭವಾಗಿ ೧೯೨೨ರಲ್ಲಿ ಈಜಿಪ್ಟ್ ಸ್ವತಂತ್ರವಾಯಿತು. ಇಥಿಯೋಪಿಯಾದಲ್ಲೂ ಇದೇ ರೀತಿಯಲ್ಲಿ ಸ್ವಾತಂತ್ರ್ಯ ಹೋರಾಟಗಳು ನಡೆದು ೧೮೯೬ರಲ್ಲಿದು ಸ್ವತಂತ್ರವಾಯಿತು. ಸ್ವಾತಂತ್ರ್ಯಕ್ಕಾಗಿ ನಡೆದ ಆ ಎಲ್ಲ ಹೋರಾಟಗಳ ಹಿನ್ನೆಲೆಯಲ್ಲೂ ಅಮೇರಿಕದ ಕ್ರಾಂತಿಯ ಛಾಯೆಯನ್ನು ಗುರುತಿಸಿದವರಿದ್ದಾರೆ.

ಆಫ್ರಿಕದ ಜನರಲ್ಲಿದ್ದ ನೂರಾರು ಒಳಪಂಗಡಗಳಿಂದಾಗಿ ಅಲ್ಲಿನ ಇತರ ದೇಶಗಳಲ್ಲಿ ರಾಷ್ಟ್ರೀಯ ಭಾವನೆ ಬೇಗನೆ ಮೂಡಲಿಲ್ಲ. ಯುರೋಪಿನಿಂದ ವಲಸೆ ಬಂದ ಬಿಳಿಯರ ಅಧೀನರಾಗಿ ಆ ಕರಿಯರೆಲ್ಲ ಬಾಳಬೇಕಾಯಿತು. ಆದರೆ ದಿನಗಳೆದಂತೆ ಆಫ್ರಿಕಾದಿಂದಲೂ ಎಷ್ಟೋ ಜನ ನೀಗ್ರೋಗಳು ವಿದ್ಯಾಭ್ಯಾಸಕ್ಕಾಗಿ ಅಮೇರಿಕವನ್ನು ಸೇರಿದರು. ಅಮೇರಿಕದ ಕ್ರಾಂತಿಯ ಸಂದೇಶವನ್ನು ಹೊತ್ತು ಮರಳಿದ ಅವರು, ತಾಯ್ನಾಡಿನಲ್ಲೂ ಕ್ರಾಂತಿಯನ್ನುಂಟುಮಾಡಿದರು. ಘಾನಾದಲ್ಲಿ ಕ್ರಾಂತಿಯನ್ನೆಬ್ಬಿಸಿದ ಕ್ವಾಮೆ ನಕ್ರೂಮ ಅಂಥವರಲ್ಲೊಬ್ಬ.

ಏಷ್ಯಾದಲ್ಲೂ ಅಮೆರಿಕದ ಕ್ರಾಂತಿಯ ಪ್ರಭಾವ ಕಾಣಿಸದೆ ಇರಲಿಲ್ಲ. ೧೮೮೫ರ ಸುಮಾರಿಗೇ ಸನ್ ಯಾತ್ ಸೆನ್ ಅಮೇರಿಕದ ನಮೂನೆಯಲ್ಲೇ ಚೀನಾದಲ್ಲೂ ಕ್ರಾಂತಿಯನ್ನೆಬ್ಬಿಸಲು ಹವಣಿಸುತ್ತಿದ್ದ. ೧೯೧೧ರಲ್ಲಿ ಆತ ಚೀನಾದಲ್ಲಿ ಕ್ರಾಂತಿಯನ್ನೆಬ್ಬಿಸಿ, ಗಣರಾಜ್ಯ ಸ್ಥಾಪಿಸಿದನಾದರೂ, ವ್ಯಕ್ತಿಸ್ವಾತಂತ್ರ್ಯದ ಬಗ್ಗೆ ಆತನ ನಿಲುಮೆ ಅಮೇರಿಕನರಿಗಿಂತ ತೀರಾ ಭಿನ್ನವಾಗಿತ್ತು. ಅವನ ನಂತರ ಅಧಿಕಾರಕ್ಕೆ ಬಂದ ಚಿಯಾಂಗ್ ಕೈ ಷೇಕನಂತೂ ಪಾಶ್ಚಾತ್ಯ ಪೌರ್ವಾತ್ಯ ರಾಷ್ಟ್ರಗಳಲ್ಲಿ ಕ್ರಾಂತಿಯ ಬೀಜಬಿತ್ತಿದ್ದಿದ್ದರೆ ಅದು ಅಮೇರಿಕದ ಕ್ರಾಂತಿಯೇ ಎಂದು ದೃಢವಾಗಿ ನಂಬಿದವನಾಗಿದ್ದ. ಆದರೆ ನ್ಯಾಯನೀತಿಗಳಿಗಂಟಿಕೊಂಡೇ ಮುನ್ನಡೆದ ಅಮೆರಿಕದ ಕ್ರಾಂತಿ ನಿರ್ವೀರ್ಯವಾಗಿ ಕಂಡಿತ್ತು. ಕಮ್ಯೂನಿಸ್ಟ್ ಆಡಳಿತವನ್ನು ಚೀನಾಕ್ಕೆ ತಂದ ಮಾವೋ ತ್ಸೆ ತುಂಗನಿಗೆ. ಆತನ ದೃಷ್ಟಿಯಲ್ಲಿ ಕ್ರಾಂತಿಯೆಂದರೆ ಒಂದು ವರ್ಗವನ್ನು ಉಚ್ಚಾಟನೆ ಮಾಡಲು ಮತ್ತೊಂದು ವರ್ಗದವರು ಮಾಡುವ ಹಿಂಸಾತ್ಮಕ ಕ್ರಿಯೆಯಾಗಿತ್ತು. ಆದರೂ ದೀರ್ಘಕಾಲದ ಹೋರಾಟದಿಂದ ಯಶಸ್ಸೆಂಬ ತತ್ತ್ವಕ್ಕಾಗಿ ಮಾತ್ರ ಅಮೇರಿಕದ ಕ್ರಾಂತಿ ಆತನಿಗೆ ಆದರ್ಶವಾಗಿತ್ತು.

೧೮೯೬ರಲ್ಲೇ ಸ್ವಾತಂತ್ರ್ಯಕ್ಕಾಗಿ ಬಂಡಾಯವೆದ್ದ ಫಿಲಿಪೈನ್ಸ್‌ನವರಿಗೂ ಅಮೇರಿಕದ ಕ್ರಾಂತಿಯೇ ಆದರ್ಶವಾಗಿತ್ತು. ಆದರೆ ಆ ಪ್ರಯತ್ನ ನಿಷ್ಫಲವಾದಾಗ, ಲ್ಯಾಟಿನ್ ಅಮೇರಿಕದಲ್ಲಿ ಮೇಲಿಂದ ಮೇಲೆ ಆದ ಕ್ರಾಂತಿಯನ್ನು ಸ್ಮರಿಸಿಕೊಂಡ ಫಿಲಿಪೈನ್ಸಿಗರು, ಮತ್ತೊಮ್ಮೆ ಕ್ರಾಂತಿಯನ್ನುಂಟು ಮಾಡಲು ಸಮಯ ಕಾಯತೊಡಗಿದರು. ಅಂತೆಯೇ ೧೮೯೮ರಲ್ಲಿ ಮತ್ತೊಮ್ಮೆ ಕ್ರಾಂತಿಯನ್ನುಂಟು ಮಾಡಿ, ಸ್ವಾತಂತ್ರ್ಯವನ್ನು ಘೋಷಿಸಿದರು. ಕೊರಿಯಾವು ಕ್ರಾಂತಿಯನ್ನೆಬ್ಬಿಸಿ ೧೯೪೮ರಲ್ಲಿ ಸ್ವಾತಂತ್ರ್ಯದ ಸುಖ ಕಂಡಿತು. ತಮ್ಮಲ್ಲಿ ಸ್ವಾತಂತ್ರ್ಯದ ಉಜ್ವಲ ಅಭಿಮಾನವನ್ನು ಮೊಳೆಸಿದ್ದಿದ್ದರೆ ಅದು ಅಮೇರಿಕ ಮತ್ತು ಫ್ರಾನ್ಸಿನ ಕ್ರಾಂತಿಗಳಿಂದು ಕೊರಿಯಾದ ಸ್ವಾತಂತ್ರ್ಯ ಹೋರಾಟಗಾರ ಸಿಂಗ್‌ಮನ್ ರ್ಹೀ ಸಾರಿ ಹೇಳಿದ್ದ. ಅದೇ ಕಾಲದ ಜಪಾನಿನ ಧ್ಯೇಯಧೋರಣೆಗಳಲ್ಲೂ, ಸುಧಾರಣೆಗಳ ಹಿನ್ನೆಲೆಯಲ್ಲೂ ಅಮೇರಿಕದ ಕ್ರಾಂತಿಯ ಪ್ರಭಾವದ ಪಾತ್ರವಿದೆ. ಎರಡನೆಯ ಮಹಾಯುದ್ಧದ ನಂತರದ ಜಪಾನಿನ ಧ್ಯೇಯಧೋರಣೆಗಳಲ್ಲಂತೂ ಅಮೇರಿಕದ ಕ್ರಾಂತಿಯ ಪ್ರಭಾವವು ಎದ್ದು ಕಾಣುತ್ತದೆ. ಜಪಾನಿನ ವಾಸೆಡಾ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದ ಒಕುಮಾ ಶಿಗೆನೋಬುವಂತೂ ಅಮೇರಿಕದ ಕ್ರಾಂತಿಗೂ, ಜಫರ್ಸನ್‌ನ ವ್ಯಕ್ತಿತ್ವಕ್ಕೂ ಮಾರುಹೋಗಿದ್ದ. ಭಾರತದಲ್ಲೂ ರಾಜಾರಾಮ ಮೋಹನ್‌ರಾಯ್ ಅಂಥವರು ಫ್ರಾನ್ಸಿನ ಕ್ರಾಂತಿಯನ್ನುಲ್ಲೇಖಿಸಿದ್ದುಂಟು. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಅಮೇರಿಕದ ಕ್ರಾಂತಿಯಿಂದ ಅನೇಕರು ಪ್ರೇರಿತರಾದದ್ದೂ ಉಂಟು. ಇಸ್ರೇಲ್, ಬರ್ಮಾ, ವಿಯಟ್ನಾಮ್ ಮೊದಲಾದ ಇನ್ನೂ ಅನೇಕ ರಾಷ್ಟ್ರಗಳ ಸ್ವಾತಂತ್ರ್ಯ ಹೋರಾಟಗಾರರಿಗೂ ಅಮೇರಿಕದ ಕ್ರಾಂತಿಯೇ ಹೊಸ

ಹುರುಪನ್ನಿತ್ತಿತ್ತು. ಒಟ್ಟಿನಲ್ಲಿ ಕ್ರಾಂತಿಯು ಹೊಸ್ತಿಲನ್ನು ತುಳಿಯುವಾಗಲೆಲ್ಲ. ಅಮೆರಿಕದ ಕ್ರಾಂತಿಯನ್ನು ಸ್ಮರಿಸದ, ಅದರಿಂದ ಪ್ರಭಾವಿತರಾಗದ ದೇಶಗಳಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು

ಕ್ರಾಂತಿಗಳಿಗೆಲ್ಲ ಇದೇ ದಾರಿದೀಪ

ಜನರ ಮನಗಳಲ್ಲಿ ತಾಂಡವವಾಡುತ್ತಿರುವ ಅತೃಪ್ತಿಯನ್ನಳಿಸಲು ಕ್ರಾಂತಿಯ ಮೊರೆಹೊಕ್ಕವರು ಅಮೆರಿಕನರು. ಅಮೇರಿಕನರ ಈ ರೀತಿ ಮುಂದೆ ಜಗತ್ತಿನ ಜನತೆಗೆಲ್ಲ ಒಂದು ಆದರ್ಶವಾಯಿತು. ಕರಭಾರದ ಹೊರೆ ಹೊರಲಾರದಾದಾಗ, ಪ್ರಜೆಗಳ ಸುಖದುಃಖಗಳಿಂದ ಪ್ರಭುತ್ವವು ವಿಮುಖವಾದಾಗ, ಸಿರಿವಂತಿಕೆಯ ಅಟ್ಟಹಾಸವನ್ನು ಹಸಿವಿನಿಂದ ಕಂಗಾಲಾದ ಜನ ಸಹಿಸದಾದಾಗ, ಕ್ರಾಂತಿಯ ಕಿಚ್ಚು ಹೊತ್ತಿಕೊಂಡುದನ್ನು ನಾವು ಚರಿತ್ರೆಯಲ್ಲಿ ನೋಡುತ್ತೇವೆ. ಅಗೆಲ್ಲ ಕ್ರಾಂತಿಗೆ ಪ್ರೇರಣೆಯನ್ನಿತ್ತುದು ಮಾತ್ರವಲ್ಲದೆ, ಕ್ರಾಂತಿಯ ವಿಧಿವಿಧಾನಗಳಲ್ಲೂ ಅಮೆರಿಕದ ಕ್ರಾಂತಿ, ಕ್ರಾಂತಿಕಾರರನ್ನೆಲ್ಲ ನಿರ್ದೇಶಿಸಿತು. ಅದೇ ಅವರಿಗೆಲ್ಲ ದಾರಿದೀಪವಾಯಿತು.

ಅಮೆರಿಕದ ಕ್ರಾಂತಿ ತೊಡಗಿದುದು ಹಳ್ಳಿಹಳ್ಳಿಗಳಲ್ಲಿ. ಬಡಹಳ್ಳಿಗರಲ್ಲೂ ಕ್ರಾಂತಿಕಾರಿ ಮನೋಭಾವವನ್ನು ಬಿತ್ತುವ ಕೆಲಸ ಮಾಡಿದುದು ಹಳ್ಳಿಹಳ್ಳಿಗಳಲ್ಲೂ ಇದ್ದ ಸಮಿತಿಗಳು. ಅಲ್ಲಿಂದ ಹೊರಟ ಕ್ರಾಂತಿಯು ಅಲ್ಲಿ ಪಟ್ಟಣಗಳನ್ನು ತಲುಪಿ, ಕಾಡ್ಗಿಚ್ಚಿನಂತೆ ಊರೆಲ್ಲ ಹಬ್ಬಿತು. ಜನರ ಮನೋರಂಗಗಳನ್ನು ಕ್ರಾಂತಿಗಾಗಿ ಸಜ್ಜುಗೊಳಿಸುವ ಈ ಕಾರ್ಯ ಕ್ರಾಂತಿಯ ತಳಹದಿಯಾಯಿತು. ಸಾಮೂಹಿಕ ಸಭೆಗಳೂ, ಪ್ರದರ್ಶನಗಳೂ, ಕ್ರಾಂತಿಯ ಕಿಚ್ಚನ್ನು ಹೆಚ್ಚಿಸಲು ಪೂರಕವಾದುವು. ಸ್ವಾತಂತ್ರ್ಯದ ಹಂಬಲ ಅವರನ್ನೆಲ್ಲ ಒಂದುಗೂಡಿಸಿತು. ತಮ್ಮ ನ್ಯಾಯಬದ್ಧವಾದ ಬೇಡಿಕೆಗಳನ್ನು ಅರಸರ ಮುಂದಿಟ್ಟರು. ಅಂಗೀಕಾರ ದೊರೆಯದಾದಾಗ, "ರಾಜನ ನಿರಂಕುಶ ಪ್ರಭುತ್ವದ ಬಲವಂತಕ್ಕೆ ಮಣಿದು ದಾಸರಾಗಿ ಬದುಕುವುದಕ್ಕಿಂತ ಸ್ವತಂತ್ರಮಾನವರಾಗಿ ಮಡಿಯುವುದೇ ಲೇಸು" ಎಂದೆಣಿಸಿ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ಅಮೆರಿಕದ ರೀತಿಯನ್ನೇ ಅನುಸರಿಸಿ ಮುಂದೆ ಅನೇಕ ರಾಷ್ಟ್ರಗಳು ಕ್ರಾಂತಿಯ ಕಿಚ್ಚನ್ನು ಹಳ್ಳಿ ಹಳ್ಳಿಗಳಲ್ಲಿಯೂ ಹೊತ್ತಿಸಿದುವು. ರೈತರಲ್ಲೂ, ಕಾರ್ಮಿಕರಲ್ಲೂ, ಜನಸಾಮಾನ್ಯರಲ್ಲೂ ಸ್ವಾತಂತ್ರ್ಯದ ಪ್ರಜ್ಞೆ ಮೂಡಿಸಿದುವು. ಸಂಘಸಂಸ್ಥೆಗಳನ್ನು ಕಟ್ಟಿಕೊಂಡು ರಾಷ್ಟ್ರ ಸಂಘಟನೆಯ ಕಾರ್ಯವನ್ನು ಚುರುಕುಗೊಳಿಸಿದುವು. ಈ ಮಾತು ಫ್ರಾನ್ಸಿನ ಕ್ರಾಂತಿಗನ್ವಯಿಸಿದಂತೆಯೇ, ಚೀನಾದ ಕ್ರಾಂತಿಗೂ ಅನ್ವಯಿಸುತ್ತದೆ. ಭಾರತದ ಸ್ವಾತಂತ್ರ್ಯ ಹೋರಾಟವೂ ಅದರಿಂದ ಹೊರತಾಗಲಾರದು. ಲ್ಯಾಟಿನ್ ಅಮೆರಿಕದಲ್ಲಿ ಕ್ರಾಂತಿಗಳೆಷ್ಟೋ ಬಾರಿ ವಿಫಲವಾಗಿದ್ದಿದ್ದರೆ, ಅವು ಪಟ್ಟಣಿಗರನ್ನೂ, ಪಟ್ಟಣಗಳನ್ನೂ ಬಿಟ್ಟು ದೂರಕ್ಕೆ ಹೋಗದುದ್ದೇ ಕಾರಣ.

ಕ್ರಾಂತಿಯ ಭಾವನೆಯನ್ನು ಬಿತ್ತಿದರೂ, ಕ್ರಾಂತಿಯನ್ನೆಬ್ಬಿಸಲು ಜನರನ್ನು ಉದ್ರೇಕಗೊಳಿಸಿ, ಅವರ ಭಾವಗಳನ್ನು ಪ್ರಚೋದಿಸುವುದು ಅಗತ್ಯವಿತ್ತು. ಆ ದಿಸೆಯಲ್ಲಿ ಸ್ಯಾಮುವೆಲ್ ಆಡಮ್ಸ್ ತನ್ನ ಪ್ರಚಾರ ಪ್ರತಿಭೆಯಿಂದ, ಸ್ವಾತಂತ್ರ್ಯಪ್ರಿಯತೆಯನ್ನೂ ದೇಶಭಕ್ತಿಯನ್ನೂ ಜನರಲ್ಲಿ ಹುಟ್ಟಿಸಿದರೆ, ಥಾಮಸ್ ಜಫರ್ಸನ್, ಥಾಮಸ್‌ಪೈನ್ ಮೊದಲಾದವರು ತಮ್ಮ ಬರಹಗಳಿಂದ ಜನಜಾಗೃತಿಯನ್ನುಂಟು ಮಾಡಿದರು. ಪೆಟ್ರಿಕ್ ಹೆನ್ರಿ ತನ್ನ ಮಾತುಗಾರಿಕೆಯಿಂದ ಜನರನ್ನು ಕೆರಳಿಸಿದ; ಕ್ರಾಂತಿಯ ಕಹಳೆಯನ್ನೂದಿದ. ಇವೆಲ್ಲವುಗಳಿಂದ ಅಮೆರಿಕದಲ್ಲಿ ಕ್ರಾಂತಿಯ ಕಿಚ್ಚು ಧಗಧಗಿಸಿತು. ಅಮೆರಿಕದ ಜನರನ್ನು ಕೆರಳಿಸಿದ ಆ ವಿಚಾರಗಳೇ ಉಳಿದ ದೇಶದ ಜನರಿಗೂ ಕ್ರಾಂತಿಯ ಪ್ರಚೋದನೆಯನ್ನಿತ್ತುದುಂಟು. ಅದರೊಟ್ಟಿಗೇ ಆ ದೇಶಗಳ ಲೇಖಕರೂ ಕವಿಗಳೂ ಆ ನಿಟ್ಟಿನಲ್ಲಿ ತಮ್ಮ ಕಾಣಿಕೆಯನ್ನೂ ಸಲ್ಲಿಸಿದರು. ಫ್ರಾನ್ಸಿನ ಡಾಂಟನ್, ಮಿರಾಬು, ಜರ್ಮನ್ ಕವಿ ಗಯಟೆ, ಇಟಲಿಯ ಬಿ ವಿಕ್ಟೋರಿಯೋ ಅಲ್‌ಫೆರಿ, ಮೆಝಿನಿ, ಕವೂರ್ ಮೊದಲಾದವರೆಲ್ಲ ಅಂಥವರು. ಅವರೆಲ್ಲರೂ ಅಮೇರಿಕದ ಕ್ರಾಂತಿಯಿಂದಲೇ ಸ್ಫೂರ್ತಿ ಉತ್ತೇಜನಗಳನ್ನು ಪಡೆದು ತಮ್ಮ ದೇಶದ ಜನರಲ್ಲಿ ಹೊಸ ಚೈತನ್ಯವನ್ನೂ ರಾಷ್ಟ್ರೀಯ ಭಾವನೆಯನ್ನೂ ಮೂಡಿಸಿದರು.

ಅಮೆರಿಕದ ತೀರದಲ್ಲಿಳಿಯುವ ಮೊದಲೇ "ಒಗ್ಗಟ್ಟಿನಿಂದ ನಾವು ನಮ್ಮ ಪುರೋಭಿವೃದ್ಧಿಗಾಗಿ ಕಾನೂನುಗಳನ್ನೂ, ಸಂಘಗಳನ್ನೂ, ಶಾಸನಗಳನ್ನೂ ರಚಿಸಬೇಕು." ಎಂಬ 'ಮೇ ಫ್ಲವರ್' ಯಾತ್ರಿಕರ ಒಡಂಬಡಿಕೆಯಲ್ಲೇ ಅಮೆರಿಕನರ ಹೃದಯಗಳಲ್ಲಿದ್ದ ಸ್ವಾತಂತ್ರ್ಯದ ಹಂಬಲ ಪ್ರತಿಬಿಂಬಿತವಾಗಿದೆ. ಅಂಥ ಸ್ವಾತಂತ್ರ್ಯಪ್ರೇಮಿಗಳಾದ ಅಲ್ಲಿನ ಜನ ಮುಂದೆ, ತಾವು ಆಂಗ್ಲರಲ್ಲಿ, ಅಮೆರಿಕನರು ಎಂದರು. 'ಆಂಗ್ಲ' ಎಂಬ ಶಬ್ದದ ಬದಲಿಗೆ, ದೇಶದುದ್ದಕ್ಕೂ 'ಅಮೆರಿಕನ್' ಎಂಬ ಶಬ್ದ ಚಲಾವಣೆಗೆ ಬಂತು. ಈ ಅಮೆರಿಕೀಕರಣ ಅವರಲ್ಲಿ ರಾಷ್ಟ್ರೀಯ ಭಾವನೆಯನ್ನು ಪ್ರಚೋದಿಸಿತು. ಅವರನ್ನೆಲ್ಲ ಒಂದು ಗೂಡಿಸಿ, ತಾವು ಸ್ವತಂತ್ರರು, ತಮ್ಮ ಸಂಸ್ಕೃತಿ ಬೇರೆ ಎಂಬ ಭಾವನೆಯನ್ನು ಬೆಳೆಸಲು ಅದೂ ನೆರವಾಯಿತು. ಸ್ವಂತಿಕೆಯನ್ನು ಬೆಳೆಸಿ, ರಾಷ್ಟ್ರೀಯತೆಯನ್ನು ಪ್ರಚೋದಿಸಲು ಸಹಕಾರಿಯಾಗುವ ಈ ಕ್ರಮವನ್ನು ಅನೇಕ ದೇಶಗಳು ಅನುಸರಿಸಿದ್ದುಂಟು. ಐರ್ಲೆಂಡಿನ ಸರಕಾರ ಪ್ರಜೆಗಳೆಲ್ಲ ಗೇಲಿಕ್ ಭಾಷೆಯನ್ನು ಕಲಿಯಲೇ ಬೇಕೆಂದು ವಿಧಿಸಿತು. ಇಸ್ರೇಲಿನಲ್ಲೆಲ್ಲ ವ್ಯವಹಾರವೂ ಹಿಬ್ರೂ ಭಾಷೆಯಲ್ಲೇ ಆಗಬೇಕೆಂದಾಯಿತು. ವಿಯಟ್ನಾಮಿನ ವಿದೇಶಿ ವ್ಯವಹಾರಗಳಲ್ಲಿ, ಸಹಿ ಹಾಕುವಾಗಲೂ ವಿಯಟ್ನಾಮಿ ಭಾಷೆಯನ್ನು ಬಿಡುವಂತಿಲ್ಲ. ಭಾರತದಲ್ಲೂ ರಾಷ್ಟ್ರಭಾಷೆಯಾದ ಹಿಂದಿಯಲ್ಲೇ ವ್ಯವಹಾರಗಳು ಜರಗಬೇಕೆನ್ನುವುದೂ ಅದಕ್ಕೇ.

'ಸ್ಟಾಂಪ್ ಆಕ್ಟ್'ನಿಂದ ಕೆರಳಿದ ಅಮೆರಿಕನರು ತಮ್ಮ ಪ್ರತಿಭಟನೆಯನ್ನು ಕಾಯಿದೆಭಂಗದ ಮೂಲಕ ಪ್ರಕಟಿಸಿದರು. ಸ್ಟಾಂಪುಗಳನ್ನಾರೂ ಕೊಂಡುಕೊಳ್ಳಲೇ ಇಲ್ಲ. ಕೆಲವು ಕ್ರಾಂತಿಕಾರಿಗಳಂತೂ ಆ ಸ್ಟಾಂಪುಗಳ ಏಜಂಟರುಗಳನ್ನೇ ಥಳಿಸಿ, ಅವರ ಮಾನಭಂಗ ಮಾಡಿದರು. ಸ್ಟಾಂಪುಗಳನ್ನು ಸುಟ್ಟು ಹಾಕಿದರಲ್ಲದೆ, ಕೆಲವೆಡೆ ಸ್ಟಾಂಪುಗಳ ಏಜಂಟರ ಗಳ ಮನೆಗಳನ್ನೇ ಪುಡಿಪುಡಿ ಮಾಡಿದರು. ಮುಂದೆ ೧೭೬೭ರಲ್ಲಿ ಗ್ಲಾಸು, ಕಾಗದ, ಸೀಸ ಮತ್ತು ಟೀಗಳ ಮೇಲೆ ಮತ್ತಷ್ಟು ಸುಂಕವನ್ನು ಬ್ರಿಟಿಷರು ಹೇರಿದಾಗ. ಈ ಕಾಯಿದೆ ಭಂಗವು ಅಸಹಕಾರ ಚಳುವಳಿಯ ರೂಪು ತಳೆಯಿತು. ಜನ ಆಮದು ವ್ಯಾಪಾರವನ್ನೇ ನಿಲ್ಲಿಸಿಬಿಟ್ಟರು. ಕಾಗದವನ್ನು ಕೈಯಿಂದಲೇ ತಯಾರಿಸಿ ಉಪಯೋಗಿಸತೊಡಗಿದರು. ಬಟ್ಟೆಗಳನ್ನು ತಾವೇ ನೆಯ್ದು ತೊಟ್ಟರು. ಟೀಯನ್ನು ತೊರೆದು, ಬೇರೆ ಪಾನೀಯಗಳನ್ನು ಉಪಯೋಗಿಸತೊಡಗಿದರು. ಮನೆಗಳಿಗೆ ಬಣ್ಣ ಬಳಿಯುವ ಗೋಜಿಗೇ ಹೋಗಲಿಲ್ಲ. ಒಟ್ಟಿನಲ್ಲಿ ಸ್ವಾತಂತ್ರ್ಯದ ಕೆಚ್ಚು ಅವರಿಗೆ ಸ್ವಾವಲಂಬನೆಯ ಪಾಠವನ್ನು ಕಲಿಸಿತು. ದೇಶಭಕ್ತಿಯನ್ನು ಹೆಚ್ಚಿಸಲು ಅದೂ ಒಂದು ಸಾಧನ ವಾಯಿತು. ಆದರೆ ಅಸಹಕಾರದ ಆವೇಶದಲ್ಲಿ ಈ ಚಳುವಳಿ ಉಗ್ರರೂಪ ತಳೆದುದೂ ಉಂಟು. ಇಂಗ್ಲೆಂಡಿನ ನೀತಿಯಿಂದ ಕ್ರುದ್ಧರಾದ ಕ್ರಾಂತಿಕಾರರು ೧೭೭೩ನೆಯ ಇಸವಿ ಡಿಸೆಂಬರ ೧೬ರ ರಾತ್ರಿ ಮೊಹಾಕ್ ಇಂಡಿಯನರ ವೇಷಗಳನ್ನು ಧರಿಸಿ, ಲಂಗರು ಹಾಕಿದ ಹಡಗುಗಳನ್ನೇರಿ ३४२ ಪೆಟ್ಟಿಗೆ ಗಳಲ್ಲಿದ್ದ ಟೀಯನ್ನೆಲ್ಲ ನೀರ ಮೇಲೆ ಸುರಿದರು. ಪ್ರತಿಭಟನೆಯನ್ನು ತೋರಿಸಲೂ ಅಸಮಾಧಾನವನ್ನು ವ್ಯಕ್ತಪಡಿಸಲೂ ಅಮೆರಿಕನರಂತೆಯೇ ಅಸಹಕಾರ, ಶಾಂತಿಯುತ ಕಾಯಿದೆಭಂಗ, ವಿದೇಶೀ ವಸ್ತುಗಳ ಬಹಿಷ್ಕಾರಗಳನ್ನು ಪ್ರಬಲ ಅಸ್ತ್ರಗಳನ್ನಾಗಿ ಮಾಡಿಕೊಂಡ ದೇಶಗಳು ಹಲವಿವೆ. ಭಾರತದ ಸ್ವಾತಂತ್ರ್ಯ ಸಂಗ್ರಾಮದ ವೇಳೆ ಅಸಹಕಾರ, ಕಾಯಿದೆಭಂಗ, ವಿದೇಶೀ ವಸ್ತುಗಳ ಬಹಿಷ್ಕಾರಕ್ಕೆ ಕರೆಯಿತ್ತ ಗಾಂಧೀಜೀ ಯವರೂ ಕ್ರಾಂತಿಕಾಲದ ಅಮೇರಿಕನರ ನಿರ್ಧಾರದಿಂದ ಸ್ಫೂರ್ತಿಪಡೆದಿರಬೇಕು. ಆದರೆ ಅವು ಗಳೆಂದೂ ಲ್ಯಾಟಿನ್ ಅಮೆರಿಕದ ದೇಶಗಳಲ್ಲಾದಂತೆ ಹಿಂಸೆಯ ರೂಪನ್ನು ತಳೆಯದಂತೆ ಅವರು ನೋಡಿಕೊಂಡರು. ಅವುಗಳನ್ನೇ ಅವರು ಸತ್ಯಾಗ್ರಹವೆಂದು ಕರೆದರು.

ಅಮೆರಿಕದ ಸ್ವಾತಂತ್ರ್ಯ ಘೋಷಣೆಯಲ್ಲಿ ಉಲ್ಲೇಖಿಸಿದಂತೆ. "All men are created equal (ಮಾನವರೆಲ್ಲರೂ ಸಮಾನರಾಗಿ ಸೃಷ್ಟಿಯಾಗಿದ್ದಾರೆ)" ಎಂಬ ತತ್ತ್ವ ಸಮಾಜದ ಉಚ್ಚನೀಚ ವರ್ಗಗಳನ್ನು ಅಳಿಸಿ, ಜನಜೀವನದಲ್ಲಿ ಹೊಸ ಮೌಲ್ಯವನ್ನು ಹುಟ್ಟಿಸಿತು, ವ್ಯಕ್ತಿ ಸ್ವಾತಂತ್ರ್ಯಕ್ಕೆ ಹೆಚ್ಚು ಬೆಲೆ ಬಂತೆನ್ನಿಸಿತ್ತು. ಅದೇ ತತ್ತ್ವ ಮುಂದಿನ ಅನೇಕ ಕ್ರಾಂತಿಕಾರರ ಮೂಲಮಂತ್ರವಾಯಿತು. ಅಮೇರಿಕದ ಕ್ರಾಂತಿಯಿಂದ ಪ್ರಭಾವಿತವಾದ ಆದೇಶಗಳೂ, ಸ್ವಾತಂತ್ರ್ಯ ಘೋಷಣೆಯನ್ನು ಹೊರಡಿ ಸಿದುವು. ಅವುಗಳಲ್ಲೆಲ್ಲ ಅಮೇರಿಕದ ಸ್ವಾತಂತ್ರ್ಯ ಘೋಷಣೆಯ ಛಾಯೆಯಿದೆ. ಸಮಾಜದ ಬೇರೆ

ಬೇರೆ ವರ್ಗಗಳಲ್ಲಿದ್ದ ಅಸಮಾನತೆಯ ನಿರ್ಮೂಲನ ಫ್ರಾನ್ಸಿನ ಕ್ರಾಂತಿಯ ಉದ್ದೇಶಗಳಲ್ಲೂ ಒಂದಾಗಿತ್ತು. ಅಲ್ಲಿ ೧೭೮೯ರಲ್ಲಿ ಜನರ ಹಕ್ಕುಗಳ ಘೋಷಣೆ ಮಾಡುವಾಗಲೂ "Men are born and remain free and equal in rights" (ಹುಟ್ಟಿನಿಂದ ಮಾನವರೆಲ್ಲರೂ ಸ್ವತಂತ್ರರಾದುದರಿಂದ ಮುಂದೆಯೂ ಅವರು ಸ್ವತಂತ್ರರಾಗಿ ಬಾಳಿ ಸಮಾನ ಹಕ್ಕುಗಳನ್ನು ಪಡೆಯಬೇಕು) ಎಂದೇ ಸಾರಲಾಯಿತು. ೧೯೪೫ರಲ್ಲಿ ವಿಯಟ್ನಾಮಿನಲ್ಲಿ ಸ್ವಾತಂತ್ರ್ಯ ಘೋಷಣೆಯನ್ನು ಮಾಡಿದ ಹೋಚಿಮಿನ್‌ರೂ "All men are created equal" ಎಂಬ ಜಫರ್ಸನ್‌ನ ಮಾತಿನಿಂದಲೇ ತೊಡಗಿದ್ದರು. ಅದೇ ವರ್ಷ ಜಪಾನಿನಲ್ಲಿ ರಚಿತವಾದ ಮ್ಯಾಕ್ ಆರ್ಥರನ ಘಟನೆಯಲ್ಲೂ, ಅಮೆರಿಕದ ಸ್ವಾತಂತ್ರ್ಯ ಘೋಷಣೆಯಲ್ಲಿದ್ದಂತೆ (Right to life, liberty and the pursuit of happiness) ಬದುಕುವ, ಸ್ವತಂತ್ರವಾಗಿರುವ ಮತ್ತು ಸಂತಸವನ್ನು ಪಡೆಯುವ ಹಕ್ಕುಗಳ ಉಲ್ಲೇಖವಿದೆ. ಸಮಾನತೆಯ ತತ್ವಕ್ಕೆ ಬೆಲ್ಜಿಯಮ್, ಗ್ರೀಕ್, ಜೆಕೋಸ್ಲೊವೇಕಿಯಾ, ಅರ್ಜೆಂಟೈನಾ ಮೊದಲಾದ ಅನೇಕ ದೇಶಗಳ ಸ್ವಾತಂತ್ರ್ಯ ಘೋಷಣೆಗಳಲ್ಲೂ ಆದ್ಯತೆ ದೊರೆತಿದೆ. ೧೯೧೮ರಲ್ಲಿ ಥಾಮಸ್ ಮಸಾರಿಕ್ ಸ್ವಾತಂತ್ರ್ಯ ಘೋಷಣೆ ಮಾಡುವಾಗಲಂತೂ. ೧೭೭೬ರಲ್ಲಿ ಫಿಲಿಡೆಲ್ಫಿಯಾದಲ್ಲಿ ಸ್ವಾತಂತ್ರ್ಯ ಘೋಷಣೆ ಮಾಡುವಾಗ ಗಂಟೆ ಬಾರಿಸಿದಂತೆಯೇ. ಗಂಟೆಯನ್ನೂ ಬಾರಿಸಲಾಗಿತ್ತು. ಜನಮನಗಳ ಮೇಲೆ ಅಮೆರಿಕದ ಕ್ರಾಂತಿಯ ಪ್ರಭಾವ ಅಚ್ಚಿತ್ತು.

ಅಮೇರಿಕದ ಸ್ವಾತಂತ್ರ್ಯ ಘೋಷಣೆ ಇಡೀ ಮಾನವತೆಯ ಹಕ್ಕುಗಳ ಮುಖವಾಣಿಯಾಗಿ ಸಮಾಜ ಸುಧಾರಣೆಗೆ ಕಾರಣವಾಯಿತು. ಸಮಾನತೆಯ ತತ್ವವೇ ಅಂಥ ಸಮಾಜ ಸುಧಾರಣೆಯಲ್ಲಿ ಪ್ರಮುಖ ಪಾತ್ರ ವಹಿಸಿತು. ಆದರೆ ಒಂದು ವಿಚಾರ. ಎಲ್ಲರಿಗೂ ಸಮಾನ ಅವಕಾಶಗಳು ದೊರೆಯಬೇಕೆಂದು ಅಮೇರಿಕನರು ಹೇಳಿದರೆ, ಅಮೇರಿಕವನ್ನನುಸರಿಸಿದ ಫ್ರಾನ್ಸ್, ಕ್ಯೂಬಾ ಮೊದಲಾದ ರಾಷ್ಟ್ರಗಳು ಆಸ್ತಿಪಾಸ್ತಿಗಳ ದೃಷ್ಟಿಯಲ್ಲೂ ಸಮಾನತೆಯನ್ನು ತರಬಯಸಿದುವು. ಹಾಗಾಗಿ ಅವುಗಳಲ್ಲಿ ಕೆಲವು ಸಮಾಜವಾದ (socialism), ಸಮತಾವಾದ (communism)ಗಳ ಕಡೆಗೆ ವಾಲಿದುದನ್ನು ನಾವು ನೋಡುತ್ತೇವೆ. ಹೆಚ್ಚೇಕೆ, ನಮ್ಮ ದೇಶದಲ್ಲೂ ಈ ತೆರನ ಬದಲಾವಣೆಗಳಾಗುವ ಸೂಚನೆಗಳು ಈ ಒಂದೆರಡು ವರ್ಷಗಳಲ್ಲಿ ಕಂಡು ಬಂದಿದ್ದುವಲ್ಲವೇ? ಆದರೆ ಜನ ಸಕಾಲದಲ್ಲಿ ಎಚ್ಚೆತ್ತುದರಿಂದ ನಮ್ಮ ಪ್ರಜಾಪ್ರಭುತ್ವಕ್ಕೆ ಬಂದ ಆಪತ್ತು ದೂರವಾಯಿತು.

ಸ್ವಾತಂತ್ರ್ಯಕ್ಕಾಗಿ ಯುದ್ಧಗೈದ ಜಾರ್ಜ್ ವಾಷಿಂಗ್ಟನ್‌ನ ಸೇನೆಯಲ್ಲಿದ್ದವರಲ್ಲೂ ಹೆಚ್ಚಿನವರು ರೈತರು. ಹೋರಾಟದ ತರಬೇತಿಯನ್ನವರು ಹೆಚ್ಚು ಪಡೆದಿರದಿದ್ದರೂ. ಸ್ವಾತಂತ್ರ್ಯದ ತೀವ್ರವಾದ ಹಂಬಲವೂ, ಹೇಗಾದರೂ ಮಾಡಿ ಗೆಲ್ಲಲೇಬೇಕೆಂಬ ಛಲವೂ ಅವರನ್ನು ಹೋರಾಟಗಳಿಂದ ಹಿಮ್ಮೆಟ್ಟಿಸಲಿಲ್ಲ. ೧೭೭೫ರ ಏಪ್ರಿಲ್‌ನಲ್ಲಿ ಬಾಸ್ಟನಿನ ಬಳಿಯ ಕನ್ಕಾರ್ಡಿನಲ್ಲಿ ತಾವು ಸಂಗ್ರಹಿಸುತ್ತಿದ್ದ ಮದ್ದುಗುಂಡುಗಳೇ ಮೊದಲಾದ ಯುದ್ಧ ಸಾಮಗ್ರಿಗಳನ್ನು ವಶಪಡಿಸಿಕೊಳ್ಳಲು ಬಂದ ಸೈನ್ಯದ ತುಕಡಿಯನ್ನು ಲೆಕ್ಸಿಂಗ್ಟನ್ ಎಂಬಲ್ಲಿ ಅವರು ಅಡ್ಡಗಟ್ಟಿ, ಭಾರೀ ಕೂಗುಗಳಿಂದ ಆ ಸೈನಿಕರನ್ನು ಹೆದರಿಸಿ, ಹೋರಾಟ ನಡೆಸಿದರು. ದಾರಿಯುದ್ದಕ್ಕೂ ಗೋಡೆಗಳ ಹಾಗೂ ಗುಡ್ಡಬೆಟ್ಟಗಳ ಹಿಂದೆ ಅಡಗಿ ಕುಳಿತ ಹಳ್ಳಿಗರು ಆ ಸೈನಿಕರನ್ನು ಹೊಡೆದುರುಳಿಸಿದರು. ಮುಂದೆ ಮೆರಿಯೋನ್ ಫ್ರಾನ್ಸಿಸ್‌ನೂ ಅಮೇರಿಕದ ಸ್ವಾತಂತ್ರ್ಯ ಯುದ್ಧದಲ್ಲಿದೇ ಕ್ರಮದಿಂದ ವೈರಿಗಳನ್ನು ಸೋಲಿಸಿದ. ವೈರಿಗಳು ನದಿಯನ್ನು ದಾಟಿ ಈಚೆ ಬರುವವರೆಗೂ ತನ್ನ ಸೇನೆಯೊಂದಿಗೆ ಅವಿತಿರುತ್ತಿದ್ದ ಆತ, ನದಿಯ ದಡದ ಜವುಗು ಪ್ರದೇಶದಲ್ಲಿ ವೈರಿಗಳು ಇಳಿಯುತ್ತಿದ್ದಂತೆಯೇ ಮಿಂಚಿನ ವೇಗದಿಂದ ಅವರ ಮೇಲೆ ದಾಳಿ ನಡೆಸುತ್ತಿದ್ದ. ವೈರಿಗಳ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡು, ಅವರ ದೋಣಿಗಳನ್ನು ಆತ ಸುಟ್ಟುಹಾಕುತ್ತಿದ್ದುದೂ ಉಂಟು. ಒಟ್ಟಿನಲ್ಲಿ ಅಂಥ ಇಕ್ಕಟ್ಟಿಗೆ ಸಿಕ್ಕಿದ ವೈರಿಗಳು ಆತನಿಗೆ ಶರಣಾಗುತ್ತಿದ್ದರು. ಈ ತರದ ಕುಯುಕ್ತಿ, ಕಪಟತಂತ್ರಗಳಿಂದ ಶತ್ರುಗಳನ್ನು ಬಾರಿಬಾರಿಗೂ ಪೀಡಿಸಿ, ಅವರ ಹೋರಾಟದ ಶಕ್ತಿಯನ್ನು ಕುಗ್ಗಿಸುವ ಈ ಯುದ್ಧ ವಿಧಾನವೇ ಕಿರುಕುಳ ಕಾಳಗ (ಗೆರಿಲ್ಲಾ ಯುದ್ಧ)ವೆಂದು ಖ್ಯಾತವಾಯಿತು. ಮುಂದಿನ ದಿನಗಳಲ್ಲಿ ಇದೇ ಯುದ್ಧ ವಿಧಾನವನ್ನು ಯುರೋಪು ಮತ್ತಿತರ ಕಡೆಗಳಲ್ಲಿ ಅನುಸರಿಸಲಾಯಿತು.

ಇಟಲಿ ದೇಶವನ್ನು ಏಕೀಕರಿಸಲು ಗ್ಯಾರಿಬಾಲ್ಡಿ ಗೆರಿಲ್ಲಾ ಯುದ್ಧಗಳನ್ನು ನಡೆಸಿದ. ಬೋಅರ್ ಯುದ್ಧದಲ್ಲಿ ಬೋಅರ್ ಗೆರಿಲ್ಲಾಗಳು ಚಾಣಾಕ್ಷತನದಿಂದ ಬ್ರಿಟಿಷ್ ಸೇನೆಗಳನ್ನು ಗೋಳಾಡಿಸಿದರು. ಒಂದನೆಯ ಹಾಗೂ ಎರಡನೆಯ ಮಹಾಯುದ್ಧಗಳಲ್ಲೂ ಈ ಯುದ್ಧತಂತ್ರ ವ್ಯಾಪಕವಾಗಿ ಬಳಸಲ್ಪಟ್ಟಿತು. ಲೆನಿನ್ನನ ಬೋಲ್‌ಷೆವಿಕ್ ಕ್ರಾಂತಿಯಲ್ಲೂ ಸೋವಿಯೆತ್ ಗೆರಿಲ್ಲಾಗಳು ಹಿರಿದಾದ ಪಾತ್ರ ವಹಿಸಿದರು. ಚೀನಾದ ಕ್ರಾಂತಿಯ ವೇಳೆಯಲ್ಲೂ ಮಾವೋತ್ಸೆತುಂಗನಿಗೆ ಯಶಸ್ಸನ್ನು ತಂದುದೂ ಇದೇ ಯುದ್ಧ ವಿಧಾನ.

ಕ್ರಾಂತಿಯನ್ನೆಬ್ಬಿಸಿ ಗುರಿಮುಟ್ಟಿಸುವ ಬಗೆಯನ್ನು ಅಮೆರಿಕದಿಂದ ಕಲಿತಂತೆಯೇ ಕ್ರಾಂತಿಯ ನಂತರ ಘಟನೆಯ ನಿರ್ಮಾಣದಲ್ಲೂ, ಸರಕಾರದ ರಚನೆಯಲ್ಲೂ ಅನೇಕ ದೇಶಗಳಿಗೆ ಅಮೇರಿಕವೇ ಆದರ್ಶವಾಯಿತು. ಅಮೇರಿಕದ ಫೆಡರಲ್ ಮಾದರಿಯ ಸರಕಾರ ಪದ್ಧತಿಯನ್ನು ಲ್ಯಾಟಿನ್ ಅಮೆರಿಕದ ದೇಶಗಳೂ, ನಾರ್ವೆ, ಸ್ವೀಡನ್ ಮೊದಲಾದುವುಗಳೂ ಅನುಸರಿಸಿದುವು. ಭಾರತ, ಬೆಲ್ಜಿಯಮ್ ಮೊದಲಾದವು ಅಮೇರಿಕದ ಫೆಡರಲ್ ಕ್ರಮದೊಂದಿಗೆ ಪಾರ್ಲಿಮೆಂಟ್ ಪದ್ಧತಿಯನ್ನೂ ಸೇರಿಸಿ ಕೊಂಡುವು. ಅಮೇರಿಕನರು ಅನುಸರಿಸಿದ, ಪ್ರಜೆಗಳ ಭಾವನೆಗಳಿಗೇ ಪುಟಕೊಡುವ ಪ್ರಜಾಪ್ರಭುತ್ವ ಕ್ರಮವಂತೂ ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಬಳಕೆಗೆ ಬಂತು. ಆದರೆ ಲ್ಯಾಟಿನ್ ಅಮೆರಿಕದ ಜನರಲ್ಲಿ ಸ್ವಾತಂತ್ರ್ಯದ ಪ್ರಜ್ಞೆ ಸರಿಯಾಗಿ ಬಲಿತಿರದೆ, ಆ ಕ್ರಮ ಹೆಚ್ಚು ಕಾಲ ಬಾಳಲಿಲ್ಲ. ಕ್ರಮೇಣ ನಿರಂಕುಶ ಪ್ರಭುತ್ವವೇ ಅಲ್ಲಿ ತಲೆ ಎತ್ತಿತು.

ಇದೀಗ ಹೊಸದಾಗಿ ಸ್ವಾತಂತ್ರ್ಯ ಪಡೆದು ಬಡತನವೇ ಮೊದಲಾದ ಸಮಸ್ಯೆಗಳಿಂದ ನರಳುತ್ತಿರುವ ದೇಶಗಳಿಗೂ ಅಮೇರಿಕದ ಕ್ರಾಂತಿಯ ಸಂದೇಶವಿದೆ. ಅಮೇರಿಕವೂ ಸ್ವತಂತ್ರವಾಗುವಾಗ ಬಡತನ, ನಿರಕ್ಷರತೆಗಳಿಂದ ಕಂಗಾಲಾಗಿತ್ತು. ಆದರೆ ಅಮೇರಿಕನರು ಧೈರ್ಯಗೆಡದೆ ತಮ್ಮ ದೇಶವನ್ನು ಕಟ್ಟಿ ಬೆಳೆಸಬೇಕೆಂಬ ದೃಢನಿರ್ಧಾರದಿಂದ ದುಡಿದರು. ಸಮಾನತೆಯ ತತ್ತ್ವದ ಮೇಲೆ ನಿಂತ ಆರ್ಥಿಕ ನೀತಿಯನ್ನು ಆಚರಣೆಗೆ ತಂದರು. ಅವೆಲ್ಲವುಗಳಿಂದಾಗಿ ಸಮಸ್ಯೆಗಳೆಲ್ಲ ಒಂದೊಂದಾಗಿ ದೂರವಾದುವು. ದಿನಗಳೆದಂತೆ ದೇಶದ ಸಂಪತ್ತು ವೃದ್ಧಿಯಾಯಿತು.

ಆದರೆ ಅವೆಲ್ಲವುಗಳಿಗಿಂತಲೂ ಹೆಚ್ಚಾಗಿ, ಅಮೆರಿಕವು ಈ ಜಗದ ಜನರ ಸ್ವಾತಂತ್ರ್ಯದ ಪ್ರಜ್ಞೆಯನ್ನೇ ಕೆದಕಿ, ಅವರಲ್ಲಿ ಸ್ವಾತಂತ್ರ್ಯದ ಹಂಬಲವನ್ನು ಅರಳಿಸಿತು. ಕ್ರಾಂತಿಯ ನಂತರದ ಈ ಇನ್ನೂರು ವರುಷಗಳಲ್ಲಿ ಒಂದರ ನಂತರ ಒಂದರಂತೆ ಅನೇಕ ರಾಷ್ಟ್ರಗಳು ಸ್ವಾತಂತ್ರ್ಯಕ್ಕಾಗಿ ಹಂಬಲಿಸಿವೆ, ಕ್ರಾಂತಿಯಿಂದ ಸ್ವಾತಂತ್ರ್ಯವನ್ನು ಪಡೆದಿವೆ. ಆ ದೇಶಗಳ ಜನರಿಗೆ ಸ್ವಾತಂತ್ರ್ಯದ ರುಚಿಹಿಡಿಸಿದ್ದಿದ್ದರೆ ಅದು ಅಮೆರಿಕವೇ. ಜನರ ಸ್ವಾತಂತ್ರ್ಯವನ್ನೆಂದೂ ಹತ್ತಿಕ್ಕಲಾಗದೆಂದು ನಿರಂಕುಶಮತಿಗಳಿಗೆ ಪಾಠ ಕಲಿಸಿದ್ದೂ ಅಮೆರಿಕವೇ. ಅಮೆರಿಕದ ಕ್ರಾಂತಿಯ ಫಲಶ್ರುತಿಯಾಗಿ ಯುರೋಪಿನಲ್ಲಾದ ಕ್ರಾಂತಿಯನ್ನು ನೋಡಿ, ಥಾಮಸ್ ಜಫರ್ಸನ್, ಜಾನ್ ಆಡಮ್ಸ್‌ಗೆ "೧೭೭೬ರ ಜುಲೈ ೪ರಂದು ಹೊತ್ತಿಸಿದ ಬೆಂಕಿ ನಿರಂಕುಶ ಪ್ರಭುತ್ವದ ದುರ್ಬಲ ಶಾಮಕಯಂತ್ರದಿಂದ ನಂದಿಸಲಾಗದಷ್ಟು ವ್ಯಾಪಕವಾಗಿ ಜಗತ್ತಿನಲ್ಲೆಲ್ಲಾ ಹಬ್ಬಿದೆ" ಎಂದು ಬರೆದಿದ್ದ. ಅದು ಆ ಕಾಲಕ್ಕೆ ಮಾತ್ರವಲ್ಲ, ಎಲ್ಲಾ ಕಾಲಕ್ಕೂ ಅನ್ವಯಿಸುವ ಮಾತು.

ಪ್ರಪಂಚದಲ್ಲಿ ಅತ್ಯಂತ ಸಂಪದ್ಭರಿತ. ಪ್ರಭಾವಯುತ ರಾಷ್ಟ್ರವಾದ ಅಮೆರಿಕದ ಇತಿಹಾಸ ಗಮನಾರ್ಹವಾದುದಾಗಿದೆ. ಅದು ಹದಿನೆಂಟನೆಯ ಶತಮಾನದಿಂದೀಚೆಗೆ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ರಾಷ್ಟ್ರಗಳಿಗೆ ಸ್ಫೂರ್ತಿ ಉತ್ತೇಜನಗಳನ್ನಿತ್ತಿದೆ. ಅದೊಂದು ಭವ್ಯ ರೋಮಾಂಚಕಾರಿ ಇತಿಹಾಸ.


(ಸಂಗ್ರಹ : ವಿಶ್ವಕೋಶ, ಸಂಪುಟ ೧, ಪುಟ ೯೧೧)



ಶ್ರೀ ಬಿ. ಆರ್. ತಿಪ್ಪೇಸ್ವಾಮಿ



ಗಗನಮಹಲ್, ಪೆನುಕೊಂಡದಲ್ಲಿರುವ ಕೃಷ್ಣದೇವರಾಯನ ಅರಮನೆ



ರಥ—ನಂಜನಗೂಡು (ಜಲವರ್ಣಚಿತ್ರ)

ಎನ್. ಎಸ್ ಚಿದಂಬರರಾವ್

ವರ್ಣಶಿಲ್ಪಿ ಪಿ. ಆರ್. ತಿಪ್ಪೇಸ್ವಾಮಿ

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಪರ್ತಿಕೋಟೆಯ ಪ್ರಾಥಮಿಕ ಶಾಲೆಯಲ್ಲಿ ಈಗ್ಗೆ ನಲವತ್ತೆಂಟು ವರ್ಷಗಳ ಹಿಂದೆ ತಿಪ್ಪಯ್ಯ ಎಂಬ ಉಪಾಧ್ಯಾಯರು ಒಂದು ದಿನ ಶಾಲೆಯಲ್ಲಿ ಒಂದು ಉಗಿಬಂಡಿಯ ಚಿತ್ರವನ್ನು ಕಪ್ಪುಹಲಗೆಯ ಮೇಲೆ ಬರೆದು ಪ್ರದರ್ಶಿಸಿದರಂತೆ. ಉಗಿಬಂಡಿಯ ಮುಖವನ್ನೇ ಕಾಣದ ಆ ಶಾಲೆಯ ಪುಟ್ಟ ಮಕ್ಕಳು ಚಿತ್ರವನ್ನು ಕಂಡು ಆಶ್ಚರ್ಯಪಟ್ಟರೂ, ಸಂತೋಷ ಸಂಭ್ರಮಗಳಿಂದ ಕುಣಿದಾಡಿದರಂತೆ. ಆ ಮಕ್ಕಳಲ್ಲಿ ಒಂದು ಮಗು ಮಾತ್ರ ಅಷ್ಟಕ್ಕೇ ತೃಪ್ತಿ ಹೊಂದದೆ, ತಾನೂ ಕಷ್ಟಪಟ್ಟು ಆ ಚಿತ್ರವನ್ನು ಅನುಕರಿಸಿ ಬರೆಯಿತು. ಅದು ತಿಪ್ಪಯ್ಯನವರ ಗಮನಕ್ಕೆ ಬಂದಾಗ, ಅವರಿಗಾದ ಆನಂದ ಅಷ್ಟಿಷ್ಟಲ್ಲ. ಚಿತ್ರವನ್ನು ಎಲ್ಲರಿಗೂ ತೋರಿಸಿ, "ಮುಂದೆ ಈ ಬಾಲಕ ಒಂದಲ್ಲ ಒಂದು ದಿನ ಪ್ರಖ್ಯಾತ ಚಿತ್ರ ಕಲಾವಿದನಾಗುತ್ತಾನೆ" ಎಂದು ಹೇಳಿದರಂತೆ. ಅವರ ಭವಿಷ್ಯವಾಣಿಯನ್ನು ನಿಜವಾಗಿಸಿದ ಆ ಮಗುವೇ ಇಂದಿನ ಖ್ಯಾತ ಕಲಾವಿದ ಶ್ರೀ ಪಿ. ಆರ್. ತಿಪ್ಪೇಸ್ವಾಮಿಯವರು.

ಕಲಾವಿದ ತಿಪ್ಪೇಸ್ವಾಮಿಯವರು ಪರ್ತಿಕೋಟೆಯ ಪಟೇಲ್ ರುದ್ರಪ್ಪನವರ ಹಿರಿಯ ಮಗ. ಮಗನನ್ನು ಪದವೀಧರನನ್ನಾಗಿ ಮಾಡಬೇಕೆಂಬ ಆಕಾಂಕ್ಷೆ ಅವರದು. ಆದರೆ ಬಾಲ್ಯದಿಂದಲೂ ಬೆಂಬತ್ತಿದ ಚಿತ್ರಕಲೆಯ ಗೀಳು ಅವರನ್ನು ಬಿಡಲಿಲ್ಲ. ಮಾಧ್ಯಮಿಕಶಾಲೆಯ ವಿದ್ಯಾಭ್ಯಾಸಕ್ಕಾಗಿ ದಾವಣಗೆರೆಯಲ್ಲಿ ಸಬ್ ಇನ್ಸ್‌ಪೆಕ್ಟರ್‌ರಾಗಿದ್ದ ಅವರ ಚಿಕ್ಕಪ್ಪ ದೇವಯ್ಯನವರಲ್ಲಿಗೆ ಬಂದರು. ಅಲ್ಲಿನ ಮಾಧ್ಯಮಿಕ ಶಾಲೆಯಲ್ಲಿಯೂ ಡ್ರಾಯಿಂಗ್ ಉಪಾಧ್ಯಾಯರಾದ ಗುರುಬಸಪ್ಪನವರ ಪ್ರಭಾವವೇ ತಿಪ್ಪೇಸ್ವಾಮಿಯವರಿಗೆ ಹೆಚ್ಚಾಯಿತು. ಗುರುಬಸಪ್ಪನವರು ಚಿತ್ರಿಸಿದ ಕ್ರಿಕೆಟ್ ಆಟದ ಮೈದಾನದ ಚಿತ್ರ ತಿಪ್ಪೇಸ್ವಾಮಿಯವರಲ್ಲಿ ಹೊಸ ಉತ್ಸಾಹ ಮೂಡಿಸಿತು. ಇಲ್ಲಸ್ಟ್ರೇಟೆಡ್ ವೀಕ್ಲಿಯಲ್ಲಿ ಪ್ರಕಟವಾದ ಚಿತ್ರಗಳನ್ನೆಲ್ಲ ಅನುಕರಿಸಿ, ತಿಪ್ಪೇಸ್ವಾಮಿಯವರು ಸೊಗಸಾದ ಚಿತ್ರಗಳನ್ನು ಬರೆಯತೊಡಗಿದರು. ಈ ಗೀಳಿನಲ್ಲಿ ಪಾಠದ ಬಗ್ಗೆ ನಿರಾಸಕ್ತಿ ಮೂಡಿತು. ಚಿತ್ರಕಲೆಯನ್ನು ಅಭ್ಯಸಿಸುವ ಹಂಬಲ ಅದಮ್ಯವಾಗಿ ಗುರು, ಗುರುಬಸಪ್ಪನವರ ಮನೆಗೆ ಇವರು ಒಮ್ಮೆ ಹೋದಾಗ, ಅವರ ಶಿಷ್ಯನೊಬ್ಬ, ಒಂದು ಸಣ್ಣ ಚಿತ್ರವನ್ನು ದೊಡ್ಡದು ಮಾಡಿ ಚಿತ್ರಿಸುತ್ತಿದ್ದುದನ್ನು ಕಂಡರು. ಆ ಬಗ್ಗೆ ಆಸಕ್ತಿ ಕೆರಳಿ ಗುರುಬಸಪ್ಪನವರನ್ನು ಕೇಳಿಕೊಳ್ಳಲು, ಅವರು ಚಿತ್ರಕಲೆಯ ಮೂಲಪಾಠವಾದ ಸ್ಕ್ವೇರ್ ಮೆಥಡ್-ಅನ್ನು ಕಲಿಸಿಕೊಟ್ಟರು. ಅದರ ಪ್ರಯೋಗವೂ ಅವ್ಯಾಹತವಾಗಿ ನಡೆಯ ತೊಡಗಿ. ವಿದ್ಯಾಭ್ಯಾಸ ಕುಂಟುತ್ತ ಸಾಗತೊಡಗಿತು. ಜಿಲ್ಲಾ ಬೋರ್ಡ್ ಸದಸ್ಯರಾಗಿದ್ದ ಶ್ರೀ ತಿಪ್ಪೇಸ್ವಾಮಿಯವರ ತಂದೆ, ಅವರನ್ನು ಪದವೀಧರರನ್ನಾಗಿ. ತಮ್ಮಂತೆಯೇ ಪ್ರತಿಷ್ಠಿತರಾಗಿ ಕಾಣಲು ತವಕಿಸಿ ಮಗನನ್ನು ಚಿತ್ರದುರ್ಗದ ಕುರುಬರ ವಿದ್ಯಾರ್ಥಿನಿಲಯಕ್ಕೆ ಸೇರಿಸಿದರು. ಚಿತ್ರದುರ್ಗದಲ್ಲಿ ಪ್ರೌಢಶಾಲಾ ವಿದ್ಯಾಭ್ಯಾಸ ನಡೆಯುವಾಗಲೇ ಶ್ರೀ ಹೊಯಿಸಳ (ಲಕ್ಷ್ಮಣರಾವ್) ಅವರಿಗೆ ಗುರುಗಳಾಗಿ ದೊರೆತರು. 'ಪ್ರಭಾತ' ಎಂಬ ಕೈಬರಹದ ಮಾಸಪತ್ರಿಕೆಯಲ್ಲಿ ಹೊಯಿಸಳರು ತಿಪ್ಪೇಸ್ವಾಮಿಯವರಿಂದ ಅನೇಕ ಚಿತ್ರಗಳನ್ನು ಬರೆಸಿದರು. ಅದೇ ಸಮಯದಲ್ಲಿ. ಅಂದರೆ ೧೯೫೯ರಲ್ಲಿ, ಸ್ಕೌಟ್ ಸ್ಟೇಟ್ ರ್‍ಯಾಲಿ ಬೆಂಗಳೂರಿನಲ್ಲಿ ನೆರವೇರಿದಾಗ, ತಿಪ್ಪೇಸ್ವಾಮಿಯವರೂ ಭಾಗವಹಿಸಿ, ಚಿತ್ರದುರ್ಗ ಜಿಲ್ಲೆಗಾಗಿ ಒಂದು ಪ್ರವೇಶದ್ವಾರವನ್ನು ಕಲಾತ್ಮಕವಾಗಿ

ನಿರ್ಮಿಸಿ ಬಹುಮಾನವನ್ನು ಪಡೆದರು. ಅಲ್ಲದೆ ವಸ್ತುಪ್ರದರ್ಶನದಲ್ಲಿಯೂ ಸಹ ಈ ಎಳೆಯ ಕಲಾವಿದ ಅನೇಕ ಬಹುಮಾನಗಳನ್ನು ಪಡೆದರು.

ಹರ್ತಿಕೋಟೆಗೆ, ಒಮ್ಮೆ ಮಾಸ್ಟರ್ ಎಸ್. ನಿಜಲಿಂಗಪ್ಪನವರು ಭೇಟಿ ನೀಡಿದ ಸಂದರ್ಭದಲ್ಲಿ ತಿಪ್ಪೇಸ್ವಾಮಿಯವರು ತಾವೇ ಚಿತ್ರಿಸಿದ ಮಹಾತ್ಮಾ ಗಾಂಧಿಯವರ ಭಾವಚಿತ್ರವೊಂದನ್ನು ಅವರಿಗೆ ತೋರಿಸಿದರು. ಅದನ್ನು ಮೆಚ್ಚಿಕೊಂಡ ನಿಜಲಿಂಗಪ್ಪನವರು ಅವರನ್ನು ಹೆಚ್ಚಿನ ತರಬೇತಿಗಾಗಿ ಮೈಸೂರಿಗೆ ಕಳಿಸಲು ಏರ್ಪಾಟು ಮಾಡಿದರು. ಅವರ ತಂದೆ ಚಿತ್ರಕಲೆಯ ಜೊತೆಗೆ, ಅರ್ಧಾಂತಕವಾಗಿದ್ದ ಅವರ ವಿದ್ಯಾಭ್ಯಾಸವೂ ಮುಂದೆ ಸಾಗಲಿ ಎಂಬ ಅಭಿಲಾಷೆಯಿಂದಾಗಿ ಮಗನನ್ನು ಮೈಸೂರಿಗೆ ಕಳಿಸಿಕೊಟ್ಟರು. ಆಗಲೆ ಆರ್ಥಿಕ ಮುಗ್ಗಟ್ಟಿನಿಂದ ಅವರ ಕಾಲಿನಮೇಲೆ ಕಲಿಯಬೇಕಾಯಿತು. ಮೈಸೂರಿನ ಪರಕಾಲ ಮಠದಲ್ಲಿ ನೀಡಿದ ಪ್ರಸಾದವನ್ನು ಸ್ವೀಕರಿಸಿ ಗಂಜಾಂ ಉಗ್ರಪ್ಪನೆಂಬ ಸಹೃದಯನ ನೆರವಿನಿಂದ ಉಚಿತವಾಗಿ ಒಂದು ಕೋಣೆಯಲ್ಲಿ ವಾಸಿಸತೊಡಗಿದರು.

ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಶಿಕ್ಷಣ ಶಾಲೆಯಲ್ಲಿ ತಿಪ್ಪೇಸ್ವಾಮಿಯವರಿಗೆ, ಖ್ಯಾತ ಕಲಾವಿದ ಎಸ್. ನಂಜುಂಡಸ್ವಾಮಿಯವರು ಗುರುಗಳಾಗಿ ದೊರಕಿದರು—ಪರ್ಸ್ಪೆಕ್ಟಿವ್, ಪೆನ್ಸಿಲ್ ಸ್ಕೆಚ್, ಜಲವರ್ಣದ ಬಳಕೆ ಮುಂತಾದ ಹಲವಾರು ಪ್ರಾರಂಭಿಕ ತರಬೇತಿ ದೊರೆತು, ಚಿನ್ನಕ್ಕೆ ಪುಟವಿಟ್ಟ ಹಾಗಾಯಿತು. ತಿಪ್ಪೇಸ್ವಾಮಿಯವರು ಪ್ರಕೃತಿ ದೃಶ್ಯಗಳನ್ನು ಚಿತ್ರಿಸುವಲ್ಲಿ ತಮ್ಮದೇ ಆದ ಸ್ವಂತಿಕೆಯನ್ನು ಬೆಳೆಸಿಕೊಂಡರು. ಚಿತ್ರಕಲೆಯಲ್ಲಿ ಎರಡು ವರ್ಷ ತರಬೇತಿ ಪಡೆದ ನಂತರ, ತಂದೆಯ ಮಹದ್ಬಯಕೆಯನ್ನು ಈಡೇರಿಸಲು ಪ್ರಯತ್ನ ಪಟ್ಟರು. ಖಾಸಗಿಯಾಗಿ ಎಸ್. ಎಸ್.ಎಲ್.ಸಿ. ಮಾಡಿಕೊಂಡು, ಯುವರಾಜಾ ಕಾಲೇಜಿನಲ್ಲಿ ಇಂಟರ್ ಮೀಡಿಯೆಟ್ ವ್ಯಾಸಂಗ ಮುಂದುವರಿಸಿದರು. ಭೂಗರ್ಭಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರಗಳನ್ನು ಇವರು ಆರಿಸಿಕೊಂಡ ಕಾರಣ ಇವರ ಚಿತ್ರಕಲೆಯೋ.

ಹಾಗೂ ಹೀಗೂ ಇಂಟರ್ ಮುಗಿಸಿ, ಮಹಾರಾಜಾ ಕಾಲೇಜಿನಲ್ಲಿ ಬಿ. ಎ. ತರಗತಿಗೆ ಸೇರಿಕೊಂಡರು. ಆಗಲೇ ಇವರಿಗೆ ಜಿ. ಶಂ. ಪರಮಶಿವಯ್ಯನವರ ಪರಿಚಯ, ಸ್ನೇಹ ಲಭ್ಯವಾಯಿತು. ಆ ಅವಧಿಯಲ್ಲೇ ಕೊರವಂಜಿ, ವಿಕಟ ವಿನೋದಿನಿ, ವಿನೋದ—ಮುಂತಾದ ಪತ್ರಿಕೆಗಳಲ್ಲಿ ಇವರ ಚಿತ್ರಗಳು ಪ್ರಕಟವಾಗತೊಡಗಿದವು. ಪರಮಶಿವಯ್ಯನವರ ಮೂಲಕ ಪೂರ್ಣಚಂದ್ರ ತೇಜಸ್ವಿಯವರ ಪರಿಚಯವಾಗಿ, ಒಮ್ಮೆ ಅವರೊಡನೆ ಕುಪ್ಪಳಿಗೆ ಹೋದರು. ಅಲ್ಲಿ ತಿಪ್ಪೇಸ್ವಾಮಿಯವರು ಚಿತ್ರಿಸಿದ ಹತ್ತಾರು ಚಿತ್ರಗಳು ಕುವೆಂಪುರವರ ಮೆಚ್ಚುಗೆಗೆ ಪಾತ್ರವಾದವು. ಅಷ್ಟೇ ಅಲ್ಲ, "ಕವಿ ಶೈಲದಿಂದ ಕುಂದಾದ್ರಿ" ಎಂಬ ಅವರ ವರ್ಣಮಯ ಚಿತ್ರ, ಕವಿ ಕುವೆಂಪುರವರ ಕವಿಹೃದಯವನ್ನು ಪ್ರೇರೇಪಿಸಿ, ಆ ಬಗ್ಗೆ ಅವರಿಂದ ಒಂದು ಕವನವೂ ಹೊರಬಿತ್ತು."

"ಇದು ಚಿತ್ರಕೃತಿಯಲ್ತೆನಗೆ; ಪ್ರಕೃತಿಗೆ ಗವಾಕ್ಷಮಂ
ಕೊರೆದಿಹುದು ವರ್ಣಶಿಲ್ಪಿಯ ಕುಂಚ!"

ಎಂದು ಆರಂಭವಾಗಿದೆ ಆ ಕವಿತೆ. ಪ್ರಬುದ್ಧ ಕರ್ಣಾಟಕದಲ್ಲಿ ಅವರ ಏಳೆಂಟು ವರ್ಣಮಯ ಚಿತ್ರಗಳು ಪ್ರಕಟವಾದುವು.

ಶ್ರೀ ತಿಪ್ಪೇಸ್ವಾಮಿಯವರು ಹಲವಾರು ಕನ್ನಡ ಸಾಹಿತ್ಯ ಸಮ್ಮೇಳನಗಳಿಗೆ ಹೋಗಿ, ಅಲ್ಲಿ ತಾವು ಕಂಡ ಪ್ರಕೃತಿ ಚಿತ್ರಗಳನ್ನು ವರ್ಣದಲ್ಲಿ ಸೆರೆಹಿಡಿದರು. ಬಳ್ಳಾರಿಯಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನಕ್ಕೆ ಹೋದಾಗ, ಹಂಪೆಯ ದೃಶ್ಯಗಳನ್ನು ಹೃದಯಂಗಮವಾಗಿ ಚಿತ್ರಿಸಿದರು. ಬೀದರ್ ಸಮ್ಮೇಳನಕ್ಕೆ ಹೋಗಿ ತಮ್ಮ ವರ್ಣಚಿತ್ರಗಳನ್ನು ಸಮ್ಮೇಳನಾಧ್ಯಕ್ಷ ಡಿ.ಎಲ್.ಎನ್‌ಅವರಿಗೆ ಸಮರ್ಪಿಸಿ ಅವರ ಮೆಚ್ಚುಗೆ ಗಳಿಸಿದರು. ಉಡುಪಿ, ಧರ್ಮಸ್ಥಳ, ಕಾರವಾರ, ಮುಂತಾದ ರಮ್ಯ ಪ್ರದೇಶಗಳಿಗೆ ಭೇಟಿ ನೀಡಿ, ಅಲ್ಲಿನ ದೃಶ್ಯಗಳನ್ನು ಚಿತ್ರಿಸಿದರು. ಇವರ ವರ್ಣಚಿತ್ರಗಳು ವಿಶೇಷ ಪ್ರಭಾವ ಬೀರಿದ ಮತ್ತಿಬ್ಬರು ಕವಿ ಸಾಹಿತಿಗಳು ಎಂದರೆ ಡಾ. ದ. ರಾ. ಬೇಂದ್ರೆ ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು.

ಕೇವಲ ಕರ್ನಾಟಕವಷ್ಟೇ ಅಲ್ಲ, ತಿಪ್ಪೇಸ್ವಾಮಿಯವರು ಭಾರತದ ಎಲ್ಲ ಪ್ರೇಕ್ಷಣೀಯ ಸ್ಥಳಗಳಿಗೂ ಭೇಟಿ ನೀಡಿ. ಆ ದೃಶ್ಯಗಳನ್ನು ತಮ್ಮ ಕುಂಚದಲ್ಲಿ ಮೂಡಿಸಿದ್ದಾರೆ. ದೆಹಲಿ, ಬೊಂಬಾಯಿ, ಗೋವೆ, ಹೈದರಾಬಾದ್, ಮಹಾಬಲಿಪುರಂ, ಪಾಂಡಿಚೇರಿ, ಕನ್ಯಾಕುಮಾರಿ–ಮುಂತಾದ ಸ್ಥಳಗಳಲ್ಲಿ ತರಗಸ್ಸು, ಅದ್ಭುತ ಕಲೆಯನ್ನು ಸೃಷ್ಟಿಸಿದ್ದಾರೆ. ಬನವಾಸಿ, ಲೇಪಾಕ್ಷಿ, ಪುಟ್ಟಪರ್ತಿ, ಮದರಾಸು–ಮುಂತಾದ ಅಪೂರ್ವ ಪ್ರಕೃತಿಸೌಂದರ್ಯದ ತಾಣಗಳಿಗೆ ಭೇಟಿ ನೀಡಿ, ಅಲ್ಲಿನ ಸೊಬಗನ್ನು ತಮ್ಮ ಜಲವರ್ಣ ಸಂಯೋಜನೆಯಲ್ಲಿ ಕಲೆಯಾಗಿಸಿದ್ದಾರೆ.

ಕಲಾವಿಮರ್ಶೆಯ ಬಗ್ಗೆ ಲೇಖನಗಳನ್ನು ಬರೆದ ಖ್ಯಾತಿ ತಿಪ್ಪೇಸ್ವಾಮಿಯವರದು. ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಕರ್ಮವೀರ, ಜನಪ್ರಗತಿ. ಚಿತ್ರಗುಪ್ತ–ಮುಂತಾದ ಜನಪ್ರಿಯ ಪತ್ರಿಕೆಗಳಲ್ಲಿ ಇವರ ನೂರಾರು ಲೇಖನಗಳು ಪ್ರಕಟಗೊಂಡಿವೆ. ಕಲೆಯ ಬಗ್ಗೆ ಶ್ರೀಯುತರ ನಿಲುವೆಯನ್ನು ಎತ್ತಿ ಸಾರುವಲ್ಲಿ ಈ ಲೇಖನಗಳು ಉಪಯುಕ್ತವಾಗಿವೆ.

ಬಹುಕಾಲ ಯಾವ ನಿರ್ದಿಷ್ಟ ಉದ್ಯೋಗವನ್ನೂ ಕೈಗೊಳ್ಳದೆ ತಿಪ್ಪೇಸ್ವಾಮಿಯವರು ತಂದೆಯ ಅಪೇಕ್ಷೆಯಂತೆ ಪದವೀಧರರಾದರೂ, ಚಿತ್ರಕಲೆಯ ಬೆನ್ನುಹತ್ತಿದರು. ಅದರ ಗುಂಗಿನಲ್ಲಿ ಅವರಿಗೆ ಗೃಹಸ್ಥರಾಗುವುದೂ ಸಹ ಮರೆತು ಹೋಯಿತು. ಇಂದಿಗೂ ಬ್ರಹ್ಮಚಾರಿಗಳಾಗಿಯೇ ಉಳಿದಿರುವ ಅವರು ೧೯೬೮ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಸ್ತು ಸಂಗ್ರಹಾಲಯದ ಕ್ಷೇತ್ರ ಸಂಗ್ರಹಕರಾಗಿ, ನಂತರ ಕ್ಯೂರೇಟರ್ ಆಗಿ, ತಮ್ಮ ವೃತ್ತಿಯನ್ನು ಪ್ರಾರಂಭಿಸಿದರು. ಇಂದು ಆ ವಸ್ತು ಸಂಗ್ರಹಾಲಯ ಪ್ರೇಕ್ಷಣೀಯ ಸ್ಥಳವಾಗಿದೆ. ಅದನ್ನು ಉತ್ತಮ ಪಡಿಸಲು ಅವರು ಹಗಲಿರುಳೂ ಶ್ರಮಿಸಿದ್ದಾರೆ. ಜಾನಪದ ಕ್ಷೇತ್ರವನ್ನು ಪುಷ್ಟವಾಗಿ ಬೆಳೆಸಿದ್ದಾರೆ.

ಚಿತ್ರಕಲೆಯಲ್ಲಿ ಇವರ ಪರಿಣತಿಯನ್ನು ಗುರ್ತಿಸಿದ ನಮ್ಮ ರಾಜ್ಯ ಸರ್ಕಾರ ೧೯೭೮ರಲ್ಲಿ ಇವರಿಗೆ ರಾಜ್ಯಪ್ರಶಸ್ತಿಯನ್ನು ನೀಡಿ ಗೌರವಿಸಿತು. ಅಲ್ಲದೆ ರಾಜ್ಯಾದ್ಯಂತ ಪ್ರಮುಖ ಜನರೆಲ್ಲ ಅವರ ಪ್ರತಿಭೆಯನ್ನು ಗುರ್ತಿಸಿ, ಅಲ್ಲಲ್ಲಿ ಅವರಿಗೆ ನೂರಾರು ಸನ್ಮಾನ ಸಮಾರಂಭಗಳನ್ನೇರ್ಪಡಿಸಿ ಗೌರವಿಸಿದ್ದಾರೆ.

ಒಮ್ಮೆ ಪ್ರೊ. ಕು. ಶಿ. ಹರಿದಾಸ ಭಟ್ಟರು ತಿಪ್ಪೇಸ್ವಾಮಿಯವರಿಗೆ ಪತ್ರ ಬರೆದು, ಮಣಿಪಾಲದಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಒಂದು ಕಲಾ ಪ್ರದರ್ಶನ ಏರ್ಪಡಿಸುವಂತೆ ಕೇಳಿಕೊಂಡರು. ಸಹೃದಯರಾದ ತಿಪ್ಪೇಸ್ವಾಮಿಯವರು ಅದರಂತೆ ಒಂದು ಅದ್ಭುತ ಪ್ರದರ್ಶನವನ್ನೇರ್ಪಡಿಸಿದರು. ಶ್ರೀ ಟಿ.ಎಂ.ಎ. ಪೈರವರ ನೇತೃತ್ವದಲ್ಲಿ ಜರುಗಿದ ಆ ಕಲಾಪ್ರದರ್ಶನ ಅತ್ಯಂತ ಯಶಸ್ವಿಯಾಯಿತು. ಆದರೆ ಒಂದು ಅಹಿತಕರ ಘಟನೆ ನಡೆದು ಹೋಗಿತ್ತು. ತಿಪ್ಪೇಸ್ವಾಮಿಯವರ ಮಿತ್ರರೊಬ್ಬರು ದಂತದ ಅರಮನೆಯ ಚಿತ್ರವೊಂದನ್ನು, ಅವರ ಬಲವಂತಕ್ಕೆ, ಈ ಪ್ರದರ್ಶನದಲ್ಲಿ ಇಡಲು ನೀಡಿದ್ದರು. ಆ ವರ್ಣಚಿತ್ರ ಆಕಸ್ಮಿಕವಾಗಿ ಕಳುವಾಯಿತು. ತಿಪ್ಪೇಸ್ವಾಮಿಯವರಿಗೆ ಬಲು ದುಃಖವಾಯಿತು. ಅದರ ಬೆಲೆ ಸುಮಾರು ೨೫೦ ರೂ. ಆ ರಾತ್ರಿ ಅವರಿಗೊಂದು ಯೋಚನೆ ಹೊಳೆಯಿತು. ಮರುದಿನವೇ ಉಡುಪಿ ಶ್ರೀಕೃಷ್ಣನ ದೇವಾಲಯದ ಸುಂದರ ಚಿತ್ರವನ್ನು ಜಲವರ್ಣದಲ್ಲಿ ಒಡಮೂಡಿಸಿ, ಮರುದಿನ ಬೆಳಿಗ್ಗೆ ಟಿ.ಎಂ.ಎ. ಪೈರವರ ಬಳಿಗೆ ಅದನ್ನು ಒಯ್ದು, ಕೊಳ್ಳುವಂತೆ ಪ್ರಾರ್ಥಿಸಬೇಕೆಂದುಕೊಂಡಿದ್ದರು. ಆದರೆ ಇವರು ಕೇಳುವ ಮುನ್ನವೇ ಪೈರವರೇ ಆ ಚಿತ್ರದ ಬಗ್ಗೆ ವಿಚಾರಿಸಿ, ಇನ್ನೂರು ಐವತ್ತು ರೂಪಾಯಿಗಳನ್ನು ಕೊಟ್ಟು ಕೊಂಡೇಬಿಟ್ಟರು. ನಂತರ ತಿಪ್ಪೇಸ್ವಾಮಿಯವರು ತಮ್ಮ ಉದ್ದೇಶವನ್ನು ವಿವರಿಸಿ, ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದರು.

ನಮ್ಮ ಅತ್ಯಂತ ಪುರಾತನ ಐತಿಹಾಸಿಕ ಸ್ಥಳಗಳ ಗತವೈಭವವನ್ನು ಜೀವಂತವಾಗಿ ದರ್ಶನ ಮಾಡಿಸುವ ಅಪೂರ್ವ ಪ್ರಯತ್ನದಲ್ಲಿ ತಿಪ್ಪೇಸ್ವಾಮಿಯವರು ನೂರಕ್ಕೆ ನೂರರಷ್ಟು ಯಶಸ್ವಿಯಾಗಿದ್ದಾರೆ. ದೇಶ ವಿದೇಶಗಳಲ್ಲಿಯ ಚಿತ್ರಕಲಾ ಅಭಿಮಾನಿಗಳಲ್ಲಿ ಅವರ ಕಲಾಕೃತಿಗಳು ಅಗ್ರಸ್ಥಾನ ಪಡೆದಿವೆ. ಇವರ ಕೃತಿಗಳನ್ನು ಮೆಚ್ಚಿಕೊಂಡವರಲ್ಲಿ ಕುವೆಂಪು, ಮಾಸ್ತಿ, ಬೇಂದ್ರೆ, ಪುತಿನ, ಅನಕೃ, ಪ್ರೊ. ದೇಜಗೌ, ತ. ಸು. ಶಾಮರಾವ್, ಹೆಚ್. ಎಸ್. ಕೆ., ಡಾ. ಹಾ. ಮಾ. ನಾಯಕ, ಡಾ. ಜೀಶಂಪ,

ಡೆನ್ಮಾರ್ಕಿನ ಡಾ. ಸುರೇನ್ ಸೇನ್, ಡಾ. ಎಫ್. ಎನ್. ಯುರ್ಲ್ಮೋ, ಸುತ್ತೂರು ಮಠಾಧೀಶರು, ಗೌರೀಶಂಕರ ಸ್ವಾಮಿಗಳು ಚಿತ್ರದುರ್ಗದ ಜಗದ್ಗುರುಗಳು ಡಾ. ಜ.ಚ.ನಿ. ಇವರುಗಳು ಪ್ರಮುಖರು.

ತಿಪ್ಪೇಸ್ವಾಮಿಯವರ ಕಲಾ ಸಂಪ್ರದಾಯ 'ವಾಸ್ತವವಾದ'. ಇರುವುದನ್ನು ಇರುವಂತೆಯೇ ಚಿತ್ರಿಸುವುದಲ್ಲ–ಇವರು ಚಿತ್ರಿಸಿರುವ ವರ್ಣವೈಖರಿ. ಇರುವ ದೃಶ್ಯವೊಂದರ ಭಾಸವಾಗುವಂತೆ ಮಾಡುತ್ತವೆ. ಇಂಪ್ರೆಷನ್ ಮುಖ್ಯವಾದುದು ಎನ್ನುತ್ತಾರೆ. ಹತ್ತಿರದಿಂದ ನೋಡಿದಾಗ ಬರೀ ಚುಕ್ಕೆಗಳಂತೆ ಕಾಣುವ ಬಣ್ಣ ದೂರಕ್ಕೆ ಒಂದು ಸುಂದರ ದೃಶ್ಯವಾಗಿ ಕಾಣುತ್ತದೆ. ನೆಳಲು ಬೆಳಕುಗಳ ಸಂಯೋಜನೆ. ರೇಖಾವಿನ್ಯಾಸ ಮುಂತಾದ ವಿಚಾರಗಳಲ್ಲಿ ಅವರ ಕಲ್ಪನೆ ಪೂರ್ಣ ಕೆಲಸಮಾಡುತ್ತದೆ. ಜಲವರ್ಣದ ಸಂಯೋಜನೆಯಲ್ಲಿ ಹೂವಿನ ಸೌಂದರ್ಯ. ಗಿಡಬಳ್ಳಿಗಳ ಮೋಹಕತೆ. ಕಲ್ಲು ಬಂಡೆಗಳ ಕಾಠಿಣ್ಯ. ಪರ್ವತದ ವಿಸ್ತೃತ. ಕಲೆಯ ಪ್ರೌಢಿಮೆ–ಎಲ್ಲವೂ ಎಳೆಎಳೆಯಾಗಿ. ಸ್ಪಷ್ಟವಾಗಿ ಪ್ರೇಕ್ಷಕನಿಗೆ ಗೋಚರಿಸಿ. ಅವನನ್ನು ತನ್ಮಯನನ್ನಾಗಿಸುತ್ತವೆ. ಈ ಅಂಶಗಳಲ್ಲೆಲ್ಲ ಶ್ರೀಯುತರು 'ತಮ್ಮತನ'ವನ್ನು ಕಂಡುಕೊಂಡಿದ್ದಾರೆ.

ನವ್ಯ ಕಲೆಯ ಬಗ್ಗೆ ಅವರು ಹೀಗೆ ಹೇಳುತ್ತಾರೆ–"ನವ್ಯ" ಎಂಬ ಪದವೇ ಸಾಪೇಕ್ಷವಾದುದು. ಆದರೆ ಏಕಾಸೂಣಾ ಕಲ್ಪನಾ ಬಗ್ಗೆ ಹೇಳಬೇಕೆಂದರೆ ಅದೆಲ್ಲವೂ ಕ್ರಮಬದ್ಧ ಅಭ್ಯಾಸದಿಂದ ಬಂದ ಕಲೆ. ಸುಮ್ಮನೆ ಉದ್ದೇಶ ರಹಿತವಾಗಿ ನಾಲ್ಕು ಗೆರೆ ಎಳೆದರೆ ಅದು ಕಲೆಯಾಗುವುದಿಲ್ಲ. ನವ್ಯಕಲೆಯ ಹೆಸರಿನಲ್ಲಿ ಕಲೆಯಲ್ಲದುದೆಲ್ಲ ಸೃಷ್ಟಿಯಾಗುತ್ತಿದೆ. ವಾಸ್ತವವನ್ನು ಕಲಾತ್ಮಕವಾಗಿ ಅನುಕರಿಸಲಾಗದ ಜನ ನವ್ಯಕಲೆಯ ಮೊರೆ ಹೋಗುತ್ತಾರೆ. ಆ ರೀತಿ ಕಲೆಯಿಂದ ಏನನ್ನೂ ಸಾಧಿಸಲಾಗುವುದಿಲ್ಲ. ಕಲೆಯಲ್ಲಿ ಸಾರ್ವತ್ರಿಕ ಅಂಶಗಳೂ. ಕಲಾತ್ಮಕ ಅಂತರವೂ ಜೊತೆಗೂಡಬೇಕು. ನವ್ಯಕಲೆಯಲ್ಲಿ ಕಲಾತ್ಮಕ ಅಂತರವೇನೋ ಇದೆ. ಅದು ಅಗತ್ಯಕ್ಕಿಂತ ಹೆಚ್ಚಾಗಿ. ಸಾರ್ವತ್ರಿಕತೆಗಿಂತ ವೈಯಕ್ತಿಕತೆಯೇ ಹೆಚ್ಚಾಗಿ ಕಲೆಯಾಗಲು ಸೋಲುತ್ತದೆ. ಇದೂ ಅಲ್ಲದೆ. ಅದು ನಮ್ಮ ಸೌಂದರ್ಯ ಪ್ರಜ್ಞೆಯನ್ನು ಸ್ಪರ್ಶಿಸದೇ. ಕೇವಲ ವೈಚಾರಿಕ ಪ್ರಜ್ಞೆಯನ್ನು ಗಮನದಲ್ಲಿಟ್ಟುಕೊಂಡಿದೆ."

ಚಿತ್ರಕಲೆ ಹಾಗೂ ಫೋಟೋಗ್ರಫಿಯ ಬಗ್ಗೆ ಅವರ ಅಭಿಪ್ರಾಯ ಹೀಗಿದೆ–"ಚಿತ್ರಕಲೆಯಲ್ಲಿ ಕಲ್ಪನೆಯೇ ಪ್ರಧಾನ–ಫೋಟೋಗ್ರಫಿಯಲ್ಲಿ ಕಾಣುವ ಕಣ್ಣು ಹಾಗೂ ಅದರ ನಿರೀಕ್ಷಣಾ ಸಾಮರ್ಥ್ಯ ಪ್ರಧಾನ. ವಾಸ್ತವದಲ್ಲಿ ಕಂಡ ವಸ್ತುಗಳಲ್ಲಿ ಅನವಶ್ಯಕವೆನಿಸಿದ ಭಾಗಗಳನ್ನು ಚಿತ್ರಕಾರ ಬಿಟ್ಟು ಬಿಡುತ್ತಾನೆ. ತನಗೆ ಸುಂದರವೆನ್ನಿಸಿದುದನ್ನು ಸೇರಿಸಿಕೊಳ್ಳುತ್ತಾನೆ. ಆದರೆ ಫೋಟೋಗ್ರಾಫರನು ಯಾವ ಸ್ಥಳದಿಂದ. ಯಾವ ಕೋನದಿಂದ ವಸ್ತು ಕಲಾತ್ಮಕವಾಗಿ ಕಾಣುತ್ತದೆ ಎಂದು ಮಾತ್ರ, ಕ್ಯಾಮರಾದ ಕಣ್ಣಿಗೆ. ಇದ್ದುದರಲ್ಲೇ ಕಲಾತ್ಮಕ ನೋಟವನ್ನೊದಗಿಸುವ ಹೊಣೆಯ ಬಗ್ಗೆ ಮಾತ್ರ ಯೋಚಿಸುತ್ತಾನೆ."

ಕಲಾಸತ್ಯವೆಂದರೇನು?–ಎಂಬ ಪ್ರಶ್ನೆಗೆ ಅವರ ಉತ್ತರ:

"ವಾಸ್ತವ ಸತ್ಯಕ್ಕಿಂತ ಕಲಾಸತ್ಯ ಭಿನ್ನವಾಗಿದೆ. ಸತ್ಯವಾದುದೆಲ್ಲವೂ ಸುಂದರವಾಗಿರುವುದಿಲ್ಲ. ಸತ್ಯವನ್ನು ಸುಂದರವನ್ನಾಗಿಸಲು ಕಲಾವಿದ ತನ್ನ ಕಲ್ಪನೆಯ ಸಹಾಯ ಪಡೆದು ಬೇರೊಂದು ಸತ್ಯವನ್ನು ಸೃಷ್ಟಿಸುತ್ತಾನೆ. ಅದೇ ಕಲಾಸತ್ಯ. ಕೆಟ್ಟ ಮನುಷ್ಯನ ಚಿತ್ರ ಬರೆಯುವಾಗ. ಮನುಷ್ಯನ ಹೃದಯವಿರುವ ಜಾಗದಲ್ಲಿ ಹಾವನ್ನೋ ಗೂಬೆಯನ್ನೋ ಚಿತ್ರಿಸುತ್ತಾನೆ–ಅದೂ ಸತ್ಯವೇ. ಆದರೆ ಅದು ವಾಸ್ತವ ಸತ್ಯವಲ್ಲ. ಕಲಾಸತ್ಯವೆಂದರೆ ಅದೇ."

ಜಾನಪದ ವಸ್ತುಸಂಗ್ರಹಾಲಯದ ಕ್ಯೂರೇಟರ್ ಆಗಿರುವ ಅವರು ತಮ್ಮ ಹವ್ಯಾಸ ಮತ್ತು ವೃತ್ತಿಗಳಿಗಿರುವ ಸಂಬಂಧವನ್ನು ಹೀಗೆ ವಿವರಿಸುತ್ತಾರೆ.

"ನನ್ನ ವೃತ್ತಿ ನನ್ನ ಹವ್ಯಾಸಕ್ಕೆ ತುಂಬ ಸಹಕಾರಿಯಾಗಿದೆ. ವಸ್ತುಸಂಗ್ರಹಾಲಯಕ್ಕೆಂದು ಅಪೂರ್ವ ವಸ್ತುಗಳ ಶೇಖರಣೆಗಾಗಿ ಹಳ್ಳಿ ಹಳ್ಳಿಗಳಲ್ಲಿ ತಿರುಗುವಾಗ. ಅಲ್ಲಿನ ಪ್ರಕೃತಿಯ ವೈವಿಧ್ಯಮಯ ದೃಶ್ಯಗಳು ನನಗೆ ಕಚ್ಚಾವಸ್ತುವನ್ನೊದಗಿಸುತ್ತವೆ. ಹಲವಾರು ಜನರ ಸಂಪರ್ಕ ಲಭಿಸುತ್ತಾ ಅನುಭವ



ಶಿಥಿಲ ದೇವಾಲಯ, ಹಂಪೆ
(ಅಮೇರಿಕದ ಕಲಾಭಿಮಾನಿಗಳಲ್ಲಿದೆ)



ಹಂಪೆಯ ಬುರುಜು (ಜಲವರ್ಣ ಚಿತ್ರ)



'ಅರಿವಿನ ಮನೆ'–ಬಸವಣ್ಣನವರ ತಪ್ಪಸ್ಸಿನ ತಾಣ, ಬಸವಕಲ್ಯಾಣ



ಬಿಜಾಪುರದ 'ಶಿವಲಿಂಗ' ದೇಗುಲ



ಶಂಕರನಾರಾಯಣ ದೇಗುಲ, ಸೋಂದಾ (ಉ.ಕ. ಜಿಲ್ಲೆ)



'ಮಾಲ್ಪೆ ಕಡಲ ತೀರ' (ಜಲವರ್ಣ ಚಿತ್ರ)

ವಿಸ್ತಾರವಾಗುತ್ತಾ ಹೋಗುತ್ತದೆ. ಅಲ್ಲದೆ ಆ ವೃತ್ತಿಯಿಂದ ನನಗೆ ತೃಪ್ತಿ ಸಿಕ್ಕಿದೆ. ಅದನ್ನೇ ಪೂಜೆ ಎಂದು ತಿಳಿದು ಶ್ರದ್ಧೆಯಿಂದ ಮಾಡುತ್ತಾ ಬಂದಿದ್ದೇನೆ.–ಆರ್ಥಿಕ ತೃಪ್ತಿಗಿಂತಲೂ ಆತ್ಮತೃಪ್ತಿ ಸಿಕ್ಕಿದೆ–ಅದಕ್ಕಿಂತ ಹೆಚ್ಚು ಬೇರಿನ್ನೇನು ಬೇಕು?"

೧೯೭೭ ಆಗಸ್ಟ್ ತಿಂಗಳಲ್ಲಿ ನಿವೃತ್ತರಾಗಲಿದ್ದು ಅವರು ತಮ್ಮ ಮುಂದಿನ ಜೀವನದ ಬಗ್ಗೆ ತಿಳಿಸಿದುದು ಇಂತು: "ನಿವೃತ್ತನಾದ ಮೇಲೆ ನನ್ನ ಸಂಪೂರ್ಣ ಸಮಯವನ್ನು ಕಲೆಗಾಗಿ ಮೀಸಲಿಡುತ್ತೇನೆ. ಒಂದು ಕಲಾಶಾಲೆಯನ್ನಾರಂಭಿಸಿ, ಕೆಲವಾರು ಜನರನ್ನಾದರೂ ಕಲಾವಿದರನ್ನಾಗಿ ಮಾಡುವ ಹಂಬಲ ನನ್ನದು. ನನ್ನ ಶಿಷ್ಯರ ಸಂಖ್ಯೆ ನನಗೆ ಮುಖ್ಯವಲ್ಲ. ಇಬ್ಬರು ಮೂರು ಜನರಾದರೂ ಸಾಕು. ಲ್ಯಾಂಡ್‌ಸ್ಕೇಪ್ ಪೇಂಟಿಂಗ್‌ನಲ್ಲಿ ತರಬೇತಿ ನೀಡಬೇಕೆಂದಿದ್ದೇನೆ."

"ಹಿಂದಿನ ಕಾಲದಲ್ಲಿ ಕಲಾವಿದರಿಗೆ ರಾಜ ಮಹಾರಾಜರುಗಳಿಂದ ಪ್ರೋತ್ಸಾಹ ಸಿಕ್ಕುತ್ತಿತ್ತು; ಈವರೀಗ ಸರ್ಕಾರ ಆ ಕೆಲಸ ಮಾಡುತ್ತಿವೆ. ಕಲಾವಿದರನ್ನು ಗುರ್ತಿಸಿ ಪ್ರೋತ್ಸಾಹಿಸುವ ಕೆಲಸ ಸರ್ಕಾರದ್ದು. ಅದರೂ ಹೋರಾಡದೆ ಯಾವ ಫಲವೂ ಸಿಕ್ಕುವ ಕಾಲ ಇದಲ್ಲ"–ಎನ್ನುತ್ತಾರೆ ಸರ್ಕಾರದ ಪ್ರೋತ್ಸಾಹದ ಬಗ್ಗೆ.

"ತೈಲವರ್ಣ ಚಿತ್ರಕ್ಕಿಂತ ಜಲವರ್ಣ ಚಿತ್ರಗಳನ್ನು ಚಿತ್ರಿಸುವುದು ತುಂಬಾ ಕಷ್ಟ. ಆದರೆ ಜಲವರ್ಣಗಳು ಪ್ರೇಕ್ಷಕರ ಮೇಲೆ ಬೀರುವ ಪ್ರಭಾವ ಗಾಢವಾದುದು. ನನ್ನ ನಿವೃತ್ತ ಜೀವನದಲ್ಲಿ ಕರ್ನಾಟಕದ ಎಲ್ಲ ಪ್ರಮುಖ ಐತಿಹಾಸಿಕ ದೃಶ್ಯಗಳನ್ನು ಚಿತ್ರಿಸುವ ಹಂಬಲವಿದೆ. ನೋಡಬೇಕು."

"ವಿದೇಶಕ್ಕೂ ಆಹ್ವಾನ ಬಂದಿತ್ತು; ಹೋಗುವ ಅಪೇಕ್ಷೆಯೂ ಇದೆ. ಸಮಯ, ಸಂದರ್ಭ ಯೋಗ ಒದಗಬೇಕು"

ತಿಪ್ಪೇಸ್ವಾಮಿಯವರನ್ನು ಬಹಳ ಹತ್ತಿರದಿಂದ ಅಭ್ಯಾಸ ಮಾಡುವ ಅವಕಾಶ ಹತ್ತು ದಿನಗಳವರೆಗೆ ನನಗೊದಗಿತ್ತು. ಮೈಸೂರಿನ ರಮಾವಿಲಾಸ ರಸ್ತೆಯಲ್ಲಿರುವ ಅವರ ನಿವಾಸ ಒಂದು ಧರ್ಮಸತ್ರವಿದ್ದ ಹಾಗಿದೆ. ಆ ಪುಣ್ಯಧಾಮದ ಆಶ್ರಯ ಪಡೆಯುವವರ ಸಂಖ್ಯೆಗೆ ಕೊನೆಯಿಲ್ಲ. ಬಡ ವಿದ್ಯಾರ್ಥಿಗಳೆಷ್ಟೋ ಜನಕ್ಕೆ ಅವರ ಮುಕ್ತಹಸ್ತದ ಸಹಾಯ ಸದಾ ಸಿದ್ಧ. ಹೆಸರಿಗೆ ಅವರು ಬ್ರಹ್ಮಚಾರಿಗಳು. ಆದರೆ ಅವರದು ಚಿತ್ರಲೋಕದ ವಿಚಿತ್ರ ಸಂಸಾರ. ಹೊಸಬರು, ಹಳಬರು, ಪರಿಚಿತರು, ಅಪರಿಚಿತರು ಎಲ್ಲರನ್ನೂ ಒಂದೇ ರೀತಿಯಲ್ಲಿ ಕಾಣುವ ಹಿರಿಯ ಹೃದಯ ಅವರದು. ಅವರನ್ನು ನನ್ನ ಮಿತ್ರ ಶ್ರೀ ಟಿ. ಎಸ್. ರಾಜಶೇಖರ್‌ರವರು ನನಗೆ ಪರಿಚಯಮಾಡಿಸಿದರು. ಅದಕ್ಕಾಗಿ ನನ್ನ ಆ ಗೆಳೆಯರಿಗೆ ನಾನೆಷ್ಟು ಕೃತಜ್ಞನಾಗಿದ್ದರೂ ಸಾಲದು.

ತಿಪ್ಪೇಸ್ವಾಮಿಯವರ ಕಲಾಕೃತಿಗಳಲ್ಲಿ ಹೆಸರಿಸಬೇಕಾದ ಕೆಲವು ಚಿತ್ರಗಳು–'ಕಪಿಶೈಲ' 'ಗಗನ ಮಹಲ್' 'ಶ್ರೀ ಚೆನ್ನಕೇಶವ ದೇವಾಲಯ' (ಕಸ್ತೂರಿಯಲ್ಲಿ ಪ್ರಕಟಿತ) ಮುಂತಾದುವು, ಸಹಜತೆಗೆ ಸಮೀಪವೆನಿಸುವ ವರ್ಣವೈಖರಿ, ನೆಳಲು, ಬೆಳಕುಗಳ ಸಂಯೋಜನೆ, ಗೆರೆಗಳು ಮೂಡಿಸುವ ವಿಶಿಷ್ಟ ಕೋನಗಳು–ನೋಟಕರ ಕಣ್ಮನಗಳನ್ನು ಸೆಳೆಯುತ್ತವೆ. ಇದೆಲ್ಲಕ್ಕಿಂತ ಹೆಚ್ಚಾಗಿ ಇವರ ಮಾನವೀಯತೆ ಹತ್ತಿರ ಬಂದವರನ್ನು ಸೂಜಿಗಲ್ಲಿನಂತೆ ಸೆಳೆಯುತ್ತದೆ. ಒಮ್ಮೆ ಆದ ಪರಿಚಯ ಅವಿಸ್ಮರಣೀಯವಾಗಿ ಬಿಡುತ್ತದೆ. ಕನ್ನಡನಾಡಿನ ಅಪೂರ್ವ ಸತ್ಪುತ್ರರಲ್ಲಿ ತಿಪ್ಪೇಸ್ವಾಮಿಯವರೊಬ್ಬರೆಂಬುದು ಚಿತ್ರದುರ್ಗ ಜಿಲ್ಲೆಯವನಾದ ನನಗೆ ಅದೆಷ್ಟು ಹೆಮ್ಮೆ!

ಎಳೆಯ ಮಕ್ಕಳಿಗೆ ಶಾಲಾ ಪಠ್ಯಗಳಲ್ಲಿ ಚಿತ್ರಕಲೆಯ ಪಾಠಗಳನ್ನೂ ಕಡ್ಡಾಯ ಮಾಡಿರುವುದರ ಉದ್ದೇಶ ಅವರಿಗೆ ಅದರ ಮೂಲಭೂತ ಅಂಶಗಳ ಅರಿವು ಅಗತ್ಯ ಎಂಬುದಷ್ಟೇ ಅಲ್ಲ. ಅವರಿಗೆ ಸಂಗೀತ, ನೃತ್ಯ, ಅಭಿನಯ, ವಾಚನಗಳಲ್ಲಿ ಹೇಗೋ ಹಾಗೆ ಚಿತ್ರರಚನೆಯಲ್ಲೂ ಸಹಜವಾದ ಅಭಿರುಚಿ ಇರುವುದರಿಂದ ಆ ಬೋಧನೆಯಿಂದ ಅವರ ಸರ್ವಾಂಗೀಣ ವಿಕಾಸಕ್ಕೆ ಸಹಾಯವಾಗುತ್ತದೆ ಎಂಬುದೇ ಆಗಿದೆ. ಅಲ್ಲದೆ ಇತರ ಪಾಠಗಳಲ್ಲಿ ಬರುವ ಪಶು, ಗಿಡ, ಮರ, ಹಕ್ಕಿ ಮೊದಲಾದವುಗಳ ಸ್ಥೂಲರೂಪವನ್ನು ಬಿಡಿಸುವುದು ಜ್ಯಾಮಿತೀಯ ಆಕೃತಿಗಳನ್ನು ರಚಿಸುವುದು ಅವರಿಗೆ ತಿಳಿದಿರಬೇಕು. ಇದನ್ನವರು ಸಮರ್ಪಕವಾಗಿ ನಿರ್ವಹಿಸಬೇಕಾದರೆ ಮೂಲವಸ್ತುವನ್ನು ಅವರು ವಿವರವಾಗಿ ನೋಡಿ ತಿಳಿದಿರಬೇಕಲ್ಲದೆ ಅದರ ಆಕಾರವನ್ನು ಬರವಣಿಗೆಯಲ್ಲಿ ಇಳಿಸುವುದನ್ನು ಅಭ್ಯಾಸ ಮಾಡಿರಬೇಕಾಗುತ್ತದೆ.

(**ವಿಶ್ವಕೋಶ** : ಸಂಪುಟ ೭, ಪು. ೨೯೨–೯೯)

ವಿ. ಎನ್. ಭಟ್ಟ

ಕಂಬಂ ಕನ್ನಡಿಗರು

ಭಾರತದಲ್ಲಿ ಕನ್ನಡ ನಾಡಿನ ಸಂಸ್ಕೃತಿ ಭವ್ಯತೆ, ಕೀರ್ತಿ ಕಿರೀಟಪ್ರಾಯವಾದುದು. ಇಲ್ಲಿ ಹಲವಾರು ಜನಾಂಗ, ಭಾಷೆ, ಭಿನ್ನ ಭಿನ್ನ ಸಂಸ್ಕೃತಿಗಳನ್ನು ಕಾಣುತ್ತೇವೆ. ಇಲ್ಲಿಯ ಪ್ರತಿಯೊಂದು ಜನಾಂಗದ ಸಂಸ್ಕೃತಿಯೂ ಪುರಾತನವೂ ಹಿರಿಯದೂ ಆಗಿದ್ದು ಇದರ ಬಗ್ಗೆ ಪೂರ್ಣ ಅಭ್ಯಾಸ ಮಾಡಬಯಸುವವರಿಗೆ ಮೆಲುಕು ಹಾಕುವಷ್ಟು ವಿಷಯಗಳು ದೊರೆಯುತ್ತವೆ. ಕರ್ನಾಟಕ ರಾಜ್ಯದಿಂದ ಪರಿಸರದ ಒತ್ತಡಕ್ಕೋ ಪರಕೀಯರ ಧಾಳಿಗೋ ತುತ್ತಾಗಿ ಅವರಿಂದ ತಲೆ ತಪ್ಪಿಸಿಕೊಂಡು ಬೇರೆ ಬೇರೆ ತಮ್ಮ ನೆರೆನಾಡುಗಳಿಗೆ ವಲಸೆ ಹೋದವರು ಅನೇಕರು. ಅವರಲ್ಲಿ ತಮಿಳುನಾಡಿನ ಕಂಬಂನಲ್ಲಿ ಬಂದು ನೆಲೆಸಿದ ಕನ್ನಡಿಗರ ಇತಿಹಾಸ ಕುತೂಹಲವೂ ಗಮನಾರ್ಹವೂ ಆಗಿರುತ್ತದೆ.

ಮೂಲ ಕನ್ನಡಿಗರು

ಇಲ್ಲಿ ನೆಲೆಸಿದ ಜನರು ಒಕ್ಕಲಿಗ ಗೌಡರು. ಕಂಬಂ ಮಧುರೆಯಿಂದ ಸುಮಾರು ೯೦ ಮೈಲು ದೂರ ಇರಬಹುದು. ಇವರ ಭೌಗೋಳಿಕ ಚಿತ್ರಣವನ್ನು ನೋಡಿದಾಗ ಸುತ್ತಲೂ ಕೋಟೆಯಾಕಾರದ ಗುಡ್ಡಗಳು. ಗುಡ್ಡಗಳ ತುದಿಯಲ್ಲಿ ಶಸ್ತ್ರಸಮೇತ ಸಿದ್ಧರಾಗಿ ನಿಂತಿರುವ ಸೈನಿಕರಂತಿರುವ ಮರಗಳ ಸಾಲುಗಳು ಹೊರಗಿನವರನ್ನು ನಮ್ಮ ಈ ಸ್ಥಳಕ್ಕೆ ಬನ್ನಿರೆಂದೂ ನಮ್ಮ ಸಂಸ್ಕೃತಿಯನ್ನು ನೋಡಿರೆಂದೂ ಕೈ ಬೀಸಿ ಕರೆಯುವಂತೇ ಭಾಸವಾಗುತ್ತದೆ. ಗುಡ್ಡಗಳ ತಳದಲ್ಲಿ ಫಲವತ್ತಾದ ಕೃಷಿಗೆ ಹದಗೊಂಡ ಭೂಮಿ. ನೀರಿನ ಆಗರಗಳಿವೆ. ಇಲ್ಲಿ ಸುಮಾರು ಒಂದೂವರೆ ಸಾವಿರಕ್ಕೂ ಮಿಕ್ಕಿ ಕನ್ನಡ ಜನರಿದ್ದಾರೆ. ಇವರೆಲ್ಲ ಕರ್ನಾಟಕದಿಂದ ಮುಸ್ಲಿಂ ಜನರ ದಾಳಿಗೆ ಸಿಕ್ಕಿ ವಿಜಯನಗರದ ಸ್ಥಾಪನೆಯ ಮುಂಚೆ ಎಂದರೆ ಸುಮಾರು ೧೪ನೆಯ ಶತಕದಲ್ಲಿ ಓಡಿ ಬಂದು ನೆಲಸಿದವರು. ಬರುವಾಗ ತುಂಗಭದ್ರಾ ನದಿಯ ದಂಡೆಯ ಮೇಲಿಂದ ತಮಗೆ ಸೊತ್ತಾದ ದನಗಳನ್ನು ಹಾಗೂ ಕುರಿಗಳನ್ನು ಕೈಗೆ ಸಿಕ್ಕಿದಷ್ಟನ್ನು ತೆಗೆದುಕೊಂಡು ಓಡಿ ಬಂದವರು. ಈ ಒಕ್ಕಲಿಗರು ತುಂಬಾ ಕಷ್ಟಜೀವಿಗಳು. ಸದೃಢಕಾಯರು, ಎತ್ತರದ ಜನರೂ ಆಗಿದ್ದಾರೆ. ಇವರೆಲ್ಲ ತುಂಬಾ ಹಳೆಯ ಕನ್ನಡವನ್ನು ಮಾತನಾಡುತ್ತಾರೆ. ಇವರ ಕನ್ನಡದಮೇಲೆ ತಮಿಳು ಹಾಗೂ ಮಲೆಯಾಳಗಳ ಪ್ರಭಾವ ಬಿದ್ದಿದೆ. ಕನ್ನಡವನ್ನು ಮಾತನಾಡಲು ಬಲ್ಲರೇ ಹೊರತು ಓದಲು ಬರೆಯಲು ಬರುವುದು ಇಬ್ಬರು ಮೂವರಿಗೆ ಮಾತ್ರ. ಅವರೂ ತುಂಬಾ ಹಳಬರು. ಈ ಒಕ್ಕಲಿಗ ಗೌಡರು ಬರುವಾಗ ತಮಗೆ ಆಧಾರವಾದ ದೊಡ್ಡ ಹುಲ್ಲನ್ನು ಹಿಡಿದುಕೊಂಡು ನದಿದಾಟಿದರು. ಬರುವಾಗ ಹಲವರು ಕೊಯಮುತ್ತೂರು, ಸೇಲಂಗಳಲ್ಲಿಯೂ ನೆಲಸಿದರು. ಈ ಕಂಬಂ ಕನ್ನಡಿಗರಲ್ಲೂ ತಮಿಳು ನಾಡಿನ ಇನ್ನಿತರ ಕಡೆ ನೆಲಸಿದ ಕನ್ನಡ ಜನರಲ್ಲೂ ಕನ್ನಡ ಭಾಷೆಯ ವ್ಯತ್ಯಾಸವನ್ನು ಕಾಣಬಹುದು.

ಇವರ ಸಂಸ್ಕೃತಿ

ಇವರ ಕುಲದೈವ ಕೃಷ್ಣ. ಕಂಬ ಎಂದು ಹೆಸರು ಬರಲು ಕಾರಣವೆಂದರೆ ಈ ಊರಿನಲ್ಲಿ ಒಂದು ದೊಡ್ಡ ಕಲ್ಲಿನ ಕಂಬವಿದೆ. ಈ ಕಂಬವನ್ನು ಇಲ್ಲಿಯ ಜನರೆಲ್ಲ ಪೂಜಿಸುತ್ತಾರೆ. ಈ ಕಂಬದ ಕೆಳಗಡೆ ಗೋಪಾಲ

ಕೃಷ್ಣನ ವಿಗ್ರಹವೂ ಇದೆ. ಇದಕ್ಕೆ ದೊಡ್ಡ ಗೋಪುರವನ್ನು ಕಟ್ಟಿದ್ದಾರೆ. ಈ ಕಂಬದ ಹತ್ತಿರ ಸುಮಾರು ೨೦೦ ದನಗಳನ್ನು ದೇವರ ಹೆಸರಿನಲ್ಲಿ ಬಿಡುತ್ತಾರೆ. ಈ ಕಂಬದ ಸುತ್ತಲೂ ದನಗಳು ಯಾವಾಗಲೂ ಇರುತ್ತವೆ. ಈ ದನಗಳನ್ನು ತಮ್ಮ ನಿತ್ಯ ವ್ಯವಹಾರದಲ್ಲಿ ಬಳಸುವುದಿಲ್ಲ. ಇವನ್ನು ದೇವರಿಗಾಗಿಯೇ ಬಿಟ್ಟವೆಂದು ಹೇಳುತ್ತಾರೆ. ಇಲ್ಲಿಯ ಸ್ಥಳ ಮಹಿಮೆಯಿಂದಲೋ ಏನೋ ಈ ಹಟ್ಟಿಯೊಳಗಿನ ದನಗಳೆಲ್ಲಾ ಒಂದಕ್ಕೊಂದು ಜಗಳವಾಡದೆ ಶಾಂತವಾಗಿರುತ್ತವೆ. ಕಂಬದ ಬುಡದಲ್ಲಿ ಪ್ರತಿನಿತ್ಯ ಹಾಲನ್ನು ಹಾಕುತ್ತಾರೆ. ಆ ಹಾಲನ್ನು ಸರ್ಪ ಬಂದು ಕುಡಿದು ಹೋಗುತ್ತದೆಂದು ಅಲ್ಲಿಯ ಜನರ ನಂಬಿಕೆ. ಆ ದನಗಳ ಸಮೀಪವೇ ಸರ್ಪವಿದ್ದರೂ ಸ್ಥಳ ಮಹಿಮೆಯ ಪ್ರಭಾವದಿಂದ ಯಾವ ಜೀವಿತಕ್ಕೂ ಅಪಾಯ ಮಾಡುವುದಿಲ್ಲವೆಂದು ಪ್ರತೀತಿ ಇದೆ.

ಈ ಒಕ್ಕಲಿಗ ಜನಾಂಗದ ಪುರಾಣವೂ ಇದೆ. ಅದು ತಮಿಳಿನಲ್ಲಿದೆ. ಈ ಜನರ ಆಚಾರ-ವಿಚಾರ, ಉಡಿಗೆ-ತೊಡಿಗೆ, ಸಾಂಸ್ಕೃತಿಕ ಚಟುವಟಿಕೆಗಳೆಲ್ಲ ಭಿನ್ನವಾಗಿದೆ ಮತ್ತು ಉಚ್ಚವಾಗಿದೆ. ಈ ಜನರೆಲ್ಲಾ ದೊಡ್ಡ ಜಮೀನುದಾರರೂ, ಎಸ್ಟೇಟ ಮಾಲಿಕರೂ ಆಗಿದ್ದು, ತುಂಬ ಸಿರಿವಂತ ಜನಾಂಗ. ಮುಖ್ಯ ಉದ್ಯೋಗ ಒಕ್ಕಲುತನ, ತೋಟಗಾರಿಕೆ. ತೋಟಗಳಲ್ಲಿ ತೆಂಗು, ಬಾಳೆ, ಮಾವು, ಹುಣಸೆ, ಬಿದಿರು ಮುಖ್ಯವಾಗಿ ಕಾಣಸಿಗುತ್ತವೆ. ಹೊಲದಲ್ಲಿ ಭತ್ತ, ಕಡಲೆಕಾಯಿ ರಾಗಿ, ಜೋಳ, ಸಾಸಿವೆ, ಸಾಮೆಅಕ್ಕಿ, ನವಣೆ, ಕಬ್ಬು ಮುಖ್ಯವಾದವುಗಳು. ಮುಖ್ಯವಾಗಿ ಪಶುಸಂಗೋಪನೆ. ಕುರಿಸಾಕಾಣಿಕೆಗಳೂ ಇವೆ.

ಆಹಾರ

ಮುಖ್ಯವಾಗಿ ಅನ್ನ. ಮಾಂಸವನ್ನೂ ಉಪಯೋಗಿಸುತ್ತಾರೆ. ಅದರಂತೆ ಜೋಳ ರಾಗಿ, ನವಣೆ, ಸಾಮೆಅಕ್ಕಿಯನ್ನೂ ಧಾರಾಳವಾಗಿ ಉಪಯೋಗಿಸುತ್ತಾರೆ. ಚೆನ್ನಾಗಿ ತಿಂದು ದುಡಿಯುತ್ತಾರೆ. ಇದರಿಂದ ಬಹುಜನರೆಲ್ಲ ದೀರ್ಘಾಯುಷಿಗಳೂ ಸಶಕ್ತರೂ ಆಗಿರುತ್ತಾರೆ. ಅದರಂತೆ ನಿರೋಗಿಗಳೂ ಹೌದು.

ಇವರು ಬೆಲೆಬಾಳುವ ವಸ್ತ್ರಗಳನ್ನೂ ಬಂಗಾರದ ಒಡವೆಗಳನ್ನೂ ಧರಿಸುತ್ತಾರೆ. ಇವರಲ್ಲಿ ವಿಶೇಷವೆಂದರೆ ನಿತ್ಯಬಳಕೆಗೆ ಹುಲ್ಲಿನ ಹಸೆ (ಚಾಪೆ)ಯನ್ನು ಉಪಯೋಗಿಸುವುದಿಲ್ಲ. (ಕುಳಿತುಕೊಳ್ಳಲು ಅಥವಾ ಮಲಗಲು). ಏಕೆಂದರೆ ಇವರು ತುಂಗಭದ್ರಾ ನದಿಯನ್ನು ದಾಟಿ ಬರುವಾಗ ಹುಲ್ಲಿನ ಆಧಾರದಿಂದ ಬಂದಿದ್ದು, ಅದು ಅವರ ಜೀವಕ್ಕೆ ಆಧಾರವಾದದ್ದರಿಂದ ಅದನ್ನು ಅವರು ಗೌರವದ ಸಂಕೇತವಾಗಿ ಕಾಣುತ್ತಾರೆ. ಅದರಂತೇ ಇವರು ಕಂಬಳಿಯನ್ನು ಸಹ ಬಳಸುವುದಿಲ್ಲ. ಇದನ್ನು ಕೇವಲ ಮಂಗಲ ಕೆಲಸಗಳಿಗೆ ಮಾತ್ರ ಬಳಸುತ್ತಾರೆ.

ವಿವಾಹ ಪದ್ಧತಿ

ಇದು ಅತ್ಯಂತ ಕುತೂಹಲ ವಿಷಯ. ಇವರಲ್ಲಿ ಪೂರ್ವದಲ್ಲಿ ೮ ದಿನಗಳ ಮದುವೆಯನ್ನು ಮಾಡುತ್ತಿದ್ದರು. ಮೊದಲನೆಯ ದಿನ ವಧುವರರಿಗೆ ಎಣ್ಣೆ ಹಾಗೂ ತೈಲಗಳ ಸ್ನಾನ. ಮರುದಿನ ಅವರ ಹಸ್ತಗಳಲ್ಲಿ ಭತ್ತವನ್ನು ಸುರಿಯುವದು. ಮೂರನೇ ದಿನ ವಿವಾಹ. ವಿವಾಹದ ದಿನ ಮಂಟಪದಲ್ಲಿ ವಧುವರರು ಹಿರಿಯರಿಂದ ಕೆಲವು ಉಪದೇಶದ ಮಾತು ಕೇಳಿ ಇಬ್ಬರೂ ಹೂಮಾಲೆಯನ್ನು ಬದಲಾಯಿಸುತ್ತಾರೆ. ಇವರಲ್ಲಿ ತಾಳಿಕಟ್ಟುವುದಾಗಲಿ, ಕರಿಮಣಿ ಸರ ಹಾಕಿಕೊಳ್ಳುವುದಾಗಲಿ ಪದ್ಧತಿಯಲ್ಲಿಲ್ಲದಿರುವುದು ತುಂಬಾ ಸೋಜಿಗ. ಆ ದಿನ ವಧುವರರ ಕೈಗೆ ಒಂದು ಜಾತಿಯ ಮರದ ತೊಪ್ಪಲನ್ನು ಕೊಯ್ದು ಕಟ್ಟುತ್ತಾರೆ. ಮತ್ತು ಅರಿಸಿನ ಬಣ್ಣದ ಸೀರೆ ಉಡಿಸುತ್ತಾರೆ. ಅದರಂತೆ ವರನಿಗೂ ಅರಸಿಣ ಬಣ್ಣದ ಉಡುಪು ತೊಡಿಸುತ್ತಾರೆ. ನಾಲ್ಕನೇ ದಿನ ಹಾಲನ್ನದ ಊಟ. ಐದನೇ ದಿನ ವಧುವರರಿಬ್ಬರ ಶಕ್ತಿಪ್ರಯೋಗ ಅರ್ಥಾತ್ ಮಣ್ಣನ್ನು ಬುಟ್ಟಿಯಲ್ಲಿ ಸಾಗಿಸುವುದು. ಆರನೇ ದಿನ ಕುದುರೆಯ ಮೇಲೆ ಸವಾರಿ ಊರಿನ ತುಂಬ. ಏಳನೇ ದಿನ ವಧುವರರು ದೇವಸ್ಥಾನಕ್ಕೆ ಹೋಗುವುದು. ಎಂಟನೆಯ ದಿನ ಮನೆಯಲ್ಲಿ ಓಕುಳಿ ಆಟ. ಔತಣದೊಂದಿಗೆ ಮುಗಿಯುತ್ತದೆ. ಇವರ ಮದುವೆಗಳಲ್ಲಿ ಬ್ರಾಹ್ಮಣರ

ಪ್ರವೇಶವಾಗಲೀ (ಪುರೋಹಿತರ) ಮಂತ್ರ ವಗ್ಮೈರೆಯಾಗಲೀ ಇರುವುದಿಲ್ಲ. ಹಾಗೆಂದೇ ಒಕ್ಕಲಿಗ ಗೌಡರಲ್ಲಿ ಒಬ್ಬನನ್ನು ನಿತ್ಯಪೂಜಾರಿಯನ್ನಾಗಿ ನೇಮಿಸುತ್ತಾರೆ. ಆತನೇ ದೇವಸ್ಥಾನದ ಪೂಜೆಯನ್ನು ಮಾಡುತ್ತಾನೆ. ಆ ಪೂಜಾರಿಯನ್ನು ವಂಶಪಾರಂಪರ್ಯವಾಗಿ ನೇಮಿಸುತ್ತಾರೆ. ಅವನಿಗೆ ಕೆಲವು ಜಮೀನನ್ನು ದತ್ತಿ ಬಿಡುತ್ತಾರೆ. ಅದರಂತೇ ದೇವಸ್ಥಾನಕ್ಕೂ ಸಹ ಜಮೀನನ್ನು ದತ್ತಿ ಬಿಡುವುದುಂಟು. ಆ ಜಮೀನಿನಲ್ಲಿ ಬಂದ ಉತ್ಪನ್ನವನ್ನೆಲ್ಲ ದೇವಸ್ಥಾನದ ಕಾರ್ಯಕಲಾಪಗಳಿಗೆ ಉಪಯೋಗಿಸಲಾಗುತ್ತದೆ. ಜನರಿಂದ ನೇಮಿಸಲ್ಪಟ್ಟ ಪುರೋಹಿತನು ಮದುವೆ ಹಾಗೂ ಇನ್ನಿತರ ಮಂಗಳ ಕಾರ್ಯದಲ್ಲಿ ಭಾಗವಹಿಸಿ ಕಾರ್ಯದಲ್ಲಿ ನೆರವಾಗುತ್ತಾನೆ. ಆದರೆ ಇವರು ಇನ್ನಿತರ ಕಾರ್ಯಗಳಿಗಾಗಿ ಬ್ರಾಹ್ಮಣರನ್ನು ಆಹ್ವಾನಿಸಿ ಅವರಿಂದ ಪೂಜೆ ಪುನಸ್ಕಾರಗಳನ್ನು ಮಾಡಿಸುತ್ತಾರೆ.

ಇವರಲ್ಲೂ ಕೋಲಾಟ ಲಾವಣಿ ಪದ ಹಾಡುವುದು ಬೇರೆ ಬೇರೆ ತರಹದ ಕುಣಿತಗಳೂ ಇವೆ. ಮನರಂಜನೆ ಗಾಗಿ ವೇಷ ಧರಿಸಿ ಕುಣಿಯುವದೂ ಉಂಟು. ಹೆಂಗಸರು ಸಹ, ಜಾನಪದ ಗೀತೆಗಳನ್ನು ಹಾಡುತ್ತಾರೆ. ಒಕ್ಕಲಿಗ ಗೌಡರಲ್ಲಿ ಒಗ್ಗಟ್ಟು ಚೆನ್ನಾಗಿದೆ. ಊರಿಗೆ ಒಬ್ಬ ಮುಖಂಡನೀನಿರುತ್ತಾನೆ. ಆತ ನ್ಯಾಯ ನಿಷ್ಠುರನೂ ಸದೃಢಕಾಯನೂ ಸಿರಿವಂತನೂ ಆಗಿರುತ್ತಾನೆ. ಆತ ಊರಿನಲ್ಲಿ ಏನಾದರೂ ಅನ್ಯಾಯ ತಂಟೆಗಳಾದಲ್ಲಿ ಬಗೆಹರಿಸುತ್ತಾನೆ. ಆತ ನ್ಯಾಯಾಧಿಪತಿಯಂತೇ ಇರುತ್ತಾನೆ. ಆತನ ತೀರ್ಪೇ ಕೊನೆ. ತಪ್ಪುಮಾಡಿದವರಿಗೆ ತಲೆದಂಡ, ಜಾತಿಕಟ್ಟು (ಬಹಿಷ್ಕಾರ)ಗಳಿವೆ. ಜನರೆಲ್ಲಾ ಊರಿನ ನಿರ್ದಿಷ್ಟ ಸ್ಥಳದಲ್ಲಿ ಆಗಾಗ ನೆರೆದು ತಮ್ಮ ಕುಂದು ಕೊರತೆಗಳನ್ನು ಆ ಮುಖಂಡನಲ್ಲಿ ಹೇಳಿಕೊಂಡಾಗ, ಅಲ್ಲಿ ಚರ್ಚೆ ವಿಚರ್ಚೆಗಳು ನಡೆಯುತ್ತದೆ. ಊರಿನಲ್ಲಿ ಕಳ್ಳರ ಭಯವಿರುವುದಿಲ್ಲ. ಇವರಲ್ಲೇ ಕೆಲ ಜನರನ್ನು ಊರ ಕಾವಲುಗಾರರನ್ನಾಗಿ ನೇಮಿಸುತ್ತಾರೆ. ಅವರಿಗೆ ಧಾನ್ಯರೂಪದಲ್ಲಿ ಹಣ ನೀಡ ಲಾಗುತ್ತದೆ. ಇವರೆಲ್ಲರೂ ಒಂದು ತರದ ಸಮವಸ್ತ್ರಗಳನ್ನು ಧರಿಸುತ್ತಾರೆ. ಜಮೀನಿನ ಬೆಳೆರಕ್ಷಣೆ. ಊರ ರಕ್ಷಣೆ. ಕಾಡುಪ್ರಾಣಿಗಳಿಂದ ದನ ಕುರಿಗಳ ರಕ್ಷಣೆ ಇವರ ಕರ್ತವ್ಯ. ಇವರೆಲ್ಲರೂ ನಿಷ್ಠಾವಂತ ಜನರಾಗಿರುತ್ತಾರೆ. ವರ್ಷಕ್ಕೊಮ್ಮೆ ಜಾತ್ರೆಯಲ್ಲಿ ಈ ಜನರೆಲ್ಲಾ ಸೇರಿ ಸಂತೋಷದಿಂದ ನಲಿದಾಡುತ್ತಾರೆ. ಈ ಜನರಲ್ಲಿಯ ಒಂದು ವಿಶೇಷವೆಂದರೆ ಎಷ್ಟೇ ಸಿರಿವಂತನಿದ್ದರೂ ಅನಾವಶ್ಯಕವಾಗಿ ದುಂದುಗಾರಿಕೆ ಮಾಡುವುದಿಲ್ಲ. ಹೆಚ್ಚಾಗಿ ಈ ಜನರು ಕೆಟ್ಟ ಚಟಗಳಿಗೆ ಅಂಟಿಕೊಳ್ಳುವುದಿಲ್ಲ. ಇದರಿಂದಲೇ ಜನರೆಲ್ಲ ದೃಢಕಾಯರೂ ದೀರ್ಘಾಯುಷಿಗಳೂ ಆಗಿರುತ್ತಾರೆ. ಈ ಒಕ್ಕಲಿಗ ಗೌಡರಲ್ಲಿ ವರದಕ್ಷಿಣೆಯಾಗಲೀ ವಧು ದಕ್ಷಿಣೆ(ತೆರ)ಯಾಗಲಿ ಇರುವುದಿಲ್ಲ. ವರದಕ್ಷಿಣೆ ಎಂತ ಕೇವಲ ೫೦ ರೂ.ಗಳು ಮಾತ್ರ ಕೊಡು ವುದುಂಟು. ಇನ್ನು ೩ ರೂ.ಗಳನ್ನು ಗ್ರಾಮತೇಜವೆಂದು ಕೊಡುವುದುಂಟು.

ಇವರ ಮನೆಗಳು ಅರಮನೆಯಂತೆ ದೊಡ್ಡವೂ ಭವ್ಯವೂ ಆಗಿರುತ್ತವೆ. ಜನರು ತುಂಬಾ ಉದಾರಿಗಳೂ ಸುಸಂಸ್ಕೃತರೂ ಆಗಿರುತ್ತಾರೆ. ಅತಿಥಿಗಳನ್ನು ದೇವರಂತೆ ಕಾಣುತ್ತಾರೆ. ಇವರದು ಹಿಂದೂ ಸಂಸ್ಕೃತಿಯ ಪ್ರತೀಕವಾಗಿದೆ. ಇವರೆಲ್ಲ ಸ್ವಾವಲಂಬಿಗಳಾಗಿದ್ದು ಸದಾ ಉದ್ಯೋಗಶೀಲರು. ಪಶುಸಂಗೋಪನೆಯಲ್ಲೂ ಸಾಕಷ್ಟು ಮುಂದುವರಿದಿದ್ದಾರೆ. ತಮಗೆ ಬೇಕಾದ ದವಸ ಧಾನ್ಯಗಳನ್ನೆಲ್ಲ ಹೊಲಗಳಲ್ಲೇ ಬೆಳೆದುಕೊಳ್ಳುತ್ತಾರೆ. ಬೇಟೆಗಾರಿಕೆಯೂ ಉಂಟು.

ಪರಜಾತಿಯ ವಿವಾಹ ಇವರಲ್ಲಿ ನಿಷಿದ್ಧ. ಒಮ್ಮೆ ಆದರೂ ಅಂತರ್ಜಾತಿ ವಿವಾಹದಲ್ಲಿ ಅವರನ್ನು ಜಾತಿಯಿಂದ ಹೊರಗೆ ಹಾಕುತ್ತಾರೆ ಜಾತಿ ಬಹಿಷ್ಕಾರವಿದೆ. ಮದುವೆಯು ಸಾಂಪ್ರದಾಯಿಕ ವಾಗಿರುತ್ತದೆ.

ಹೆಣವನ್ನು ಸಿಂಗರಿಸಿ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಸ್ಮಶಾನಕ್ಕೆ ಒಯ್ಯುತ್ತಾರೆ. ನಂತರ ಊರಿನ ಹಿರಿಯರೂ ಅವರ ಪುರೋಹಿತನೂ ಸೇರಿ ಶವದಹನ ಮಾಡುತ್ತಾರೆ. ಸೂತಕವನ್ನು ಹನ್ನೆರಡು ದಿನ ಆಚರಿಸುತ್ತಾರೆ. ಹನ್ನೆರಡನೇ ದಿನ ದೀಪ ಹಚ್ಚುವದರೊಂದಿಗೆ ಸಂಸ್ಕಾರದ ಕಾರ್ಯ ಮುಗಿಯುತ್ತದೆ.

- ಇವರು ವರ್ಷಕ್ಕೊಮ್ಮೆ ದನಗಳ ಸ್ಪರ್ಧೆಯನ್ನು ಏರ್ಪಡಿಸುತ್ತಾರೆ. ಗೆದ್ದವರಿಗೆ ಬಹುಮಾನ ಸನ್ಮಾನದಲ್ಲಿ ನಡೆಯುತ್ತದೆ.

ಕಂಬಂ ಒಕ್ಕಲಿಗ ಗೌಡರಲ್ಲಿ ಬಹಳ ಜನರು ತಮಿಳುನಾಡಿನ ಕೆಲವೆಡೆಯಲ್ಲೂ ಕೇರಳದ ಬಹು ಭಾಗಗಳಲ್ಲೂ ಎಸ್ಟೇಟ್ ಮಾಲಿಕರಾಗಿರುತ್ತಾರೆ. ಇವರ ಸಿರಿತನಕ್ಕೆ ತಕ್ಕ ದರ್ಪದ ನಡಿಗೆಯವರೂ ಒಳ್ಳೆಯವರೂ ಆಗಿರುತ್ತಾರೆ. ಈಗೀಗ ಶಿಕ್ಷಣದಲ್ಲಿ ತುಂಬ ಮುಂದುವರಿದಿರುತ್ತಾರೆ. ಇವರ ಭಾಷೆಯು ಕನ್ನಡವಾಗಿದ್ದರೂ ಅರ್ಥವಾಗುವುದು ಕಷ್ಟ. ಏಕೆಂದರೆ ಇವರು ಹಳೆಗನ್ನಡದ ರೂಪಗಳನ್ನೇ ಬಳಸುತ್ತಾರಲ್ಲದೇ ಮಧ್ಯದಲ್ಲಿ ತಮಿಳು. ತೆಲುಗು. ಮಲೆಯಾಳ ಶಬ್ದಗಳನ್ನೂ ಬಳಸುತ್ತಾರೆ. ಇವರು ಇಲ್ಲಿ ಬಂದು ನೆಲೆಸಿ ೫೦೦–೬೦೦ ವರ್ಷಗಳಾದರೂ ಕನ್ನಡವನ್ನು ಬೇರೆ ರಾಜ್ಯಕ್ಕೆ ಬಂದು ಬಹುಮಟ್ಟಿಗೆ ಉಳಿಸಿಕೊಂಡಿರುವುದು ಆಶ್ಚರ್ಯವೂ ಸ್ತುತ್ಯಾರ್ಹವೂ ಹೌದು. ತುಂಬಾ ಕನ್ನಡಾಭಿಮಾನಿಗಳಾಗಿದ್ದು ಓದು ಬರಹ ಕಲಿಯಲು ತುಂಬಾ ಆಸಕ್ತಿ ಉಳ್ಳವರಾಗಿದ್ದಾರೆ. ಆದರೆ ಅವರಿಗೆ ಇಲ್ಲಿ ಸೌಕರ್ಯವಿಲ್ಲ. ೧೫–೨೦ ಸಾವಿರ ಜನಸಂಖ್ಯೆ ಉಳ್ಳ ಈ ಜನರಿಗೆ ಕನ್ನಡ ಕಲಿಯುವ ಅವಕಾಶವಿಲ್ಲದುದು ಬಹಳ ವಿಷಾದದ ಸಂಗತಿ. ಅವರೆಲ್ಲರಿಗೂ ತಮ್ಮ ಮಾತೃಭಾಷೆಯ ಬಗ್ಗೆ ಅಭಿಮಾನವೂ ಲವಲವಿಕೆಯೂ ಇದೆ. ಇದೇ ರೀತಿ ಅವರ ಬಗ್ಗೆ ಅಲಕ್ಷ್ಯ ಮಾಡಿದಲ್ಲಿ ಖಂಡಿತ ಮುಂದಿನ ಪೀಳಿಗೆಯವರೆಲ್ಲ ಮಾತಾಡಲೂ ಸಹ ಕನ್ನಡವನ್ನು ಮರೆಯುತ್ತಾರೆ. ಆದ್ದರಿಂದ ನಮ್ಮ ಕರ್ನಾಟಕ ಸರಕಾರವು ಹೊರನಾಡ ಕನ್ನಡಿಗರ ಏಳ್ಗೆಗಾಗಿ ಶ್ರಮವಹಿಸಿ ಅಲ್ಲಿ ಒಂದು ಕನ್ನಡ ಶಾಲೆಯನ್ನೂ ಶಾಲೆಗೆ ಒಬ್ಬಿಬ್ಬ ಕನ್ನಡ ಶಿಕ್ಷಕರನ್ನು ನಿಯಮಿಸಿ ಕನ್ನಡವನ್ನು ಈ ಸುಸಂಸ್ಕೃತ ಜನರಿಗೆ ಕಲಿಸಿದಲ್ಲಿ ತುಂಬಾ ಲಾಭವಿದೆ. ನಮ್ಮ ಕನ್ನಡದ ಬಾವುಟವನ್ನು ಹೊರವಲಯಗಳಲ್ಲೂ ಹಾರಿಸಿ ಉಚ್ಚ ಸಂಸ್ಕೃತಿಯನ್ನು ಹೊರ ನಾಡ ಜನರೂ ಕೊಂಡಾಡುವಂತಾಗುತ್ತದೆ. ಅದರಂತೆಯೇ ನೆರೆಹೊರೆಯ ರಾಜ್ಯಗಳಲ್ಲಿ ವಲಸೆ ಹೋಗಿ ನೆಲೆಸಿದ ಕನ್ನಡ ಬಾಂಧವರಿಗೆ ಕನ್ನಡ ಕಲಿಯಲು ಏರ್ಪಾಡು ಮಾಡುವುದು ಅವಶ್ಯ.

ಇದರಂತೆಯೇ ತಮಿಳುನಾಡಿನಲ್ಲಿ ದೇವಾಂಗ ಕನ್ನಡಿಗರೂ ಬಹಳ ಜನರಿದ್ದಾರೆ. ಅವರೂ ಒಳ್ಳೆಯ ಸಂಸ್ಕೃತಿಯನ್ನೂ ತಮ್ಮದೇ ಆದ ಕನ್ನಡ ಭಾಷೆಯನ್ನೂ ಹೊಂದಿರುತ್ತಾರೆ. ಇವರು ಒಕ್ಕಲಿಗ ಗೌಡರಿಂದ ಭಿನ್ನವಾದವರು. ಇವರ ಸಂಸ್ಕೃತಿ ಮಾತಿನ ಶೈಲಿಗಳಲ್ಲೂ ಬಹಳ ಅಭ್ಯಂತರವಿದೆ. ಕಟ್ಟಾ ಕನ್ನಡಾಭಿಮಾನಿಗಳು. ಬಹಳ ಜನರು ಮೈಸೂರಿನ ಚಾಮುಂಡೇಶ್ವರಿ ದೇವರನ್ನು ಕುಲದೈವ ವೆಂದು ಪೂಜಿಸುವುದರಿಂದ ಮೈಸೂರಿನಿಂದ ಟಿಪ್ಪು ಸುಲ್ತಾನನ ಕಾಲಕ್ಕೆ ಓಡಿ ಬಂದವರೆಂದು ಊಹಿಸ ಬಹುದು. ಇವರ ಬಗ್ಗೆ ಇನ್ನೂ ಸಂಶೋಧನೆ ಆಗಬೇಕಾಗಿದೆ.

ಈ ರೀತಿ ಹೊರನಾಡ ಕನ್ನಡಿಗರ ಬಗ್ಗೆ ಅಧ್ಯಯನ ನಡೆಸುವುದರಿಂದ ಅಲ್ಲಿಯ ಭಾಷಾ ವೈವಿಧ್ಯತೆ. ಪ್ರಾಂತ ಭೇದಗಳನ್ನೂ ಪರಭಾಷಾಪ್ರಭಾವವನ್ನೂ ತಿಳಿಯಲು ಸಹಾಯವಾಗುತ್ತದೆ. ಮತ್ತು ಅವರ ಸಾಂಸ್ಕೃತಿಕ ಸಂಬಂಧವನ್ನೂ ತಿಳಿಯಬಹುದು. ಸಾಹಿತ್ಯ ದೃಷ್ಟಿಯಿಂದಲೂ ಅವರು ಹೊಂದಿದ ಪುರಾಣಗಳು ಜಾನಪದ ಕಥೆಗಳು. ಪದ್ಯಗಳ ಹೊರತು ಕನ್ನಡ ಸಾಹಿತ್ಯ ಕ್ಷೇತ್ರದ ವಿಸ್ತಾರ ವನ್ನು ಹೆಚ್ಚಿಸಲು ಸಹಾಯವಾಗುತ್ತದೆ.

ನಿಜವಾಗಿಯೂ ಕಂಬಂ ಪ್ರಕೃತಿ ಸೌಂದರ್ಯದ ತಾಣ. ಸಂಸ್ಕೃತಿಯ ಬೀಡು. ಕನ್ನಡಾಭಿಮಾನಿಗಳ ಜಾಡು. ಇಂತಹ ಸುಂದರ ತಾಣವನ್ನು ನೋಡಲೇಬೇಕಾದಂಥದು. ಇಲ್ಲಿ ಭೇಟಿ ಮಾಡಿ ಕಂಬಂ ಕನ್ನಡಿಗರ ಆದರಾತಿಥ್ಯವನ್ನು ಸ್ವೀಕರಿಸಿ ಕನ್ನಡದ ಸಿರಿವಂತ ಶ್ರೇಷ್ಠ ಸಂಸ್ಕೃತಿಯನ್ನು ನೆನೆಸಬಹುದು.

ಇವರೆಲ್ಲಾ ರಾಜಮನೆತನಕ್ಕೆ ಸಂಬಂಧಪಟ್ಟವರಿರಬೇಕು. ಇವರಲ್ಲಿ ಹಲವರಿಗೆ ಬ್ರಿಟಿಷ್ ಸರಕಾರದಿಂದಲೂ ಪುರಸ್ಕಾರ. ಮುದ್ರೆಗಳು ದೊರೆತಿರುವಂತೆ ಪ್ರತೀತಿಯೂ ತಾಮ್ರಪತ್ರಗಳೂ ಈ ಊರಿನಲ್ಲಿರುತ್ತವೆ.

ಕೆ. ಮೊಹಮ್ಮದ್ ಶರೀಫ್

ಮುಸ್ಲಿಂ ಹಬ್ಬಗಳು

"ಮುಸಲ್ಮಾನರ ಹಬ್ಬವೇ ಹಬ್ಬ" ಎಂದು ಹೇಳುವುದು ಕನ್ನಡಿಗರಲ್ಲಿ ಒಂದು ವಾಡಿಕೆ. ಇದು ಉತ್ಪ್ರೇಕ್ಷೆಯ ಮಾತಲ್ಲ. ಮೊಹರ್ರಂ, ರಂಜಾನ್ ಮತ್ತು ಬಕ್ರೀದ್ ಹಬ್ಬಗಳು ಬಂದರೆ ಮುಸ್ಲಿಮರಲ್ಲಿ ತುಂಬಾ ಸಡಗರ. ಇದಕ್ಕೆ ಕಾರಣ ಹಬ್ಬಗಳನ್ನು ಮನಃಪೂರ್ವಕವಾಗಿ, ಸಂತೋಷವಾಗಿ ಮತ್ತು ಸಂತೃಪ್ತಿಯಾಗಿ ಆಚರಿಸಬೇಕೆಂಬುದೇ ಇಸ್ಲಾಂ ಮತದ ಸಿದ್ಧಾಂತ. ಆದುದರಿಂದಲೇ ಹಬ್ಬದ ಸಮಯ ದಲ್ಲಿ ಮುಸ್ಲಿಮರು ಶುಭ್ರವಾದ ಹೊಸಬಟ್ಟೆಗಳನ್ನು ತೊಟ್ಟು ಅವುಗಳನ್ನು, ಸುವಾಸನೆಯನ್ನು ಹೊಮ್ಮುವ ಅತ್ತರ್ ಮತ್ತು ಪರಿಮಳಗಳಿಂದ ಲೇಪನ ಮಾಡುತ್ತಾರೆ. ಬಗೆ ಬಗೆಯ ಊಟ, ತಿಂಡಿ, ಪಾನೀಯಗಳನ್ನು ತಯಾರು ಮಾಡುತ್ತಾರೆ. ಯಥೇಚ್ಛವಾಗಿ ದಾನವನ್ನು ಮಾಡುತ್ತಾರೆ. ಅವರು ತಮ್ಮ ಹಬ್ಬದ ಆಚರಣೆಯಲ್ಲಿ ಮನೋರಂಜನೆಯ ಕಾರ್ಯಗಳಲ್ಲೂ, ಆಹ್ಲಾದಕರ ಚಟುವಟಿಕೆ ಗಳಲ್ಲೂ ತೊಡಗುತ್ತಾರೆ.

ಹಬ್ಬಗಳ ವಿಷಯವಾಗಿ ಖುರಾನ್ನಿನಲ್ಲಿ ಏನೂ ಹೇಳಿಲ್ಲ. ಆದರೆ ಇವುಗಳನ್ನು ಎಲ್ಲಾ ಮುಸ್ಲಿಮರೂ ಆಚರಿಸುತ್ತಾರೆ. ಮುಸ್ಲಿಮರ ಹಬ್ಬಗಳು ಅನೇಕ. ಆದರೆ ಅವುಗಳಲ್ಲಿ ಮೊಹರ್ರಂ, ಈದ್–ಎ–ಮಿಲಾದ್, ಶಬ್–ಎ–ಬರಾತ್ (ಶಬೇಬರಾತ್), ರಂಜಾನ್ ಮತ್ತು ಬಕ್ರೀದ್ ಹಬ್ಬಗಳು ಮುಖ್ಯವಾದುವು.

ಮೊಹರ್ರಂ

ಅನೇಕ ಮುಸ್ಲಿಂ ರಾಷ್ಟ್ರಗಳಲ್ಲಿ ಪ್ರಚಲಿತವಾಗಿರುವ ಹಿಜರಿಸಂವತ್ಸರದ ಮೊದಲನೆಯ ತಿಂಗಳೇ ಮೊಹರ್ರಂನ ತಿಂಗಳು. ಮೊಹರ್ರಂ ಅರಬ್ಬೀ ಭಾಷೆಯ ಶಬ್ದ. ಇದರ ಅರ್ಥ 'ಹರಾಮ್' ಅಂದರೆ 'ನಿಷಿದ್ಧವಾದದ್ದು' ಅಥವಾ 'ವರ್ಜಿತವಾದದ್ದು'. ಇಸ್ಲಾಂ ಮತ ಸ್ಥಾಪನೆಯ ಮೊದಲು ಅರಬ ಸ್ಥಾನದಲ್ಲಿ ಧಾರ್ಮಿಕ ದೃಷ್ಟಿಯಿಂದ ಈ ತಿಂಗಳಲ್ಲಿ ಯುದ್ಧ ಅಥವ ರಕ್ತಪಾತ ನಿಷಿದ್ಧವಾಗಿತ್ತು. ಆದುದರಿಂದ ಈ ತಿಂಗಳಿಗೆ ಮೊಹರ್ರಂ ಎಂಬ ಹೆಸರು ಬಂದಿರಬಹುದು. ಈ ತಿಂಗಳಲ್ಲಿ ಆಚರಿಸಲ್ಪಡುವ ಮೊಹರ್ರಂ, ಹಬ್ಬವೇ ಅಲ್ಲದ ಒಂದು ಹಬ್ಬ. ಇದು ಬಹುಪಾಲು ಕುರುಕ್ಷೇತ್ರವನ್ನು ಹೋಲುವ ಕರ್ಬಲಾ[1] ಮೈದಾನದ ಹತ್ಯಾಕಾಂಡವನ್ನು ನೆನಪಿಗೆ ತಂದುಕೊಡುತ್ತದೆ. ಇದು ಹಜರತ್ ಇಮಾಮ್ ಹುಸೇನರ ಕೊಲೆಯ ಸ್ಮಾರಕ. ಇದರ ಹಿನ್ನೆಲೆಯನ್ನು ಇಲ್ಲಿ ಗಮನಿಸುವುದು ಅವಶ್ಯಕ.

ಅರೇಬಿಯಾ ದೇಶದ ಖುರೇಷ್ (ಖುರಾಯಿಷ್) ಪಂಗಡದಲ್ಲಿ 'ಬನಿ ಉಮ್ಮಿಯಾ' ಮತ್ತು 'ಬನಿ ಹಾಷಿಂ' ದಾಯಾದಿ ವಂಶಗಳು. ಈ ವಂಶಗಳಲ್ಲಿ ದಾಯಾದಿ ಮಾತ್ಸರ್ಯ ಆಗಾಗ್ಗೆ ತಲೆ

---

1 ಕರ್ಬ್=ದುಃಖ; ಬಲಾ=ವಿಪತ್ತು. ಕರ್ಬಲಾ ನಗರ ಬಗದಾದಿನ ದಕ್ಷಿಣ–ಪಶ್ಚಿಮದಿಕ್ಕಿನಲ್ಲಿ ಸುಮಾರು ಐವತ್ತು ಮೈಲಿ ದೂರದಲ್ಲಿದೆ. ಇಮಾಮ್ ಹುಸೇನ್‌ರ ಬಲಿದಾನದ ಕಾರಣ ಈ ನಗರ ಪವಿತ್ರ ತೀರ್ಥಕ್ಷೇತ್ರವಾಗಿದೆ.

ದೋರುತ್ತಲೇ ಇತ್ತು. 'ಬನಿ ಹಾಷಂ' ವಂಶಜರಾದ ಮೊಹಮ್ಮದ್ ಪೈಗಂಬರ್‌ರವರು ಇಸ್ಲಾಂ ಮತ ವನ್ನು ಸ್ಥಾಪಿಸಿದ ಮೇಲೆ ಅವರ ದಾಯಾದಿ ಮಾತ್ಸರ್ಯ ಮತ್ತು ಅಂತಃಕಲಹಗಳು ಬಹುಮಟ್ಟಿಗೆ ಕಡಿಮೆಯಾಗಿದ್ದವಾದರೂ ಪೈಗಂಬರ್‌ರವರು ದೈವಾಧೀನರಾದ ಮೇಲೆ (ಕ್ರಿ.ಶ. ೬೩೨ರ ಮೇಲೆ) ಈ ಕಲಹಗಳು ಮತ್ತೆ ಹುಟ್ಟಿದವು. ಪೈಗಂಬರ್ ಅವರ ಅಳಿಯಂದಿರಾದ ನಾಲ್ಕನೇ ಖಲೀಫಾ (ನಾಯಕ) ಸ್ಥಾನಕ್ಕೆ ಬಂದ[2] ಹಜರತ್ ಅಲಿಯವರ ಮರಣಾನಂತರ ಖಲೀಫಾ ಸ್ಥಾನಕ್ಕೆ ಯಾರು ಬರಬೇಕೆಂಬುದರ ಬಗ್ಗೆ ತುಂಬಾ ಭಿನ್ನಾಭಿಪ್ರಾಯಗಳಾದುವು. ಕೊನೆಗೆ ಬನಿ ಉಮ್ಮಿಯಾ ಪಂಗಡಕ್ಕೆ ಸೇರಿದ ಮಾವಿಯಾರವರು ಐದನೆಯ ಖಲೀಫರಾದರು.

ಕೆಲವು ವರ್ಷಗಳ ನಂತರ ಮಾವಿಯಾರವರು ಮೃತರಾದರು. ಅವರಿಗೆ ಯಜೀದನೆಂಬ ಮಗನಿದ್ದನು. ಈತ ದುರ್ಯೋಧನನನ್ನು ಬಹಳವಾಗಿ ಹೋಲುತ್ತಾನೆ. ತಂದೆಯ ಮರಣಾನಂತರ ತಾನೇ ನಾಯಕ ಪಟ್ಟಕ್ಕೆ ಅರ್ಹನೆಂದು ಮತ್ತು ತಾನೇ ಖಲೀಫನೆಂದು ಘೋಷಿಸಿಕೊಂಡನು. ಬನಿಹಾಷಂ ವಂಶಜರಾದ ಹಜರತ್ ಅಲಿಯವರ ಮಕ್ಕಳಾದ ಹುಸೇನರು ಮತ್ತು ಇತರರೂ ಇದನ್ನು ವಿರೋಧಿಸಿದರು. ಹಿಜರಿ ವರ್ಷ ೬೧ರಲ್ಲಿ ಮೆಕ್ಕದಿಂದ ಸುಮಾರು ೭೦ ಮೈಲಿ ದೂರವಿರುವ ಕೂಫಾ ಪಟ್ಟಣದ ಬಳಿ ಇರುವ ಕರ್ಬಲಾ ಎಂಬ ಮೈದಾನದಲ್ಲಿ ಹುಸೇನರೂ ಅವರ ಮಕ್ಕಳೂ ಸಂಸಾರದವರೂ ಹಾಗೂ ಪರಿವಾರದವರು ಬಿಡಾರ ಮಾಡಿಕೊಂಡಿದ್ದರು. ಆಗ ಹೊಂಚುಹಾಕಿಕೊಂಡಿದ್ದ ಯಜೀದನು ಅವರ ಮೇಲೆ ತನ್ನ ಸೈನ್ಯವನ್ನು ಕಳುಹಿಸಿ ಹುಸೇನರನ್ನೂ ಅವರ ಕಡೆಯ ಎಲ್ಲಾ ಜನರನ್ನೂ ಕೊಲ್ಲಿಸಿದನು. ಹಜರತ್ ಇಮಾಮ್ ಹುಸೇನರು ಮೊಹರಂ ಮಾಸದ ಹತ್ತನೆಯ ತಾರೀಖು ಶುಕ್ರವಾರ ಹುತಾತ್ಮರಾದರು. (ಹಿಜರಿ ೬೧—ಸು. ತಾರೀಖು ೧೦, ಅಕ್ಟೋಬರ್ ೬೮೦).

ಅದುದರಿಂದ ಅಂದು ಶೋಕದದಿನವೆಂದು ಪರಿಗಣಿಸಲ್ಪಟ್ಟಿದೆ. ಹುಸೇನರು ಈ ತಿಂಗಳ ಮೊದಲನೆಯ ದಿವಸವೇ ಕರ್ಬಲಾದಲ್ಲಿ ಕಷ್ಟಕ್ಕೊಳಗಾದರು. ಈ ಕಾರಣದಿಂದಾಗಿ ಶೋಕ ದಿನಾಚರಣೆಯು ಮೊಹರ್ರಂ ತಿಂಗಳ ಪ್ರಾರಂಭದಿಂದಲೇ ಪ್ರಾರಂಭವಾಗುತ್ತದೆ.[3] ಮೊಹರ್ರಂ ತಿಂಗಳಿನ ಏಳು ಮತ್ತು ಎಂಟನೆಯ ದಿವಸಗಳು ಹುಸೇನರವರ ಪರಿವಾರಕ್ಕೆ ಕುಡಿಯಲು ನೀರು ಸಿಕ್ಕಿರಲಿಲ್ಲವಂತೆ. ಆದ್ದರಿಂದ ಶೋಕದ ದೃಷ್ಟಿಯಿಂದ ಈ ದಿವಸಗಳಿಗೆ ವಿಶಿಷ್ಟ ಮಹತ್ವವಿದೆ.

ಹಜರತ್ ಇಮಾಮ್‌ಹುಸೇನರು ಕರ್ಬಲಾ ಕಾಳಗದಲ್ಲಿ ಹುತಾತ್ಮರಾದುದು ಪರಧರ್ಮದವರನ್ನು ಅಥವ ಪರದೇಶದವರನ್ನು ವಿರೋಧಿಸುವುದಕ್ಕಾಗಿ ಅಲ್ಲ: ಖಿಲಾಫತ್ತಿಗಾಗಿ ನಡೆದ ಕೌಟುಂಬಿಕ ಯುದ್ಧದ ಕಾರಣದಿಂದ. ಈ ಯುದ್ಧದಲ್ಲಿ ಎರಡು ಪಂಗಡದವರೂ ಒಂದೇ ಧರ್ಮ ಮತ್ತು ಕುಟುಂಬಕ್ಕೆ ಸೇರಿದುದು ಗಮನಾರ್ಹವಾದ ಅಂಶ. ಇದು "ಅಧರ್ಮ ಮತ್ತು ಧರ್ಮ, ಅಸತ್ಯ ಮತ್ತು ಸತ್ಯಗಳ ಜೀವಂತ ಸಂಕೇತಗಳಾದ ಯಜೀದ ಮತ್ತು ಇಮಾಮ್ ಹುಸೇನರ ನಡುವೆ ನಡೆದ ಘೋರ ಸಂಗ್ರಾಮ:

---

2 ಹಜರತ್ ಅಬೂಬಕರ್, ಹಜರತ್ ಉಮರ್, ಹಜರತ್ ಉಸ್ಮಾನ್–ಇವರು ಮೊದಲ ಮೂರು ಖಲೀಫರು.

3 ಈ ಘಟನೆಯ ಅನಂತರ ಸುಮಾರು ನಾನೂರು ವರ್ಷಗಳವರೆಗೆ ಬಾಗದಾದಿನ ಖಲೀಫರ ಪ್ರಭುತ್ವ ಬಹಳವಾಗಿತ್ತು. ಅವರು ಮತಾಂಧ ಸುನ್ನಿಗಳಾಗಿದ್ದರು. ಭಯಕ್ಕೊಳಗಾಗಿ ಶಿಯಾ ಪಂಗಡದವರು ತಮ್ಮ ಶೋಕ ಪ್ರದರ್ಶಿಸಲು ಹಿಂಜರಿಯುತ್ತಿದ್ದರು. ಅವರೆಲ್ಲರೂ ಸುನ್ನಿಗಳೊಂದಿಗೆ ಸೇರಿರುವಂತೆ ನಟಿಸುತ್ತಿದ್ದರು. ಅನಂತರ ಕ್ರಿ.ಶ. ಹನ್ನೊಂದನೆಯ ಶತಮಾನದಲ್ಲಿ ಬಾಗದಾದಿನ ರಾಜಮನೆತನ ಪತನವಾದ ಮೇಲೆ ಶಿಯಾ ಪಂಗಡದವರು ಪ್ರಖ್ಯಾತರಾದರು ಮತ್ತು ಬೂಯಾ ರಾಜ್ಯದ ಸಮಯದಲ್ಲಿ ಮೊದಲ ಬಾರಿ ಸನ್ ೪೦೦ ಹಿಜರಿ ಅಂದರೆ ಸುಮಾರು ೧೦೧೦ನೆಯ ಇಸವಿಯಲ್ಲಿ ಶೋಕವನ್ನಾಚರಿಸುವ ಪದ್ಧತಿ ಜಾರಿಗೆ ಬಂದಿತು. (ಮುಸ್ಲಿಮ್ ಉತ್ಸವಗಳು ಮತ್ತು ಸಂಸ್ಕಾರಗಳು: ಮೂಲ: ಶ್ರೀಪಾದ ಜೋಷಿ; ಅನುವಾದ: ಎಂ. ಹಿರಣ್ಣಯ್ಯ. ಮೈಸೂರು ವಿಶ್ವವಿದ್ಯಾನಿಲಯ ಪುಟ. ೬)

ಪ್ರಜಾಪ್ರಭುತ್ವ ತತ್ವದ 'ಖಿಲಾಫತ'ದ ಶಾಂತಿ ತತ್ವ ರಕ್ಷಣೆಗಾಗಿ ನಡೆದ ಧರ್ಮಯುದ್ಧವಾಗಿದೆ."[4] ಈ ಯುದ್ಧ ಇಸ್ಲಾಂ ಜಗತ್ತಿಗೊಂದು ದಿವ್ಯ ಸಂದರ್ಭ. "ಧರ್ಮಕ್ಕೂ ಪಾಶವೀಯ ಶಕ್ತಿಯ ಅಧರ್ಮಕ್ಕೂ ನಡೆದ ಸಾಂಕೇತಿಕ ಸಮರವೆನ್ನಬಹುದು. ನ್ಯಾಯ, ನೀತಿ, ದಾನ, ಧರ್ಮ, ಪ್ರಾಮಾಣಿಕ ಬದುಕಿನಿಂದ ಕೂಡಿದವನೇ ನಾಯಕ (ಖಲೀಫ)ನಾಗಬೇಕಾದ ಸ್ಥಾನದಲ್ಲಿ ಅಸುರವೃತ್ತಿಯ ಕುಡುಕ, ವ್ಯಭಿಚಾರಿ, ದುರಹಂಕಾರ ಗುಣದ ಯಜೀದನ ಆಡಳಿತದಿಂದ ಜನತೆಯನ್ನು ಪಾರುಮಾಡಿ ಇಸ್ಲಾಂ ಧರ್ಮದ ನಾಶವನ್ನು ತಡೆಗಟ್ಟಿದ ಸತ್ಯಕ್ಕಾಗಿ ಸತ್ತವರ ಕಥೆಯಾದ ಕಾರಣದಿಂದಲೇ ಮೊಹರ್ರಂ ಹಬ್ಬ ರೂಪದ ಈ ಕರ್ಬಲಾ ಕಾಳಗ ನಮ್ಮಲ್ಲಿ ಎಲ್ಲರಿಗೂ ಜನಪ್ರಿಯವಾಗಿದೆ."[5]

ಈ ಯುದ್ಧದಲ್ಲಿ ಬಲಿಯಾದ ಹುಸೇನರು, ಅವರ ಮಕ್ಕಳು ಮತ್ತು ಪರಿವಾರದವರ ಆತ್ಮಕ್ಕೆ ಶಾಂತಿಯನ್ನು ಕೋರುವ ಪ್ರಾರ್ಥನೆ (ಫಾತೆಹಾ) ಮೊಹರ್ರಂನಲ್ಲಿ ನಡೆಯುತ್ತದೆ. ಮೊಹರ್ರಂ ಹಬ್ಬದಲ್ಲಿ ನಾವು ಕಾಣುವ ರಥಗಳಂತಿರುವ ದೊಡ್ಡ ದೊಡ್ಡ 'ತಾಬೂತ' (ತಾಜಿಯಾಗಳು)ಗಳು ಕರ್ಬಲಾ ಕಾಳಗದಲ್ಲಿ ಹುತಾತ್ಮರಾದವರ ಗೋರಿಗಳ ಸಂಕೇತಗಳಾಗಿವೆ. ಮೊಹರ್ರಂ ಮೆರವಣಿಗೆಯಲ್ಲಿ ಬರುವ ಐದು ಬೆರಳುಗಳುಳ್ಳ 'ಪಂಜಾ'ಗಳು ಮೊಹಮ್ಮದ್ ಪೈಗಂಬರ್‌ರನ್ನು, ಅವರ ಅಳಿಯ ಅಲಿಯವರನ್ನು, ಅವರ ಪತ್ನಿ ಬೀಬೀ ಫಾತಿಮಾರನ್ನು, ಅಲಿಯವರ ಮಕ್ಕಳಾದ ಹಸನ್ ಮತ್ತು ಹುಸೇನ್‌ರವರನ್ನೂ ಸೂಚಿಸುವ ಚಿಹ್ನೆಗಳಾಗಿವೆ.

ಆಚಾರಗಳಿಂದ ಕೂಡಿದ ಇಸ್ಲಾಂ ಧರ್ಮವು ವರ್ಣರಂಜಿತ ವೈವಿಧ್ಯಮಯ ಜೀವನದಿಂದ ನಿಬಿಡವಾದ ಹಿಂದೂಸ್ಥಾನದಲ್ಲಿ ಆದ್ಯತೆಗೊಳ್ಳಲೆಂದು ಇಲ್ಲಿನ ಇಸ್ಲಾಂ ಮತಾವಲಂಬಿಗಳು ಹಿಂದೂ ಧರ್ಮದ ಕೆಲವು ಆಚಾರಗಳನ್ನು ಅನುಕರಿಸಿದರೆನ್ನಬಹುದು. ಈ ಆಚಾರಗಳು ಮೊಹರ್ರಂನಲ್ಲಿ ಬಹುವಾಗಿ ಕಂಡುಬರುತ್ತವೆ. ಮೊಹರ್ರಂ ಹಬ್ಬದ ಆಚರಣೆ ಮತ್ತು ಅದರ ಹತ್ತನೆಯ ದಿನ ತಾಬೂತುಗಳನ್ನು, ಪಂಜಾಗಳನ್ನು ನೀರಿನಲ್ಲಿ ಬಿಡುವ ಸಂಪ್ರದಾಯ ಹಿಂದೂಗಳ ಗಣಪತಿ ಹಬ್ಬವನ್ನು ಹೋಲುತ್ತದೆ. ತಾಬೂತುಗಳ ಮತ್ತು ಪಂಜಾಗಳ ಮೆರವಣಿಗೆ ಹಿಂದೂ ಹಬ್ಬಗಳ ರಥಗಳ ಮೆರವಣಿಗೆಯನ್ನು ಹೋಲುತ್ತವೆ.

ಹಿಂದೂಸ್ಥಾನದಲ್ಲಿ ಮೊಹರ್ರಂ ಹಿಂದೂ–ಮುಸಲ್ಮಾನರ ಉತ್ಸವವೂ ಹೌದು. ಇದು ಮೂರ್ತಿ ಪೂಜೆಯನ್ನು ಹೋಲುವುದರಿಂದ ಕೆಲವು ಮುಸ್ಲಿಮರು ತಾಜಿಯಾ ಪದ್ಧತಿಯನ್ನು ವಿರೋಧಿಸುವುದುಂಟು. ಆದರೆ ಅನೇಕ ಸುನ್ನೀಗಳೂ ಕೂಡ ತಾಜಿಯಾದಲ್ಲಿ ಧರ್ಮವಿರೋಧದ ಯಾವ ಅಂಶವನ್ನೂ ಹುಡುಕದೆ ಬಹಳ ಉತ್ಸಾಹದಿಂದ ಶೀಯಾಗಳೊಂದಿಗೆ ಈ ಉತ್ಸವದಲ್ಲಿ ಭಾಗವಹಿಸುತ್ತಾರೆ. ಹಿಂದೂಗಳಲ್ಲಿಯೂ ಅನೇಕರು ಈ ಉತ್ಸವದಲ್ಲಿ ಭಾಗವಹಿಸುತ್ತಾರೆ. ತಾಜಿಯಾವನ್ನು ಪೂಜಿಸುತ್ತಾರೆ. ಹರಕೆಗಳನ್ನು ಹೊರುತ್ತಾರೆ.

ಕೆಲವು ವೇಳೆ ತಾಜಿಯಾ ಇಡುವ ಸ್ಥಳದ ಮುಂದೆ ಒಂದು ಗುಂಡಿ ಮಾಡಿ ಅದರಲ್ಲಿ ಬೆಂಕಿ ಉರಿಸಿ ಕೆಲವರು ಅದರ ಸುತ್ತಲೂ ಕುಣಿಯುತ್ತಾರೆ. ಕೆಲವರಂತೂ ಬೆಂಕಿಯಲ್ಲಿ ಧುಮುಕುತ್ತಾರೆ. ಆದರೆ ಅವರ ಶರೀರ ಸುಡುವುದಿಲ್ಲ.

ಈಜಿಪ್ಟ್, ತುರ್ಕಿಸ್ತಾನ, ಸಿರಿಯಾ, ಅರಬ್ಬಿಸ್ತಾನ, ಆಫ್‌ಘಾನಿಸ್ಥಾನ, ಇರಾನ್ ಮುಂತಾದ ದೇಶಗಳಲ್ಲಿ ತಾಜಿಯಾ ಪದ್ಧತಿ ಇಲ್ಲವೆಂದು ಹೇಳುತ್ತಾರೆ. ಈ ಪದ್ಧತಿ ಪೈಗಂಬರ್‌ರವರ ಮಹಾ ನಿರ್ವಾಣದ ಏಳು ಅಥವ ಎಂಟುನೂರು ವರ್ಷಗಳ ನಂತರ ಬಳಕೆಯಲ್ಲಿ ಬಂದಿತೆನ್ನಲಾಗಿದೆ.[6] ಅಂದರೆ

---

4 ಚೆನ್ನಣ್ಣ ವಾಲೀಕಾರ 'ಮೊಹರಂ ಪದಗಳು' ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ. ಪು. ೩೬.

5 ಅದೇ ಪುಟ. ೬

6 ಸುಪ್ರಸಿದ್ಧ ಬಾದಶಾಹ ತೈಮೂರ್‌ಲಂಗನು (ಕ್ರಿ.ಶ. ೧೩೩೬–೧೪೦೫) ಮೊಟ್ಟಮೊದಲು ತಾಜಿಯಾ ಪದ್ಧತಿಯನ್ನು ಪ್ರಾರಂಭಿಸಿದನೆಂದು ಹೇಳುತ್ತಾರೆ. ಈ ತಾಜಿಯಾ ತಯಾರಿಸುವ ಕೆಲಸ ಲಖನೌ, ಭೋಪಾಲ್ ಮೊದಲಾದ ನಗರಗಳಲ್ಲಿ ವರ್ಷವೆಲ್ಲಾ ನಡೆಯುತ್ತಿರುತ್ತದೆ. (ಮುಸ್ಲಿಮ್ ಉತ್ಸವಗಳು ಮತ್ತು ಸಂಸ್ಕಾರಗಳು, ಪುಟ. ೭)

ಮೂಲ ಇಸ್ಲಾಂ ಧರ್ಮದಲ್ಲಿ ಇದಕ್ಕೆ ಅವಕಾಶವಿರಲಿಲ್ಲವೆಂದರ್ಥ. ಇಲ್ಲಿಯ ಜನರಲ್ಲಿರುವ ಉತ್ಸವ ಪದ್ಧತಿಯೇ ಭಾರತದಲ್ಲಿ. ಈ ತಾಜಿಯಾ ಪದ್ಧತಿ ಹರಡುವುದಕ್ಕೆ ಕಾರಣವಿರಬಹುದು

ಈದ್-ಎ-ಮಿಲಾದ್

'ಈದ್-ಎ-ಮಿಲಾದ್' ಅಂದರೆ 'ಜನ್ಮದಿನೋತ್ಸವ'. ಇದು ಮೊಹಮ್ಮದ್ ಪೈಗಂಬರರ ಜನ್ಮದಿನೋತ್ಸವ. ರಬೀ-ಉಲ್-ಅವ್ವಲ್ ಅಥವಾ ರಬೀ-ಉಲ್-ಊಲಾ ಎಂಬ ಮೂರನೆಯ ತಿಂಗಳ ಹನ್ನೆರಡನೆಯ ತಾರೀಖಿನ ದಿನ ಇದು ಬರುತ್ತದೆ. ಆ ದಿವಸ ಪೈಗಂಬರರು ಹುಟ್ಟಿದರೆಂದು ಪ್ರತೀತಿ ಇದೆ. ಇದನ್ನು ಸುನ್ನೀ ಜನರು ಬಹಳ ಶ್ರದ್ಧೆ ಮತ್ತು ಉತ್ಸಾಹದಿಂದ ಆಚರಿಸುತ್ತಾರೆ.[7] ಈ ಹಬ್ಬವನ್ನು 'ಮೌಲೂದ್ ಶರೀಫ್'ವೆಂದೂ ಕರೆಯುತ್ತಾರೆ.

'ಮೌಲೂದ್' ಅರಬ್ಬೀ ಭಾಷೆಯ ಶಬ್ದ. ಅದರ ಅರ್ಥ ನವಜಾತ ಶಿಶು. ಬಾಲಕ ಮತ್ತು ಜನ್ಮಕಾಲ; ಶರೀಫ್ ಎಂದರೆ ಶುಭ. ಪವಿತ್ರ. ಸಜ್ಜನ ಎಂದು. ಮೌಲೂದ್ ಶರೀಫ್ ಎಂದರೆ ಶುಭ ಜನ್ಮತಿಥಿ. ಹಿಂದೂಗಳ ಕೃಷ್ಣಾಷ್ಟಮಿ. ರಾಮನವಮಿಯಂತೆ 'ಮೌಲೂದ್ ಶರೀಫ್'ಅನ್ನು 'ಮೊಹಮ್ಮದ್ ಜ್ಞಾನಿಶ್' ಹಬ್ಬ ಎಂದು ಕರೆಯಬಹುದು.

ಈ ಹಬ್ಬದ ದಿವಸ ರಾತ್ರಿ ಮುಸಲ್ಮಾನರು ನಿರ್ಮಲವೂ ಪವಿತ್ರವೂ ಆದ ಸ್ಥಾನದಲ್ಲಿ ಸೇರುತ್ತಾರೆ. ಅವರಲ್ಲಿನ ವಿದ್ವಾಂಸರು ಪೈಗಂಬರ್‌ರವರ ಜೀವನ ಚರಿತ್ರೆ ಮತ್ತು ಇಸ್ಲಾಂ ಧರ್ಮಕ್ಕೆ ಅವರ ಕೊಡುಗೆ ವಿಚಾರವಾಗಿ ನೆರೆದ ಜನರಿಗೆ ತಿಳುವಳಿಕೆ ಕೊಡುತ್ತಾರೆ. ಅವರ ವಿಚಾರವಾಗಿ ಲೇಖನಗಳನ್ನು ಓದುತ್ತಾರೆ. ಕವನ ಕಟ್ಟಿ ಹಾಡುತ್ತಾರೆ. ಪ್ರಸಾದ ವಿನಿಯೋಗವೂ ನಡೆಯುತ್ತದೆ. ಹಿಂದೂಗಳು ಸತ್ಯನಾರಾಯಣ ವ್ರತದ ಪ್ರಸಾದ ಸ್ವೀಕರಿಸುವಂತೆ ಮುಸ್ಲಿಮರು ಸಹ ಬಹಳ ಆದರ ಮತ್ತು ಭಕ್ತಿಯಿಂದ ಮೌಲೂದಿನ ಪ್ರಸಾದವನ್ನು ಪಡೆಯುತ್ತಾರೆ. ಜನರು ಯಾವುದೇ ಧರ್ಮಕ್ಕೆ ಸೇರಿದವರಾಗಿದ್ದರೂ ಅವರ ಭಕ್ತಿ. ಶ್ರದ್ಧೆ ಮತ್ತು ಆಸಕ್ತಿಗಳು ಬಹುಮಟ್ಟಿಗೆ ಒಂದೇ ಆಗಿರುತ್ತವೆ ಎಂಬುದಕ್ಕೆ ಇದೊಂದು ಒಳ್ಳೆಯ ನಿದರ್ಶನ.

ಈ ಜನ್ಮದಿನೋತ್ಸವ ಪದ್ಧತಿ ಪೈಗಂಬರ್‌ರವರ ಮರಣದ ಸುಮಾರು ಐದುನೂರು ವರ್ಷಗಳ ಅನಂತರ ಪ್ರಾರಂಭವಾಗಿರಬೇಕು. ಕ್ರಿ.ಶ. ಹನ್ನೆರಡನೆಯ ಶತಮಾನದ ಕೊನೆಯ ಭಾಗದಲ್ಲಿ ಇರಾಕ್ ದೇಶದ ಮುಸಲ್ ನಗರವಾಸಿಯೊಬ್ಬನು ಈ ಪದ್ಧತಿಯನ್ನು ಆರಂಭಿಸಿದನೆನ್ನುತ್ತಾರೆ[8]. ಇದರ ನಂತರ ಇರಾಕಿನ ಅರಬಲ್‌ನಗರದ ಬಾದಷಹ ಅಬು ಸಯೀದ್ ಮುಜಫ್ಫರ್ ಕ್ರಿ. ಶ. ೧೨೦೭ರಲ್ಲಿ ಈ ಉತ್ಸವವನ್ನು ಬಹಳ ವಿಜೃಂಭಣೆಯಿಂದ ಆಚರಿಸಿದನು.[9] ಅನಂತರ ಈ ಪದ್ಧತಿ ಪ್ರತಿವರ್ಷವೂ ನಡೆಯುತ್ತಾ ಬಂದಿತೆನ್ನಲಾಗಿದೆ. ತುರ್ಕಿ. ಈಜಿಪ್ಟ್. ಇಂಡಿಯ ಮತ್ತು ಇರಾನಿನ ಕೆಲವು ಭಾಗಗಳಲ್ಲಿ ಈ ಹಬ್ಬವನ್ನು ಆಚರಿಸುತ್ತಾರೆ.

ವಹ್ಹಾಬಿ (ವಹಾಬೀ) ಪಂಥಕ್ಕೆ ಸೇರಿದ ಮುಸ್ಲಿಮರು ಮತ್ತು ಶೀಯಾ ಪಂಗಡದವರು ಇದನ್ನು ಆಚರಿಸುವುದಿಲ್ಲ. ಹಿಂದಿನ ಕಾಲದ ಕೆಲವು ರಾಜರು ಇದನ್ನು ಆಚರಿಸುವವರನ್ನು ಅತಿಯಾಗಿ ಪೀಡಿಸಿದ್ದೂ ನಾವು ಕಾಣಬಹುದು.

---

7 ಭಾರತದಲ್ಲಿ ರಬೀ-ಉಲ್-ಅವ್ವಲ್‌ನ ಹನ್ನೆರಡನೆಯ ತಾರೀಖಿನ ದಿನವೇ ಹಬ್ಬವನ್ನು ಆಚರಿಸುವುದಿಲ್ಲ. ಯಾವುದಾದರೊಂದು ದಿನ ಆಚರಿಸುತ್ತಾರೆ.

8 'ಮುಸ್ಲಿಮ್ ಉತ್ಸವಗಳು ಮತ್ತು ಸಂಸ್ಕಾರಗಳು. ಪುಟ ೧೧.

9 ಅದೇ ಪುಟ. ೧೧

ಶಬ್-ಎ-ಬರಾತ್

ಹಿಜರಿಸಂವತ್ಸರದ ಎಂಟನೆಯ ತಿಂಗಳೇ ಶಾಬಾನ್. ಈ ತಿಂಗಳ ಹದಿನೈದನೆಯ ತಾರೀಖಿನ ರಾತ್ರಿ ಶಬ್-ಎ-ಬರಾತ್ ಹಬ್ಬ ನಡೆಯುತ್ತದೆ. ಇದನ್ನು 'ಶಬ್‌ರಾತ್', 'ಶಬೇಬರಾತ್' ಎಂದೂ ಕರೆಯುತ್ತಾರೆ. ಈ ದಿವಸ ಜನರಿಗೆ ನರಕದಿಂದ ಮತ್ತು ಪಾಪದಿಂದ ಮುಕ್ತಿ ಸಿಗುವುದೆಂದೂ, ಪಾಪಾತ್ಮರು ಪವಿತ್ರರಾಗುವರೆಂದೂ ಕೆಲವು ಮುಸ್ಲಿಮರ ನಂಬಿಕೆ. ಇನ್ನು ಕೆಲವರು ಈ ದಿನ, ಮುಂದಿನ ವರ್ಷದ ಫಲಾಫಲಗಳನ್ನು ಪ್ರತಿಯೊಬ್ಬರಿಗೂ ದೇವಲೋಕದಲ್ಲಿ ಗೊತ್ತುಮಾಡುತ್ತದೆ ಎನ್ನುತ್ತಾರೆ. ಶಬ್-ಎ-ಬರಾತ್ ರಾತ್ರಿ ಸಿದ್‌ರತುಲ್ ಮುಂತಹ ಎಂಬ ಗಿಡವನ್ನು ಅಲ್ಲಾಡಿಸುತ್ತದೆಯಂತೆ. ಆ ಗಿಡದ ಪ್ರತಿಯೊಂದು ಎಲೆಯಲ್ಲೂ ಒಬ್ಬೊಬ್ಬನ ಹೆಸರು ಬರೆದಿದ್ದು, ಎಲೆ ಉದುರಿದಂತೆಲ್ಲ ಆಯಾ ಹೆಸರಿನ ವ್ಯಕ್ತಿಯ ಸಾವು ನಿಶ್ಚಯವಾಗುತ್ತದೆಯಂತೆ. ಇದು ಪುರಾತನ ಇರಾನಿನ ಫರ್‌ವರ್ದೀನ್[10] ಹಬ್ಬವಾಗಿರಬಹುದು.

ಹಬ್ಬದ ದಿನವಿಡೀ ಉಪವಾಸ ಮಾಡುತ್ತಾರೆ. ರಾತ್ರಿ ಜಾಗರಣೆ ನಡೆಸಿ ದೇವರ ಪ್ರಾರ್ಥನೆ, ಸ್ಮಶಾನಕ್ಕೆ ಹೋಗಿ ಮೃತಾತ್ಮರಿಗಾಗಿ ಪ್ರಾರ್ಥಿಸುವುದು ಇವೇ ಪ್ರಧಾನ ಧಾರ್ಮಿಕ ಕಾರ್ಯಕ್ರಮಗಳು. ಪೂರ್ವಜರನ್ನು ಸ್ಮರಿಸಿ, ಹಿಂದೂಗಳ ಶ್ರಾದ್ಧದ ರೀತಿಯಲ್ಲಿ ಪೂರ್ವಜರಿಗೆ ಶಾಂತಿ ಮತ್ತು ಸದ್ಗತಿ ದೊರೆಯಲೆಂದು ಪ್ರಾರ್ಥನೆನಡೆಸುವುದು ಮತ್ತು ಅವರ ಹೆಸರಿನಲ್ಲಿ, ದಾನಧರ್ಮಗಳನ್ನು ಮಾಡುವುದು ಇವೇ ಈ ಹಬ್ಬದ ಆರಂಭಕ್ಕೆ ಮೂಲ ಕಾರಣವಾಗಿರಬೇಕು.[11] ಹೆಚ್ಚು ಕಡಿಮೆ ಹಿಂದುಗಳು ದೀಪಾವಳಿಯನ್ನು ಆಚರಿಸುವಂತೆ ಇದನ್ನು ಮುಸ್ಲಿಮರು ಆಚರಿಸುತ್ತಾರೆ.

ರಂಜಾನ್

ಹಿಜರೀಸಂವತ್ಸರದ ಒಂಬತ್ತನೆಯ ತಿಂಗಳಾದ ರಂಜಾನ್‌ನಲ್ಲಿ ಬರುವ ಈ ಹಬ್ಬ ಆ ತಿಂಗಳಿನ ಹೆಸರಿನಲ್ಲಿಯೇ ಪ್ರಸಿದ್ಧಿಯಾಗಿದೆ. ಇದನ್ನು 'ಈದುಲ್-ಫಿತರ್' ಅಥವ 'ಉಪವಾಸವನ್ನು ಕೊನೆಗಾಣಿಸುವ ಹಬ್ಬ'ವೆಂದು ಕರೆಯುತ್ತಾರೆ. ಇದು ಇಸ್ಲಾಂನ ಪೂರ್ವದ್ದಲ್ಲ. ಪೈಗಂಬರ್‌ರವರು ಆರಂಭಿಸಿದ್ದು. ಹಿಂದೂಗಳ ದೀಪಾವಳಿ ಹಬ್ಬದಂತೆ ಮುಸ್ಲಿಮರಿಗೆ ರಂಜಾನ್ ಹಬ್ಬ ಸಂತೋಷದ ದೊಡ್ಡ ಹಬ್ಬ. ಎಲ್ಲಾ ಪಂಗಡದ ಮುಸ್ಲಿಮರು ಇದನ್ನು ಆಚರಿಸುತ್ತಾರೆ. ಇದೇ ತಿಂಗಳೇ ಮುಸ್ಲಿಮರ ಪವಿತ್ರ ಗ್ರಂಥವಾದ ಖುರಾನ್ ಮೊದಲುಗೊಂಡುದು. ಈ ತಿಂಗಳ ೨೭ನೇ ದಿನ ಪವಿತ್ರ ರಾತ್ರಿಯೇ ಖುರಾನ್ ಪರಿಪೂರ್ಣವಾದದ್ದು. ಆದುದರಿಂದ ಈ ರಾತ್ರಿಯನ್ನು ಮುಸ್ಲಿಮರು 'ಲೈಲತ್-ಉಲ್-ಖದರ್' ಅಥವ 'ಶಕ್ತಿಯ ರಾತ್ರಿ' ಎಂದು ಕರೆಯುತ್ತಾರೆ. ಹಿಂದುಗಳ 'ಶಿವರಾತ್ರಿ'ಯನ್ನು ಇದಕ್ಕೆ ಹೋಲಿಸಬಹುದು.

ಪವಿತ್ರಮಯವಾದ ರಂಜಾನ್ ತಿಂಗಳ ೩೦ ದಿವಸಗಳಲ್ಲಿ ಮುಸ್ಲಿಮರು ಉಪವಾಸವನ್ನು ಆಚರಿಸುತ್ತಾರೆ. 'ರೋಜಾ' ಅಥವಾ ಉಪವಾಸ ಸೂರ್ಯೋದಯಕ್ಕಿಂತ ಮುಂಚಿತವಾಗಿ ಪ್ರಾರಂಭವಾಗಿ ಸೂರ್ಯಾಸ್ತದವರೆಗೆ ಸುಮಾರು ೧೪ ಗಂಟೆಗಳ ಕಾಲ ನಡೆಯುತ್ತದೆ. ಈ ಅವಧಿಯಲ್ಲಿ ನೀರಿನ ಒಂದು ತೊಟ್ಟು ಸಹ ಹೊಟ್ಟೆಯೊಳಗೆ ಸೇರಕೂಡದು. ಜೊಲ್ಲು ನುಂಗುವುದೂ ಸಹ ಧರ್ಮಬಾಹಿರವೆಂದು ಕೆಲವರು ಭಾವಿಸುವರು. ಇದು ಒಂದು ರೀತಿಯ ತಪಸ್ಸೇ ಸರಿ. ರೋಗಿಗಳು, ಕುರುಡರು, ಅಂಗವಿಕಲರು, ಗುಲಾಮರು, ಯಾತ್ರಿಕರು, ಚಿಕ್ಕಮಕ್ಕಳು, ಗರ್ಭಿಣಿ ಅಥವಾ ಬಾಣಂತಿ ಸ್ತ್ರೀಯರು ಉಪವಾಸವ್ರತವನ್ನಾಚರಿಸುವುದು ಅನಿವಾರ್ಯವಲ್ಲ.

---

10 ಇಸ್ಲಾಂ ಸಂಸ್ಕೃತಿ. ಮೂಲ: ಪ್ರೊಫೆಸರ್ ಮಹಮದ್ ಅಬ್ಬಾಸ್ ಷೂಸ್ತ್ರಿ. ಅನು: ಬಿ.ಎಂ. ಶ್ರೀಕಂಠಯ್ಯ. ಮೈಸೂರು ವಿಶ್ವವಿದ್ಯಾನಿಲಯ. ಪುಟ ೩೬೧

11 ಮುಸ್ಲಿಮ್ ಉತ್ಸವಗಳು ಮತ್ತು ಸಂಸ್ಕಾರಗಳು, ಪುಟ ೨೨

ರಂಜಾನ್ ತಿಂಗಳಲ್ಲಿ ಸ್ವರ್ಗದ ಬಾಗಿಲು ತೆರೆದಿರುತ್ತದೆಯೆಂದೂ, ನರಕದ ಬಾಗಿಲು ಮುಚ್ಚಿರುತ್ತದೆಯೆಂದೂ, ಸೈತಾನಿನ (ದೆವ್ವದ) ಕಾಲಿಗೆ ಬೇಡಿಗಳು ಬೀಳುತ್ತದೆಂದೂ ಮುಸ್ಲಿಮರಲ್ಲಿ ನಂಬಿಕೆ ಇದೆ. ಈ ತಿಂಗಳಲ್ಲಿ ಉಪವಾಸವನ್ನಾಚರಿಸಿದ ಎಲ್ಲರ ತಪ್ಪುಗಳನ್ನು ದೇವರು ಕ್ಷಮಿಸುತ್ತಾನೆ.ಈ ತಿಂಗಳಲ್ಲಿ ಮುಸ್ಲಿಮರು 'ತರಾವಿ' ನಮಾಜ್‌ಅನ್ನು ಸಲ್ಲಿಸುತ್ತಾರೆ. ಇದು ವಿಶಿಷ್ಟವಾದ ಪ್ರಾರ್ಥನೆ. ಈ ಪ್ರಾರ್ಥನೆ ಪ್ರತಿದಿನ ಸುಮಾರು ರಾತ್ರೆ ಎಂಟು ಗಂಟೆಯಿಂದ ಹತ್ತು ಗಂಟೆಯ ವರೆಗೆ ಒಂದೇ ಸಮನೆ ನಡೆಯುತ್ತದೆ. ಉಪವಾಸದ ತಿಂಗಳಲ್ಲಿ ವ್ಯಕ್ತಿಗಳ ಚಾರಿತ್ರಿಕ ಶುದ್ಧಿ ಮತ್ತು ಶಾರೀರಿಕ ಹಾಗೂ ಮಾನಸಿಕ ಸಾಧನೆ, ತಪಸ್ಸು ಇತ್ಯಾದಿಗಳಿಗೆ ಹೆಚ್ಚು ಪ್ರಾಶಸ್ತ್ಯ.

ರಂಜಾನಿನ ಉಪವಾಸ ೩೦ ದಿವಸಗಳನಂತರ ಮುಗಿಯುತ್ತದೆ. ಬಾಲಚಂದ್ರನನ್ನು ಕಂಡ[12] ಮಾರನೆಯ ದಿವಸ ಈ ಹಬ್ಬವನ್ನು ಆಚರಿಸುತ್ತಾರೆ. ಆ ದಿನ ಬೆಳಿಗ್ಗೆ ಸ್ನಾನವಾದ ಕೂಡಲೇ 'ಸದಕಾ' ಅಥವಾ ದಾನವನ್ನು ಕೊಡುತ್ತಾರೆ. ತಮ್ಮ ಸಂಪಾದನೆಯಲ್ಲಿ ನಲವತ್ತನೆಯ ಒಂದಂಶವನ್ನು ಧಾನ್ಯ, ಬಟ್ಟೆ, ಹಣದ ರೂಪದಲ್ಲಿ ಬಡಬಗ್ಗರಿಗೂ, ಫಕೀರರಿಗೂ ದಾನಕೊಡಬೇಕೆಂಬ ನಿಯಮವಿದೆ. ದಾನ ಧರ್ಮಮಾಡಿದ ಮೇಲೆ ಗಂಡಸರು ಮತ್ತು ಮಕ್ಕಳು ನಗರದ ಹೊರಗಿರುವ 'ಈದ್‌ಗಾಹ್' (ಪ್ರಾರ್ಥನಾಸ್ಥಳ)ಗೆ ನಮಾಜು ಮಾಡುವುದಕ್ಕಾಗಿ ಮಡಿಬಟ್ಟೆ ಧರಿಸಿ ಹೊರಡುತ್ತಾರೆ. ಪ್ರಾತಃಕಾಲ ಸುಮಾರು ಹತ್ತು ಗಂಟೆಯ ವೇಳೆಗೆ ಸಾಮೂಹಿಕ ಪ್ರಾರ್ಥನೆ ನಡೆಯುತ್ತದೆ. ಈ ಪ್ರಾರ್ಥನೆ ನಿಜವಾಗಿಯೂ ದರ್ಶನೀಯ ವಾಗಿರುತ್ತದೆ. ನೂರಾರು ಜನ ಒಟ್ಟಿಗೆ ಸೇರಿ ತಲೆ ತಗ್ಗಿಸುವುದು, ಕುಳಿತುಕೊಳ್ಳುವುದು, ಏಳುವುದು ಇತ್ಯಾದಿ ಕಾರ್ಯಕ್ರಮ ಅಸಾಧಾರಣ ಸಂಘಟನೆಯ ಪ್ರತೀಕವಾಗಿದೆ. ನಮಾಜಿನನಂತರ ಅರಬ್ಬಿ ಹಾಗೂ ಉರ್ದು ಭಾಷೆಗಳಲ್ಲಿ ಇಮಾಂರವರು ರಂಜಾನ್ ಹಬ್ಬದ ಮಹತ್ವದ ಬಗ್ಗೆ ಉಪನ್ಯಾಸ ಮಾಡಿ ನೆರೆದ ಜನರಿಗೆ ಸದ್ಬೋಧನೆಮಾಡುತ್ತಾರೆ.

ಬಕ್ರೀದ್

ಬಕ್ರೀದ್ ಮುಸ್ಲಿಮರ ಅತಿ ದೊಡ್ಡ ಮತ್ತು ಪವಿತ್ರ ಹಬ್ಬ. ಇದು ಅರಬ್ಬೀ ವರ್ಷದ ಕೊನೆಯ ತಿಂಗಳಾದ ಜಿಲ್‌ಹಜ್ಜದ ೯-೧೦ನೆಯ ದಿವಸ ಬರುತ್ತದೆ. ಇದನ್ನು 'ಈದ್-ಎ-ಜುಹಾ', 'ಈದುಲ್-ಅಜ್‌ಹಾ', 'ಈದುಜ್ಜುಹ' ಅಥವ 'ಬಲಿದಾನ ಮಾಡುವ ಹಬ್ಬ'ವೆಂದು ಕರೆಯುತ್ತಾರೆ. ತುರ್ಕಿ ಮತ್ತು ಈಜಿಪ್ಟ್ ದೇಶಗಳಲ್ಲಿ ಇದನ್ನು 'ಬೈರಾಂ' ಎಂದೂ ಪರ್ಶಿಯಾ, ಇರಾನ್ ದೇಶಗಳಲ್ಲಿ 'ಈದ್-ಎ-ಖುರ್ಬಾನ್' ಎಂದೂ, ಇಂಡಿಯಾದಲ್ಲಿ 'ಬಕ್ರೀದ್' ಎಂದೂ ಕರೆಯುತ್ತಾರೆ. ಇದನ್ನು 'ಈದೇ ಕಬೀರ್' ಅಂದರೆ 'ದೊಡ್ಡ ಹಬ್ಬ'ವೆಂದೂ ಕರೆಯುತ್ತಾರೆ. ಪ್ರಾಣಿಯನ್ನು ಬಲಿಕೊಡುವುದು ಈ ಹಬ್ಬದ ಒಂದು ವಿಶಿಷ್ಟ ಆಚರಣೆ.

ಇಸ್ಲಾಂ ಧರ್ಮದ ಉದಯದ ಮೊದಲಿಂದಲೇ ಈ ಹಬ್ಬದ ಆಚರಣೆ ನಡೆದು ಬಂದಿದೆ. ಇಸ್ಲಾಂನಲ್ಲಿ ಇದು ಹೇಗೆ ಸೇರಿತು ಎಂಬ ವಿಚಾರದಲ್ಲಿ ಎರಡು ಬಗೆಯ ಅಭಿಪ್ರಾಯಗಳಿವೆ "ಪಾಶ್ಚಾತ್ಯ ಇತಿಹಾಸಕಾರರ ಪ್ರಕಾರ ಹಜರತ್ ಪೈಗಂಬರ್‌ರವರು ಮಕ್ಕಾದಿಂದ ಮದೀನಕ್ಕೆ ಬಂದು ನೆಲಸಿದಾಗ ಯಹೂದಿಗಳು, 'ಜಿಲ್‌ಹಜ್ಜ' ಎಂಬ ಹನ್ನೆರಡನೆಯ ಮಾಸದ ಹತ್ತನೆಯ ತಾರೀಖಿನಂದು ಪ್ರಾಯಶ್ಚಿತ್ತದ ರೂಪದಲ್ಲಿ ಉಪವಾಸ ಮಾಡುವುದನ್ನು ಕಂಡರು. ಇದರ ವಿಚಾರದಲ್ಲಿ ಫಿರ್‌ಜಾನ್ ಎಂಬ (ಈಜಿಪ್ಟ್) ಪ್ರಸಿದ್ಧ ಅತ್ಯಾಚಾರಿ ಬಾದಷಹನ ಕೈಕೆಳಗೆ ಪೀಡೆಗೊಳಗಾದ ಮೂಸಾ ಮತ್ತು ಇಸ್ರೈಲ್ ದೇಶದ ಮಕ್ಕಳ ಬಂದವಿಮೋಚನೆಯಾದ ಪ್ರಯುಕ್ತ ಈ ಹಬ್ಬವನ್ನು ಆಚರಿಸಲಾಗುತ್ತಿದೆ ಎಂದು ತಿಳಿಯಿತು. ಯಹೂದ್ಯರು ಈ ಹಬ್ಬವನ್ನು 'ವಲ್ಲಾಂದನ್' ಎನ್ನುತ್ತಾರೆ. ಹಜರತ್ ಮೂಸಾರವರ ಮೇಲೆ ಯಹೂದ್ಯರಿಗಿಂತ ನಮ್ಮ ಅಧಿಕಾರ ಹೆಚ್ಚಿನದು ಎಂದು ಮೊಹಮ್ಮದ್ ಪೈಗಂಬರ್‌ರವರು ತಿಳಿಸಿದರು.

---

12 ಇಸ್ಲಾಂನ ಕಾಲಗಣನೆ ಚಂದ್ರದರ್ಶನವನ್ನವಲಂಬಿಸಿದೆ. ಅದರ ಪ್ರಕಾರ ಚಂದ್ರದರ್ಶನದೊಂದಿಗೆ ರಂಜಾನಿನ ಉಪವಾಸ ಪ್ರಾರಂಭವಾಗುತ್ತದೆ ಮತ್ತು ಚಂದ್ರದರ್ಶನವಾದ ಮೇಲೆಯೇ ಮುಗಿಯುತ್ತದೆ.

ಅವರು ಯಹೂದ್ಯರೊಂದಿಗೆ ತಾವೂ ಸಹಾ ಉಪವಾಸ ಮಾಡಿದುದಲ್ಲದೆ ತಮ್ಮ ಅನುಯಾಯಿಗಳಿಗೂ ಉಪವಾಸವನ್ನಾಚರಿಸುವುದಕ್ಕೆ ಆದೇಶವಿತ್ತರು. ಅಮೇಲೆ ಯಹೂದ್ಯರಿಗೂ ಮುಸಲ್ಮಾನರಿಗೂ ಪರಸ್ಪರ ಕಲಹವುಂಟಾದುದರಿಂದ ಹಜರತ್ ಮೊಹಮ್ಮದ್ ಪೈಗಂಬರ್‌ರವರು ಉಪಕಾರಕ್ಕೆ ಬದಲಾಗಿ ಬಲಿದಾನದ ಪದ್ಧತಿಯನ್ನು ಜಾರಿಗೆ ತಂದರು. ಈ ರೀತಿ 'ಈದ್–ಎ–ಸುಹಾ' ಹಬ್ಬ ಪ್ರಾರಂಭವಾಯಿತು.[13]

ಆದರೆ ಮುಸ್ಲಿಂ ಇತಿಹಾಸಕಾರರು ಪಾಶ್ಚಾತ್ಯ ಇತಿಹಾಸಕಾರರ ಈ ಅಭಿಪ್ರಾಯವನ್ನು ಒಪ್ಪುವುದಿಲ್ಲ. ಹಜರತ್ ಇಬ್ರಾಹೀಮರ ಕಾಲದಿಂದಲೂ ಈ ಹಬ್ಬ ನಡೆದು ಬಂದಿದೆ ಎಂದು ಅವರು ವಾದಿಸುತ್ತಾರೆ. ಧರ್ಮಪ್ರವಾದಿಗಳಾದ ಹಜರತ್ ಇಬ್ರಾಹೀಮ್ ಖಲೀಲುಲ್ಲಾಹ್‌ರವರ ಸತ್ವ ಪರೀಕ್ಷೆ ಮಾಡಲು ಅಲ್ಲಾಹನು ಒಮ್ಮೆ ಅವರಿಗೆ "ನಿನ್ನ ಅತಿ ಪ್ರೀತ್ಯಾದರಗಳಿಗೆ ಪಾತ್ರವಾದ ಜೀವ ಒಂದನ್ನು ಬಲಿ ಕೊಡಬಲ್ಲೆಯೊ?" ಎಂದು ಕೇಳಿದನು. ಪಿತೃವಾತ್ಸಲ್ಯದ ಪ್ರತೀಕವೆನಿಸಿದ ತಮ್ಮ ಏಕೈಕ ಪುತ್ರನಾದ ಇಸ್ಮಾಯಿಲ್ ಜಬಿಯುಲ್ಲಾಹ್‌ರನ್ನೇ ಬಲಿದಾನ ಮಾಡಬೇಕೆಂಬುದು ಭಗವಂತನ ಇಚ್ಛೆ ಎಂದು ಅವರಿಗೆ ಮನವರಿಕೆಯಾಯಿತು. ಮಗನನ್ನು ಬಲಿಕೊಡಲು ಸಿದ್ಧರಾದರು. ಆದರೆ ಅನೇಕ ಸಲ ಪ್ರಯತ್ನಪಟ್ಟರೂ ಮಗನ ಗಂಟಲಿನ ಮೇಲೆ ಕತ್ತಿ ಹರಿಯಲಿಲ್ಲ. ಇದನ್ನು ಕಂಡ ಮಗ ಇಸ್ಮಾಯಿಲ್ ಜಬೀಯುಲ್ಲಾಹ್. ತನ್ನ ತಂದೆಗೆ ಹೀಗೆ ಹೇಳಿದರು: "ಅಪ್ಪಾ ನಿನ್ನನ್ನು ಪುತ್ರ ವಾತ್ಸಲ್ಯ ಕಾಡಿಸುತ್ತಿದೆ. ಆದ್ದರಿಂದ ಕಣ್ಣಿಗೆ ಬಟ್ಟೆಯನ್ನು ಕಟ್ಟಿಕೊಂಡು ಕತ್ತಿ ಹರಿಸು". ಇದನ್ನು ಕೇಳಿದ ತಂದೆ ಇಬ್ರಾಹೀಂ ಖಲೀಲುಲ್ಲಾಹ್‌ರವರು ತಮ್ಮ ಕಣ್ಣುಗಳಿಗೆ ಪಟ್ಟಿಯನ್ನು ಕಟ್ಟಿ 'ಬಿಸ್ಮಿಲ್ಲಾ' ಎಂದು ಹೇಳಿ ಒಮ್ಮೆಲೇ ಮಗನ ಮೇಲೆ ಕತ್ತಿಯನ್ನು ಜೋರಾಗಿ ಹರಿಸಿದರು. ಆದರೆ ತಕ್ಷಣವೇ ದೇವದೂತ ಜಿಬ್ರಾಯಿಲ್ (Gabrial) ಬಂದು ಇಸ್ಮಾಯಿಲ್‌ರನ್ನು ಒತ್ತಟ್ಟಿ ಅವರ ಬದಲು ಒಂದು ಕುರಿಯನ್ನು ಇಡುತ್ತಾನೆ. ಈ ಕಾರಣ ಬಲಿ ಕೊಡಲ್ಪಟ್ಟ ಜೀವ ಒಂದು ಕುರಿ ಆಗುತ್ತದೆ.[14] ಇದು ಬಕ್ರೀದ್ ಹಬ್ಬದ ಹಿನ್ನೆಲೆ.

ಒಟ್ಟಿನಲ್ಲಿ ಜೀವಜಂತುವಿನ ಬಲಿದಾನದ ಮೂಲಕ ಈ ಹಬ್ಬ ಆಚರಿಸಲ್ಪಡುತ್ತದೆ. ಬಲಿಯಾದ ಜಂತು ಮುಂದೆ ಪರೋಕ್ಷವಾಗಿ ಸಹಕಾರಿಯಾಗುತ್ತದೆ. ಪ್ರಪಂಚವು ಕೊನೆಗೊಳ್ಳುವಾಗ ಒಂದು ದೊಡ್ಡ ಪ್ರಳಯವಾಗುತ್ತದೆ. ಇದನ್ನು 'ಖಿಯಾಮತ್' ಎನ್ನುವರು. ಆಗ ಮಾನವನ ಒಳ್ಳೆಯ ಹಾಗೂ ಕೆಟ್ಟ ನಡತೆಗಳ ತುಲಾಭಾರವಾಗುತ್ತದೆ. ಒಂದು ವೇಳೆ ಕೆಟ್ಟ ನಡತೆಗಳ ತಕ್ಕಡಿಯ ಭಾಗ ಭಾರವಾಗಿ ಕೆಳಗಿಳಿದರೆ, ಬಲಿಕೊಡಲ್ಪಟ್ಟ ಜಂತು ಕೂಡಲೇ ಬಂದು ಅತ್ತ ಕಡೆಯ ಭಾಗದಲ್ಲಿ ತನ್ನ ಭಾರವನ್ನು ಬಿಟ್ಟು ನೆರವು ನೀಡುತ್ತದೆ ಎಂಬುದಾಗಿ ನಂಬಿಕೆ ಇದೆ. ಆದುದರಿಂದಲೇ ಬಕ್ರೀದ್ ಹಬ್ಬದಲ್ಲಿ ಮುಸ್ಲಿಮರು ಕುರಿ. ಒಂಟೆಗಳನ್ನು ಹೆಚ್ಚು ಹೆಚ್ಚಾಗಿ ಬಲಿಕೊಡುತ್ತಾರೆ. ಇದನ್ನು 'ಖುರ್ಬಾನ್' ಎಂದು ಕರೆಯುತ್ತಾರೆ. ಈ ರೀತಿ ಬಲಿಕೊಟ್ಟ ಪ್ರಾಣಿಯ ಮಾಂಸವನ್ನು ಮೂರು ಭಾಗಗಳಾಗಿ ವಿಂಗಡಿಸಿ ಒಂದು ಭಾಗವನ್ನು ನೆಂಟರಿಗೆ ಕೊಡುತ್ತಾರೆ. ಎರಡನೆಯ ಭಾಗವನ್ನು ಬಡವರಿಗೆ ಹಂಚುತ್ತಾರೆ. ಉಳಿದ ಮೂರನೆಯ ಭಾಗವನ್ನು ಮನೆಯವರಿಗಾಗಿ ಉಳಿಸಿಕೊಳ್ಳುತ್ತಾರೆ. ಇಬ್ರಾಹೀಮ್‌ರವರ ಆ ದೈವಾಜ್ಞೆ ಪಾಲನೆಯ ನೆನಪನ್ನು ಬಲಿದಾನದ ಮೂಲಕ ಆಚರಿಸುತ್ತಾರೆ ಎನ್ನಬಹುದು.

ಈ ಹಬ್ಬದ ದಿವಸ ಮುಸ್ಲಿಮರು ರಂಜಾನ್ ಹಬ್ಬದ ಹಾಗೆಯೇ 'ಈದ್‌ಗಾಹ್'ಗೆ ಹೋಗಿ ಪ್ರಾರ್ಥನೆ ಇತ್ಯಾದಿಗಳನ್ನು ಸಲ್ಲಿಸುತ್ತಾರೆ.

ಒಟ್ಟಿನಲ್ಲಿ ಮುಸ್ಲಿಮರಲ್ಲಿ ಹಬ್ಬಗಳ ಆಚರಣೆಯಲ್ಲಿ ಒಂದು ಬಗೆಯ ವೈಶಿಷ್ಟ್ಯವಿದೆ. ಅವು ಆ ಜನರಲ್ಲಿ ಒಂದು ಬಗೆಯ ಚೈತನ್ಯವನ್ನೂ. ಸೋದರ ಭಾವನೆಯನ್ನೂ ಉಂಟುಮಾಡುತ್ತವೆ.ಈದ್‌ಗಾಹ್

---

13 ಮುಸ್ಲಿಮ್ ಉತ್ಸವಗಳು ಮತ್ತು ಸಂಸ್ಕಾರಗಳು, ಪುಟ. ೩೨

14 ಅರಬಸ್ಥಾನದ ಮಕ್ಕಾ ಕ್ಷೇತ್ರದಲ್ಲಿರುವ 'ಮುನಾ' ಎಂಬ ಸ್ಥಳದಲ್ಲಿ ಹಜರತ್ ಇಬ್ರಾಹೀಂ ಖಲೀಲುಲ್ಲಾಹ್‌ರವರು ಮೊದಲನೆಯ ಬಲಿದಾನ ಮಾಡಿದುದು.

ಗಳಲ್ಲಿ ಇಮಾಮರ ಹಿಂದೆ ಸಾಲುಸಾಲಾಗಿ ನಿಂತು 'ಅಲ್ಲಾಹು ಅಕ್ಬರ್'. 'ಅಲ್ಲಾಹು ಅಕ್ಬರ್' ಎಂದು ಘೋಷಣೆ ಮಾಡುತ್ತಾ ಸಂಪ್ರಾಹಕವಾಗಿ ಎಲ್ಲರೂ ತಲೆಬಾಗುವ, ದೇವರಿಗೆ ಶರಣು ಹೋಗುವ ಆ ಅಭೂತಪೂರ್ವ ದೃಶ್ಯ ರೋಮಾಂಚನಕಾರಿಯಾಗಿಯೂ, ನಯನ ಮನೋಹರವಾಗಿಯೂ ಇರುತ್ತದೆ. ನಮಾಜ್ ನಂತರ ಒಬ್ಬರನ್ನೊಬ್ಬರು ಆಲಿಂಗನಮಾಡಿಕೊಳ್ಳುವುದು, ಕೈಕುಲುಕುವುದು. 'ಈದ್ ಮುಬಾರಕ್' ಅಂದರೆ 'ಈ ಹಬ್ಬ ನಿಮಗೆ ಶುಭವನ್ನುಂಟು ಮಾಡಲಿ' ಎನ್ನುವುದು ಗಮನಾರ್ಹ. ಈ ಸಂದರ್ಭದಲ್ಲಿ ಬಡವ-ಬಲ್ಲಿದ, ಶತ್ರು-ಮಿತ್ರ, ಪರಿಚಿತ-ಅಪರಿಚಿತ ಎಂಬ ಯಾವ ಭೇದಭಾವವೂ ಇರುವುದಿಲ್ಲ. ನಾವೆಲ್ಲರೂ ಸಹೋದರರು. ಇಡೀ ಸಮಾಜವೂ ಒಂದೇ, ಅವಿಭಾಜ್ಯ ಎಂಬ ಭಾವನೆ ಎಲ್ಲರ ಮನಸ್ಸಿನಲ್ಲೂ ಉಂಟಾಗುವುದು.

ರಂಜಾನ್ ಮತ್ತು ಬಕ್ರೀದ್ ಹಬ್ಬಗಳಲ್ಲಿ ನಮಾಜಿನಿಂದ ಮನೆಗಳಿಗೆ ಮರಳಿದಾಗ ಅವರ ಸಹೋದರಿಯರು ಸುಣ್ಣ ಮಿಶ್ರಿತ ಅರಿಶಿನದ ನೀರಿನ ಪಾತ್ರೆಗಳನ್ನು ಕೈಯಲ್ಲಿ ಹಿಡಿದು ಬಾಗಿಲ ಬಳಿಯೇ ಕಾದು ನಿಂತಿರುತ್ತಾರೆ. ತುಂಬಾ ಉತ್ಸಾಹದಿಂದಿರುವ ಇವರಿಗೆ ತಮ್ಮ ಅಣ್ಣ ತಮ್ಮಂದಿರಿಗಾದ ದೃಷ್ಟಿಯನ್ನು ಹೋಗಲಾಡಿಸಲು ಏನು ಗುಲ್ಲು ಅವರದು! ದೃಷ್ಟಿ ತೆಗೆಯುವ ನೆಪದಲ್ಲಿ ಅವರು ಹಬ್ಬದ 'ಈದೀ' ಅಂದರೆ ಇನಾಂ ವಸೂಲು ಮಾಡದೆ ಬಿಡುವುದೇ ಇಲ್ಲ. ಪ್ರಾರ್ಥನೆಯಿಂದ ಹಿಂತಿರುಗಿದ ನಂತರ ಕಿರಿಯರು ಸಾಮಾನ್ಯವಾಗಿ ತಮ್ಮ ತಂದೆ, ತಾಯಿ, ಅಣ್ಣ, ಅಕ್ಕಂದಿರು ಮೊದಲಾದ ಹಿರಿಯರ ಬಳಿ ಹೋಗಿ ಅವರ ಪಾದಗಳನ್ನು ಮುಟ್ಟಿ ನಮಸ್ಕರಿಸುವುದು ಮುಸ್ಲಿಮರಲ್ಲಿ ಒಂದು ಸಾಂಪ್ರದಾಯ. ಆಗ ಹಿರಿಯರು ಅವರನ್ನು ಯಥೇಚ್ಛವಾಗಿ ಹರಸುತ್ತಾರೆ. ಈ ಹಬ್ಬಗಳಲ್ಲಿ ಎಲ್ಲರಿಗೂ ಎಲ್ಲಾ ಮನೆಗಳಲ್ಲೂ ಆಮಂತ್ರಣ. ಸ್ವಲ್ಪವಾದರೂ ತಿನ್ನಲೇಬೇಕು. ಉಕ್ಕಿ ಬರುವ ಆನಂದವನ್ನು ಎಲ್ಲರೂ ಹಂಚಿಕೊಳ್ಳಬೇಕು. ಹಬ್ಬದ ದಿನ ಆನಂದ ಪಡೆಯದವನು ಅಭಾಗ್ಯನೆಂದು ಹೇಳಿಕೊಳ್ಳುವುದು ಮುಸ್ಲಿಮರ ಒಂದು ವಾಡಿಕೆ.

ಎಚ್ಚೆಸ್ಕೆ

ಚಿಂತನ

I

ಮಾತು–ಮೌನ

ಮಾತು ಬಲ್ಲವನಿಗೆ ಜಗಳವಿಲ್ಲ. ಊಟ ಬಲ್ಲವನಿಗೆ ರೋಗವಿಲ್ಲ. ಇದು ಒಂದು ಹಳೆಯ ಗಾದೆ.

ಗಾದೆಯೆಂದು ಇದನ್ನು ಬೀಳುಗಳೆಯುವಂತಿಲ್ಲ. ಏಕೆಂದರೆ ಗಾದೆಗಳೂ ಸುಭಾಷಿತಗಳೇ, ಹೆಪ್ಪುಗಟ್ಟಿದ ಅನುಭವಗಳೇ, ವಿವೇಕದ ರಸಬಿಂದುಗಳೇ.

ಮಾತಾಡುವುದು ಹೇಗೆಂಬುದನ್ನು ಕಲಿಸುವ ಪುಸ್ತಕಗಳು ನಮ್ಮಲ್ಲಿ ಹಲವು ಉಂಟು. ಏಕೆಂದರೆ ಈಗಿನ ಕಾಲದಲ್ಲಿ ಮಾತಿಗೇ ಬೆಲೆ. ಪ್ರಜಾಪ್ರಭುತ್ವಕ್ಕಂತೂ ಮಾತೇ ತಳಹದಿ. ನಿಮ್ಮ ತಲೆಯಲ್ಲೆಷ್ಟು ವಿಚಾರ ತುಂಬಿಟ್ಟುಕೊಂಡರೇನು ಫಲ, ಅದನ್ನು ಅಭಿವ್ಯಕ್ತಗೊಳಿಸುವ ಸಾಮರ್ಥ್ಯ ಇಲ್ಲದಿರುವ ವರೆಗೆ? ಓದು, ಬರಹ, ಮಾತುಗಾರಿಕೆ—ಇವು ಮೂರೂ ಮಾನವ ವ್ಯಕ್ತಿತ್ವದ ಮೂರು ಮುಖಗಳಂತೆ. ಓದಿನ ಸಾರ್ಥಕತೆ ಬರಹದಲ್ಲಿ, ಮಾತಿನಲ್ಲಿ. ಬರಹದಿಂದ ನಿಖರತೆ, ನಿಷ್ಕೃಷ್ಟತೆ ಪ್ರಾಪ್ತವಾದರೆ, ಮಾತಿನಿಂದ ಸದಾ ಸನ್ನದ್ಧವಾಗಿರುವ ಶಕ್ತಿ ಲಭ್ಯವಾಗುತ್ತದೆ. ಸಮಯೋಚಿತವಾಗಿ ಮಾತಾಡಬಲ್ಲವನು ಎಂಥ ಸಂದರ್ಭದಲ್ಲೂ ಗೆದ್ದು ಬರುತ್ತಾನೆ. ಬಾಯಿದ್ದವನು ಬರದಲ್ಲೂ ಬದುಕಿದ, ಎಂದು ಹೇಳಿರುವ ಮಾತು ಸುಳ್ಳಲ್ಲ.

ಒಳ್ಳೆಯ ಮಾತುಗಾರನಾದವನು ಮಾತಾಡುವುದನ್ನು ಹೇಗೆ ಬಲ್ಲವನಾಗಿರಬೇಕೋ ಮಾತಾಡದೆ ಇರುವುದನ್ನೂ ಹಾಗೇ ಬಲ್ಲವನಾಗಿರಬೇಕು. ಏಕೆಂದರೆ ಚತುರ ಮಾತುಗಾರನಿಗೆ ಅವನ ಮಾತೇ ಬಂಡವಾಳ, ವ್ಯಾಪಾರದ ಸರಕು. ಬಂಡವಾಳವನ್ನು, ಮಾರಾಟದ ಮಾಲನ್ನು ವ್ಯರ್ಥ ಮಾಡುವುದುಂಟೆ? ಅದನ್ನು ಪುಕ್ಕಟೆಯಾಗಿ ಯಾರಿಗೂ ಎಂದೂ ಕೊಡಬಾರದು. ಅದೊಂದು ಅಮೂಲ್ಯ ವಸ್ತು. ಅದರ ಬಳಕೆಯಲ್ಲಿ ಔಚಿತ್ಯ ಅತ್ಯಗತ್ಯ. ಆದ್ದರಿಂದ. ಮಾತಾಡದಿರುವುದೇ ಅನೇಕ ವೇಳೆ ಮಾತಾಡುವುದಕ್ಕಿಂತ ಹೆಚ್ಚು ಪರಿಣಾಮಕರ. ವ್ಯಾಪಾರಿ ತನ್ನ ಸರಕನ್ನು ತಡೆಹಿಡಿದು. ಅದರ ಬೆಲೆ ಏರುವ ಹಾಗೆ ಮಾಡುವುದಿಲ್ಲವೆ? ಅಲ್ಲಿ ಅವನದು ದುರುದ್ದೇಶವಿರಬಹುದು. ಅವನಿಗೆ ಅತಿಯಾದ ಲಾಭ ದೃಷ್ಟಿ ಇರಬಹುದು. ಆದರೆ ಇಲ್ಲಿ ಹಾಗಲ್ಲ. ಮೌನದಿಂದಲೇ ಮಾತಿಗೆ ಬೆಲೆ. ಮೌನದ ನಡುವೆ ವಿರಳವಾಗಿ ಹೊರಬಿದ್ದ ಮಾತು ಕೂರಂಬಿನಂತೆ ತೀಕ್ಷ್ಣ; ಕೇಳುಗರ ಎದೆ ಹೊಗುವ ಚೂಪು. ಮೊನಚು ಅದಕ್ಕೆ. ಮಾತು ಹೇಳಲಾಗದ್ದನ್ನು ಮೌನವೇ ಅಭಿವ್ಯಕ್ತಿಸುವುದುಂಟು—Silence is golden. ಮೌನವೇ ಚಿನ್ನ. ದೇವರು ಹೇಗಿದ್ದಾನೆ?. ಎಂದು ಉಪನಿಷತ್ಕಾಲದ ಒಬ್ಬ ಶಿಷ್ಯ ತನ್ನ ಗುರುವನ್ನು ಕೇಳಿದನಂತೆ. ಗುರು ಮೌನವಾಗಿದ್ದ. ಶಿಷ್ಯನಿಗೆ ಅರ್ಥವಾಯಿತು. ಮಾತಿನ ಮೇರೆಯನ್ನು ಮೀರಿದ–ಮಾತಿನಿಂದ ಹೇಳಲಾಗದ–ರಹಸ್ಯವನ್ನು ಮೌನವೇ ಹೊರಗೆಡವಬೇಕು. Silence is one great art of conversation –ಎನ್ನುತ್ತಾನೆ ಹ್ಯಾಜ್ಲಿಟ್. ಸಂಭಾಷಣೆಯಲ್ಲಿ ಮೌನವೇ ಮಹಾ ಕಲೆ.

ಮೌನವಾಗಿರುವುದೆಂದರೆ ಬಾಯಿ ಹೊಲಿದುಕೊಳ್ಳುವುದೇನೂ ಅಲ್ಲ. ತುಟಿಯನ್ನಂಟಿಸಿಕೊಳ್ಳುವುದು ಮೌನವಲ್ಲ. ಮಾತಾಡುವ ಸಾಮರ್ಥ್ಯ ಇದ್ದೂ ಆಡದಿರುವವನೇ ಮೌನಿ, ಎನ್ನುತ್ತಾರೆ ಗಾಂಧೀಜಿ. ಮಿತಭಾಷಿಯ ಮಾತು ಎಂದೂ ವಿಚಾರಹೀನವಲ್ಲ. ಅವನು ಪ್ರತಿಯೊಂದು ಪದವನ್ನೂ ತೂಕ ಮಾಡಿ ಆಡುತ್ತಾನೆ. ಸತ್ಯಾನ್ವೇಷಿಗೆ ಮೌನ ಅತ್ಯಂತ ಸಹಾಯಕ. ಮೌನದಲ್ಲಿ ಆತ್ಮದ ಹಾದಿ ನಿಚ್ಚಳವಾಗಿ ಕಾಣುತ್ತದೆ. ಅಜ್ಞಾತವಾಗಿದ್ದುದು ಜ್ಞಾತವಾಗುತ್ತದೆ. ಸತ್ಯಾರಾಧಕನ ಆಧ್ಯಾತ್ಮಿಕ ಸಾಧನೆಯಲ್ಲಿ ಮೌನವೂ ಒಂದು ಭಾಗ. ಉತ್ಪ್ರೇಕ್ಷೆ. ಸತ್ಯದ ದಮನ. ಅಥವಾ ಅದರ ವಿಕೃತಿ–ಇವು ಮಾನವ ಪ್ರವೃತ್ತಿ. ಈ ಪ್ರವೃತ್ತಿಯನ್ನು ಗೆಲ್ಲಲು ಮೌನ ಅವಶ್ಯ. ಇದು ಗಾಂಧಿಯವರ ಮಾತು.

ಶ್ರೀ ರಾಮಕೃಷ್ಣ ಪರಮಹಂಸರು ಮೌನದ ಮಹತ್ತ್ವದ ವಿಚಾರವಾಗಿ ಅನೇಕ ಸುಂದರ ಉಪಮೆಗಳನ್ನು ಹೇಳಿದ್ದಾರೆ: ಕೊಡದಲ್ಲಿ ನೀರು ತುಂಬಿಕೊಳ್ಳುತ್ತಿರುವಾಗ ಬುಳುಬುಳು ಶಬ್ದವಾಗುತ್ತದೆ. ತುಂಬಿದ ಕೂಡಲೇ ಆ ಸದ್ದು ನಿಲ್ಲುತ್ತದೆ. ಶಾಸ್ತ್ರವನ್ನೋದಿದವರು ಮಾತಿನ ಮಳೆಗರೆಯುವ ವಾದದಲ್ಲಿ ನಿರತರಾಗಿರುತ್ತಾರೆ. ಜ್ಞಾನಿಗಳು ಮೌನವಾಗಿ ದೇವರ ಸಾನ್ನಿಧ್ಯವನ್ನನುಭವಿಸುತ್ತಾ ಆನಂದದಲ್ಲಿ ಮುಳುಗಿ ತೇಲುತ್ತಾರೆ. ಔತಣಕ್ಕೆ ಜನರು ಕೂಡಿದಾಗ ಗಿಜಿಗಿಜಿ ಸದ್ದು. ಊಟ ಆರಂಭವಾದ ಕೂಡಲೇ ನಿಶ್ಶಬ್ದ. 'ಮೌನೇನ ಕಲಹಂ ನಾಸ್ತಿ'. ಊಟ ಮುಗಿದೊಡನೆಯೇ ಸದ್ದಿಲ್ಲದ ನಿದ್ದೆ. ವಾದ ಪ್ರತಿವಾದಗಳೆಲ್ಲಾ ದೇವರನ್ನು ನೋಡುವ ವರೆಗೆ. ದೇವರ ದರ್ಶನವಾದೊಡನೆಯೇ ಮಾತೇ ಮೂಕ. ಅದೊಂದು ಅನಿರ್ವಚನೀಯವಾದ ಅನುಭವ. ಸಂತೆಯ ಹೊರಗಡೆ ನಿಂತಾಗ ಅಗಾಧವಾದ ಗದ್ದಲ ಕೇಳಿಬರುತ್ತದೆ. ಆದರೆ ಒಳಹೊಕ್ಕಾಗ ಗದ್ದಲದತ್ತ ನಮ್ಮ ಮನಸ್ಸು ಹರಿಯುವುದಿಲ್ಲ. ವ್ಯಾಪಾರದಲ್ಲಿ ತೊಡಗಿ ಸದ್ದನ್ನೆಲ್ಲ ಮರೆಯುತ್ತೇವೆ. ಭಕ್ತಿಯೂ ಹೀಗೆಯೇ. ದೇವರಿಗೆ ದೂರದಲ್ಲಿ ನಿಂತಾಗ ವಾದ–ಪ್ರತಿವಾದಗಳ ಕೂಗಾಟ. ಅವನನ್ನು ಸಮೀಪಿಸಿ ಅವನ ಸಾನ್ನಿಧ್ಯ ಪಡೆದಾಗ ವಾದವೆಲ್ಲಾ ಕರಗಿ ಮನಸ್ಸು ಆನಂದದಲ್ಲಿ ಲೀನವಾಗುತ್ತದೆ. ಬಾಣಲೆಯ ಕುದಿಯುವ ಎಣ್ಣೆಯಲ್ಲಿ ಪೂರಿಯನ್ನು ಹಾಕಿದೊಡನೆ ಅದು ಶಬ್ದ ಮಾಡುತ್ತದೆ. ಪೂರಿ ಪೂರ್ತಿ ಬೆಂದಾಗ ಸದ್ದು ಅಡಗುತ್ತದೆ. ಭಕ್ತನ ಹೃದಯ ಪಕ್ವವಾದಂತೆಲ್ಲಾ ಮಾತು ಮರೆಯಾಗುತ್ತದೆ. ಮೌನದ ಭಾಷೆ ಮಾತಿನದಕ್ಕಿಂತ ಮಿಗಿಲು. ಮೌನದ ಸವಿಯನ್ನು ಬಲ್ಲವರೇ ಬಲ್ಲರು.

11

ಆಸೆ

ಕೂರ್ಮನಂತೆ ಪ್ರಪಂಚವನ್ನು ಸದಾ ಎತ್ತಿ ನಿಲ್ಲಿಸಿರುವಂಥದು ಯಾವುದು?—ಎಂಬ ಪ್ರಶ್ನೆಗೆ ಒಂದೇ ಮಾತಿನ ಉತ್ತರವೆಂದರೆ 'ಆಸೆ'.

ಆಸೆಯೇ ದುಃಖಕ್ಕೆ ಮೂಲ—ಎಂದು ಅಧ್ಯಾತ್ಮ ಜೀವಿಗಳ ಅಭಿಪ್ರಾಯ. ಆಸೆಯ ಬುಡಕ್ಕೆ ಪೆಟ್ಟು ಕೊಟ್ಟಾಗಲೇ ಆತ್ಮನ ಉದ್ಧಾರ. ಎನ್ನುತ್ತಾರೆ ಇಂಥ ಜನ. ಪುರಂದರ ದಾಸರು ಹೇಳಿರುವ ಮಾತನ್ನು ಕೇಳಿಲ್ಲವೆ? 'ಇಷ್ಟು ದೊರಕಿದರೆ ಮತ್ತಿಷ್ಟು ಬೇಕೆಂಬಾಸೆ. ಅಷ್ಟು ದೊರಕಿದರು ಮತ್ತಷ್ಟರಾಸೆ. ಕಷ್ಟ ಬೇಡೆಂಬಾಸೆ. ಕಡುಸುಖವ ಕಾಂಬಾಸೆ. ನಷ್ಟ ಜೀವನದಾಸೆ ಪುರಂದರ ವಿಠಲ.'

ದಾಸರಿಗಿಂತ ಬಲು ಹಿಂದಿನವಾದ ಋಗ್ವೇದದಲ್ಲೂ ಆಸೆಯ ಮಾತು ಬಂದಿದೆ. ಅಲ್ಲಿ ಹೇಳಿರುವುದನ್ನು ಕೇಳಿ:

ಏಕಪಾದ್ಭೂಯೋ ದ್ವಿಪದೋ ವಿಚಕ್ರಮೇ
ದ್ವಿಪಾತ್ತ್ರಿಪಾದಮಭ್ಯೇತಿ ಪಶ್ಚಾತ್ ।
ಚತುಷ್ಪಾದೇತಿ ದ್ವಿಪದಾಮಭಿಸ್ವರೇ
ಸಂಪಶ್ಯನ್ಪಂಕ್ತೀರುಪತಿಷ್ಠಮಾನಃ ॥

ಒಂದು ಪಾಲು ಸಂಪತ್ತು ಇದ್ದವನು ಎರಡು ಪಾಲು ಸಂಪತ್ತಿದ್ದವನಿಂದ ಬೇಡುತ್ತಾನೆ. ಎರಡು ಪಾಲಿದ್ದವನು ಮೂರು ಪಾಲಿದ್ದವನಿಂದ, ಮೂರು ಪಾಲಿದ್ದವನು ನಾಲ್ಕು ಪಾಲಿದ್ದವನಿಂದ. ಹೀಗೆ, ಕಡಿಮೆ ಧನ ಉಳ್ಳವನು ತನಗಿಂತ ಹೆಚ್ಚು ಧನವಂತನಿಂದ ಸಂಪತ್ತು ಬೇಡುತ್ತಾನೆ. ಜಗತ್ತಿನ ಕ್ರಮವೇ ಹೀಗೆ. ಎಷ್ಟೆಷ್ಟು ದೊರಕಿದರೂ ಇನ್ನೂ ಅಷ್ಟಷ್ಟು ಬೇಕೆಂಬುದೇ ಲೋಕದ ರೀತಿ.

ಆಸೆಯೆಂಬುದು ಕೆಟ್ಟದ್ದು, ಅದರ ನಿರ್ಮೂಲನವಾಗಬೇಕು, ಎಂದು ಹಿಂದಿನಿಂದಲೂ ಹೇಳುತ್ತಲೇ ಬಂದಿದ್ದರೂ ಆಸೆ ಈ ಜೀವನದಲ್ಲಿ ಬೇರೂರಿಬಿಟ್ಟಿದೆ. ಭವದ ಬಳ್ಳಿಯೇ ಆಸೆ. ಚಾಣಕ್ಯ ತನ್ನ ದಾರಿಗೆ ಅಡ್ಡಲಾದ ಗರುಕೆಯನ್ನು ಬೇರು ಸಹಿತ ಕಿತ್ತ. ಆದರೆ ಅಗೆದಷ್ಟೂ ಬೆಳೆಯುತ್ತಲೇ ಇರುವುದು ಅದರ ಸ್ವಭಾವ. ನಮಗೆ ಗೊತ್ತಿಲ್ಲದೆಯೇ ಎಲ್ಲೋ ಅಡಗಿದ ಆಸೆಯ ಬೇರು ಮತ್ತೆ ಕೊನರುತ್ತದೆ.

ಕೊನೆಯಿಲ್ಲದ ಆಸೆಯೇ ಬಾಳಿನ ಆಸರೆ. ಆಸೆ ಇಲ್ಲದಾಗ ಬಾಳು ಮುಂದುಗಾಣದಾಗುತ್ತದೆ. ಪಶುಪಕ್ಷಿಗಳಾಗಲಿ. ಮಾನವನೇ ಆಗಲಿ—ಎಲ್ಲ ಪ್ರಾಣಿಗಳಿಗೂ ಆಸೆಯೇ ಮೂಲ. ಪ್ರಾಣಿಗಳಿಗೆಲ್ಲ ಮೂಲಭೂತವಾದದ್ದು ಆಹಾರದ ಆಸೆ. ಮಾನವನಿಗೂ ಅಷ್ಟೆ.

ಮನುಷ್ಯನಿಗೂ ಇತರ ಪ್ರಾಣಿಗಳಿಗೂ ಇರುವ ಮುಖ್ಯ ವ್ಯತ್ಯಾಸವೆಂದರೆ ಆಸೆಯ ಪ್ರಮಾಣದಲ್ಲಿ, ಎನ್ನಬಹುದು. ಪ್ರಾಣಿಗಳಿಗೆ ಹೊಟ್ಟೆ ತುಂಬಿದರೆ ಸದ್ಯಕ್ಕೆ ಸಂಪೂರ್ಣ ತೃಪ್ತಿ. ಮತ್ತೆ ಹಸಿವಾದಾಗಲೇ ಆಸೆ ಪ್ರತ್ಯಕ್ಷ. ಮಾನವನಿಗೂ ಒಂದು ಮಟ್ಟದಲ್ಲಿ ಹೀಗೆಯೇ. ಹಸಿದವನಿಗೆ ಹೊಟ್ಟೆ ತುಂಬ ಅನ್ನ ಹಾಕಿದರೆ ಅವನು ತೃಪ್ತನಾಗುತ್ತಾನೆ. ಭೂತ ತೃಪ್ತಿ ಎಂದರೆ ಇದೇ. ಅನ್ನದಾನಕ್ಕಿಂತ ಶ್ರೇಷ್ಠವಾದ ದಾನವಿಲ್ಲ, ಎನ್ನುವುದು ಈ ಕಾರಣದಿಂದಾಗಿ.

ಆದರೆ ಇಷ್ಟಕ್ಕೇ ನಿಲ್ಲುವುದಿಲ್ಲ, ಮಾನವನ ಆಸೆ. ದೈಹಿಕ ವಾಂಛೆಗಳಿಗೆಲ್ಲ ಒಂದು ಮಿತಿಯುಂಟು, ನಿಜ. ಕೆಲವು ಪದಾರ್ಥಗಳು ಹೆಚ್ಚುಹೆಚ್ಚಾಗಿ ದೊರಕಿದಂತೆ ಅವುಗಳ ಬಯಕೆ ಕಡಿಮೆಯಾಗುತ್ತ ಹೋಗುತ್ತದೆ. ಕೊನೆಗೆ ಒಂದು ಘಟ್ಟದಲ್ಲಿ ಆ ಪದಾರ್ಥಗಳು ಬೇಡವೇ ಬೇಡವೆನಿಸುತ್ತದೆ. ಅವನ್ನು ಕಂಡರೆ ಆ ಸಮಯದಲ್ಲಿ ದ್ವೇಷವೇ ಹುಟ್ಟುತ್ತದೆ. ಆದರೆ ಇನ್ನು ಕೆಲವು ಪದಾರ್ಥಗಳನ್ನು ಎಷ್ಟು ಕೊಟ್ಟರೂ ಸಾಕು ಎನಿಸುವುದಿಲ್ಲ. ಹಣ ಇಂಥ ಪದಾರ್ಥ. ಚಿನ್ನದ ಆಸೆಗೆ ಮಿತಿಯುಂಟೆ? ಇದು ದೊರಕಿದಷ್ಟೂ ದಾಹ.

ಆಧುನಿಕ ನಾಗರಿಕತೆಯನ್ನು ಆಸೆಯ ಬಹುಮುಖ ವಿಕಾಸ ಎಂದೇ ಹೇಳಬೇಕಾಗುತ್ತದೆ. ಬಹಳ ಹಿಂದಿನ ಕಾಲದಲ್ಲಿ, ಭೂಮಿಯ ಮೇಲೆ ಮಾನವನ ನಾಗರಿಕತೆ ಆರಂಭವಾದಾಗ, ಮನುಷ್ಯನ ಬಯಕೆಗಳು ಸೀಮಿತವಾಗಿದ್ದುವು. ಹಸಿವಾದಾಗ ಆಹಾರ, ಬಾಯಾರಿದಾಗ ಪಾನೀಯ. ಇಂಥ ನಾಲ್ಕಾರು ಬಯಕೆಗಳು ಮಾತ್ರ ಅವನಿಗೆ ಇದ್ದುವು. ಇವು ಪೂರೈಸಿದರೆ ಪರಮ ತೃಪ್ತಿ. ಇದು ಪಶುವಿನ ರೀತಿ: 'ಹುಟ್ಟಿದುದಕೆ ಹುಟ್ಟಿಸಿದ, ಹೊಟ್ಟೆಗಷ್ಟು ಗಟ್ಟಿಸಿದ, ಇಲ್ಲ ಇಲ್ಲ ಏನೊಂದನು ಮಾಡಲಿಲ್ಲ ಇವನು.' ಅಡಿಗರ ಕವನವೊಂದರ ಈ ಸಾಲುಗಳಂತೆ ನಡೆದುಕೊಳ್ಳುವವರು ಇಂದಿಗೂ ಇಲ್ಲದಿಲ್ಲ.

ಆದರೆ ನಾಗರಿಕತೆ ಮುಂದುವರಿದಂತೆ ಆಸೆಗಳು ಕವಲೊಡೆದುವು. ಹೊಸ ಹೊಸ ಬಯಕೆಗಳೂ ಅವನ್ನು ಪೂರೈಸುವ ಸಾಧನಗಳೂ ಬಂದುವು. ಬಯಕೆಗಳನ್ನು ಸೃಷ್ಟಿಸಿ ಅವನ್ನು ಪೂರೈಸುವ ಮಾರ್ಗ ಕಂಡುಹಿಡಿಯುವುದೇ ನಾಗರಿಕತೆ. ನೂರು ವರ್ಷಗಳ ಹಿಂದೆ ರೇಡಿಯೋ ಎಂಬುದನ್ನು ಬಹುಶಃ ಯಾರೂ ಕಂಡಿರಲಿಲ್ಲ. ಇಂದು ಅದಿಲ್ಲದ ಮನೆಯಿಲ್ಲ. ಐವತ್ತು ವರ್ಷಗಳ ಹಿಂದೆ ದೂರದರ್ಶನ ಇರಲಿಲ್ಲ. ಇಂದು ಅದು ಪ್ರತಿಯೊಂದು ಸುಸಂಸ್ಕೃತ ಗೃಹದ ಅವಶ್ಯಕತೆ ಎನಿಸುತ್ತದೆ. ಹೀಗೆ, ನಿನ್ನೆ ಕಂಡರಿಯದ ಎಷ್ಟೋ ಉಪಕರಣಗಳು ಇಂದು ಅನಿವಾರ್ಯವೆನಿಸುತ್ತಿವೆ. ಹಾಗೆ ನೋಡಿದರೆ,

ಇಂಥವುಗಳ ಪಟ್ಟಿ ಬೆಳೆಯುತ್ತಲೇ ಇದೆ. ವಿಜ್ಞಾನ, ಕೈಗಾರಿಕೆ, ವಾಣಿಜ್ಯ–ಇವೆಲ್ಲವೂ ಮಾನವನ ಬಯಕೆಗಳನ್ನು ವಿಸ್ತರಿಸುವುದರಲ್ಲಿ ನಿರತವಾಗಿವೆ. ಇಂದು ಮಾನವನ ಆಕಾಂಕ್ಷೆಗಳಿಗೆ ಆಕಾಶವೇ ಮಿತಿ. ಇದೊಂದು ಮಹಾಕ್ರಾಂತಿ.

ಇಷ್ಟು ದೊರಕಿದರೆ ಮತ್ತಷ್ಟು ಬೇಕೆನ್ನುವುದು. ಅಷ್ಟು ದೊರಕಿದರೆ ಮತ್ತಷ್ಟನ್ನು ಬಯಸುವುದು. ಕಷ್ಟ ಬೇಡವೆನ್ನುವುದು, ಕಡು ಸುಖವನ್ನೇ ಕಾಣುವುದು, ನಷ್ಟವಾದ ಜೀವನವನ್ನು ಮತ್ತೆ ಬಯಸುವುದು–ಇವೆಲ್ಲವನ್ನೂ ಸಾಧ್ಯತೆಯ ಸೀಮೆಯ ವ್ಯಾಪ್ತಿಗೆ ಒಳಪಡಿಸುತ್ತಿದೆ, ನಮ್ಮ ವಿಜ್ಞಾನ. ಹಳೆಯ ಕಾಲದ ರಾಜಾಧಿರಾಜರು ಕೂಡ ಕಂಡರಿಯದ ಸುಖಭೋಗಗಳನ್ನು ಇಂದಿನ ಶ್ರೀಸಾಮಾನ್ಯ ಅನುಭವಿಸ ಲಾಗಿರುವುದು ವಿಜ್ಞಾನದಿಂದ, ತಂತ್ರವಿದ್ಯೆಯಿಂದ. ಇಷ್ಟು ಮಾತ್ರವೇ ಅಲ್ಲ. ವಿಜ್ಞಾನಲೋಕದ ಮಹಾ ಉಪಜ್ಞೆಗಳಿಂದ, ಆವಿಷ್ಕಾರಗಳಿಂದ ಮಾನವ ಸಾವನ್ನೇ ಗೆದ್ದಾನು, ಮುಪ್ಪನ್ನು ದೂರವಿಟ್ಟಾನು. ಇದಕ್ಕೆಲ್ಲ ಮೂಲಪ್ರೇರಕವಾದ್ದು ಅವನ ಆಸೆಯೇ.

ಆದರೂ ಅಡೆತಡೆಯಿಲ್ಲದ ಆಸೆ ಇನ್ನೊಂದು ರೀತಿಯಿಂದ ಅವನನ್ನು ಕುಬ್ಜನನ್ನಾಗಿ ಮಾಡುತ್ತಿದೆ; ಅಸುಖಿಯನ್ನಾಗಿಸುತ್ತಿದೆ. 'ನಾಲ್ಪೇ ಸುಖಮಸ್ತಿ' ಎಂಬುದು ನಿಜ. ಆದರೆ ಯಾವುದೋ ಒಂದು ಮಟ್ಟದಲ್ಲಿ ಪ್ರತಿಯೊಬ್ಬನೂ ತನ್ನ ಆಸೆಗಳಿಗೆ ಮಿತಿ ಕಲ್ಪಿಸಿಕೊಳ್ಳದಿದ್ದರೆ ಅದು ಅವನನ್ನು ಒಂದಿಲ್ಲೊಂದು ದಿನ ನುಂಗಿಯೇ ಹಾಕಿಬಿಡಬಹುದು, ಎಂಬ ಮಾತೂ ಸುಳ್ಳಲ್ಲ. ಆಸೆಯನ್ನು ಹತೋಟಿಯಲ್ಲಿಟ್ಟು ಕೊಳ್ಳದ ಪಶ್ಚಿಮದ ಜನಕ್ಕೆ ಶಾಂತಿಯೇ ನಷ್ಟವಾಗುತ್ತಿದೆ. ಆದ್ದರಿಂದ ನಿಜವಾದ ಅರ್ಥದಲ್ಲಿ ಋಗ್ವೇದದ ಮಾತೂ ದಾಸರ ಎಚ್ಚರಿಕೆಯೂ ಸದಾ ನಮಗೆ ಗ್ರಾಹ್ಯವಾದ್ದು.

III

ವಿಶೇಷಜ್ಞತೆ

ಇದು ವಿಶೇಷಜ್ಞತೆಯ ಯುಗ. ಹತ್ತಾರು ಕೆಲಸಗಳಲ್ಲಿ ತೊಡಗಿ, ಯಾವುದರಲ್ಲೂ ಪರಿಪೂರ್ಣತೆ ಸಾಧಿಸಲಾಗದೆ ಇರುವ ಬದಲು, ಯಾವುದಾದರೂ ಒಂದನ್ನಾರಿಸಿಕೊಂಡು ಅದನ್ನು ಅಚ್ಚುಕಟ್ಟಾಗಿ ಮಾಡುವುದು, ಅದರಲ್ಲೇ ಸಿದ್ಧಿ–ಪ್ರಸಿದ್ಧಿ ಗಳಿಸುವುದು—ಇದು ಈಗಿನ ಪದ್ಧತಿ.

ಎಲ್ಲಿಂದೆಲ್ಲಿ ನೋಡಿದರೂ ಇಂದು ವಿಶೇಷಜ್ಞರದೇ ಆಳ್ವಿಕೆ. ಒಬ್ಬನೇ ಹಲವಾರು ಕಸರತ್ತು ಗಳನ್ನು ಮಾಡುತ್ತಿದ್ದ ಕಾಲ ಮರೆಯಾಗಿದೆ. ಸರ್ಕಸ್ಸನ್ನೇ ತೆಗೆದುಕೊಳ್ಳಿ. ಸಮಾಂತರ ಸರಳುಗಳ ಮೇಲೆ ಲಾಗ ಹಾಕುವವನೊಬ್ಬ, ಎದೆಯ ಮೇಲೆ ಕಲ್ಲು ಚಪ್ಪಡಿ ಇರಿಸಿಕೊಂಡು ಕೊಡತಿಯಿಂದ ಹೊಡೆಸಿಕೊಳ್ಳುವವನು ಇನ್ನೊಬ್ಬ, ಥರಂಗಿಯ ಕೊಳವೆಯೊಳಗೆ ಕುಳಿತು ಉಪಾಯಿಸಿಕೊಳ್ಳುವವನು ಮತ್ತೊಬ್ಬ, ಬೆಂಕಿಯ ವರ್ತುಲದೊಳಗೆ ನುಸುಳುವವನು ಮಗುದೊಬ್ಬ, ಸಿಂಹದ ಬಾಯೊಳಗೇ ತಲೆಯಿಟ್ಟು ಬಚಾವಾಗುವವನು ಬೇರೊಬ್ಬ, ಆನೆಗಳನ್ನು ಕುಂಟಿಸುವವನೂ ಕುದುರೆಗಳನ್ನು ಕುಣಿಸು ವವನೂ ತಂತಿಯ ಮೇಲೆ ಸೈಕಲ್ ನಡೆಯಿಸುವವನೂ ಬೇರೆ ಬೇರೆ. ತಂತಮ್ಮ ಪಾಲಿನದೆಷ್ಟೋ ಅಷ್ಟನ್ನು ಅಚ್ಚುಕಟ್ಟಾಗಿ ಮಾಡಿ ಕೈ ಚಪ್ಪಾಳೆ ಇಕ್ಕಿಸಿಕೊಂಡು ಹೊರಹೋಗುವುದಷ್ಟೇ ಅವರವರ ಹವ್ಯಾಸ. ಉಳಿದಂತೆ ಅವರೆಲ್ಲ ನಿರ್ಲಿಪ್ತ.

ವಿಶೇಷಜ್ಞತೆಯೆಂಬುದು ನ್ಯಾಯದ ಒಂದು ಬದಿಯಾದರೆ, ಶ್ರಮವಿಭಜನೆ ಎಂಬುದು ಇನ್ನೊಂದು ಬದಿ. ಯಾವುದೇ ಕೆಲಸವನ್ನು ಹತ್ತಾರೋ ನೂರಾರೋ ಜನ ಹಂಚಿಕೊಂಡು ತಂತಮ್ಮ ಪಾಲಿನ ಭಾಗವನ್ನಷ್ಟೇ ಮಾಡುವುದನ್ನು ಪ್ರತಿಯೊಂದು ಕಚೇರಿಯಲ್ಲೂ ಉದ್ಯಮದಲ್ಲೂ ಕಾಣ ಬಹುದು. ಕಚೇರಿಗೆ ಬಂದ ಕಾಗದಗಳನ್ನು ದಾಖಲು ಮಾಡಿಕೊಳ್ಳುವವನೊಬ್ಬನಾದರೆ, ಅದರ ಮೇಲೆ

ಟಿಪ್ಪಣಿ ಬರೆಯುವವನು ಇನ್ನೊಬ್ಬ. ಆಜ್ಞೆ ಮಾಡುವವನೊಬ್ಬನಾದರೆ, ಬೆರಳಚ್ಚು ಮಾಡುವವನು ಬೇರೆಯೇ ಒಬ್ಬ. ಕಚೇರಿಗೆ ಬಂದ ಕಾಗದಗಳ ವಿಷಯ ಯಾವುದೋ, ಅದಕ್ಕನುಗುಣವಾಗಿ ಒಂದೊಂದು ವಿಷಯಕ್ಕೂ ಬೇರೆಬೇರೆಯೇ ಇಲಾಖೆಯೋ ಗುಮಾಸ್ತರೋ ಇರುವುದುಂಟು. ಕಚೇರಿಗೆ ಹೋದ ಅರ್ಜಿಯೊಂದು ಮೇಜಿನಿಂದ ಮೇಜಿಗೆ ಎಡತಾಕುತ್ತ, ತನ್ನ ವಾರಸುದಾರ ಯಾರೆಂಬುದನ್ನು ಅರಿಯಲಾರದೆ ಎಲ್ಲೋ ಹೋಗಿ ನಿಂತುಬಿಡುವುದು ಅಪರೂಪವೇನಲ್ಲ.

ಒಂದೇ ಕೆಲಸವನ್ನು ಪ್ರತಿನಿತ್ಯವೂ ಮಾಡುತ್ತಿದ್ದರೆ ಅದರಿಂದ ಆ ಕೆಲಸದಲ್ಲಿ ಪ್ರಾವೀಣ್ಯ ಸಂಪಾದಿಸುವುದು ಸಾಧ್ಯ. ಅದನ್ನು ಬೇಗಬೇಗ ನಿರ್ವಹಿಸಬಹುದು. ಅದರ ಚಿರಪರಿಚಯದಿಂದ ಹೊಸಹೊಸ ವಿಧಾನಗಳನ್ನು ಕಂಡುಕೊಳ್ಳಬಹುದು. ಎನ್ನುವುದುಂಟು. ಆದರೆ ಒಂದೇ ಕೆಲಸವನ್ನು ದಿನವಿಡೀ, ದಿನದಿನವೂ ಮಾಡುವುದರಿಂದ ಮನುಷ್ಯನೂ ಯಂತ್ರವಾಗುವ ಅಪಾಯವುಂಟು. ವೈವಿಧ್ಯವೇ ಜೀವನದ ಮಸಾಲೆ.

ವಿಶೇಷಜ್ಞತೆಗೆ ಅಹಂಕಾರವೂ ಅನೇಕ ವೇಳೆ ಕಾರಣವಾಗುವುದುಂಟು. ನನ್ನ ಕ್ಷೇತ್ರದಲ್ಲಿ ನನ್ನನ್ನು ಮೀರಿಸುವವರು ಯಾರೂ ಇಲ್ಲ ಎಂದು ಹೇಳಿಕೊಳ್ಳಲು ಹಲವರಿಗೆ ಆಸೆ. ಪ್ರಪಂಚದಲ್ಲಿ ಯಾರೂ ಬೆಳಸದಷ್ಟು ದಪ್ಪವಾಗಿ ತೋಳಿನ ಮಾಂಸಖಂಡ ಬೆಳಸಿಕೊಂಡಿದ್ದೇನೆ ಎನ್ನುವುದು, ನನ್ನ ಎದೆಯ ಸುತ್ತಳತೆ ಬೇರ ಯಾರಿಗೂ ಇಲ್ಲ ಎಂದುಕೊಳ್ಳುವುದು, ನನ್ನಷ್ಟು ಉದ್ದದ ಗಡ್ಡ ಬೇರಾರೂ ಬೆಳಸಿಕೊಂಡಿಲ್ಲ ಎಂಬುದು—ಇಂಥ ಯಾವುದೋ ಒಂದರಲ್ಲಿ ವಿಕ್ರಮ ಸಾಧಿಸುವುದು ಇವೊತ್ತಿನ ಒಂದು ಹುಚ್ಚು. ದೇಹದ ಇತರ ಅಂಗಗಳೊಂದಿಗೆ ಪ್ರಮಾಣಬದ್ಧವಾಗಿರದೆ ಯಾವುದೋ ಒಂದು ಅಂಗವನ್ನು ಅತಿಯಾಗಿ ಬೆಳಸಿಕೊಳ್ಳುವುದು ವಿಕೃತಿಯೇ ಆದೀತು.

ಜ್ಞಾನ, ವಿಜ್ಞಾನ, ವೈದ್ಯ ಮುಂತಾದ ಕ್ಷೇತ್ರಗಳಲ್ಲೂ ಇದರ ವೈಪರೀತ್ಯವನ್ನು ಕಾಣಬಹುದು. ಕಿವಿ–ಮೂಗು–ಗಂಟಲ ವೈದ್ಯನ ಕಣ್ಣೆಲ್ಲ ದೇಹದ ಆ ಮೂರು ಅಂಗಗಳ ಮೇಲೆಯೇ ಕೇಂದ್ರೀಕೃತ. ಆ ಅಂಗಗಳಿಗಿಂತ ಅತ್ಯಂತ ದೊಡ್ಡದು, ಅದ್ಭುತವಾದದ್ದು ಇಡೀ ಶರೀರ ಎಂಬ ಪೂರ್ಣತೆಯ ಅರಿವೇ ಅಂಥ ಹಲವರಿಗೆ ಇರುವುದಿಲ್ಲ. ದೇಹದ ಒಂದೊಂದು ಅಂಗವೂ ಯಂತ್ರದ ಒಂದೊಂದು ಬಿಡಿ ಭಾಗವೆಂದೇ ಅಂಥವರ ವ್ಯವಹಾರ. ಇದೊಂದು ವಿಪರ್ಯಾಸ. ಅನೇಕ ವಿದ್ವಾಂಸರಿಗೆ ಕೂಡ ಇಂದು ಆಂಶಿಕ ಜ್ಞಾನ; ವಿವಿಧ ವಿಷಯಗಳ ನಡುವಣ ಗಡಿರೇಖೆಯನ್ನು, ಒಂದಕ್ಕೂ ಇನ್ನೊಂದಕ್ಕೂ ಇರುವ ಸಂಬಂಧವನ್ನು, ಗುರುತಿಸುವ ವಿಶಾಲ ದೃಷ್ಟಿಯ ಅಭಾವ. **A specialist is one who knows more and more about less and less things until at last he knows everything about nothing** ಎಂಬುದು ಈ ವಿಪರ್ಯಾಸವನ್ನು ಕುರಿತ ಮಾತು. ಓದಿ ಓದಿ ಮರುಳಾದ ಕೂಚುಭಟ್ಟರ ತೀರು ಯಾರಿಗೆ ಗೊತ್ತಿಲ್ಲ?

ದೇಶ ಮುನ್ನಡೆಯುವುದಕ್ಕೆ ವಿಶೇಷಜ್ಞತೆ, ಶ್ರಮವಿಭಜನೆ ಬೇಕು, ನಿಜ. ಆದರೆ ಅದು ಸಮಗ್ರ ದೃಷ್ಟಿಯ ತ್ಯಾಗದಿಂದ ಅಲ್ಲ. ಕಿರಿದಾದ ಕ್ಷೇತ್ರದಲ್ಲಿ ಆಳದಿಂದ ಆಳಕ್ಕೆ ನೋಟ ಹರಿಯಿಸಿದಾಗ ಸಮಗ್ರತೆಯ ದೃಷ್ಟಿಯ ನಷ್ಟ ಆಗಬಾರದು. ಬರೀ ಬುದ್ಧಿಯೋ ಬರೀ ಹೃದಯವೋ ಬರೀ ದೇಹವೋ ಬೆಳೆದರೆ ಸಾಲದು. ಪ್ರತಿಯೊಬ್ಬ ವ್ಯಕ್ತಿಯೂ ಈ ಮೂರನ್ನೂ ಸಮಸಮವಾಗಿ ಬೆಳೆಸಿಕೊಳ್ಳಬೇಕು. ಅವನು ತ್ರಿ–ವಿಕ್ರಮನಾಗಬೇಕು. ಯಾವುದೋ ಒಂದರಲ್ಲಿ ವಿಕ್ರಮ ಸಾಧಿಸಿದರೆ ಸಾಲದು. ನಮ್ಮಲ್ಲಿ ವ್ಯವಹಾರ ಜ್ಞಾನವಿಲ್ಲದ ಎಂಜಿನಿಯರುಗಳೂ ಮಾನವನ ಅಂತರಾಳ ಅರಿಯದ ವೈದ್ಯರೂ ಸಮಾಜದ ಅರಿವಿಲ್ಲದ ವಿಜ್ಞಾನಿಗಳೂ ವಿದ್ವಾಂಸರೂ ಇದ್ದಾರೆ. ಒಂದು ದೊಡ್ಡ ಅಣೆಕಟ್ಟಿನ ನಿರ್ಮಾಣದ ಹೊಣೆ ಹೊತ್ತ ಎಂಜಿನಿಯರಿಗೆ ಸಿಬ್ಬಂದಿನಿರ್ವಹಣೆ ಗೊತ್ತಿರದಿದ್ದರೆ ಹೇಗೆ? ಕಾರ್ಖಾನೆಯ ವ್ಯವಸ್ಥಾಪಕ ಪಶುಗಳ ಒಡೆಯನಲ್ಲ. ವೃತ್ತಿ ಯಾವುದೇ ಇರಲಿ, ಪ್ರತಿಯೊಬ್ಬನೂ ಪ್ರಜಾಪ್ರಭುತ್ವದಲ್ಲಿ ಒಬ್ಬ ಪ್ರಜೆ. ಸಮಾಜದ ಅಂಗ, ಸಂಸಾರದ ಸದಸ್ಯ. ಆತ ತನ್ನ ವೃತ್ತಿಯ ಪ್ರಾವೀಣ್ಯದ ಜೊತೆಗೆ ಪ್ರಜೆತನದ ಹಕ್ಕುಬಾಧ್ಯತೆಗಳನ್ನೂ, ಸಮಾಜದಲ್ಲಿ ತನ್ನ ಕರ್ತವ್ಯವನ್ನೂ, ಕುಟುಂಬದಲ್ಲಿ ಗಂಡನಾಗಿಯೋ ತಂದೆಯಾಗಿಯೋ

ಮಗನಾಗಿಯೋ ನಿರ್ವಹಿಸಬೇಕಾದ ಕಾರ್ಯಭಾರವನ್ನೂ ಅರಿಯದಿರುವುದೇ ನಮ್ಮ ಎಲ್ಲ ಸಮಸ್ಯೆಗಳ ಮೂಲ.

ತಿಥಿ ಮಾಡ್ಸೋನ್ಗೇನ್ಗೊತ್ತೈತೋ
ಚಡ್ಡಿ ಒಲಿಯೋ ಕೆಲ್ಸ?
ಓದ್ಸೋ ಐಗೋಳ್ ಕಟ್ಕೋಂತಾರ
ಸೂಳೇ ಕಾಲಿನ್ಗೊಲ್ಸ?

ಎಂದು ಎಂಪ್ಸ್ಯುಡ್ಸ ರತ್ನ ಉದ್ಗರಿಸಬಹುದು. ಆದರೆ ಪ್ರತಿಯೊಬ್ಬನೂ ತನ್ನ ಸ್ವಂತ ವಿದ್ಯೆಯ ಪ್ರಾವೀಣ್ಯದ ಜೊತೆಗೆ ಅನ್ಯ ವಿದ್ಯೆಗಳ ಪರಿಚಯ ಪಡೆಯುವುದು. ವಿವೇಕ–ವ್ಯವಹಾರಜ್ಞಾನ ಸಂಪಾದಿಸಿಕೊಳ್ಳುವುದು, ಒಳ್ಳೆಯ ಆದರ್ಶ. ಅವನು **Jack of all trades and master of one** ಆಗುವುದಾದರೆ ಬಲು ಚೆನ್ನ.

IV

ಕಾಲನಿಷ್ಠೆ

ಭಾರತೀಯರಿಗೆ ಕಾಲದ ಬೆಲೆಯೇ ಗೊತ್ತಿಲ್ಲ. ಅವರಿಗೆ ಕಾಲನಿಷ್ಠೆಯೇ ಇಲ್ಲ. ಸಮಯಕ್ಕೆ ಸರಿಯಾಗಿ ಯಾವುದೇ ಕೆಲಸ ಮಾಡುವುದು ಅವರಿಗೆ ಗೊತ್ತಿಲ್ಲ. ಇದು ಬ್ರಿಟಿಷರು ಭಾರತವನ್ನಾಳುತ್ತಿದ್ದಾಗ ನಮ್ಮ ಮೇಲೆ ಹೊರಿಸಿದ್ದ ಒಂದು ಆರೋಪ. ಇಂಡಿಯನ್ ಸ್ಟಾಂಡರ್ಡ್ ಟೈಂ—ಭಾರತೀಯ ಕಾಲಮಾನ—ಎಂಬುದು ವಿಳಂಬನೀತಿಗಳ ಸಮಯಪ್ರಜ್ಞೆಯ ಬಗ್ಗೆ ಅವರು ಆಡುತ್ತಿದ್ದ ನಗೆ ಮಾತು. ಖಗೋಳಶಾಸ್ತ್ರದ ವಿಸ್ಮಯಗಳನ್ನೆಲ್ಲ ಅರಿಯಬಲ್ಲವರಾಗಿದ್ದು, ಗ್ರಹ ನಕ್ಷತ್ರಗಳ ಸಾಪೇಕ್ಷ ಚಲನೆಗಳನ್ನು ಗುಣಿಸಿ ನೋಡುತ್ತಿದ್ದ ಭಾರತೀಯರಿಗೆ ವೇಳಾಪ್ರಜ್ಞೆ ಇರಲಿಲ್ಲವೆಂದು ಹೇಳುವುದು ಅಪಚಾರ. ಜಂತರ್‌ಮಂತರದಂಥ ಖಗೋಲ ವೀಕ್ಷಣಾಲಯಗಳು ಈ ಅಪವಾದವನ್ನು ನಿರಾಕರಿಸುತ್ತವೆ. ವಿಜ್ಞಾನದ ನಾನಾ ನಿಟ್ಟುಗಳಲ್ಲಿ ಬಹಳಮಟ್ಟಿಗೆ ಮುಂದುವರಿದಿದ್ದ ಭಾರತೀಯರ ಬಾಳಿನಲ್ಲಿ ವಿಳಂಬ–ಆಲಸ್ಯ ಭಾವಗಳು ಕಳೆಯಂತೆ ಮೊಳೆತದ್ದು ಬಹುಶಃ ವಿದೇಶೀಯರ ಆಕ್ರಮಣ ಆರಂಭವಾದ ಮೇಲೆ. ದೀರ್ಘಕಾಲದ ಆಕ್ರಮಣ. ಕೊಳ್ಳೆ. ಸೋಲು. ಅಪಮಾನಗಳು ಭಾರತೀಯರ ಮನೋಭೂಮಿಕೆಯ ಮೇಲೆ ಸುಲಭವಾಗಿ ಅಳಿಸಲಾಗದ ಅಚ್ಚೊತ್ತಿದುವು ಎನ್ನಬಹುದು.

ಪಾಶ್ಚಾತ್ಯರ ಸಮಯನಿಷ್ಠೆಯನ್ನು ಹೊಗಳುವ ಹಲವಾರು ಮಾತುಗಳುಂಟು. ಕಾಲನಿಷ್ಠೆ ಎಂಬುದು ರಾಜಮರ್ಯಾದೆ. ಎಂಬುದಾಗಿ ಫ್ರಾನ್ಸಿನ ದೊರೆ ೧೮ನೆಯ ಲೂಯಿ ಹೇಳುತ್ತಿದ್ದನಂತೆ. ಗೊತ್ತಾದ ವೇಳೆಗೆ ಕಾಲು ಗಂಟೆ ಮುಂಚೆಯೇ ನಾನು ಯಾವಾಗಲೂ ಹಾಜರಾಗುತ್ತೇನೆ. ಎಂಬುದು ನೆಲ್ಸನ್ನನ ಹೇಳಿಕೆ. ತನ್ನನ್ನೊಬ್ಬ ಮನುಷ್ಯನನ್ನಾಗಿ ಮಾಡಿರುವುದು ಕಾಲನಿಷ್ಠೆಯೇ ಎಂದು ಅವನು ನಂಬಿದ್ದ.

ಅಮೆರಿಕಾಧ್ಯಕ್ಷನಾಗಿದ್ದ ಜಾರ್ಜ್ ವಾಷಿಂಗ್ಟನ್ನನಿಗೆ ಕಾಲನಿಷ್ಠೆ ಇಲ್ಲದವರ ಬಗ್ಗೆ ತುಂಬ ತಾತ್ಸಾರವಿತ್ತು. ಒಮ್ಮೆ ಅವನ ಕಾರ್ಯದರ್ಶಿಯೊಬ್ಬ ತಡವಾಗಿ ಬಂದ. 'ನನ್ನ ಗಡಿಯಾರ ತುಂಬ ಹಿಂದಾಗಿದೆ', ಎಂದು ಅವನು ಸಬೂಬು ನೀಡಿದ. ಒಡನೆಯೇ ಬಂತು. ವಾಷಿಂಗ್ಟನ್ನನ ಉತ್ತರ: 'ನೀನೊಂದು ಹೊಸ ಗಡಿಯಾರವನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ನಾನು ಹೊಸ ಕಾರ್ಯದರ್ಶಿಯನ್ನು ತೆಗೆದುಕೊಳ್ಳಬೇಕಾದೀತು.'

ಕಾಲನಿಷ್ಠೆ ಸುಸಂಸ್ಕೃತನ ಲಕ್ಷಣ. ಇತರರ ಬಗ್ಗೆ ನಾವು ಗೌರವ ಹೊಂದಿರುವುದಾದರೆ, ಗೊತ್ತಾದ ಕಾಲಕ್ಕೆ ಸರಿಯಾಗಿ ಅವರೊಂದಿಗೆ ನಾವು ವ್ಯವಹಾರ ಮಾಡಬೇಕು. ಕಾಲಾನುಗುಣವಾಗಿ ಕೆಲಸ ಮಾಡುವುದೆಂದರೆ ಕಾಲದ ಉಳಿತಾಯ, ಶ್ರಮದ ಮಿತವ್ಯಯ. ಇನ್ನೊಬ್ಬರ ಹಣವನ್ನು ಸಾಲವಾಗಿ ತೆಗೆದುಕೊಂಡು ಅದನ್ನು ಕೊಡದೆ ಇರುವುದಕ್ಕಿಂತ ಗುರುತರವಾದ ಅಪರಾಧವೆಂದರೆ ಇನ್ನೊಬ್ಬರ ಕಾಲವನ್ನು ಅಪವ್ಯಯಗೊಳಿಸುವುದು. ನಮಗಾಗಿ ಅವರು ವೃಥಾ ಕಾಯುವಂತೆ ಮಾಡುವುದು.

ಸಾರ್ವಜನಿಕ ಕಾರ್ಯಕ್ರಮ ಏರ್ಪಡಿಸುವವರಿಗೆ ಸಾಮಾನ್ಯವಾಗಿ ಕಾಲದ ಪರಿವೆ ಇಲ್ಲದಿರುವುದು ನಮ್ಮೆಲ್ಲರ ಅನುಭವ. ಆರು ಗಂಟೆಗೆ ಆರಂಭವಾಗುವುದೆಂದು ಪ್ರಕಟಿತವಾದ ಸಂಗೀತ ಕಾರ್ಯಕ್ರಮ ಪ್ರಾರಂಭವಾಗುವುದು ಸಾಮಾನ್ಯವಾಗಿ ಆರೂವರೆಗೋ ಆರೂಮುಕ್ಕಾಲಿಗೋ. ಅದು ತಡವಾಗಿ ಆರಂಭವಾಗುವುದೆಂಬುದು ಕಾರ್ಯಕರ್ತರೂ ಶ್ರೋತೃಗಳೂ ಸಾಮಾನ್ಯವಾಗಿ ಒಪ್ಪಿಕೊಂಡಿರುವ ಸಂಗತಿ. ಪ್ರಕಟವಾದ ವೇಳೆಯನ್ನು ನಂಬಿ ಕಾಲಕ್ಕೆ ಸರಿಯಾಗಿ ಬಂದವರಿಗೆ ವೃಥಾ ತೊಂದರೆ. ಉಪನ್ಯಾಸಕಾರ ಕಾರ್ಯಕ್ರಮಕ್ಕೆ ಕ್ಲುಪ್ತವಾದ ವೇಳೆಗೆ ಬರುವುದೆಂದರೆ ಅದು ಅವನ ಮರ್ಯಾದೆಗೆ ಕಡಿಮೆಯೆಂದೇ ಭಾವನೆ. ಈತನನ್ನು ಭಾಷಣಕ್ಕೆ ಕರೆದರೆ ಸಾಕು, ಬರುತ್ತಾನೆ—ಎಂಬುದಾಗಿ ಇತರರು ಎಲ್ಲಿ ತಿಳಿದುಕೊಳ್ಳುತ್ತಾರೋ ಎಂದು ಆತನ ಭಾವನೆ. ಒಂದು ಕಾರ್ಯಕ್ರಮಕ್ಕೆ ಒಂದು ಸಾವಿರ ಜನರು ವೇಳೆಗೆ ಸರಿಯಾಗಿ ಬಂದು ಕುಳಿತಿದ್ದರೆ. ಅದು ಒಂದು ಗಂಟೆ ತಡವಾಗಿ ಆರಂಭವಾದರೆ, ನಷ್ಟವಾಗುವುದು ಕೇವಲ ಒಂದು ಗಂಟೆಯಲ್ಲ; ಸಾವಿರ ಜನಕ್ಕೆ ತಲಾ ಒಂದು ಗಂಟೆ; ಎಂದರೆ ಒಂದು ಸಾವಿರ ಮಾನವ ಗಂಟೆ. ರಾಷ್ಟ್ರದ ಲೆಕ್ಕದಲ್ಲಿ ವರ್ಷವರ್ಷವೂ ಎಷ್ಟು ಮಾನವ ಗಂಟೆಗಳು ಈ ರೀತಿ ವ್ಯರ್ಥವಾಗುವುವೆಂಬುದನ್ನು ಯೋಚಿಸಿದರೆ ಗಾಬರಿಯಾಗುತ್ತದೆ.

ಯಾವ ಕಾರ್ಯಕ್ರಮಕ್ಕೂ ತಡವಾಗದಿರುವುದು ಮಾತ್ರವೇ ಕಾಲನಿಷ್ಠೆಯಲ್ಲ. ನಿಶ್ಚಿತ ಕಾಲಕ್ಕಿಂತ ತೀರ ಮುಂಚೆ ಹಾಜರಾಗುವುದೂ ಸಮಯದ ಅಪವ್ಯಯವೇ. ರೈಲಿಗೆ ಒಂದು ನಿಮಿಷ ತಡವಾಗುವುದಕ್ಕಿಂತ ಒಂದು ಗಂಟೆ ಮುಂಚೆಯೇ ಹೋಗುವುದೇನೋ ಒಳ್ಳೆಯದು, ಸರಿ. ಆದರೆ ಕಾಲನಿಷ್ಠೆ ಹಾಗೆ ಅತಿಯಾಗಬಾರದು.

ಗಡಿಯಾರದ ಮುಳ್ಳಿನ ಪರಿಭ್ರಮಣೆಗೆ ಅನುಗುಣವಾಗಿ ತಮ್ಮ ಚಟುವಟಿಕೆಗಳನ್ನು ಅಳವಡಿಸಿಕೊಂಡು ಯಂತ್ರದೊಂದಿಗೆ ಯಂತ್ರವಾದವರು ಇಲ್ಲದಿಲ್ಲ. ಎಡಗೈ ಕಂಕಣವಾಗಿರುವ ಗಡಿಯಾರದತ್ತ ಕ್ಷಣಕ್ಷಣಕ್ಕೂ ಕಣ್ಣು ಹೊರಳಿಸದಿದ್ದರೆ ಅಂಥವರಿಗೆ ನೆಮ್ಮದಿ ಇರದು. ಗಡಿಯಾರ ಇಲ್ಲದಾಗ ಅವರ ಬಾಳೇ ಶೂನ್ಯ. ಗಂಟೆ ಬಾರಿಸಿದೊಡನೆ ರೇಡಿಯೋ ನಿಲ್ಲುತ್ತದೆ. ಅಧ್ಯಾಪಕನ ಪ್ರವಚನ ಕೊನೆಗೊಳ್ಳುತ್ತದೆ. ರೈಲು ಹೊರಡುತ್ತದೆ. ಸಿನಿಮಾ ಆರಂಭವಾಗುತ್ತದೆ, ಊಟವಾಗುತ್ತದೆ. ಹೀಗೆ ಸಕಲವೂ ಕಾಲಾಧೀನ.

ಯಂತ್ರದಂತೆ ನಿಯೋಜಿತವಾದ ತಮ್ಮ ಜೀವನದ ಬಗ್ಗೆ ಅನೇಕರಿಗೆ ಬಹಳ ಹೆಮ್ಮೆ. ಕೆಲವರಿಗೆ ಅದೊಂದು ಗೀಳು. ಇಂಥವರು ತಮ್ಮ ಮನಃಸ್ವಾಸ್ಥ್ಯವನ್ನೇ ಕಳೆದುಕೊಳ್ಳುತ್ತಾರೆ. ಐದು ಗಂಟೆಗೆ ಬರುತ್ತೇನೆಂದರೆ ಐದಕ್ಕೆ ಸರಿಯಾಗಿ ಮನೆಯ ಮುಂದೆ ಬಂದು ಕರೆಗಂಟೆಯ ಗುಂಡಿ ಒತ್ತುತ್ತಾರೆ, ಇಂಥವರು. ಹತ್ತು ನಿಮಿಷ ಮುಂದಾಗಿಯೇ ಬಂದರೂ ಇವರು ಅಲ್ಲಿ ಇಲ್ಲಿ ನಿಂತು ಹೇಗೋ ಕಾಲ ತಳ್ಳುತ್ತಾರೆ. ಐದಕ್ಕೆ ಅರ್ಧ ನಿಮಿಷ ಇರುವಾಗ ಗರಬಡಿದವರಂತೆ ಧಾವಿಸುತ್ತಾರೆ. ಎಲ್ಲವನ್ನೂ ಕಾಲಕ್ಕೆ ತಕ್ಕಂತೆ ಮಾಡುವೆವೆಂಬ ಇಂಥವರ ಅಹಂಭಾವ ನಗೆ ತರುತ್ತದೆ. ಕಾಲಾಧೀನರಾದ ಇವರು ಕಾಲವನ್ನೇ ಗೆದ್ದಂತೆ ವರ್ತಿಸುತ್ತಾರೆ. ವೇಳಾಪಟ್ಟಿಯಲ್ಲಿ ಗುರುತಿಸಿಕೊಂಡ ಒಂದು ಕೆಲಸಕ್ಕೂ ಇನ್ನೊಂದಕ್ಕೂ ನಡುವಣ ಕಾಲವನ್ನು ಭರ್ತಿ ಮಾಡುವುದರಲ್ಲೇ ಇವರ ಆಯುಷ್ಯದ ಬಹುಭಾಗ ಕಳೆದುಹೋಗುತ್ತದೆ. 'ನನ್ನ ಮುಂದಿನ ಅಪಾಯಿಂಟ್‌ಮೆಂಟು ನಾಲ್ಕೂವರೆ ಗಂಟೆಗೆ. ಅದುವರೆಗೂ ಹೇಗೋ ಕಾಲವನ್ನು ಕೊಲ್ಲಬೇಕು'—ಎನ್ನುವುದುಂಟು ಇಂಥವರು. ಕಾಲವನ್ನು ಕೊಲ್ಲುವೆವೆಂಬ ಭ್ರಮೆ ಇವರಿಗೆ! ಆದರೆ ಕಾಲವೇ ಇವರನ್ನು ಕೊಲ್ಲುತ್ತಿರುತ್ತದೆ. ಕಾಲ ಕಳೆಯುವುದೆಂದರೆ ಸಾವಿನ ಕಡೆಗೆ ಅಷ್ಟು ದೂರ ಸಾಗಿದಂತೆ. ಕಾಲದ ಗುಲಾಮರಾದವರಿಗೆ ತಾವು ಕಾಲದ ಯಜಮಾನರೆಂಬ ಭ್ರಾಂತಿ.

ಆದರೆ ಜೀವನದ ರಸಮಯಪಗಳೂ ವಿಷಮಯಪಗಳೂ ಮುಂಚೆಯೇ ತಿಳಿಸವು. ವೇಳಾಪಟ್ಟಿಯ ಪದ್ದುಬಸ್ತಿಗೆ ಒಳಪಡದೆ ಬಂದು ಹೋಗುತ್ತವೆ. ಇವು ಬಂದಾಗ ಗುರುತಿಸಬಲ್ಲ ಪ್ರಜ್ಞೆ ನಮ್ಮಲ್ಲಿ ಸದಾ ಜಾಗ್ರತವಾಗಿರಬೇಕು. ಹಗಲು-ಸಂಜೆ. ಮಳೆ-ಬಿಸಿಲು. ಋತುಚಕ್ರ. ಎಲ್ಲವೂ ಕಾಲಾನುಗುಣ. ನಿಜ. ಆದರೆ ಅವು ಕೃತಕವಲ್ಲ: ಸಹಜ ವ್ಯಾಪಾರಗಳು. ಅವುಗಳೊಂದಿಗೆ ಹೊಂದಿಕೊಂಡು ನಡೆಯುವುದೇ ಕಾಲನಿಷ್ಠೆ.

V

ಧರ್ಮ-ಅಧರ್ಮ

"ಸತ್ಯಂ ಬ್ರೂಯಾತ್. ಪ್ರಿಯಂ ಬ್ರೂಯಾತ್. ನ ಬ್ರೂಯಾತ್ ಸತ್ಯಮಪ್ರಿಯಂ.' ಇದು ನಮ್ಮೆಲ್ಲರಿಗೂ ಚಿರಪರಿಚಿತವಾದ ಉಪನಿಷದ್ವಾಕ್ಯ. ಬಹುಕಾಲದಿಂದ ಚಲಾವಣೆಯಲ್ಲಿರುವ ಮಾತುಗಳಲ್ಲಿ ಇದೂ ಒಂದು.

'ಸತ್ಯಂ ವದ. ಧರ್ಮಂ ಚರ. ಸ್ವಾಧ್ಯಾಯಾತ್ ಮಾಪ್ರಮದಿತವ್ಯ.' ಸ್ನಾತಕನಾದ ವಿದ್ಯಾರ್ಥಿಗೆ ಆತನ ಗುರು ನೀಡುತ್ತಿದ್ದ ಉಪದೇಶ ವಾಕ್ಯವಿದು. ಇದು ಕೂಡ ನಮಗೆಲ್ಲ ತುಂಬ ಪರಿಚಿತವಾದ್ದು.

'ಕಳಬೇಡ. ಕೊಲಬೇಡ. ಹುಸಿಯ ನುಡಿಯಲು ಬೇಡ.' ಇದು ಬಸವಣ್ಣನವರ ಮಾತು. ಕನ್ನಡಿಗರಿಗೆ ತುಂಬ ಪ್ರಿಯವಾದ್ದು.

ಇಂಥ ಮಾತುಗಳೆಲ್ಲ ಉದಾತ್ತವಾದಂಥವು. ಆದರ್ಶಪ್ರೇರಿತವಾದಂಥವು. ಎಂಬುದರಲ್ಲಿ ಸಂದೇಹವಿಲ್ಲ.

ಆದರೆ ಒಂದು ಮಾತು ಎಷ್ಟೇ ಉದಾತ್ತವಾದ್ದಾಗಿರಲಿ. ಆದರ್ಶಯುತವಾದ್ದಾಗಿರಲಿ. ಆ ಮಾತು ಪದೇಪದೇ ಕಿವಿಯ ಮೇಲೆ ಬಿದ್ದಾಗ ಅದರ ಅರ್ಥ ಸವೆದುಹೋಗುತ್ತದೆ. ಒಂದು ಕಾಲದಲ್ಲಿ ತೀವ್ರ ಸಂವೇದನೆಯನ್ನುಂಟುಮಾಡುತ್ತಿದ್ದ ಅನುಭವಗಳು ಶುಷ್ಕ ಅನುಕರಣೆಗಳಾಗಿ ಅರ್ಥಹೀನವೆನಿಸುತ್ತವೆ. ಹಿತ್ತಲ ಗಿಡ ಮದ್ದಲ್ಲ.

ಅಷ್ಟು ಮಾತ್ರವೇ ಅಲ್ಲ. ಸತ್ಯ. ಧರ್ಮ. ನ್ಯಾಯ. ಅನ್ಯಾಯ ಮುಂತಾದ ಶಬ್ದಗಳ ವ್ಯಾಖ್ಯೆ ಅವರವರ ದೃಷ್ಟಿಗಳಿಗೆ ಅನುಗುಣವಾಗಿ ವ್ಯತ್ಯಾಸವಾಗುತ್ತದೆ. ಯುದ್ಧಕಾಲದಲ್ಲಿ ಇದನ್ನು ಸ್ಪಷ್ಟವಾಗಿ ಕಾಣಬಹುದು. ಯುದ್ಧನಿರತವಾದ ಎರಡು ರಾಷ್ಟ್ರಗಳಲ್ಲಿ ಪ್ರತಿಯೊಂದೂ ತಾನು ಸತ್ಯಕ್ಕಾಗಿ. ನ್ಯಾಯಕ್ಕಾಗಿ. ಧರ್ಮಕ್ಕಾಗಿ ಹೋರಾಡುತ್ತಿದೆಯೆಂದೇ ಭಾವಿಸುತ್ತದೆ. ತಮಗೆ ಗೆಲುವು ದೊರಕಿಸಿ ಕೊಡಬೇಕೆಂದು ಒಂದು ರಾಷ್ಟ್ರದ ಪ್ರಜೆಗಳು ದೇವರಿಗೆ ಪ್ರಾರ್ಥಿಸುವಂತೆ ಅದರ ಶತ್ರುರಾಷ್ಟ್ರದ ಪ್ರಜೆಗಳೂ ದೇವರಿಗೆ ಪ್ರಾರ್ಥನೆ ಸಲ್ಲಿಸುತ್ತಾರೆ. ಇಬ್ಬರಿಗೂ ಸಮಾನನಾದ ದೇವರು ಯಾರ ಪ್ರಾರ್ಥನೆಗೆ ಕಿವಿಗೊಡಬೇಕು? ಯಾರನ್ನು ಗೆಲ್ಲಿಸಬೇಕು?

ರಾಷ್ಟ್ರಗಳ ಮಾತು ಹಾಗಿರಲಿ. ವ್ಯಕ್ತಿಗಳ ವಿಚಾರದಲ್ಲೂ ಈ ದ್ವಂದ್ವವನ್ನು ಕಾಣಬಹುದು. ಪ್ರತಿಯೊಬ್ಬನೂ ತಾನು ಮಾಡುತ್ತಿರುವುದು ಧರ್ಮವೆಂದೇ ನ್ಯಾಯವೆಂದೇ ಭಾವಿಸುತ್ತಾನೆ. ಅದಕ್ಕಾಗಿ ತನ್ನ ದೇವರಿಗೆ ಪೂಜೆ ಸಲ್ಲಿಸುತ್ತಾನೆ. ಕಟುಕನ ಕಸುಬೂ ಧರ್ಮವೇ. ಧರ್ಮವ್ಯಾಧನೆಂಬವನು ಕಟುಕನಾಗಿದ್ದ. ಈತ ಅನೇಕ ಧರ್ಮರಹಸ್ಯಗಳನ್ನು ಬಲ್ಲವನಾಗಿದ್ದ. ಮತಂಗ ಮುನಿಯ ಮಗ ಇವನ ಅಳಿಯನಾಗಿದ್ದ. ಆ ಮುನಿಯ ಪತ್ನಿ ತನ್ನ ಸೊಸೆಯನ್ನು ಮಾಂಸ ವಿಕ್ರಯಿಸುವವನ ಮಗಳೆಂದು ಹಳಿದಾಗ. ನಾನು ವಾರಕ್ಕೊಂದು ಮೃಗ ಕಡಿದರೆ ನೀವು ಪ್ರತಿದಿನವೂ ಸಾವಿರಾರು ಜೀವಿಗಳನ್ನು

ಕೊಲ್ಲುತ್ತೀರಿ ಎಂದನಂತೆ ಆ ವ್ಯಾಧ. ನೀವು ದಿನವೂ ಉಪಯೋಗಿಸುವ ಗೋದಿ ತೊಗರಿಗಳೂ ಪ್ರಾಣವುಳ್ಳವುಗಳೇ ಎಂದನಂತೆ.

ಕಳ್ಳತನ ಮಾಡುವುದು ಕಳ್ಳನ ಧರ್ಮ. ಅದಕ್ಕೊಂದು ಅಧಿದೇವತೆ. ಆ ದೇವತೆಯನ್ನು ಪೂಜೆ ಮಾಡಿಯೇ ಹೊರಗೆ ಹೊರಡುವುದು ಕಸಬುದಾರ ಕಳ್ಳನ ಪದ್ಧತಿ. ಶೂದ್ರಕನ ಮೃಚ್ಛಕಟಿಕ ನಾಟಕದಲ್ಲಿ ಚೌರ್ಯದ ಸ್ವಾರಸ್ಯಕರವಾದ ವರ್ಣನೆಯೇ ಇದೆ. ನಮ್ಮ ಅರವತ್ನಾಲ್ಕು ವಿದ್ಯೆಗಳ ಪೈಕಿ ಚೌರ್ಯವೂ ಒಂದು. ಯಾವ ಗೋಡೆಗೆ ಎಂಥ ಕನ್ನ ಹಾಕಬೇಕು; ಯಾರ ಕಣ್ಣಿಗೂ ಕಾಣದಂತೆ, ಶಸ್ತ್ರ ಪ್ರಯೋಗಿಸಿದರೆ ಅದರಿಂದ ತಪ್ಪಿಸಿಕೊಂಡು. ಕಳವು ನಡಸುವ ವಿಧಾನ ಯಾವುದು-ಎಂಬುದನ್ನು ಕುರಿತ ವಿಪುಲ ಶಾಸ್ತ್ರವೇ ಉಂಟು. ಚಾರುದತ್ತನ ಮನೆಗೆ ಕನ್ನ ಹಾಕಿದ ಶರ್ವಿಳಕನೆಂಬವನು ಕಳ್ಳತನದ ಚತುರೋಪಾಯಗಳನ್ನು ವರ್ಣಿಸುತ್ತಾನೆ. ಅವನು ಹಾಕಿದ್ದು 'ಪೂರ್ಣಕುಂಭ'ವೆಂಬ ಕನ್ನ. ಚೌರ್ಯಶಾಸ್ತ್ರಕ್ಕೆ ಆಚಾರ್ಯನಾದ ಕನಕಶಕ್ತ್ಯಾಚಾರ್ಯನನ್ನು ಸ್ಮರಿಸಿಯೇ ಅವನು ಮುಂದುವರಿಯುತ್ತಾನೆ. ಶರ್ವಿಳಕನೇನೂ ವೃತ್ತಿಯಿಂದ ಕಳ್ಳನಲ್ಲ. ಆದರೆ ವಸಂತಸೇನೆಯ ಸೇವಕಿಯಾದ ರದನಿಕೆಯನ್ನು ಅವನು ಪ್ರೀತಿಸಿದ್ದ. ಅವಳನ್ನು ಸೇವಾವೃತ್ತಿಯಿಂದ ಬಿಡಿಸಿಕೊಳ್ಳಲು ಹಣಕ್ಕಾಗಿ ಅವನು ಚಾರುದತ್ತನ ಮನೆಯಲ್ಲಿ ಕದಿಯಬೇಕಾಯಿತು. ಆದ್ದರಿಂದ ತನ್ನ ಕೃತ್ಯ ಪಾಪವಲ್ಲವೆಂದು ಅವನ ಮನವರಿಕೆ. ಅದನ್ನು ಸಮರ್ಥಿಸಿಕೊಳ್ಳಲು ಅಗತ್ಯವಾದ ವಾದಭೂಮಿಕೆಯನ್ನು ಅವನು ಸೃಷ್ಟಿಸಿಕೊಂಡ. ಅಂತೆಯೇ ನಾವೆಲ್ಲರೂ! ನಮ್ಮದೇ ಸರಿಯೆಂದು ನಾವು ನಾಲ್ಕಾರು ಸಾರಿ ಹೇಳಿಕೊಂಡರೆ ಕೊನೆಗೆ ನಮ್ಮ ಅನ್ಯಾಯವನ್ನೇ ನ್ಯಾಯವೆಂದು ನಾವು ನಂಬುವ ಸ್ಥಿತಿ ಬರುತ್ತದೆ. ಇಂಥ ಮಾನಸಿಕ ಧೋರಣೆ ತುಂಬ ಅಪಾಯಕರ. ಜಗತ್ತಿನ ಇಂದಿನ ಪರಿಸ್ಥಿತಿಗೆ ಇದೇ ಮುಖ್ಯ ಕಾರಣ.

ನ್ಯಾಯಾನ್ಯಾಯಗಳ. ಸತ್ಯಾಸತ್ಯಗಳ ಪರಿಕಲ್ಪನೆ ಆಯಾ ವ್ಯಕ್ತಿಯ, ವರ್ಗದ ಅಥವಾ ಸಮಾಜದ ಮೌಲ್ಯಗಳಿಗೆ ಅನುಗುಣವಾಗಿ ವ್ಯತ್ಯಾಸವಾಗುತ್ತದೆ. ಒಂದು ಯುಗದಲ್ಲಿ ನ್ಯಾಯವೆನಿಸಿದ್ದು ಇನ್ನೊಂದು ಯುಗದಲ್ಲಿ ಅಪರಾಧವಾಗಬಹುದು. ಅಣ್ಣ ತಂಗಿಯರು ಪರಸ್ಪರ ವಿವಾಹವಾಗುವುದು ಮಾನವ ನಾಗರಿಕತೆಯ ಆದಿಕಾಲದಲ್ಲಿ ಬಹುಶಃ ಅಪರಾಧವಾಗಿರಲಿಲ್ಲ. ಯಮನ ತಂಗಿಯಾದ ಯಮಿ ತನ್ನ ಅಣ್ಣನನ್ನೇ ಪ್ರೀತಿಸಿದಳು. ಆದರೆ ಯಮ ಇದಕ್ಕೆ ಒಡಂಬಡಲಿಲ್ಲ. ಐವರು ಪತಿಯರನ್ನು ಮದುವೆಯಾಗುವುದು ಮಹಾಭಾರತದ ಕಾಲಕ್ಕೆ ಸರಿಯೆನಿಸಿರಬಹುದು. ಇಂದು ಅದನ್ನು ನೆನೆಯುವುದು ಕೂಡ ಕಷ್ಟ. ಬಹುಪತ್ನೀತ್ವ ಹಿಂದೆ ಅಪರಾಧವಾಗಿರಲಿಲ್ಲ. ಅದೊಂದು ಪ್ರತಿಷ್ಠೆಯ ಸಂಗತಿಯಾಗಿತ್ತು. ಇಂದು ಅದು ಅಪರಾಧ. ಏಕಪತ್ನೀವ್ರತ ರಾಮನ ಕಾಲದಲ್ಲಿ ಆದರ್ಶ; ಆದರೆ ಈಗ ಸಾಮಾನ್ಯ. ಕೋಟ್ಯಂತರ ರೂಪಾಯಿ ಬಂಡವಾಳ ಹಾಕಿ ಉದ್ಯಮ ನಡಸುವುದು ಹಲವು ದೇಶಗಳಲ್ಲಿ ದ್ರೋಹವೇನೂ ಅಲ್ಲ. ಆದರೆ ರಷ್ಯದಂಥ ದೇಶದಲ್ಲಿ ಅದಕ್ಕೆ ಎಡೆಯಿಲ್ಲ. ಒಬ್ಬ ವ್ಯಕ್ತಿ ಮಾಡಿದ ಕೊಲೆ ಅಪರಾಧವಾಗುತ್ತದೆ. ಆದರೆ ರಾಷ್ಟ್ರ ಮಾಡಿದ್ದು ಕೊಲೆಯಾಗುವುದಿಲ್ಲ. ಅದು ದೇಶದ ರಕ್ಷಣೆಗಾಗಿ ಅಗತ್ಯ. ಚಾರ್ಲಿ ಚಾಪ್ಲಿನರ 'ಮಸ್ಯೂರ್ ವರ್ಡ್ಯೂ' ಎಂಬ ಚಲನಚಿತ್ರದಲ್ಲಿ ಈ ಕಟುಸತ್ಯ ನಿಚ್ಚಳವಾಗಿ ನಿರೂಪಿತವಾಗಿದೆ.

'ಪಾಪಮಿದು. ಪುಣ್ಯಮಿದು. ಹಿತರೂಪಮಿದು. ಅಹಿತ ಪ್ರಕಾರಮಿದು. ಸುಖಮಿದು, ದುಃಖೋಪಾತ್ತಮಿದು-ಎಂದು ಅರಿಪುಗುಮ್ ಆ ಪರಮ ಕವಿಪ್ರಧಾನರಾ ಕಾವ್ಯಂಗಳ್.' ಎಂದು ನೃಪತುಂಗ ಹೇಳಿದ್ದಾನೆ. ಪಾಪ ಪುಣ್ಯ ನ್ಯಾಯ ಅನ್ಯಾಯ ಸತ್ಯ ಅಸತ್ಯಗಳ ಬಗ್ಗೆ ನಮ್ಮ ಸಾಹಿತ್ಯ ಕೃತಿಗಳೂ ಧರ್ಮಗ್ರಂಥಗಳೂ ನ್ಯಾಯಸಿದ್ಧಾಂತಗಳೂ ಕೇವಲ ಕೈಮರಗಳಾಗಬಹುದಷ್ಟೆ. ಪ್ರತಿಯೊಬ್ಬನೂ ತನ್ನ ಬಾಳಿನಲ್ಲಿ ಎದುರಿಸುವ ಪ್ರತಿಯೊಂದು ಸನ್ನಿವೇಶವೂ ಅವನೊಬ್ಬನಿಗೇ. ಆಯಾ ಸಂದರ್ಭಕ್ಕೇ ವಿಶಿಷ್ಟವಾದದ್ದು. ಅಂದಂದೇ ಅದಕ್ಕೆ ಯಥೋಚಿತ ಉತ್ತರ ಕಂಡುಕೊಳ್ಳಬೇಕು. ಇತರರ ನೆರವು ಎಷ್ಟಕ್ಕೂ ಸಾಲದು. ಅಡಿಗರು ಹೇಳಿರುವ ಹಾಗೆ, 'ನಿನಗೆ ನೀನೇ ಗೆಳೆಯ. ನಿನಗೆ ನೀನೇ.' ನಮ್ಮ ವಿವೇಚನಾಶಕ್ತಿಯನ್ನೂ ವಿವೇಕವನ್ನೂ ನಾವು ಸದಾ ಜಾಗ್ರತವಾಗಿಟ್ಟುಕೊಂಡಿರಬೇಕು. ಅವೇ ನಮ್ಮ ಗೆಳೆಯರು.

VI

ಧನ್ಯವಾದ

Hearts like doors can open with ease
To very very little keys ;
And don't forget that two of these
Are : 'Thank you, sir' and 'If you please.'

ಮಾನವರ ಹೃದಯಗಳು ಬಾಗಿಲುಗಳಿದ್ದ ಹಾಗೆ. ಬಲು ಸಣ್ಣ ಬೀಗದ ಕೈಗಳಿಂದ ಅವನ್ನು ತೆರೆಯಬಹುದು. 'ಉಪಕಾರವಾಯಿತು, ಸ್ವಾಮಿ'. 'ದಯವಿಟ್ಟು ಮಾಡಿಕೊಡುತ್ತೀರಾ?' ಎಂಬವು ಇಂಥ ಎರಡು ಬೀಗದ ಕೈಗಳು.

ಒಳ್ಳೆಯ ಮಾತಿಗೆ ದೈವಿಕ ಶಕ್ತಿಯುಂಟು. ದ್ವೇಷ ಅಸೂಯೆಗಳ ಬಿರುಗಾಳಿಗಳನ್ನಡಗಿಸಲು ಒಳ್ಳೆಯ ಮಾತೇ ಕೀಲಿಕೈ. ನಮ್ಮ ಮಹಾಪುರುಷರೆಲ್ಲ ದಯಾಳುಗಳು. ಬುದ್ಧ ಕರುಣೆಯ ಮೂರ್ತಿ. ಏಸು ಕ್ರಿಸ್ತನಿಗೆ ಪಾಪಿಗಳಲ್ಲಿ ಅನುಕಂಪ. ಶ್ರೀರಾಮ ಅಹಲ್ಯೋದ್ಧಾರಕ. ಕೃಷ್ಣ ಕುಬ್ಜೆಯ ಗೂನು ಬೆನ್ನನ್ನು ನೆಟ್ಟಗೆ ಮಾಡಿದ. ಮಹಾತ್ಮಾ ಗಾಂಧಿ ತಮ್ಮ ಶತ್ರುಗಳನ್ನು ಕೂಡ ದ್ವೇಷಿಸುತ್ತಿರಲಿಲ್ಲ.

ಮಹಾತ್ಮಾ ಗಾಂಧಿಯವರು ದಕ್ಷಿಣ ಆಫ್ರಿಕದ ನೇಟಾಲನ್ನು ಮೊದಲ ಬಾರಿಗೆ ಭೇಟಿ ಮಾಡಿದಾಗ ನಡೆದ ಒಂದು ಸಂಗತಿ ನೆನಪಿಗೆ ಬರುತ್ತದೆ. ಅವರು ಅಲ್ಲಿಯ ಹೋಟಲೊಂದರಲ್ಲಿ ಭೋಜನ ಮಾಡಿದರು. ಊಟ ಬಡಿಸಿದ ಸೇವಕನಿಗೆ ಅದರ ಶುಲ್ಕ ತೆರುತ್ತಾ ಅವರು ಅವನಿಗೆ ಧನ್ಯವಾದ ಅರ್ಪಿಸಿದರು. ನಿನ್ನ ಪ್ರೀತಿಯ ಸೇವೆಗಾಗಿ ನಾನು ಕೃತಜ್ಞ ಎಂದರು.

ಆ ಮಾತು ಕೇಳಿ ಪರಿಚಾರಕನ ಕಣ್ಣಲ್ಲಿ ನೀರು ಬಂತು. 'ನಿಮ್ಮನ್ನು ನಾನು ಎಂದೂ ಮರೆಯಲಾರೆ.' ಎಂದು ಅವನು ಹೇಳಿದ. 'ನನ್ನ ಇಪ್ಪತ್ತೈದು ವರ್ಷಗಳ ಸೇವಾವೃತ್ತಿಯಲ್ಲಿ ಯಾರೂ ಎಂದೂ ನನಗೆ ಕೃತಜ್ಞತೆ ಸಮರ್ಪಿಸಿರಲಿಲ್ಲ.' ಎಂದ.

ಒಂದು ಒಳ್ಳೆಯ ಮಾತು ಬಹಳ ಪವಾಡ ಮಾಡಬಲ್ಲುದು. ದಪ್ಪ ಬಂಡೆಯನ್ನು ಮೀಟಲು ಬಳಸುವ ಹಾರೆಯ ಹಾಗೆ ಅದು. ಹಾರೆ ಸಣ್ಣದಾದರೂ ಹದವರಿತು ಬಳಸಿದಾಗ ಅದು ಬಂಡೆಯನ್ನು ಅಲುಗಿಸಬಲ್ಲುದು. ಮುಖ್ಯವಾಗಿ ನೆನಪಿನಲ್ಲಿಡಬೇಕಾದ ವಿಚಾರವೆಂದರೆ, ಒಳ್ಳೆಯ ಮಾತುಗಳನ್ನು ಔಚಿತ್ಯಪೂರ್ಣವಾಗಿ ಬಳಸಬೇಕು. ನಿಧಾನವಾಗಿ ಪ್ರಾಮಾಣಿಕತೆಯಿಂದ ಬಳಸಿದ ಒಳ್ಳೆಯ ಮಾತಿಗೆ ಮಹಾಶಕ್ತಿ ಪ್ರಾಪ್ತವಾಗುತ್ತದೆ. 'ಬಿದ್ದು ಹೋಗುವ ಮಾತು ಬಿದ್ದು ಹೋಗಲಿ' ಎಂದು ಬಳಸಿದರೆ ಅದು ವ್ಯರ್ಥವೆನಿಸೀತು. ಕೆಟ್ಟ ಪರಿಣಾಮವನ್ನೇ ಉಂಟುಮಾಡೀತು.

ಬೆವರ್ಲಿ ನಿಕಾಲ್ಸ್ ಎಂಬ ಆಂಗ್ಲ ಲೇಖಕನೊಬ್ಬ ಎರಡನೆಯ ಮಹಾಯುದ್ಧದ ಕಾಲದಲ್ಲಿ ಭಾರತಕ್ಕೆ ಬಂದಿದ್ದ. ಅವನು ಆಗಿನ ಬ್ರಿಟಿಷ್ ಸರ್ಕಾರದ ಖರ್ಚಿನಲ್ಲಿ ದೇಶವನ್ನೆಲ್ಲ ಸುತ್ತಾಡಿದ. 'ಭಾರತೀಯರು ಸ್ವಾತಂತ್ರ್ಯಕ್ಕೆ ಅನರ್ಹರು. ಬ್ರಿಟಿಷರು ಅವರಿಗೆ ಉಪಕಾರ ಮಾಡುತ್ತಿದ್ದಾರೆ. ಅವರಿಗೆ ನಾಗರಿಕತೆ ಕಲಿಸುತ್ತಿದ್ದಾರೆ.' ಎಂದು ಅವನು ಬರೆಯಬೇಕೆಂಬುದೇ ಅವನನ್ನು ಭಾರತಕ್ಕೆ ಕರೆಸಿದ್ದುದರ ಉದ್ದೇಶ.

ಅವನು ಒಂದು ಪುಸ್ತಕವನ್ನೂ ಬರೆದ. ಅದರ ಹೆಸರು *A Verdict on India* : ಭಾರತದ ಬಗ್ಗೆ ನೀಡಿದ ತೀರ್ಪು. ಭಾರತವನ್ನಾಳುತ್ತಿದ್ದವರೇ ಸುಸಂಸ್ಕೃತರು. ಭಾರತೀಯರಿಗೆ ನಯನಾಜೂಕುಗಳೇ ಗೊತ್ತಿಲ್ಲ. ಎಂಬುದು ಅದರ ಸಾರಾಂಶ. ಈ ಜನ ಎಷ್ಟು ಹಿಂದುಳಿದವರೆಂದರೆ, ಇಂಗ್ಲಿಷಿನ **thanks** ಎಂಬುದಕ್ಕೆ ಸಮಾನವಾದ ಪದ ಯಾವ ಭಾರತೀಯ ಭಾಷೆಯಲ್ಲೂ ಇಲ್ಲ. ಎಂಬುದು ಅವನ ಒಂದು ತೀರ್ಪು. ಹೈದರಾಬಾದಿನ ನಿಜಾಮರ ಮಗಳು 'ಶುಕ್ರಿಯಾ' ಎಂಬ ಪದವನ್ನು ಹೇಳಿದಳಂತೆ. ಅದು ಪಾರಸೀ ಮೂಲದ ಪದ ಎಂದು ಅವನ ಒಕ್ಕಣೆ.

ಆದರೆ ಬೆವರ್ಲಿ ನಿಕಾಲ್ಸನ ತೀರ್ಪು ಮೌಢ್ಯದ ಫಲ. ಧನ್ಯವಾದ, ಕೃತಜ್ಞತೆ ಮುಂತಾದ ಶಬ್ದಗಳಿಗೇನೂ ನಮ್ಮಲ್ಲಿ ಕೊರತೆಯಿಲ್ಲ. ಸಾಲ ತೀರಿಸುವಂತೆ ಇಂಥ ಮಾತುಗಳನ್ನು ಯಾಂತ್ರಿಕವಾಗಿ ಒದರಿ, ದುರ್ದಾನ ತೆಗೆದುಕೊಂಡವರಂತೆ ಹಿಂದಿರುಗಿ ನೋಡದೆ ಕೊಸರಿಕೊಂಡು ಹೋಗುವುದು ಭಾರತೀಯರ ಜಾಯಮಾನವಲ್ಲ. ಭಾರತೀಯ ಸಂಸ್ಕೃತಿಯ ತಿರುಳೇ ಧನ್ಯತೆಯ, ಕೃತಕೃತ್ಯತೆಯ ಧೋರಣೆ. 'ಅಯ್ಯ ಎಂದಡೆ ಸ್ವರ್ಗ, ಎಲವೊ ಎಂದಡೆ ನರಕ. ದೇವ ಭಕ್ತ ಜಯ ಜೀಯ ಎಂಬ ನುಡಿಯೊಳಗೆ ಕೈಲಾಸವಿಹುದು.' ಎನ್ನುತ್ತಾರೆ ಬಸವಣ್ಣ. 'ಸಂತೋಷಂ ಜನಯೇತ್ ಪ್ರಾಜ್ಞಃ. ತದೇವ ಈಶ್ವರ ಪೂಜನಂ.' ಇದು ಗೀತೆಯ ಮಾತು.

ನಮ್ಮ ನಡೆನುಡಿಗಳು ಗಣಿತದಲ್ಲಿ ಬರುವ ಸೊನ್ನೆಗಳ ಹಾಗಂತೆ. ಸ್ವತಃ ಅವು ಬರಿ ಸೊನ್ನೆ, ಶೂನ್ಯ. ಆದರೆ ಅಂಕಿಗಳ ಮುಂದೆ ಹಾಕಿದ ಸೊನ್ನೆಗಳಿಗೆ ಬೆಲೆ ಬರುತ್ತದೆ. ಎಷ್ಟು ಸೊನ್ನೆಗಳನ್ನು ಹಾಕಿದರೆ ಅಷ್ಟು ಹೆಚ್ಚು ಬೆಲೆ. ಇತರರೊಂದಿಗೆ ವ್ಯವಹರಿಸುವಾಗ ನಮಗೆ ಬೆಲೆ ಬರುವುದು ನಮ್ಮ ಒಳ್ಳೆಯ ನಡೆನುಡಿಗಳಿಂದಲೇ. ಕೆಟ್ಟ ಮಾತೂ ಕೆಟ್ಟ ನಡತೆಯೂ ಅಂಕಿಗಳ ಹಿಂದಿನ ಸೊನ್ನೆಗಳಂತೆ– ಮೌಲ್ಯಹೀನ, ನಿರರ್ಥಕ. ದಶಮಾಂಶದ ಚುಕ್ಕಿಯ ಮುಂದೆ ಬರುವ ಸೊನ್ನೆಗಳಂತೆಯೂ ನಾವು ಆಗಬಾರದು. ಮಾನವತೆಯಲ್ಲಿ ಒಂದಾಗಿ ನಾವು ಪೂರ್ಣಾಂಕಗಳಾದಾಗಲೇ ಸಾರ್ಥಕತೆ. ನಾವು ಅಲ್ಪಾಂಕಗಳಾದರೂ, ಶೂನ್ಯಾಂಕಗಳಾದರೂ, ಇತರರೊಂದಿಗೆ ಕೂಡಿದಾಗ ನಮಗೆ ಬೆಲೆ ಹೆಚ್ಚುತ್ತದೆ. ಒಳ್ಳೆಯ ಮಾತು ಈ ಕೂಡುವಿಕೆಯನ್ನು ಸಾಧಿಸಬಲ್ಲ ಸಿಮೆಂಟು.

ಪುಸ್ತಕಲೋಕ

ನೋಬೆಲ್ ಅರ್ಥಶಾಸ್ತ್ರಜ್ಞರು: (Nobel Economists). ಕೆ. ಪುಟ್ಟಸ್ವಾಮಯ್ಯ. ನೃಸಿಂಹ ಪ್ರಕಾಶನ. ೧೧೯. ಐದನೇ ಬ್ಲಾಕ್, ಬೆಂಗಳೂರು–೬೫೦೦೧೦, ೧೯೭೭. ಪುಟಗಳು–೧೮೨. ಬೆಲೆ ರೂ. ೭೦

ಸ್ವೀಡಿಶ್ ಅಕಾಡೆಮಿಯವರು ಕೊಡುವ ನೊಬೆಲ್ ಪಾರಿತೋಷಕ ವ್ಯಕ್ತಿಯ ಅತ್ಯುನ್ನತ ಪಾಂಡಿತ್ಯ ಮತ್ತು ಸೇವೆಗೆ ಸಲ್ಲುವ ಅತಿ ಹೆಚ್ಚಿನ ಮನ್ನಣೆ. ೧೯೦೧ರಿಂದ ಆಲ್‌ಫ್ರೆಡ್ ಬರ್ನಾಡ್ ನೊಬೆಲ್ ದತ್ತಿಯಿಂದ ರಸಾಯನ. ಭೌತ. ವೈದ್ಯಕೀಯ. ಸಾಹಿತ್ಯ ಮತ್ತು ವಿಶ್ವಶಾಂತಿ ಕ್ಷೇತ್ರಗಳಲ್ಲಿ ನೀಡಿದ ಕೊಡುಗೆಗಳಿಗಾಗಿ ಪ್ರತಿವರ್ಷ ನೊಬೆಲ್ ಪ್ರಶಸ್ತಿ ವಿಜೇತರ ಹೆಸರುಗಳನ್ನು ಪ್ರಕಟಿಸಲಾಗುತ್ತಿದೆ. ಇದನ್ನು ಸಾರಸ್ವತ ಲೋಕದ ಪ್ರತಿಯೊಬ್ಬರೂ ಕಾತುರತೆಯಿಂದ ಎದುರು ನೋಡುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಅರ್ಥಶಾಸ್ತ್ರವು ಒಂದು ಪ್ರಮುಖ ಹಾಗೂ ಜಟಿಲವಾದ ಕ್ಷೇತ್ರವಾಗಿ ಬೆಳೆದಿದೆ. ಅರ್ಥಶಾಸ್ತ್ರದ ಬೆಳವಣಿಗೆ ಆರ್ಥಿಕ ಪ್ರಗತಿಯ ಒಂದು ಪ್ರಮುಖ ಆಧಾರವಾಗಿದ್ದು. ಈ ಕ್ಷೇತ್ರವೂ ಕೂಡ ಸ್ವೀಡಿಶ್ ಅಕಾಡೆಮಿಯ ಮನ್ನಣೆ ಪಡೆದಿರುವುದು ಆಶ್ಚರ್ಯವೇನಲ್ಲ. ೧೯೬೯ರಿಂದ ಸ್ವೀಡಿಶ್ ಅಕಾಡೆಮಿಯು ಅರ್ಥಶಾಸ್ತ್ರಜ್ಞರಿಗೂ ನೊಬೆಲ್ ಪ್ರಶಸ್ತಿಗಳನ್ನು ಕೊಡುತ್ತ ಬಂದಿದೆ.

ಅರ್ಥಶಾಸ್ತ್ರದ ಪಾಂಡಿತ್ಯಕ್ಕೆ ಗಣಿತ. ಸಂಖ್ಯಾಶಾಸ್ತ್ರ. ಸಮಾಜಶಾಸ್ತ್ರ ಮುಂತಾದ ಸಂಬಂಧಪಟ್ಟ ಕ್ಷೇತ್ರಗಳ ಆಳವಾದ ಅಧ್ಯಯನ ಅವಶ್ಯಕ. ಈ ಕ್ಷೇತ್ರದಲ್ಲಿ ಸಾಕಷ್ಟು ಕೃತಿಗಳು ಪ್ರಕಟವಾಗಿದ್ದರೂ ಕೂಡ. ನೊಬೆಲ್ ಪಾರಿತೋಷಕ ವಿಜೇತರ ವ್ಯಕ್ತಿತ್ವದ ಬಗ್ಗೆ ಆಳವಾದ ಅಧ್ಯಯನ ಮಾಡಿ ಬರೆದ ಕೃತಿಗಳು ವಿರಳ. ಈ ದಿಸೆಯಲ್ಲಿ ಡಾ. ಪುಟ್ಟಸ್ವಾಮಯ್ಯನವರದು ಒಂದು ಪ್ರಮುಖ ಕೃತಿ. ನೊಬೆಲ್ ಪ್ರಶಸ್ತಿ ವಿಜೇತರ ವ್ಯಕ್ತಿತ್ವ ಏನು? ಅವರಲ್ಲಿ ಯಾವ ರೀತಿಯ ಬೌದ್ಧಿಕ ಶಕ್ತಿಗಳಿವೆ? ನೊಬೆಲ್ ಪಾರಿತೋಷಕ ಪಡೆಯಲು ಅವರ ನಿರ್ದಿಷ್ಟ ಕಾಣಿಕೆಗಳು ಏನಿರಬೇಕು? ಈ ಕುತೂಹಲಕಾರಿ ಪ್ರಶ್ನೆಗಳಿಗೆ ಉತ್ತರಗಳು ಮೇಲುನೋಟದಲ್ಲಿ ಸುಲಭವಾಗಿ ಕಂಡರೂ ವಾಸ್ತವದಲ್ಲಿ ತೃಪ್ತಿಕರ ಉತ್ತರಗಳು ದೊರಕುವುದು ಕಠಿಣ. ಇದಕ್ಕೆ ನೊಬೆಲ್ ಅಕಾಡೆಮಿಯಿಂದ ಪ್ರತ್ಯಕ್ಷವಾಗಿ ಮಾಹಿತಿ ದೊರಕದೆ ಇರುವುದೂ ಒಂದು ಕಾರಣ. ಆದರೂ ಸಹ ಡಾ. ಪುಟ್ಟಸ್ವಾಮಯ್ಯನವರ ಪುಸ್ತಕ ಈ ಕ್ಷೇತ್ರದಲ್ಲಿ ಲಭ್ಯವಿರುವ ಮಾಹಿತಿಯಿಂದಲೇ ಅರ್ಥಶಾಸ್ತ್ರ ನೊಬೆಲ್ ವಿಜ್ಞಾನಿಗಳ ವ್ಯಕ್ತಿ ಚಿತ್ರಣವನ್ನು ಮೂಡಿಸಿದೆ. ಈ ಪುಸ್ತಕ ಖ್ಯಾತ ಅರ್ಥಶಾಸ್ತ್ರಜ್ಞ ಕೇನ್ಸ್ (**Keynes**). ಮಾರ್ಷಲ್ ಮುಂತಾದ ಅರ್ಥಶಾಸ್ತ್ರ ದಿಗ್ಗಜಗಳ ವ್ಯಕ್ತಿ ಚಿತ್ರಣಗಳನ್ನು ಮರಳಿ ನೆನಪು ಮಾಡಿಕೊಡುತ್ತದೆ.

ಈ ಪುಸ್ತಕದಲ್ಲಿ ಚಿತ್ರಿಸಿರುವ ಅರ್ಥಶಾಸ್ತ್ರಜ್ಞರು ಉದ್ದಾಮ ಪಂಡಿತರು. ಆ ಕ್ಷೇತ್ರದಲ್ಲಿ ಸಿದ್ಧಾಂತಗಳ ನಿರೂಪಣೆ ಮತ್ತು ನಿಜ ಜೀವನದಲ್ಲಿ ಇವುಗಳ ಬಳಕೆಗೆ ಜೀವನವನ್ನೇ ಮುಡಿಪಿಟ್ಟವರು. ಡಾ. ಪುಟ್ಟಸ್ವಾಮಯ್ಯನವರು ಈ ತಜ್ಞರ ಕಾಣಿಕೆಗಳ ಸಾಮಾಜಿಕ ಉಪಯುಕ್ತತೆಯನ್ನು ವಿಶ್ಲೇಷಿಸಿರುವುದೇ ಅಲ್ಲದೆ ಅವರ ಕೃತಿಗಳ ಸಮಗ್ರ ಪಟ್ಟಿಗಳನ್ನೂ ಸಹ ಕೊಟ್ಟಿರುತ್ತಾರೆ.

ನಾರ್ವೆಯ ರಾಗ್ನರ್ ಫ್ರಿಶ್ (**Ragner Frish**) ಮತ್ತು ನೆದರ್‌ಲ್ಯಾಂಡಿನ ಜಾನ್ ಟಿಂಬರಜನ್ (**Jan Timbergen**) ನೊಬೆಲ್ ಪ್ರಶಸ್ತಿ ಪಡೆದ ಅರ್ಥಶಾಸ್ತ್ರಜ್ಞರಲ್ಲಿ ಮೊದಲನೆಯವರು. ಇವರು ಆರ್ಥಿಕವಾಗಿ ಹಿಂದುಳಿದ ದೇಶಗಳ ಆರ್ಥಿಕ ಸಮಸ್ಯೆಗಳ ಪರಿಹಾರಗಳ ಅನ್ವೇಷಣೆಯಲ್ಲಿ ಜ್ಞಾನದಾಹ ಹೊಂದಿದವರು. ಫ್ರಿಶ್ ಹಾಗೂ ಟಿಂಬರ್‌ಜನ್‌ರವರು ಈ ದಿಶೆಯಲ್ಲಿ ಕ್ಲಿಷ್ಟವಾದ ಮಾದರಿಗಳನ್ನೂ (**Models**) ನಿರ್ಮಿಸಿದರು. ಟಿಂಬರ್‌ಜನ್‌ರವರ ದೃಷ್ಟಿ ಮಾನನೀಯತೆಯತ್ತ.

ಅವರ ಕಾರ್ಯವೊಲವು ಅಂತರರಾಷ್ಟ್ರೀಯ ಆರ್ಥಿಕ ಮಿಲನ ಮತ್ತು ವಿಶ್ವಪ್ರಗತಿ ಯೋಜನೆಗಳೆಡೆಗೆ. ಇವುಗಳು ಫ್ರಿಶ್‌ರವರ ಆರ್ಥಿಕ ದೃಷ್ಟಿಕೋನವನ್ನು ಪ್ರಾಪಂಚಿಕ ನೋಟದತ್ತ ಬೆಳೆಸಲು ಸಹಕಾರಿ ಯಾದುವು. ಈ ಅಂಶಗಳನ್ನು ಡಾ. ಪುಟ್ಟಸ್ವಾಮಯ್ಯನವರು ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ಕಮ್ಯುನಿಸ್ಟ್ ಮತ್ತು ಪಾಶ್ಚಿಮಾತ್ಯ ಆರ್ಥಿಕ ಪದ್ಧತಿಗಳ ಸಮ್ಮಿಲನದ ದೆಸೆಯನ್ನು ಗುರುತಿಸಿರುವುದರಲ್ಲಿ ಬಹುಶಃ ಟಿಂಬರ್‌ಜನ್ ಮೊದಲಿಗರು. ಶ್ರೀಮಂತ ದೇಶಗಳಿಂದ ಬಡದೇಶಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಸಂಪತ್ತನ್ನು ವರ್ಗಾವಣೆ ಮಾಡುವ ಆದರ್ಶದ ಅವಶ್ಯಕತೆಯನ್ನು ಕಂಡುಹಿಡಿದವರಲ್ಲಿ ಟಿಂಬರ್‌ಜನ್‌ರ ಒಂದು ಪ್ರಮುಖ ಕಾಣಿಕೆಯೆಂದರೆ. ಯಾವುದೇ ಒಂದು ಆರ್ಥಿಕ ನೀತಿಯಲ್ಲಿ ಸಫಲತೆಯನ್ನು ನಿರೀಕ್ಷಣೆ ಮಾಡಬೇಕಾದರೆ ಆ ಆರ್ಥಿಕ ನೀತಿಯ ಗುರಿಗಳು. ಸಾಧನೆಗಳು ಸಮಾನವಾಗಿರಬೇಕು. ಇದು ವಾಸ್ತವವಾಗಿ ಬೀಜಗಣಿತಶಾಸ್ತ್ರದಿಂದ ಬಂದಂತಹ ಒಂದು ಮೂಲಭೂತ ಸೂತ್ರ: ಯಾವುದೇ ಒಂದು ಸಮೀಕರಣ ಮಾದರಿಯಲ್ಲಿ ಅವ್ಯಕ್ತಗಳಿಗೆ (Unknowns) ಉತ್ತರ ದೊರಕಬೇಕಾದರೆ. ಅವ್ಯಕ್ತಗಳು ಮತ್ತು ಸಮೀಕರಣಗಳು ಸಮಾನಾಂಕಿಯಲ್ಲಿರಬೇಕು. ಟಿಂಬರ್‌ಜನ್‌ರಂತೆ ಫ್ರಿಶ್ ಅವರು ಸಹ ಅರ್ಥಶಾಸ್ತ್ರ ಮಿತಿಯಲ್ಲಿ (Econometrics) ಮೂಲಭೂತವಾದ ಕೆಲಸವನ್ನು ಮಾಡಿದ್ದಾರೆ. ಡಾ. ಪುಟ್ಟಸ್ವಾಮಯ್ಯ ನವರು ಭಾರತದ ಆರ್ಥಿಕ ಯೋಜನೆಗೆ ಫ್ರಿಶ್ ಸಲ್ಲಿಸಿದ ಕಾಣಿಕೆಗಳ ಪ್ರಸ್ತಾಪವನ್ನು ಮಾಡಿದ್ದಾರೆ.

ಪುಸ್ತಕದ ನಾಲ್ಕನೇ ಅಧ್ಯಾಯ ನೊಬೆಲ್ ಅರ್ಥಶಾಸ್ತ್ರಜ್ಞ ಪಾಲ್ ಸಾಮ್ಯುಯಲ್‌ಸನ್ (Paul Samuelson) ಬಗ್ಗೆ ಮೀಸಲಾಗಿದೆ. ಪಾಲ್ ಸಾಮ್ಯುಯಲ್‌ಸನ್‌ರ ಕೊಡುಗೆಗಾಗಿ ಅವರನ್ನು "ಅರ್ಥಶಾಸ್ತ್ರಜ್ಞರ ಅರ್ಥಶಾಸ್ತ್ರಜ್ಞ" ಎನ್ನಬಹುದು. ಇವರ ವೈಜ್ಞಾನಿಕ ವಿಶ್ಲೇಷಣೆಗಳು ಅರ್ಥಶಾಸ್ತ್ರದ ಮಟ್ಟವನ್ನೇ ಹೆಚ್ಚಿಸಿವೆ. ಈ ನಿರ್ದಿಷ್ಟ ಕಾಣಿಕೆಗಾಗಿ ನೊಬೆಲ್ ಅಕಾಡೆಮಿಯು ಇವರಿಗೆ ನೊಬೆಲ್ ಪ್ರಶಸ್ತಿಯನ್ನು ಕೊಟ್ಟಿದ್ದನ್ನು ಲೇಖಕರು ಬರೆದಿದ್ದಾರೆ. ಪಾಲ್ ಸಾಮ್ಯುಯಲ್‌ಸನ್ ತಮ್ಮ ಮೂವತ್ತೆರಡನೆಯ ವಯಸ್ಸಿನಲ್ಲಿಯೇ ಅಮೆರಿಕದ ವಿಶ್ವವಿಖ್ಯಾತ ವಿದ್ಯಾಲಯವಾದ ಎಮ್.ಐ.ಟಿ. (M I.T)ಯಲ್ಲಿ ಪ್ರಾಧ್ಯಾಪಕರಾಗಿದ್ದರು. ಅವರ ಡಾಕ್ಟರೇಟ್ ನಿಬಂಧ "ಅರ್ಥಶಾಸ್ತ್ರ ವಿಶ್ಲೇಷಣೆಯ ಬುನಾದಿ" (Foundations of Economic Analysis). ಅದು ಐನ್‌ಸ್ಟೀನ್‌ರ ಸಾಪೇಕ್ಷ ಸಿದ್ಧಾಂತದಂತೆ (Theory of Relativity) ಅತಿ ಕ್ಲಿಷ್ಟ. ಆದರೆ ಅತಿ ಮಹತ್ವಪೂರ್ಣ. ಇವರ ಜನಪ್ರಿಯವಾದ ಪುಸ್ತಕ ಅರ್ಥಶಾಸ್ತ್ರ (Economics) ವಿದ್ಯಾರ್ಥಿಗಳಿಗೆ ವೇದವೆನಿಸಿದೆ. ಲೇಖಕರು ಹೇಳಿದಂತೆ ಅರ್ಥಶಾಸ್ತ್ರದಲ್ಲಿ ಪಾಲ್ ಸಾಮ್ಯುಯಲ್‌ಸನ್ ಮುಟ್ಟದ ಅಂಶವೇ ಇಲ್ಲ.

ಪುಸ್ತಕದ ಐದನೇ ಅಧ್ಯಾಯದಲ್ಲಿ ಅರ್ಥಶಾಸ್ತ್ರದ ಇನ್ನೊಬ್ಬ ಧುರೀಣ ಸೈಮನ್ ಕುಜ್ನೆಟ್ಸ್ (Simon Kuznets)ರ ಚಿತ್ರಣ. ಈ ನೊಬೆಲ್ ಪ್ರಶಸ್ತಿ ವಿಜೇತ ತಮ್ಮ ಜೀವಮಾನವನ್ನೇ ಆರ್ಥಿಕ ಪ್ರಗತಿಗೆ ಸಂಬಂಧಿಸಿದ ಮಾಹಿತಿಗಳ ಅಧ್ಯಯನದಲ್ಲಿ ಕಳೆದಿದ್ದಾರೆ. ಅರ್ಥಸಂಖ್ಯಾಶಾಸ್ತ್ರ ದಲ್ಲಿಯೇ ಭದ್ರವಾಗಿ ತಳವೂರಿರುವ ಕೆಲವೇ ಅರ್ಥಶಾಸ್ತ್ರಜ್ಞರಲ್ಲಿ ಕುಜ್‌ನೆಟ್ಸ್ ಒಬ್ಬರು. ಇವರು ಆರ್ಥಿಕ ಬೆಳವಣಿಗೆಯ ಮೇಲೆ ಬರೆದಿರುವ ಕೃತಿಗಳು ಹಲವಾರು ದೇಶಗಳ ಆರ್ಥಿಕ ಬೆಳವಣಿಗೆಯ ವಿಧಾನವನ್ನು ಕುರಿತು ಆಳವಾದ ಅರಿವನ್ನು ಕೊಡುತ್ತದೆ. ಪುಸ್ತಕದ ಆರನೇ ಮತ್ತು ಏಳನೆಯ ಅಧ್ಯಾಯ ನೊಬೆಲ್ ವಿಜೇತರಾದ ಕೆನೆತ್ ಆ್ಯರೊ (Kenneth Arrow) ಮತ್ತು ಜಾನ್ ಹಿಕ್ಸ್ (John Hicks) ರವರ ವ್ಯಕ್ತಿತ್ವ ಮತ್ತು ಕೊಡುಗೆಗಳಿಗಾಗಿ ಸೀಮಿತವಾಗಿದೆ. ಹಿಕ್ಸ್ ಸಿದ್ಧಾಂತ ನಿರೂಪಣೆ ಯಲ್ಲಿ ಖ್ಯಾತ ಕೆನೆತ್ ಆ್ಯರೊ ತನ್ನ ಹೆಸರಿನಲ್ಲಿರುವ ಒಂದು ಪ್ರಮೇಯವನ್ನು ನಿರೂಪಿಸಿದ್ದಾನೆ. ಈ ಆ್ಯರೊ ಪ್ರಮೇಯದ ಪ್ರಕಾರ (Arrow theorem) ವೈಯಕ್ತಿಕ ಬೇಡಿಕೆಯ ರೇಖೆಗಳ ಸಂಕಲನ ಮಾಡಿ ಒಂದು ನಿರ್ದಿಷ್ಟ ಸಾಮಾಜಿಕ ಬೇಡಿಕೆಯ ರೇಖೆಯನ್ನು ಸೃಷ್ಟಿಸುವುದು ಅಸಾಧ್ಯ. ಆ್ಯರೊ ಅವರ ಶೈಲಿ ಗಣಿತಶಾಸ್ತ್ರದಿಂದ ಪ್ರೇರಿತ. ಹಿಕ್ಸ್ ಅವರ ಶೈಲಿ ಇದಕ್ಕೆ ವಿರುದ್ಧವಾದರೂ ಆ್ಯರೊ ಅವರ ಗಣಿತ ಶೈಲಿಯಂತೆ ಕ್ಲಿಷ್ಟ. ಹಿಕ್ಸ್‌ರ ವಿಶಿಷ್ಟ ಕೃತಿಗಳು ಎರಡು: "ಮೌಲ್ಯ ಮತ್ತು ಬಂಡವಾಳ" (Value and Capital) "ಬಂಡವಾಳ ಮತ್ತು ಬೆಳವಣಿಗೆ" (Capital and Growth) ಈ ಕೃತಿಗಳು ಅರ್ಥಶಾಸ್ತ್ರಜ್ಞರ ಅಮೂಲ್ಯ ಆಸ್ತಿ. ಇವರ. ವೇತನ (Wages).

ಅಂತರರಾಷ್ಟ್ರೀಯ ಅರ್ಥಶಾಸ್ತ್ರ ಮತ್ತಿತರ ವಿಷಯಗಳ ಮೇಲಿನ ಕೃತಿಗಳ ಬಗ್ಗೆ ಪುಟ್ಟಸ್ವಾಮಯ್ಯನವರು ಪ್ರಸ್ತಾಪಿಸಿದ್ದಾರೆ.

ವ್ಯಾಸಿಲಿ ಲಿಯಾನ್‌ಟಿಫ್ (Wassily Leontief) ರ ವ್ಯಕ್ತಿ ಚಿತ್ರಣ ಸಮರ್ಪಕವಾಗಿ ಉಲ್ಲೇಖಗೊಂಡಿದೆ. ಲಿಯಾನ್‌ಟಿಫ್ ಆರ್ಥಿಕ ಯೋಜನೆಗಳ ಬೆನ್ನೆಲುಬಾದ "ಉತ್ಪಾದನ ಕಾರಕಗಳ ಹೂಡಿಕೆ ಮತ್ತು ಉತ್ಪಾದನೆ" "Input-Output" ವಿಶ್ಲೇಷಣೆಯ ಜನಕ. ಗಣಿತಶಾಸ್ತ್ರದ ದೃಷ್ಟಿಯಿಂದ "Input output" ಸಾಧನ ಅತಿ ಸರಳ. ಬಂಡವಾಳ. ಉತ್ಪನ್ನದ ದೃಷ್ಟಿಯಿಂದ ಹಾಗೂ ಅರ್ಥವ್ಯವಸ್ಥೆಯ ಅನ್ಯೋನ್ಯತೆಯನ್ನು ಅರ್ಥಮಾಡಿಕೊಳ್ಳುವುದರಲ್ಲಿ ಇದರ ಉಪಯೋಗ ಅನಂತ. ಇದನ್ನು ಬಂಡವಾಳಶಾಹಿ ಮತ್ತು ಸಮಾಜವಾದಿ ಆರ್ಥಿಕ ನೀತಿಗಳಿರುವರಲ್ಲೂ ಬಳಸಬಹುದೆಂಬುದು ಪುಟ್ಟಸ್ವಾಮಯ್ಯನವರ ಮತ.

ಒಂಬತ್ತು ಮತ್ತು ಹತ್ತನೆಯ ಅಧ್ಯಾಯ ಅನೇಕ ದೃಷ್ಟಿಯಲ್ಲಿ ಭಿನ್ನ ದೃಷ್ಟಿಯ ಅರ್ಥತಜ್ಞರಿಬ್ಬರ ವ್ಯಕ್ತಿ ಚಿತ್ರಣ. ಈ ಇಬ್ಬರು ಅರ್ಥತಜ್ಞರು ಫ್ರೆಡ್‌ರಿಕ್ ವಾನ್‌ಹಯಕ್ (Friedrick Von Hayek) ಮತ್ತು ಗನ್ನರ್ ಮಿರ್ಡಾಲ್ (Gunner Myrdal). ಹಯಕ್ ಬಂಡವಾಳಶಾಹಿ ವ್ಯವಸ್ಥೆಯ ಪ್ರಮುಖ ಪ್ರತಿಪಾದಕ. ಬೆಲೆಯ ಸಾಧನ (Price Mechanism) ಮತ್ತು ಈ ವ್ಯವಸ್ಥೆಯಲ್ಲಿರುವ ವೈಯಕ್ತಿಕ ಸ್ವಾತಂತ್ರ್ಯವನ್ನು ಹಲವಾರು ಬರಹಗಳಲ್ಲಿ ಕೊಂಡಾಡಿದ್ದಾರೆ.

ಆರಂಭದಲ್ಲಿ ಹಲವು ರೀತಿಯಲ್ಲಿ ಹಯಕ್‌ರಂತೆ ಸಂಪ್ರದಾಯಕ್ಕೆ ಶರಣಾದ ಮಿರ್ಡಾಲ್ ಕೊನೆಗೆ ಬಂಡವಾಳಶಾಹಿ ಪದ್ಧತಿಯ ದುರ್ಬಲಗಳ ಕಟು ವಿಮರ್ಶಕರಾದರು. ಪುಟ್ಟಸ್ವಾಮಯ್ಯನವರು ಈ ಬದಲಾವಣೆಯ ಕ್ರಮವನ್ನು ಗುರುತಿಸುವುದರಲ್ಲಿ ಸಫಲರಾಗಿದ್ದಾರೆ. "ಬಂಡವಾಳ ಸಿದ್ಧಾಂತ" ಮತ್ತು "ಆರ್ಥಿಕ ಚಕ್ರ" ಈ ಕ್ಷೇತ್ರದಲ್ಲಿ ಹಯಕ್‌ರ ಕಾರ್ಯ ಮಹತ್ವಪೂರ್ಣ. ಸಮತಾವಾದದ ಉಗ್ರ ವಿರೋಧಿ ಮಿರ್ಡಾಲ್ ಸಂಪ್ರದಾಯಬದ್ಧರಲ್ಲ. ಇವರ ಕೃತಿಗಳಾದ "ಅಮೆರಿಕಾದ ನಿಗ್ರೋಗಳು" ಮತ್ತು "ಏಷಿಯನ್ ಡ್ರಾಮ" ಅವರಿಗೆ ಅತ್ಯಂತ ಹೆಚ್ಚಿನ ಪುರಸ್ಕಾರ ಗಳಿಸಿಕೊಟ್ಟವು. ಮಿರ್ಡಾಲ್ ಹಿಂದುಳಿದ ದೇಶಗಳನ್ನು ಆರ್ಥಿಕ ಮತ್ತು ಸಾಮಾಜಿಕ ದೃಷ್ಟಿಗಳಲ್ಲಿ ಗುರುತಿಸಿ ವಿಶ್ಲೇಷಿಸಿದ್ದಾರೆಂಬುದು ಲೇಖಕರ ಮತ. ಲೇಖಕರು ಇಲ್ಲಿ ಮಿರ್ಡಾಲ್‌ರ ಭಾರತೀಯ ಆರ್ಥಿಕ ಯೋಜನೆಯ ತೀವ್ರ ಟೀಕೆಯನ್ನು ಉಲ್ಲೇಖಿಸಿರುವುದು ಗಮನಾರ್ಹ. ಮಿರ್ಡಾಲ್‌ರ ದೃಷ್ಟಿಯಲ್ಲಿ ಭಾರತದ ಆರ್ಥಿಕ ವ್ಯವಸ್ಥೆ ಉನ್ನತ ವರ್ಗದವರಿಂದ ನಿಯಂತ್ರಿಸಲ್ಪಟ್ಟಿದೆ. ದೇಶದ ಯೋಜನೆಯು ತಾಂತ್ರಿಕ ದೃಷ್ಟಿಯಲ್ಲಿ ಉತ್ಕೃಷ್ಟ ಸಾಮಾಜಿಕ ಮತ್ತು ರಾಜಕೀಯ ದೃಷ್ಟಿಯಲ್ಲಿ ಅಸಮರ್ಪಕ. ಇದರಿಂದ ದೇಶದ ಪ್ರಗತಿಗೆ ಆಘಾತ. ಭೂ ಸುಧಾರಣೆ ಮತ್ತು ವ್ಯವಸಾಯ ಕ್ಷೇತ್ರದಲ್ಲಿ ಮೂಲಭೂತ ಬದಲಾವಣೆ ಅನಿವಾರ್ಯ ಎಂಬುದು ಮಿರ್ಡಾಲ್‌ರ ಮತ.

ಕೂಪ್‌ಮನ್ಸ್ (Koopmans) ಮತ್ತು ಕಾಂಟೋರೊವಿಚ್ (Kantorovich) ಇವರಿಬ್ಬರ ಕಾರ್ಯಕ್ಷೇತ್ರಗಳ ಮತ್ತು ಕಾಣಿಕೆಗಳ ಬಗ್ಗೆ ಪುಟ್ಟಸ್ವಾಮಯ್ಯನವರದು ಅತಿ ಸಮಗ್ರ ತಾಂತ್ರಿಕ ವಿಶ್ಲೇಷಣೆ. ಈ ತಜ್ಞರು ಅರ್ಥಶಾಸ್ತ್ರವನ್ನು "ಸಂಶೋಧನಾ ಕಾರ್ಯಾಚರಣೆ" (Operations Research) ದೃಷ್ಟಿಯಲ್ಲಿಟ್ಟುಕೊಂಡವರು. ಇವರದು ಸಂಪನ್ಮೂಲಗಳ ಅತ್ಯಂತ ಸಮರ್ಪಕ ವಿತರಣೆ ಬಗ್ಗೆ ವಿವೇಚನೆ. ಇವರಿಗೆ ನೊಬೆಲ್ ಪ್ರಶಸ್ತಿ ಸಂದಾಯ ಅರ್ಥಶಾಸ್ತ್ರ ವಿಶ್ಲೇಷಣೆಯ ಕ್ಲಿಷ್ಟತೆಯ ಅಂಗೀಕಾರಕ್ಕೆ ಸಲ್ಲುವ ಮಾನ್ಯತೆ.

ಪುಸ್ತಕದ ಕೊನೆಯ ಅಧ್ಯಾಯದಲ್ಲಿ ಫ್ರಿಡ್‌ಮನ್ (Friedman)ರ ಚಿತ್ರಣ. ಫ್ರಿಡ್‌ಮನ್‌ರ ಕೊಡುಗೆಗಳನ್ನು ಲೇಖಕರು ವಿಮರ್ಶಿಸಿದ್ದಾರೆ. ಫ್ರಿಡ್‌ಮನ್‌ರ ಅರ್ಥಶಾಸ್ತ್ರ ವಿಧಾನ. ಮತ್ತು "ಹಣ ಪ್ರಮಾಣ ಸಿದ್ಧಾಂತ"–ಇವುಗಳನ್ನು ಲೇಖಕರು ತೀಕ್ಷ್ಣವಾಗಿ ಪರಿಶೀಲಿಸಿದ್ದಾರೆ. ಅರ್ಥಶಾಸ್ತ್ರಜ್ಞರಲ್ಲಿ ಫ್ರೀಡ್‌ಮನ್‌ರಿಗೆ ಅದ್ವಿತೀಯ ಸ್ಥಾನವಿದೆ.

ಈ ಸಮಗ್ರ ಪುಸ್ತಕದಲ್ಲಿ ಲೇಖಕರು ನೊಬೆಲ್ ಅರ್ಥಶಾಸ್ತ್ರಜ್ಞರು ಮತ್ತು ಅವರ ಕಾಣಿಕೆಗಳನ್ನು ಸ್ಪಷ್ಟವಾಗಿ ಚಿತ್ರಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಪುಟ್ಟಸ್ವಾಮಯ್ಯನವರ ಈ ಕೃತಿ ಜನ

ಸಾಮಾನ್ಯರು ಮತ್ತು ಪಂಡಿತರಿಬ್ಬರಿಗೂ ಉಪಯುಕ್ತವಾಗಿದೆ. ನೊಬೆಲ್ ಅರ್ಥಶಾಸ್ತ್ರಜ್ಞ ವ್ಯಕ್ತಿ ಚಿತ್ರಣ, ಅವರ ಕೊಡುಗೆ ಮತ್ತು ಅವರ ಸಾಮಾಜಿಕ ಮಹತ್ವವನ್ನು ಒಳಗೊಂಡ ಈ ಪುಸ್ತಕ ಒಂದು ಉತ್ತಮ ಕೃತಿ ಎಂದು ಮನ್ನಣೆ ಪಡೆಯುವುದರಲ್ಲಿ ಸಂದೇಹವಿಲ್ಲ. ಇವರಲ್ಲಿ ಪುಟ್ಟಸ್ವಾಮಯ್ಯನವರು ಅತ್ಯಂತ ಸಫಲರಾಗಿದ್ದಾರೆ.

ಅಗರಂ ನರಸಿಂಹನ್

ಯೋಜನೆಯ ರೂಪ ರೇಖೆಗಳು (Aspects of Planning) ಕೆ. ಪುಟ್ಟಸ್ವಾಮಯ್ಯ, ಆಕ್ಸ್‌ಫರ್ಡ್ ಮತ್ತು ಐ. ಬಿ. ಎಚ್. ಪ್ರಕಾಶನ, ದೆಹಲಿ, ಎರಡನೆಯ ಪರಿಷ್ಕೃತ ಆವೃತ್ತಿ, ೧೯೭೭. ಬೆಲೆ ರೂ. ೨೦.

ನಮ್ಮ ರಾಷ್ಟ್ರದಲ್ಲಿ ಕಳೆದ ಎರಡೂವರೆ ದಶಕಗಳಿಂದ ಪಂಚವಾರ್ಷಿಕ ಯೋಜನಾ ಕ್ರಮಗಳು ಎಲ್ಲಾ ಕ್ಷೇತ್ರಗಳಲ್ಲೂ ಮತ್ತು ಪ್ರಾದೇಶಿಕವಾಗಿಯೂ ಹಬ್ಬಿಕೊಂಡಿವೆ. ಸರ್ಕಾರ, ಸ್ವಯಂಸೇವಕ ಸಂಸ್ಥೆಗಳು ಮತ್ತು ಜನ ಸಮುದಾಯ ಈ ಯೋಜನಾ ಪ್ರಯೋಗಶಾಲೆಯಲ್ಲಿ ಭಾಗಿಗಳಾಗಿವೆ. ದೇಶ ವಿದೇಶಗಳಿಂದ ಈ ಯೋಜನೆಗಳಿಗಾಗಿ ವಿವಿಧ ರೂಪದ ನೆರವು ಸಹ ಬಂದಿದೆ. ಆದರೂ ಯೋಜನೆಯ ಪ್ರಗತಿಗೆ ಧಕ್ಕೆ ಬರುವಂತೆ ಅನೇಕ ಹಂತಗಳಲ್ಲಿ ಹಲವು ಸಮಸ್ಯೆಗಳು ತೀವ್ರವಾಗಿ ಎದುರಾಗಿವೆ. ಯೋಜನೆಗಳು ನಿರ್ದಿಷ್ಟ ಕಾಲದಲ್ಲಿ ಗುರಿಯನ್ನು ಮುಟ್ಟಲಾರದಷ್ಟು ಮಹತ್ವಾಕಾಂಕ್ಷೆ ಉಳ್ಳವಾಗಿದ್ದರಿಂದಲೂ ಯೋಜನೆಯ ಕೌಶಲ್ಯ ಜನಸಾಮಾನ್ಯರ ಗಮನವನ್ನು ಸೆಳೆಯದೆ ಇದ್ದುದರಿಂದಲೂ. ಕಾರ್ಯಕ್ರಮವನ್ನು ಆಚರಣೆಗೆ ತರುವಾಗ ಸರ್ಕಾರದ ಆಡಳಿತದಲ್ಲಿ ಸರಿಯಾದ ಸಂಘಟಿತ ವ್ಯವಸ್ಥೆ ಇಲ್ಲದ್ದರಿಂದಲೂ ಬಂಡವಾಳದ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಮುಖ್ಯವಾಗಿ ಬೇಕಾದ ಕೌಶಲ್ಯದ ಕೊರತೆಯಿಂದಲೂ ಮತ್ತು ಈ ಎಲ್ಲಕ್ಕಿಂತ ಮಿಗಿಲಾಗಿ ಜನಗಳಲ್ಲಿ ಮೌಢ್ಯ, ಅನಕ್ಷರತೆ, ಮತ್ತು ನಿರುದ್ಯೋಗ ಹೆಚ್ಚಾಗಿ ಇದ್ದುದರಿಂದಲೂ ಅನೇಕ ಸಮಸ್ಯೆಗಳು ಉದ್ಭವಿಸಿವೆ. ಯೋಜನೆಗಳ ಮುಖಾಂತರ ಪ್ರಗತಿ ಸಾಧಿಸಲ್ಪಡುವುದು ಎಂಬುದರಲ್ಲಿ ಜನರಿಗೆ ವಿಶ್ವಾಸ ಕಡಿಮೆಯಾಗಿದೆ. ಐದು ಪಂಚವಾರ್ಷಿಕ ಯೋಜನೆಗಳಾದರೂ ನಮ್ಮ ದೇಶದ ಜನರಲ್ಲಿ ಬಡತನ ನಿರುದ್ಯೋಗ ಮತ್ತು ರೋಗರುಜಿನಗಳು ಹೆಚ್ಚುತ್ತಿವೆಯೇ ವಿನಃ ಕಡಿಮೆಯಾಗಿಲ್ಲ. ಆರ್ಥಿಕ ಅಸಮಾನತೆ ಹೆಚ್ಚಿದೆ. ಈ ಸಂದರ್ಭದಲ್ಲಿ ಕ್ರಿಯಾತ್ಮಕ ರಚನಾತ್ಮಕ ಯೋಜನೆಯ ವಿವಿಧ ರೂಪರೇಷೆಗಳನ್ನು ಹಲವು ಸ್ತರಗಳಲ್ಲಿ ಸುಲಭವಾಗಿ ಗ್ರಹಿಸಲು ಅನುಕೂಲವಾಗುವಂತೆ ಡಾ. ಕೆ. ಪುಟ್ಟಸ್ವಾಮಯ್ಯನವರ "ಆಸ್ಪೆಕ್ಟ್ಸ್ ಆಫ್ ಪ್ಲ್ಯಾನಿಂಗ್" (Aspects of Planning) ಎಂಬ ಗ್ರಂಥ ಹೊರಬಂದಿರುವುದು ಸ್ವಾಗತಾರ್ಹ.

ಅರ್ಥಶಾಸ್ತ್ರ ತಜ್ಞರಿಗೂ, ಆಡಳಿತಗಾರರಿಗೂ, ಜನ ಸಾಮಾನ್ಯರಿಗೂ, ಏಕಕಾಲದಲ್ಲಿ ಸುಲಭ ಗ್ರಾಹ್ಯವಾಗಿರುವುದು ಈ ಕೃತಿಯ ಹೆಚ್ಚಳ. ಎರಡು ದಶಕಗಳಿಂದ ಯೋಜನಾ ಇಲಾಖೆಯಲ್ಲಿ ಕೆಲಸ ಮಾಡಿರುವುದರಿಂದ ಮತ್ತು ಯೋಜನೆ ಮತ್ತು ಮೌಲ್ಯಮಾಪನಗಳ ಆಧಾರದ ಮೇಲೆ ಯೋಜನೆಗಳು ಸುಗಮವಾಗಿ ಕಾರ್ಯಗತವಾಗಲು ಸಹಜವಾದ, ಗಮನಾರ್ಹವಾದ ಮತ್ತು ಆಚರಣೆಗೆ ಯೋಗ್ಯವಾದ ಸಲಹೆಗಳನ್ನು ನೀಡುವಲ್ಲಿ ಲೇಖಕರ ಅನುಭವ ಸಾಕಷ್ಟು ಸಹಾಯವಾಗಿದೆ.

ಡಾ. ಕೆ. ಪುಟ್ಟಸ್ವಾಮಯ್ಯನವರ ಕೃತಿ "Aspects of Planning" ಆರು ಮುಖ್ಯ ಭಾಗಗಳಾಗಿ ವಿಂಗಡಿಸಲ್ಪಟ್ಟಿದೆ. ಮೊದಲನೆಯ ಅಧ್ಯಾಯವು ಎಲ್ಲ ಸ್ಥಳಗಳಿಗೆ ಬೇಕಾದ ಯೋಜನೆಯ ವಿಚಾರವಾಗಿಯೂ, ಎರಡನೆಯ ಅಧ್ಯಾಯವು ಅನುಭೋಗಕ್ಕೆ ಸಂಬಂಧಿಸಿದ ಯೋಜನೆ–ಅದರ ವಿಧಾನ ಮತ್ತು ಉಪಯೋಗ. ಮೂರನೆಯ ಅಧ್ಯಾಯ ದೂರದೃಷ್ಟಿಯಿಂದ ಕೂಡಿದ ಯೋಜನೆ (Perspective Planning)–ಅದರ ಅಗತ್ಯ. ಸಮಸ್ಯೆ ಮತ್ತು ಕ್ರಮ. ನಾಲ್ಕನೇ ಅಧ್ಯಾಯವು ಯೋಜನೆಗಳನ್ನು ಕಾರ್ಯಗತ ಮಾಡುವ ವಿಧಾನಗಳನ್ನು, ಐದನೆಯದು ಆರ್ಥಿಕ ಪ್ರಗತಿಗೆ ಸಂಬಂಧಿಸಿದ ಸುಸಂಘಟಿತ ಆಡಳಿತ ವ್ಯವಸ್ಥೆಯನ್ನು ಮತ್ತು ಕೊನೆಯ ಅಧ್ಯಾಯವು ಯೋಜನೆ ಮತ್ತು ಮೌಲ್ಯ ಮಾಪನವನ್ನು ಕುರಿತದ್ದಾಗಿದೆ. ಅನೇಕ ದೃಷ್ಟಾಂತಗಳ ಮೂಲಕ ವಿಷಯವನ್ನು ಪುಷ್ಟೀಕರಿಸಿರುವುದು ಒಂದು ವಿಶೇಷ.

ಸಾಮಾಜಿಕ ನ್ಯಾಯದೊಟ್ಟಿಗೆ, ಆರ್ಥಿಕ ಬೆಳವಣಿಗೆಯನ್ನು ಸಾಧಿಸಬೇಕಾಗಿರುವ ಭಾರತದ ಇಂದಿನ ಸಂದರ್ಭದಲ್ಲಿ ಸಾಂಪ್ರದಾಯಿಕ ಉತ್ಪಾದನಾಬದ್ಧಕ್ರಮದಿಂದ ಅನುಭೋಗ ಬದ್ಧಕ್ರಮಕ್ಕೆ ಬದಲಾವಣೆಯ ಅಗತ್ಯತೆಯನ್ನು ಲೇಖಕರು ಗುರ್ತಿಸಿದ್ದಾರೆ. ಈ ಎರಡು ಕ್ರಮಗಳ ನಡುವಣ ವ್ಯತ್ಯಾಸವನ್ನು ತುಂಬಾ ಸೊಗಸಾಗಿ ವಿಶ್ಲೇಷಿಸಿದ್ದಾರೆ. ಅಲ್ಪಾವಧಿ ಯೋಜನೆ. ದೀರ್ಘಾವಧಿ ಯೋಜನೆ, ಹಿಂದುಳಿದ ಪ್ರದೇಶಗಳಿಗೆ ಅವಶ್ಯಕವಾದ ಯೋಜನೆ. ಉತ್ತಮ ಯೋಜನಾ ವಿಧಾನ. ಅದರ ಹಿನ್ನೆಲೆ, ನಿರೂಪಣೆ ಮತ್ತು ಗುರಿಗಳನ್ನು ಸ್ಪಷ್ಟವಾಗಿಯೂ ಮತ್ತು ಪೂರ್ಣ ವಿವರಗಳಿಂದಲೂ ಗುರುತಿಸಿದ್ದಾರೆ.

ನಮ್ಮ ಐದೂ ಯೋಜನೆಗಳ ವಿಫಲತೆಯು ಅವುಗಳು ಅನುಸರಿಸಿದ ಅಭಿವೃದ್ಧಿ ಮಾರ್ಗಗಳಲ್ಲಿನ ಪರಸ್ಪರ ಹೊಂದಾಣಿಕೆ ಇಲ್ಲದಿರುವುದೇ ಆಗಿದೆ. ಯೋಜನೆ ದೂರದೃಷ್ಟಿಯಿಂದ ಕೂಡಿರಬೇಕು. ಬಡತನ ರೇಖೆಯ ಕೆಳಗೆ ಜೀವನ ಮಾಡುತ್ತಿರುವವರನ್ನು ಮೇಲೆತ್ತುವುದು ಯೋಜನೆಯ ಮುಖ್ಯ ಉದ್ದೇಶ. ದೀರ್ಘಕಾಲದ ಯೋಜನೆಗಳು ಫಲಕೊಡುವ ಕಾಲದವರೆಗಿನ ನಡುವಣ ಅವಧಿಯ ಏರುಪೇರುಗಳನ್ನು ಸರಿದೂಗಿಸಲು ಅಲ್ಪಾವಧಿ ಮತ್ತು ಮಧ್ಯಮಾವಧಿ ಯೋಜನೆಗಳ ಪ್ರತಿಫಲವು ತುಂಬುವಂತಿರಬೇಕು. ದೂರದೃಷ್ಟಿಯ ಯೋಜನೆ ಒಂದು ನಿರ್ದಿಷ್ಟವಾದ ಉದ್ದಿಶ್ಯವಿರಬೇಕು ಎನ್ನುವ ಲೇಖಕರು ಈ ಕೆಳಗಿನ ಅಂಶಗಳನ್ನು ಒಳಗೊಂಡಿರಬೇಕೆನ್ನುತ್ತಾರೆ.

(ಅ) ಪ್ರಸ್ತುತ ಆರ್ಥಿಕ ಸ್ಥಿತಿಯ ಸಮೀಕ್ಷೆ
(ಆ) ಉದ್ದೇಶಿತ ಸಾರ್ವಜನಿಕ ವ್ಯಯದ ಪಟ್ಟಿ
(ಇ) ಖಾಸಗಿ ವಲಯದ ಅಭಿವೃದ್ಧಿಯ ಚರ್ಚೆ ಮತ್ತು
(ಈ) ಸರ್ಕಾರದ ನೀತಿಯ ವಿಮರ್ಶೆ.

ಪ್ರಸ್ತುತ ಆರ್ಥಿಕ ಪರಿಸ್ಥಿತಿಯ ಬಗ್ಗೆ ಸಮೀಕ್ಷೆಗಳನ್ನು ನಡೆಸುವುದರಿಂದ ಯೋಜನೆಯ ಪರಿಪೂರ್ಣ ಜ್ಞಾನ ದೊರಕಿ, ಅದರ ಕಾರ್ಯಾಚರಣೆಗೆ ಉತ್ತಮ ತಯಾರಿಕೆಯಾಗುತ್ತದೆ. ಸಮೀಕ್ಷೆಯನ್ನು ನಡೆಸುವಾಗ ಮುಖ್ಯವಾಗಿ ಗಮನದಲ್ಲಿಟ್ಟುಕೊಳ್ಳಬೇಕಾದ ಅಂಶಗಳನ್ನು ಕೂಲಂಕಷವಾಗಿ ಲೇಖಕರು ವಿವರಿಸಿದ್ದಾರೆ. ಹಿಂದಿನ ಯೋಜನೆಗಳ ವೈಜ್ಞಾನಿಕ ವಿಮರ್ಶೆ, ಜನಸಂಖ್ಯೆಯಲ್ಲಿ ಆಗಿರುವ ಬದಲಾವಣೆ, ಸಂಪನ್ಮೂಲಗಳಲ್ಲಿ ಆಗಿರಬಹುದಾದ ಹೆಚ್ಚಳ ಅಥವಾ ಇಳಿಮುಖ, ಉಳಿತಾಯ, ಅನುಭೋಗ, ಅಪಳಿತ ವೆಚ್ಚ, ತೆರಿಗೆಗಳು, ಹಣ ಸಂದಾಯ ಸಮತೋಲನ (Balance of Payments) ಸಾರ್ವಜನಿಕ, ಮತ್ತು ಖಾಸಗಿ ಮುಖ್ಯ ಕೈಗಾರಿಕೆಗಳ ಕಾರ್ಯಕ್ಷಮತೆ, ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ದೂರದೃಷ್ಟಿ ಯೋಜನೆಯನ್ನು ರೂಪಿಸುವುದು ಅನಿವಾರ್ಯ ಎಂಬುದನ್ನು ಸ್ಪಷ್ಟವಾಗಿ ವಿವರಿಸಿದ್ದಾರೆ. ಲೇಖಕರು ವಾದ ವಿಮುಕ್ತವಾದ ಅಂಶಗಳನ್ನು ವೈಜ್ಞಾನಿಕವಾಗಿ ಚರ್ಚಿಸಿರುವುದು ಮೆಚ್ಚತಕ್ಕ ಅಂಶವಾಗಿದೆ.

ಯೋಜನೆಗಳನ್ನು ಫಲಪ್ರದವಾಗಿ (ಅರ್ಥಪೂರ್ಣ) ಕಾರ್ಯಗತಗೊಳಿಸುವಾಗ ಗಮನಿಸಬೇಕಾದ ಅಂಶಗಳನ್ನು ಕುರಿತು ಮುಂದಿನ ಅಧ್ಯಾಯದಲ್ಲಿ ವಿವರವಾಗಿ ಬರೆಯುತ್ತಾರೆ. ಹಾಕಿಕೊಂಡ ಯೋಜನೆಗಳನ್ನು ಯಾವ ಬದಲಾವಣೆಯೂ ಇಲ್ಲದೆ ನಿರ್ದಿಷ್ಟ ಅವಧಿಯಲ್ಲಿ ಯೋಜಿತ ವೆಚ್ಚದಲ್ಲಿ ಕಾರ್ಯಗತಗೊಳಿಸಬೇಕು. ವಿದೇಶಿ ಸಹಾಯದಲ್ಲಿ ಖೋತ, ಆಂತರಿಕ ತೆರಿಗೆಗಳಲ್ಲಿ ಇಳಿಮುಖ, ಉಳಿತಾಯ ಯೋಜನೆಯ ವೈಫಲ್ಯ ಇತ್ಯಾದಿ ಕಾರಣಗಳಿಂದ ಯೋಜನೆಗಳಿಗೆ ಗೊತ್ತು ಮಾಡಲ್ಪಟ್ಟ ನಿರ್ದಿಷ್ಟ ಹಣ ದೊರಕದೇ ಹೋದಾಗ ಯೋಜನೆಗಳನ್ನು ಕಾರ್ಯಗತಮಾಡುವಲ್ಲಿ ವ್ಯತ್ಯಾಸಗಳು ತಲೆದೋರುತ್ತವೆ. ಆಗ ನಿರೀಕ್ಷಿತ ಫಲಗಳನ್ನು ಯೋಜನೆಗಳು ಕೊಡುವುದು ಅಸಾಧ್ಯವಾಗುತ್ತದೆ. ಈ ಬಗೆಗಿನ ಮುನ್ನೆಚ್ಚರಿಕೆಯಾಗಿ ಲೇಖಕರು ಹೇಳುತ್ತಾರೆ–ಯೋಜನೆಗಳ ಕಾರ್ಯಗತ ಅವಧಿಯಲ್ಲಿ ಕಾಲಕಾಲಕ್ಕೆ ಪ್ರತಿ ಅಂಶವನ್ನೂ ಅವುಗಳ ಸಮೀಕ್ಷೆಯನ್ನೂ ವಿಮರ್ಶೆಗೊಳಪಡಿಸಿ, ಮೌಲ್ಯಮಾಪನವನ್ನು ನಡೆಸಿದಾಗ ಮೇಲೆ ಕಾಣಿಸಿದ ತೊಂದರೆಗಳನ್ನು ನಿವಾರಿಸುವುದು ಸಾಧ್ಯವಾಗುತ್ತದೆ ಎನ್ನುತ್ತಾರೆ. ಜೊತೆಗೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಯೋಜನೆಗಳನ್ನು ಕಾರ್ಯಗತಗೊಳಿಸುವಾಗ ಎದುರಾಗುವ

ಸಮಸ್ಯೆಗಳು ಆರ್ಥಿಕ ಮೂಲವಾಗಿರದೆ, ರಾಜಕೀಯ ಮೂಲವಾಗಿದ್ದು, ಆಡಳಿತ ಅವ್ಯವಸ್ಥೆ ಯೋಜನೆಗಳ ಸೋಲಿಗೆ ಕಾರಣವಾಗುತ್ತದೆ.

ಯೋಜನೆಗಳನ್ನು ಸಿದ್ಧಪಡಿಸಿದ ಯೋಜಕರು (Planners) ಅವುಗಳನ್ನು ಕಾರ್ಯಗತಗೊಳಿಸುವ ಅಧಿಕಾರಿಗಳು ಮತ್ತು ಸಂಸ್ಥೆಗಳು ಮತ್ತು ನಿಯೋಜಿತ ಯೋಜನೆಯ ಚೌಕಟ್ಟಿನಲ್ಲಿ ಬರುವ ಜನಸಮುದಾಯ ಇವರ ನಡುವೆ ಸೌಹಾರ್ದ ಸಹಕಾರ ಬಹಳ ಮುಖ್ಯ. ಇದನ್ನು ಲೇಖಕರು ಬಹಳ ದಕ್ಷತೆಯಿಂದ ನಿರೂಪಿಸಿದ್ದಾರೆ.

ಯೋಜನೆಯನ್ನು ಸರಿದಾರಿಯಲ್ಲಿ ಕೊಂಡೊಯ್ಯಬೇಕಾದರೆ, ತಪ್ಪುಗಳನ್ನು ಕಂಡುಕೊಳ್ಳಬೇಕಾದರೆ, ಉತ್ತಮ ಮತ್ತು ಶೀಘ್ರ ಫಲಿತಾಂಶವನ್ನು ಕೊಟ್ಟ ಅಂಶಗಳ ಮೇಲೆ ವಿಶೇಷ ಬೆಳಕನ್ನು ಚೆಲ್ಲಬೇಕಾದರೆ, ಮೌಲ್ಯಮಾಪನ ಒಂದು ಆವಶ್ಯಕ ವಿಧಾನ. ಮೌಲ್ಯಮಾಪನ ಕಾಲಕಾಲಕ್ಕೆ ಸಾಧನೆ, ಫಲಿತಾಂಶ, ಮುಟ್ಟಿದ ಗುರಿ ಎದುರಾದ ಅಡೆತಡೆಗಳು ಇವುಗಳ ವಿಮರ್ಶೆಯಾಗುತ್ತದೆ. ಹೀಗಿದ್ದು ಮೌಲ್ಯಮಾಪನ ಮುಂಬರುವ ವರ್ಷಗಳಲ್ಲಿ ಪ್ರಾಮುಖ್ಯವಾದ ಪಾತ್ರವನ್ನು ವಹಿಸುತ್ತದೆ ಎಂಬ ಮಾತುಗಳಿಂದ ಡಾ. ಕೆ. ಪುಟ್ಟಸ್ವಾಮಯ್ಯನವರು ತಮ್ಮ ಪುಸ್ತಕವನ್ನು ಸಮಾಪ್ತಿಸುತ್ತಾರೆ.

ಒಟ್ಟಿನಲ್ಲಿ ಈ ಗ್ರಂಥಕರ್ತರು ವಿವಿಧ ಯೋಜನೆಗಳ ಸ್ವರೂಪ, ಅವುಗಳ ತಾಂತ್ರಿಕ ವಿಧಾನ, ಕಾಲಾವಧಿ ಮತ್ತು ಗುರಿ, ಹಾಗೂ ಈ ಯೋಜನೆಗಳ ಸಂಯಮದ ಆವಶ್ಯಕತೆ ಇತ್ಯಾದಿ ವಿಷಯಗಳನ್ನು ಕೂಲಂಕಷವಾಗಿಯೂ ಮತ್ತು ಸ್ಪಷ್ಟವಾಗಿಯೂ ನಿರೂಪಿಸಿದ್ದಾರೆ. ಇವರು ನಿರೂಪಿಸಿದ ಗ್ರಂಥದ ಆರು ಭಾಗಗಳಲ್ಲಿ ಸಾಂಪ್ರದಾಯಿಕ ಉತ್ಪಾದನಾಬದ್ಧಕ್ರಮದಿಂದ ಅನುಭೋಗಬದ್ಧಕ್ರಮಕ್ಕೆ ಬದಲಾವಣೆಯ ಅಗತ್ಯವನ್ನು ಮತ್ತು ಪ್ರಾಮುಖ್ಯತೆಯನ್ನು ಕುರಿತು ಬರೆದ ಭಾಗ ವಿಮರ್ಶಾತ್ಮಕವಾಗಿದೆ ಮತ್ತು ಉಪಯುಕ್ತ ಸಲಹೆಗಳಿಂದ ಕೂಡಿದೆ. ಹಾಗೆಯೇ ಅವರು ನಿರೂಪಿಸಿದ ದೂರದೃಷ್ಟಿಯಿಂದ ಕೂಡಿದ ಯೋಜನೆ (Perspective Planning), ಯೋಜನೆಗಳನ್ನು ಕಾರ್ಯಗತ ಮಾಡುವ ವಿಧಾನಗಳು ಮತ್ತು ಯೋಜನೆ ಮತ್ತು ಮೌಲ್ಯಮಾಪನವನ್ನು ಕುರಿತ ಭಾಗಗಳು ಅನೇಕ ದೃಷ್ಟಾಂತಗಳಿಂದ ಸಮರ್ಥಿಸಲ್ಪಟ್ಟು ಯೋಜನೆಗಳನ್ನು ಪೂರ್ಣವಾಗಿ ನಿಗದಿಯಾದ ಕಾಲದಲ್ಲಿ ಕಾರ್ಯಗತಗೊಳಿಸಲು ಸಹಾಯಕವಾಗಿವೆ. ಈ ಗ್ರಂಥವು ಅರ್ಥಶಾಸ್ತ್ರ ತಜ್ಞರಿಗೂ, ಜನಸಾಮಾನ್ಯರಿಗೂ ಮತ್ತು ವಿದ್ಯಾರ್ಥಿಗಳಿಗೂ ಉಪಯುಕ್ತತೆಯಿಂದ ಕೂಡಿದೆ ಎಂಬುವುದರಲ್ಲಿ ಯಾವ ಸಂದೇಹವೂ ಇಲ್ಲ.

—ಟಿ. ಕೆ. ಲಕ್ಷ್ಮಣ್

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಮಾನವಿಕ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

★ ಪ್ರಬುದ್ಧ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)

(ಪ್ರತಿಯೊಂದಕ್ಕೂ)

ಡೈರೆಕ್ಟರ್

'ಪ್ರಸಾರಾಂಗ'

ಮಾನಸ ಗಂಗೋತ್ರಿ, ಮೈಸೂರು–೫೭೦೦೦೧೨